ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೫ | ಜನವರಿ ೧೯೬೭ | ವರ್ಷ ೮ ಸಂ. ೧೦

ವಾಚನಪಾಠಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಹೆಚ್ಚುಕಡಮೆಗಳು

ಲೇಖಕ:— ಶ್ರೀ. ಎಂ. ಪಿ. ಪೂಜಾರ್; ಕ. ಪಂಡಿತ, ಟ್ರೇ. ಸ್ಕೂ. ಧಾರವಾಡ

೧೯೫೫ನೆಯ ಇಸವಿಯಲ್ಲಿ ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಜರುಗಿದ ಶಿಕ್ಷಕ ಸಮ್ಮೇಲನದಲ್ಲಿ "**ಶಿಕ್ಷಣ ಸಂಸ್ಥೆಗಳಲ್ಲಿ ವಾಚನಪಾಠಗಳನ್ನು ಕಲಿಸುವ ಪದ್ಧತಿಗಳು**" ಎಂಬ ವಿಷಯವನ್ನು ಕುರಿತು ಮಾತಾಡಿದ್ದೆವು. ಆ ವಿಷಯವು ಅದೇ ವರ್ಷದ ಆಗಸ್ಟ್ ತಿಂಗಳ ಪ್ರಾಥಮಿಕ ಶಿಕ್ಷಣದಲ್ಲಿ ಲೇಖರೂಪವಾಗಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ವಾಚನಪಾಠಗಳನ್ನು ಕಲಿಸುವ ಮೆಟ್ಟುಗಳು, ಅವುಗಳ ಪ್ರಯೋಜನಗಳು ಮೊದಲಾದುವುಗಳ ವಿವೇಚನೆಯಿದೆ. ಈಗ 'ವಾಚನ ಪಾಠಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಹೆಚ್ಚುಕಡಿಮೆಗಳು' ಎಂಬ ವಿಷಯವನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದಿದೆ. ಇದು ತಿಳಿವುದಕ್ಕೆ ಆ ಲೇಖವನ್ನು ಓದುವುದು ಅವಶ್ಯವಾದುದರಿಂದ ಅದನ್ನು ಮೊದಲು ಒಮ್ಮೆ ಅವಲೋಕಿಸಲು ಪಾಠಕರನ್ನು ವಿನ್ನಯಿಸುವೆವು.

ವಾಚನಪಾಠವನ್ನು ಕಲಿಸುವುದೆಂದರೆ ಪಾಠದಲ್ಲಿ ಬಂದ ವಿಷಯವನ್ನು ತಿಳಿಸುವುದು, ಪಾಠವನ್ನೋದುವುದನ್ನು ಕಲಿಸುವುದು ಹೀಗೆ ಎರಡು ಭಾಗಗಳನ್ನು

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ, ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-೮-೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಕೃತ)	೦-೮-೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-೪-೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧-೮-೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦-೨-೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-೩-೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧೨-೦
ಚಿತ್ರಮಯ ಕೋಷ್ಟಕ (ಉಗ್ರಕೃತ) ೩ನೇ ಇ ಗೆ	೦-೨-೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦-೪-೦
,, ೩ನೇ ,,	೦-೫-೦
,, ,, ೪ನೇ ,,	೦-೮-೦
ಅಂಕಗಣಿತ (ಗಾಂವಕರಕೃತ) ೩ನೇ ,,	೦-೫-೦
ಧಾರವಾಡ ಜಿಲ್ಲಾ ವರ್ಣನೆ (ಅಣ್ಣಿಗೇರಿ ಕೃತ) ೩ನೇ ಇ. ಗೆ	೦-೪-೬
ವಿಜಾಪೂರ ,, ,, (,,) ೩ನೇ ,,	೦-೪-೬
ಧಾರವಾಡ ಜಿಲ್ಲಾ ,, (ಕುರಡೀಕೃತ)	೦-೫-೦
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	೦-೮-೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦-೧೦-೦
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೦-೫-೦
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-೧೪-೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦-೨-೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧೦-೦
ಭೂಮಿತಿ (ಚಂದಾವರಕರ ಕೃತ)	೦-೨-೦
ಸರಸ್ವತೀ ವಿಜಯ (ಬೂದೀಹಾಳಕೃತ)	೦-೪-೦

ಪತ್ರೆ:—ವಿ. ಆರ್. ಶಿವನಾಗಪ್ಪಾ,
ಬುಕ್‌ಸೇಲರ ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ಪತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೫	ಜನವರಿ ೧೯೫೭	ವರ್ಷ ೮ ಸಂ. ೧೦

ವಾಚನಪಾಠಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಹೆಚ್ಚುಕಡಮೆಗಳು

ಲೇಖಕ:— ಶ್ರೀ. ಎಂ. ಪಿ. ಪೂಜಾರ್; ಕ. ಪಂಡಿತ, ಟ್ರೇ. ಸ್ಕೂ. ಧಾರವಾಡ

೧೯೫೬ನೆಯ ಇಸವಿಯಲ್ಲಿ ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಜರುಗಿದ ಶಿಕ್ಷಕ ಸಮ್ಮೇಲನದಲ್ಲಿ "**ಶಿಕ್ಷಣ ಸಂಸ್ಥೆಗಳಲ್ಲಿ ವಾಚನಪಾಠಗಳನ್ನು ಕಲಿಸುವ ಪದ್ಧತಿಗಳು**" ಎಂಬ ವಿಷಯವನ್ನು ಕುರಿತು ಮಾತಾಡಿದ್ದೆವು. ಆ ವಿಷಯವು ಅದೇ ವರ್ಷದ ಆಗಸ್ಟ್ ತಿಂಗಳ ಪ್ರಾಥಮಿಕ ಶಿಕ್ಷಣದಲ್ಲಿ ಲೇಖರೂಪವಾಗಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ವಾಚನಪಾಠಗಳನ್ನು ಕಲಿಸುವ ಮೆಟ್ಟಿಲುಗಳು, ಅವುಗಳ ಪ್ರಯೋಜನಗಳು ಮೊದಲಾದುವುಗಳ ವಿವೇಚನೆಯಿದೆ. ಈಗ 'ವಾಚನಪಾಠಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಹೆಚ್ಚುಕಡಿಮೆಗಳು' ಎಂಬ ವಿಷಯವನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದಿದೆ. ಇದು ತಿಳಿವುದಕ್ಕೆ ಆ ಲೇಖವನ್ನು ಓದುವುದು ಅವಶ್ಯವಾದುದರಿಂದ ಅದನ್ನು ಮೊದಲು ಒಮ್ಮೆ ಓದಬೇಕೆಂದು ಪಾಠಕರನ್ನು ವಿನ್ನವಿಸುವೆವು.

ವಾಚನಪಾಠವನ್ನು ಕಲಿಸುವುದೆಂದರೆ ಪಾಠದಲ್ಲಿ ಬಂದ ವಿಷಯವನ್ನು ತಿಳಿಸುವುದು, ಪಾಠವೋದುವುದನ್ನು ಕಲಿಸುವುದು ಹೀಗೆ ಎರಡು ಭಾಗಗಳನ್ನು

ಅದು ಒಳಗೊಂಡಿದೆ; ಎಂದರೆ **ವಿಷಯಜ್ಞಾನದ ಪಾಠ, ಓದನ್ನು ಕಲಿಸುವ ಪಾಠ** ಎಂದು ಒಂದು ವಾಚನಪಾಠದಲ್ಲಿ **ಎರಡು ಪಾಠ**ಗಳಾಗುವುವು. ಈ ಎರಡು ಪಾಠಗಳಿಗಾಗಿ ಕೆಳಗೆ ಹೇಳಿದ ೮ ಮೆಟ್ಟುಗಳು ಗೊತ್ತುಮಾಡಲ್ಪಟ್ಟಿವೆ:—

೧. ಆರಂಭ. (ಉಪೋದ್ಘಾತ)
೨. ಶಿಕ್ಷಕನ (ಭಾವಬೋಧಕ) ವಾಚನ.
೩. ವಿದ್ಯಾರ್ಥಿಗಳ ಮೌನವಾಚನ.
೪. ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು.
೫. ಅರ್ಥವಿವರಣೆ.
೬. ಶಿಕ್ಷಕನ ಮಾದರಿವಾಚನ.
೭. ವಿದ್ಯಾರ್ಥಿಗಳ ವಾಚನ.
೮. ಮುಗಿಸುವುದು. (ಉಪಸಂಹಾರ)

[ಪಾಠದೊಳಗಿನ ಹೊಸ ಕಠಿಣ ಶಬ್ದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು, ವ್ಯಾಕರಣವಿಚಾರ ಮುಂತಾದುವುಗಳೊಡನೆ.]

ಈ ಪದ್ಧತಿಯು ಟ್ರೇ. ಸ್ಕೂ. ನಲ್ಲಿ ೪।೫ ವರ್ಷಗಳಿಂದ ಸಾಗುತ್ತಬಂದಿದೆ. ಪದ್ಧತಿಯೆಂಬುದು ಒಂದು ರೂಢವಾದ ದಾರಿ. ಮುಟ್ಟಬೇಕಾದ ಸ್ಥಳಕ್ಕೆ ಇಲ್ಲವೆ ಗುರಿಗೆ ದಾರಿಗಳು ಬೇರೆಬೇರೆ ಇರುವಂತೆ ಸುಲಭತೆ, ಸಮೀಪ ಮೊದಲಾದ ತತ್ತ್ವಗಳಿಂದ ಪದ್ಧತಿಗಳೂ ಬೇರೆಬೇರೆ ಇರಬಹುದು. ಒಂದ ಪದ್ಧತಿ ಇದಿರಿಗೆ ಬಂದರೆ ಅದನ್ನೇ ಯಾವಾಗಲೂ ಹಿಡಿದುಹೋಗಬೇಕೆಂ ನಿರ್ಬಂಧವಿಲ್ಲ. ಗುರಿಗೆ ಹೋಗಿ ಮುಟ್ಟುವುದೇ ಮುಖ್ಯವಾದ ಕೆಲಸವು **ಶಿಕ್ಷಕನು ಯಾವದೊಂದು ಪದ್ಧತಿಯ ದಾಸನಾಗಬಾರದು.** ವಾಚ ಪಾಠಗಳನ್ನು ಕಲಿಸುವುದಕ್ಕಾಗಿ ಮೇಲೆ ಹೇಳಿದ ಮೆಟ್ಟುಗಳಲ್ಲಿ ಕೆಲವು ಪೆಚ್ಚು ಕಡಮೆಗಳನ್ನು ಇಲ್ಲಿ ಹೇಳುವೆವು.

ಶಿಕ್ಷಕನ (ಭಾವಬೋಧಕ) ವಾಚನವು ೨ನೆಯ ಮೆಟ್ಟು; ಈ ವಾಚನ ಉದ್ದೇಶವೇನೆಂದರೆ, ಶಿಕ್ಷಕನು ತಾನು ಪಾಠವನ್ನು ಚೆನ್ನಾಗಿಯೂ ಸಾವಕಾ ವಾಗಿಯೂ ಓದುತ್ತ ಪಾಠದ ಭಾವವನ್ನು ಬಾಲಕರು ಗ್ರಹಿಸುತ್ತಹೋಗುವಂ ಮಾಡುವುದು. ಈ ವಾಚನದಿಂದ ಪಾಠದ ಎಲ್ಲ ಭಾವವನ್ನು ಮಕ್ಕಳು ಗ್ರಹಿಸಲಾ ರೆಂಬುದು ನಿಜವು; ಸ್ಥೂಲವಾಗಿಯಾದರೂ ಅವರು ಗ್ರಹಿಸುವುದಕ್ಕೆ ಶಿಕ್ಷಕ ವಾಚನವು ನೆರವಾಗುವುದು. ಇದು ಹಲವು ಪಾಠಗಳಲ್ಲಿ ಬೇಕಾದುದಾದರೂ

ಕೆಲವು ಪಾಠಗಳಲ್ಲಿ ಅಷ್ಟೊಂದು ಪ್ರಯೋಜನಕಾರಿಯಾಗುವುದಿಲ್ಲ. ಸುಲಭವಾದ, ಕಥಾತ್ಮಕವಾದ ಪಾಠಗಳಿದ್ದರೆ ಶಿಕ್ಷಕನ ಈ ವಾಚನದ ಉಪಯೋಗವಾಗುವುದು. ಉದಾ : ಮೊಹರಮ್ ಹಬ್ಬ ಳನೆಯ ಪು. ೧೬ನೆಯ ಪಾಠ; ಕಳ್ಳರನ್ನು ಮೋಸಗೊಳಿಸಿದ್ದು ಳ. ೧೭; ಪನ್ನಾದಾಸಿ ಳ ೧೮; ಮುಂ. ತಾತ್ತ್ವಿಕವಾದ, ಜಟಿಲಾತ್ಮಕವಾದ, ಕಠಿಣ ಪಾಠಗಳಿದ್ದರೆ ಶಿಕ್ಷಕನ ಆರಂಭದ ವಾಚನವು ಇಷ್ಟೊಂದು ಫಲಕಾರಿಯಾಗುವುದಿಲ್ಲ. ಉದಾ: ದೇವರು ಸರ್ವಜ್ಞನು ಳ. ೧೨; ದೇವರ ನ್ಯಾಯವೂ ಪ್ರೀತಿಯೂ ಳ. ೧೩; ನಿಯಮಿತತನವೂ ಸಮಯನಿಷ್ಠತೆಯೂ ಳ. ೫೫; ಮುಂ. ಇಂತಹ ಪಾಠಗಳನ್ನು ಬಾಲಕರು ತಾವೇ ಸಾವಕಾಶವಾಗಿ ಓದಿಕೊಳ್ಳುವುದರಿಂದಮಾತ್ರ ಪಾಠದ ಭಾವವನ್ನು ಕೆಲ ಮಟ್ಟಿಗೆ ತಿಳಿದು ಕೊಳ್ಳಲಾಪರು.

ಬಾಲಕರು ತಾವೇ ಪಾಠವನ್ನು ಸರಿಯಾಗಿ ಓದಿಕೊಂಡು ತಿಳಿದುಕೊಳ್ಳುವಷ್ಟು ಪ್ರಬುದ್ಧರಾದಾಗಲೂ ಶಿಕ್ಷಕನ ಆರಂಭದ ವಾಚನವು ಬೇಕಾಗುವುದಿಲ್ಲ. ಈ ಕಾರಣದಿಂದಲೇ ಇಲ್ಲಿಯ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿಯೂ, ಟೀಕಾಪಾಠ ಮಾದರಿಪಾಠಗಳಲ್ಲಿಯೂ ೫ನೆಯ ಇಯತ್ತೆಯಿಂದ ಹಿಡಿದು ಮೇಲಿನ ತರಗತಿಗಳಿಗೆ ವಾಚನಪಾಠಗಳನ್ನು ಕಲಿಸುವಾಗ ಈ ಮೆಟ್ಟನ್ನು ಬಿಡುವುದು ವಾಡಿಕೆಯಾಗಿದೆ.

ವಿದ್ಯಾರ್ಥಿಗಳ ಮೌನವಾಚನವು ೩ನೆಯ ಮೆಟ್ಟು. ಇದು ನಡೆದಾಗ ವಿದ್ಯಾರ್ಥಿಗಳಿಗೆ ತಿಳಿಯದಿರುವ ವಾಕ್ಯ, ಶಬ್ದ ಇವುಗಳನ್ನು ಬಬ್ಬೊಬ್ಬರಿಗೆ ತಿಳಿಸಿ ಹೇಳುವುದು ಈಗ ನಡೆದ ಶಿಕ್ಷಕನ ಕೆಲಸವು. ಆದರೆ ಅಲಸರಾದ ಕೆಲ ವಿದ್ಯಾರ್ಥಿಗಳು ಪಾಠವನ್ನು ಸರಿಯಾಗಿ ಓದಿಕೊಳ್ಳುವುದಿಲ್ಲ; ಕೆಲವರು ಓದಿಕೊಂಡರೂ ಅದರಲ್ಲಿ ಮುಖ್ಯವಾದ ಅಂಶಗಳು ಯಾವವೆಂಬುದನ್ನು ಗ್ರಹಿಸುವುದಿಲ್ಲ. ಕೆಲವರು ಕಠಿಣ ಶಬ್ದಗಳ ಅರ್ಥವನ್ನು ಮಾತ್ರ ತಿಳಿದುಕೊಂಡರಾಯಿತೆಂದು ಬಗೆಯುವರು. ಈ ತರದ ದೋಷಗಳನ್ನು ತಪ್ಪಿಸುವುದಕ್ಕೆ ಒಂದು ಉಪಾಯವನ್ನು ಮಾಡಬಹುದು. ಬಾಲಕರು ಮೌನವಾಚನವನ್ನು ಆರಂಭಿಸುವ ಮುಂಚೆ ಶಿಕ್ಷಕನು ಆ ಪಾಠದ ಮುಖ್ಯಾಂಶಗಳನ್ನು ಕುರಿತು ೪।೫ ಪ್ರಶ್ನೆಗಳನ್ನು ಕರಿಯಹಲಗೆಯ ಮೇಲೆ ಬರೆದಿಡಬೇಕು; ಮತ್ತು "ನೀವು ಓದಿಕೊಂಡ ಬಳಿಕ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬೇಕಾಗುವುದು" ಎಂದು ಬಾಲಕರನ್ನು ಎಚ್ಚರಿಸಬೇಕು. ಈ ಪ್ರಶ್ನೆಗಳು ಪಾಠದ ಸಾರಾಂಶವನ್ನೆಲ್ಲ ಕುರಿತು ಇರಬೇಕು. ಮೌನವಾಚನವನ್ನು ಆರಂಭಿಸುವ ಮೊದಲು ಕ. ಹ. ಯು ಮೇಲಿನ ಈ ಪ್ರಶ್ನೆಗಳನ್ನು ವಿದ್ಯಾರ್ಥಿಗಳೆಂದ ಓದಿಸುವುದು ಪ್ರಯೋಜನಕರವಾಗಿದೆ. ಮೊದಲೇ ಪ್ರಶ್ನೆಗಳನ್ನು

ಅದು ಒಳಗೊಂಡಿದೆ; ಎಂದರೆ **ವಿಷಯಜ್ಞಾನದ ಪಾಠ, ಓದನ್ನು ಕಲಿಸುವ ಪಾಠ** ಎಂದು ಒಂದು ವಾಚನಪಾಠದಲ್ಲಿ **ಎರಡು ಪಾಠ**ಗಳಾಗುವುವು. ಈ ಎರಡು ಪಾಠಗಳಿಗಾಗಿ ಕೆಳಗೆ ಹೇಳಿದ ೮ ಮೆಟ್ಟುಗಳು ಗೊತ್ತುಮಾಡಲ್ಪಟ್ಟಿವೆ:—

೧. ಆರಂಭ. (ಉಪೋದ್ಘಾತ)
೨. ಶಿಕ್ಷಕನ (ಭಾವಬೋಧಕ) ವಾಚನ.
೩. ವಿದ್ಯಾರ್ಥಿಗಳ ಮೌನವಾಚನ.
೪. ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು.
೫. ಅರ್ಥವಿವರಣೆ.
೬. ಶಿಕ್ಷಕನ ಮಾದರಿವಾಚನ.
೭. ವಿದ್ಯಾರ್ಥಿಗಳ ವಾಚನ.
೮. ಮುಗಿಸುವುದು. (ಉಪಸಂಹಾರ)

[ಪಾಠದೊಳಗಿನ ಹೊಸ ಕಠಿಣ ಶಬ್ದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು, ವ್ಯಾಕರಣವಿಚಾರ ಮುಂತಾದುವುಗಳೊಡನೆ.]

ಈ ಪದ್ಧತಿಯು ಟ್ರೇ. ಸ್ಕೂ. ನಲ್ಲಿ ೪।೫ ವರ್ಷಗಳಿಂದ ಸಾಗುತ್ತಬಂದಿದೆ. ಪದ್ಧತಿಯೆಂಬುದು ಒಂದು ರೂಢವಾದ ದಾರಿ. ಮುಟ್ಟಬೇಕಾದ ಸ್ಥಳಕ್ಕೆ ಇಲ್ಲವೆ ಗುರಿಗೆ ದಾರಿಗಳು ಬೇರೆಬೇರೆ ಇರುವಂತೆ ಸುಲಭತೆ, ಸಮೀಪ ಮೊದಲಾದ ತತ್ತ್ವಗಳಿಂದ ಪದ್ಧತಿಗಳೂ ಬೇರೆಬೇರೆ ಇರಬಹುದು. ಒಂದು ಪದ್ಧತಿ ಇದಿರಿಗೆ ಬಂದರೆ ಅದನ್ನೇ ಯಾವಾಗಲೂ ಹಿಡಿದುಹೋಗಬೇಕೆಂಬ ನಿರ್ಬಂಧವಿಲ್ಲ. ಗುರಿಗೆ ಹೋಗಿ ಮುಟ್ಟುವುದೇ ಮುಖ್ಯವಾದ ಕೆಲಸವು. **ಶಿಕ್ಷಕನು ಯಾವದೊಂದು ಪದ್ಧತಿಯ ದಾಸನಾಗಬಾರದು.** ವಾಚನ ಪಾಠಗಳನ್ನು ಕಲಿಸುವುದಕ್ಕಾಗಿ ಮೇಲೆ ಹೇಳಿದ ಮೆಟ್ಟುಗಳಲ್ಲಿ ಕೆಲವು ಪೆಚ್ಚು ಕಡಮೆಗಳನ್ನು ಇಲ್ಲಿ ಹೇಳುವೆವು.

ಶಿಕ್ಷಕನ (ಭಾವಬೋಧಕ) ವಾಚನವು ತಿನೆಯ ಮೆಟ್ಟು; ಈ ವಾಚನದ ಉದ್ದೇಶವೇನೆಂದರೆ, ಶಿಕ್ಷಕನು ತಾನು ಪಾಠವನ್ನು ಚೆನ್ನಾಗಿಯೂ ಸಾವಕಾಶವಾಗಿಯೂ ಓದುತ್ತ ಪಾಠದ ಭಾವವನ್ನು ಬಾಲಕರು ಗ್ರಹಿಸುತ್ತಹೋಗುವಂತೆ ಮಾಡುವುದು. ಈ ವಾಚನದಿಂದ ಪಾಠದ ಎಲ್ಲ ಭಾವವನ್ನು ಮಕ್ಕಳು ಗ್ರಹಿಸಲಾರರೆಂಬುದು ನಿಜವು; ಸ್ಥೂಲವಾಗಿಯಾದರೂ ಅವರು ಗ್ರಹಿಸುವುದಕ್ಕೆ ಶಿಕ್ಷಕನ ವಾಚನವು ನೆರವಾಗುವುದು. ಇದು ಹಲವು ಪಾಠಗಳಲ್ಲಿ ಬೇಕಾದುದಾದರೂ

ಕೆಲವು ಪಾಠಗಳಲ್ಲಿ ಅಷ್ಟೊಂದು ಪ್ರಯೋಜನಕಾರಿಯಾಗುವುದಿಲ್ಲ. ಸುಲಭವಾದ, ಕಥಾತ್ಮಕವಾದ ಪಾಠಗಳಿದ್ದರೆ ಶಿಕ್ಷಕನ ಈ ವಾಚನದ ಉಪಯೋಗವಾಗುವುದು. ಉದಾ : ಮೊಹರಮ್ ಹಬ್ಬ ಳನೆಯ ಪು. ೧೬ನೆಯ ಪಾಠ; ಕಳ್ಳರನ್ನು ಮೋಸಗೊಳಿಸಿದ್ದು ಳ. ೧೭; ಪನ್ನಾಡಾಸಿ ಳ ೧೮; ಮುಂ. ತಾತ್ತ್ವಿಕವಾದ, ಚರ್ಚಾತ್ಮಕವಾದ, ಕಠಿಣ ಪಾಠಗಳಿದ್ದರೆ ಶಿಕ್ಷಕನ ಆರಂಭದ ವಾಚನವು ಅಷ್ಟೊಂದು ಫಲಕಾರಿಯಾಗುವುದಿಲ್ಲ. ಉದಾ : ದೇವರು ಸರ್ವಜ್ಞನು ಳ. ೧೨; ದೇವರ ನ್ಯಾಯವೂ ಪ್ರೀತಿಯೂ ಳ. ೧೩; ನಿಯಮಿತತನವೂ ಸಮಯನಿಷ್ಠತೆಯೂ ಳ. ೫೫; ಮುಂ. ಇಂತಹ ಪಾಠಗಳನ್ನು ಬಾಲಕರು ತಾವೇ ಸಾವಕಾಶವಾಗಿ ಓದಿಕೊಳ್ಳುವುದರಿಂದಮಾತ್ರ ಪಾಠದ ಭಾವವನ್ನು ಕೆಲ ಮಟ್ಟಿಗೆ ತಿಳಿದುಕೊಳ್ಳಲಾಪರು.

ಬಾಲಕರು ತಾವೇ ಪಾಠವನ್ನು ಸರಿಯಾಗಿ ಓದಿಕೊಂಡು ತಿಳಿದುಕೊಳ್ಳುವಷ್ಟು ಪ್ರಬುದ್ಧರಾದಾಗಲೂ ಶಿಕ್ಷಕನ ಆರಂಭದ ವಾಚನವು ಬೇಕಾಗುವುದಿಲ್ಲ. ಈ ಕಾರಣದಿಂದಲೇ ಇಲ್ಲಿಯ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿಯೂ, ಟೀಕಾಪಾಠ ಮಾದರಿಪಾಠಗಳಲ್ಲಿಯೂ ೫ನೆಯ ಇಯತ್ತೆಯಿಂದ ಹಿಡಿದು ಮೇಲಿನ ತರಗತಿಗಳಿಗೆ ವಾಚನಪಾಠಗಳನ್ನು ಕಲಿಸುವಾಗ ಈ ಮೆಟ್ಟನ್ನು ಬಿಡುವುದು ವಾಡಿಕೆಯಾಗಿದೆ.

ವಿದ್ಯಾರ್ಥಿಗಳ ಮೌನವಾಚನವು ೩ನೆಯ ಮೆಟ್ಟು. ಇದು ನಡೆದಾಗ ವಿದ್ಯಾರ್ಥಿಗಳಿಗೆ ತಿಳಿಯದಿರುವ ವಾಕ್ಯ, ಶಬ್ದ ಇವುಗಳನ್ನು ಒಬ್ಬೊಬ್ಬರಿಗೆ ತಿಳಿಸಿ ಹೇಳುವುದು ಈಗ ನಡೆದ ಶಿಕ್ಷಕನ ಕೆಲಸವು. ಆದರೆ ಅಲಸರಾದ ಕೆಲ ವಿದ್ಯಾರ್ಥಿಗಳು ಪಾಠವನ್ನು ಸರಿಯಾಗಿ ಓದಿಕೊಳ್ಳುವುದಿಲ್ಲ; ಕೆಲವರು ಓದಿಕೊಂಡರೂ ಅದರಲ್ಲಿ ಮುಖ್ಯವಾದ ಅಂಶಗಳು ಯಾವವೆಂಬುದನ್ನು ಗ್ರಹಿಸುವುದಿಲ್ಲ. ಕೆಲವರು ಕಠಿಣ ಶಬ್ದಗಳ ಅರ್ಥವನ್ನು ಮಾತ್ರ ತಿಳಿದುಕೊಂಡರಾಯಿತೆಂದು ಬಗೆಯುವರು. ಈ ತರದ ದೋಷಗಳನ್ನು ತಪ್ಪಿಸುವುದಕ್ಕೆ ಒಂದು ಉಪಾಯವನ್ನು ಮಾಡಬಹುದು. ಬಾಲಕರು ಮೌನವಾಚನವನ್ನು ಆರಂಭಿಸುವ ಮುಂಚೆ ಶಿಕ್ಷಕನು ಆ ಪಾಠದ ಮುಖ್ಯಾಂಶಗಳನ್ನು ಕುರಿತು ೪।೫ ಪ್ರಶ್ನೆಗಳನ್ನು ಕರಿಯಹಲಗೆಯ ಮೇಲೆ ಬರೆದಿಡಬೇಕು; ಮತ್ತು "ನೀವು ಓದಿಕೊಂಡ ಬಳಿಕ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬೇಕಾಗುವುದು" ಎಂದು ಬಾಲಕರನ್ನು ಎಚ್ಚರಿಸಬೇಕು. ಈ ಪ್ರಶ್ನೆಗಳು ಪಾಠದ ಸಾರಾಂಶವನ್ನೆಲ್ಲ ಕುರಿತು ಇರಬೇಕು. ಮೌನವಾಚನವನ್ನು ಆರಂಭಿಸುವ ಮೊದಲು ಕ. ಹ. ಯ ಮೇಲಿನ ಈ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಂದ ಓದಿಸುವುದು ಪ್ರಯೋಜನಕರವಾಗಿದೆ. ಮೊದಲೇ ಪ್ರಶ್ನೆಗಳನ್ನು

ವಿದ್ಯಾರ್ಥಿಗಳ ಇದಿರಿಗೆ ಇಡುವುದರಿಂದ ಅವರು ಪಾಠದ ಕಡೆಗೆ ಲಕ್ಷ್ಯಗೊಟ್ಟು ಓದುವುದಕ್ಕೆ ಪ್ರೇರಣೆ ದೊರೆಯುವುದು.

೩ನೆಯ ೪ನೆಯ ಇಯತ್ತೆಗಳನ್ನು ಹಿಡಿದು ಮುಂದಿನ ಇಯತ್ತೆಗಳ ವಿದ್ಯಾರ್ಥಿಗಳಿಗೆ ಮೌನವಾಚನದಿಂದ ಉಪಯೋಗವಾಗುವುದು. ಅವರು ಪಾಠವನ್ನು ಮನಸ್ಸಿನಲ್ಲಿ ಓದಿಕೊಂಡು, ನಿಂತಲ್ಲಿ ಶಿಕ್ಷಕನನ್ನು ಕೇಳಿ ತಿಳಿದುಕೊಂಡು ಪಾಠದ ಭಾವವನ್ನು ಗ್ರಹಿಸುವ ಶಕ್ತಿಯುಳ್ಳವರಾಗಿರುವರು. ಆದರೆ ೧ನೆಯ ೨ನೆಯ ಇಯತ್ತೆಗಳ ವಿದ್ಯಾರ್ಥಿಗಳು ಪಾಠವನ್ನು ಮನಸ್ಸಿನಲ್ಲಿ ಓದಿಕೊಂಡು ಪಾಠದ ಭಾವವನ್ನು ಗ್ರಹಿಸಲಾರರು. ಅವರಿಗೆ ಮನಸ್ಸಿನಲ್ಲಿ ಓದಿಕೊಳ್ಳುವುದೇ ಮೊದಲು ಕಠಿಣವೆನಿಸುವುದು. ೧ನೆಯ ಇಯತ್ತೆಯವರು ಕಣ್ಣಿನಿಂದ ಇಡಿ ಶಬ್ದವನ್ನು ಒಮ್ಮೆಲಿ ಓದಲಾರರು; ಅಕ್ಷರಗಳನ್ನು ಹೊಂದಿಸಿಕೊಂಡು ಶಬ್ದಗಳನ್ನು ಗ್ರಹಿಸುತ್ತ ವಾಕ್ಯಗಳನ್ನು ಓದುವುದರಲ್ಲಿಯೇ ಅವರ ಶಕ್ತಿಯ ವ್ಯಯವಾಗುವುದು. ಆದುದರಿಂದ ಭಾವವನ್ನು ಗ್ರಹಿಸುವುದು ಅವರಿಗೆ ಸುಲಭವಾಗುವುದಿಲ್ಲ. ಇದರಿಂದ ಅವರ ಮೌನವಾಚನಕ್ಕೆ ಬಹಳ ವೇಳೆ ಹಿಡಿಯುವುದು. ಆದರೆ ಮೌನವಾಚನವು ಬಹಳ ಉಪಯುಕ್ತವಾದುದು. ಇದು ಆಯುಷ್ಯದಲ್ಲಿ ಮನುಷ್ಯನು ತನಗಾಗಿ ಓದುವುದು ಮೌನವಾಗಿಯೇ ನಡೆಯುವುದು; ನಡೆಯಬೇಕು. ಬಾಲಕರಿಗೆ ಇದರ ರೂಢಿಯನ್ನು ಶಿಕ್ಷಕರು ಮಾಡಿಸಲೇಬೇಕು. ರೂಢಿಯು ಕ್ರಮವಾಗಿ ಉಂಟಾಗುವುದು. ಬಾಲಕರು ೩ನೆಯ ಇಯತ್ತೆಯನ್ನು ದಾಟುವ ವೇಳೆಗೆ ಅವರು ಸರಿಯಾದ ಮೌನವಾಚನದ ರೂಢಿಯುಳ್ಳವರಾಗಬೇಕು. ಆದುದರಿಂದ ೩ನೆಯ ಇಯತ್ತೆಯಿಂದ ಮೌನವಾಚನವನ್ನು ಆರಂಭಿಸುವುದು ಲೇಸು. ೩ನೆಯ ಇಯತ್ತೆಯಲ್ಲಿ ಅಷ್ಟೊಂದು ಫಲಕಾರಿಯಾಗದಿದ್ದರೂ ಮೌನವಾಚನದ ಅಭ್ಯಾಸವು ಅವರಲ್ಲಿ ಉಂಟಾಗುವುದು. ೧ನೆಯ ಇಯತ್ತೆಯವರಿಗೆ ಮೌನವಾಚನದ ಫಲವು ಸಾಕಷ್ಟು ಕಾಣಲಾರದು. ಈ ವಿಚಾರಗಳಿಂದ ಟ್ರೇ. ಸ್ಕೂ. ನ ವಿದ್ಯಾರ್ಥಿಶಿಕ್ಷಕರು ಕೊಡುವ ಪಾಠಗಳಲ್ಲಿಯೂ ಶಿಕ್ಷಕರು ಕೊಡುವ ಪಾಠಗಳಲ್ಲಿಯೂ ೧ನೆಯ ಇಯತ್ತೆಯಲ್ಲಿ ಮೌನವಾಚನದ ಮೆಟ್ಟು ಇಲ್ಲ; ೩ನೆಯ ಇಯತ್ತೆಯಲ್ಲಿ ಮೌನವಾಚನದಿಂದ ಆಗಬೇಕಾದ ಪ್ರಯೋಜನವು ಆಗುವುದೆಂದು ನಿರೀಕ್ಷಿಸುವುದಿಲ್ಲ.

ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು ೪ನೆಯ ಮೆಟ್ಟು. ಈಗ ಸಾಧಾರಣವಾಗಿ ಪಾಠದಲ್ಲಿ ಬಂದ ವಿಷಯದ ಅನುಕ್ರಮದಿಂದ ಸಾರಾಂಶವನ್ನು ಕೇಳಿಕೊಳ್ಳುವುದುಂಟು; ಎಂದರೆ ೧ನೆಯ ವಾಕ್ಯವೃಂದ (ಪ್ಯಾರಾ) ದಲ್ಲಿ ಬಂದ

ವಿಷಯವನ್ನು ಕುರಿತು ಮೊದಲು, ತರುವಾಯ ತಿನೆಯ ವಾಕ್ಯವ್ಯಂದದಲ್ಲಿ ಬಂದ ವಿಷಯವನ್ನು ಕುರಿತು ಈ ಕ್ರಮವನ್ನನುಸರಿಸುವರು. ಕೆಲವು ಪಾಠಗಳು ಈ ಕ್ರಮಕ್ಕೆ ಅನುಕೂಲವಾಗಿರುವುವು. ರಾಮನು ವನಕ್ಕೆ ತೆರಳಿದ್ದು, ಳ. ೪; ಕಳ ಕೊಂಡ ಒಂಟೆಯ ಕಥೆ ಳ. ೬; ಮಹಮ್ಮದಪೈಗಂಬರರ ಶಾಂತಗುಣ, ಳ. ೧೦; ಕಳ್ಳರನ್ನು ಮೋಸಗೊಳಿಸಿದ್ದು ಳ. ೧೭. ಮುಂ. ಇಂತಹ ಪಾಠಗಳಲ್ಲಿ ಸುಲಭ ದಿಂದ ಕಠಿಣ ವಿಷಯಗಳು, ಇಲ್ಲವೆ ಸಂಗತಿಗಳು ನಡೆದ ಅನುಕ್ರಮದಿಂದ ಬರೆದ ವಿಷಯಗಳು ಬಂದಿರುವುವು. ಎಡ್ವರ್ಡ್ ಬಾದಶಹರು ಳ. ೨೭; ಭೀಷ್ಮನ ಪ್ರತಿಜ್ಞೆ ಳ. ೪೩ ಈ ತರದ ಚರಿತ್ರಾತ್ಮಕ ಪಾಠಗಳಲ್ಲಿಯೂ ವಾಕ್ಯವ್ಯಂದಗಳ ಅನುಕ್ರಮ ದಿಂದ ಸಾರಾಂಶವನ್ನು ಕೇಳಿಕೊಳ್ಳಬೇಕು. ಆದರೆ ಕೆಲವು ಪಾಠಗಳಲ್ಲಿ ಸುಲಭ ದಿಂದ ಕಠಿಣಕ್ಕೆ ಸಾಗುವದು, ಇಲ್ಲವೆ ಸಂಗತಿ ನಡೆದ ಅನುಕ್ರಮ ಮುಂ. ತತ್ತ್ವ ವನ್ನನುಸರಿಸಿರುವುದಿಲ್ಲ. ಬಿಕ್ಕಟ್ಟಿನ ಪ್ರಸಂಗದಲ್ಲಿ ಹೆದರದಿರುವುದು ಳ. ೩೧. ಈ ಪಾಠದಲ್ಲಿ ಮೊದಲು ಧೈರ್ಯದ ಸ್ವರೂಪನಿವೇಜನೆಯಿದೆ. ಬಳಿಕ ಧೈರ್ಯಶಾಲಿ ಗಳಾದ ಶಿವಾಜಿ, ವಿಲ್ಬರ್ ಫೋರ್ಸ್, ಲೆಸೆಪ್ಸ್ ಇವರ ಕಾರ್ಯಗಳನ್ನು ಉದಾ ಹರಿಸಿದ್ದಾರೆ. ಪಾಠದ ಕೊನೆಯಲ್ಲಿ, ಧೈರ್ಯದ ಮಹತ್ತ್ವದ ನಿವೇಜನೆಯಿದೆ. ಕರ್ತವ್ಯದಕ್ಷತೆ ಳ. ೧೫. ಈ ಪಾಠದಲ್ಲಿ ಮೊದಲು ಕರ್ತವ್ಯದಕ್ಷತೆ ಎಂದರೇನೆಂಬು ದರ ನಿವೇಚನೆಯಿದೆ; ಬಳಿಕ ಕರ್ತವ್ಯದಕ್ಷನಾದ ಬರ್ಕನ್‌ಹೆಡ್ ಹಡಗದ ಕಪ್ತಾನನ ಕರ್ತವ್ಯದಕ್ಷತೆಯ ಪ್ರಸಂಗದ ವರ್ಣನೆಯಿದೆ. ಇಂತಹ ಪಾಠಗಳಲ್ಲಿ ಉದಾಹರಣಗಳನ್ನು ಮೊದಲು ಕೇಳಿಕೊಂಡು ಅವುಗಳಲ್ಲಿ ತೋರಿಬರುವ ಗುಣಗಳ ಕಡೆಗೆ ಸಾಗಿದರೆ **"ವಿಶೇಷದಿಂದ ಸಾಮಾನ್ಯದ ಕಡೆಗೆ ಸಾಗು"** ಎಂಬ ಶಿಕ್ಷಣ ತತ್ತ್ವವನ್ನನುಸರಿಸಿದಂತಾಗುವುದು. "ನಿಯಮಿತತನವೂ, ಸಮಯನಿಷ್ಠೆಯೂ" ಈ ಪಾಠದಲ್ಲಿ ನಿಯಮದಿಂದ ಕೆಲಸ ಮಾಡುವುದು, ವೇಳೆಗೆ ಸರಿಯಾಗಿ ಕೆಲಸ ಮಾಡುವುದು ಎಂಬ ಎರಡು ಗುಣಗಳ ನಿವೇಚನೆಯಿದೆ; ಉದಾಹರಣಗಳೂ, ಗುಣಗಳ ಸ್ವರೂಪನಿವೇಚನೆಗಳೂ ಬೆರೆತು ಹೋಗಿವೆ. ಈ ಸ್ಥಳದಲ್ಲಿ ಸಾರಾಂಶ ವನ್ನು ಕೇಳಿಕೊಳ್ಳುವಾಗ ಆ ಎರಡು ಗುಣಗಳ ಉದಾಹರಣಗಳು, ಅವುಗಳ ಸ್ವರೂಪ ಇವುಗಳನ್ನು ಬಿಂಗಡಿಸಿ ಕೇಳಿಕೊಳ್ಳುವುದು ಯೋಗ್ಯವಾಗುವುದು. ಆಗ ಪಾಠದ ಅನುಕ್ರಮವನ್ನು ಕೆಲಮಟ್ಟಿಗೆ ಬಿಡಬೇಕಾಗುವುದು.

ಅರ್ಥವಿವರಣೆಯು ತಿನೆಯ ಮೆಟ್ಟು. ಈ ಮೆಟ್ಟಿನಲ್ಲಿ ಶಿಕ್ಷಕನು ಪಾಠವನ್ನು ಮೊದಲಿನಿಂದ ಓದುತ್ತ ಪಾಠದ ಭಾವ, ಕಠಿಣಶಬ್ದ ವಾಕ್ಯ, ಇವುಗಳ ವಿವರಣೆಯನ್ನು ಮಾಡುತ್ತ ಸಾಗುವುದು ವಾಡಿಕೆಯಾಗಿದೆ. ಆದರೆ ಈ ಮೆಟ್ಟಿ

ನಲ್ಲಿಯೂ ಸಾರಾಂಶವನ್ನು ಕೇಳಿಕೊಳ್ಳುವ ಮೆಟ್ಟಿನಲ್ಲಿ ಅನುಸರಿಸಿದ ತತ್ತ್ವಗಳನ್ನನುಸರಿಸಿ ಸಾಗಬೇಕು. ಕೆಲವು ಪಾಠಗಳಲ್ಲಿ ೨ನೆಯ ೩ನೆಯ ವಾಕ್ಯವೃಂದಗಳ ವಿವರಣೆಯಾದ ತರುವಾಯ ೧ನೆಯ ವಾಕ್ಯವೃಂದದ ವಿವರಣೆಗೆ ಬರಬಹುದು. ಕರ್ತವ್ಯದಕ್ಷತೆ ೪-೧೫ ಈ ಪಾಠದಲ್ಲಿ ಕಪ್ತಾನನ ಕರ್ತವ್ಯದಕ್ಷತೆಯ ಪ್ರಸಂಗದ ವರ್ಣನೆಯಿರುವ ೨ನೆಯ ೩ನೆಯ ವಾಕ್ಯವೃಂದಗಳನ್ನು ಮೊದಲು ವಿವರಿಸಿ ತರುವಾಯ ಕರ್ತವ್ಯದಕ್ಷತೆ ಎಂಬ ಗುಣದ ವಿವೇಚನೆಯಿರುವ ೧ನೆಯ ವಾಕ್ಯವೃಂದವನ್ನು ವಿವರಿಸುವುದು ಯೋಗ್ಯವಾಗುವುದು. ಆದುದರಿಂದ ಅರ್ಥವಿವರಣೆಯಲ್ಲಿ ಶಿಕ್ಷಕನು ವಾಕ್ಯವೃಂದಗಳನ್ನು ಯಾವ ಕ್ರಮದಿಂದ ಓದುತ್ತ ಇಲ್ಲವೆ ಓದಿಸುತ್ತ ವಿವರಣೆಯನ್ನು ಸಾಗಿಸಬೇಕೆಂಬುದನ್ನು ಮೊದಲು ಗೊತ್ತುಮಾಡಿಕೊಂಡಿರಬೇಕು.

ಈ ಮೆಟ್ಟಿನಲ್ಲಿ ಶಿಕ್ಷಕನು ತಾನೇ ಪಾಠವನ್ನು ಓದುತ್ತ ವಿವರಣೆ ಮಾಡುವುದು ಈಗಿನ ನಾಡಿಕೆ. ಆದರೆ ಶಿಕ್ಷಕನು ತಾನು ಓದುವುದಕ್ಕಿಂತ ವಿದ್ಯಾರ್ಥಿಗಳಿಂದ ಓದಿಸುತ್ತ, ಅಲ್ಲಲ್ಲಿ ಬಂದ ಕಠಿಣ ಭಾಗಗಳನ್ನು ವಿವರಿಸುತ್ತ ಸಾಗುವುದೂ ಮೇಲಿನ ಇಯತ್ತೆಗಳಲ್ಲಿ ಅನುಕೂಲವಾಗುವುದು. ಕೆಳಗಿನ ಇಯತ್ತೆಗಳ ವಿದ್ಯಾರ್ಥಿಗಳಿಗೆ ಓದುವ ಕಲೆ ಸಾಧಿಸಿರುವುದಿಲ್ಲವಾದುದರಿಂದ ಅವರಿಂದ ಓದಿಸುತ್ತ ವಿವರಣೆಯನ್ನು ಸಾಗಿಸಿದಲ್ಲಿ ಅವರ ವಾಚನದಲ್ಲಿಯ ದೋಷಗಳನ್ನು ಆಗ ತಿದ್ದುತ್ತ ಕುಳಿತರೆ ವಿಷಯಾಂತರವಾಗುವುದಲ್ಲವೆ ವೇಳೆಯು ಹೆಚ್ಚಿಗೆ ಹಿಡಿಯುವುದು; ವಾಚನದೋಷಗಳನ್ನು ತಿದ್ದದೆ ಬಿಟ್ಟರೆ ಅವರಿಗೆ ತಪ್ಪಿನ ರೂಢಿ ಮಾಡಿಸಿದಂತಾಗುವುದು. ಮೇಲಿನ ತರಗತಿಗಳ ವಿದ್ಯಾರ್ಥಿಗಳು ವಾಚನದೋಷಗಳನ್ನು ಬಹಳಮಟ್ಟಿಗೆ ಮಾಡಲಾರರು. ಆದುದರಿಂದ ೫ನೆಯ ಇಯತ್ತೆಯಿಂದ ಮುಂದೆ ಅರ್ಥವಿವರಣೆಯು ಮೆಟ್ಟಿನಲ್ಲಿ ವಿದ್ಯಾರ್ಥಿಗಳಿಂದ ಓದಿಸಬಹುದು; ೪ನೆಯದರಿಂದ ಕೆಳಗಿನ ಇಯತ್ತೆಗಳಲ್ಲಿ ಶಿಕ್ಷಕನೇ ಓದುತ್ತ ಸಾಗಬೇಕು.

ಮೇಲೆ ಹೇಳಿದ ಮಾತುಗಳನ್ನನುಲಕ್ಷಿಸಿ ಪ್ರಕೃತ ಲೇಖಕನು ತಾ॥ ೭-೧೨-೧೯೩೬ನೆಯ ದಿವಸ ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಕೊಟ್ಟ ಒಂದು ಮಾದರಿಪಾಠದ ಸಂಕ್ಷಿಪ್ತ ಟಿಪ್ಪಣಿ ಕೆಳಗೆ ಕೊಟ್ಟಿದೆ.

ಟಿಪ್ಪಣಿ

೪ನೆಯ ಇಯತ್ತೆ

ವಿಷಯ— ವಾಚನ ಪಾಠ; ಒಬ್ಬರು..... ೪. ೨೩. (ವಿಷಯವನ್ನು ಕಲಿಸುವ ಪಾಠ); ವೇಳೆ. ೪೫ ನಿ.

೧. **ಉಪೋದ್ಘಾತ** ೧ ಒಳ್ಳೆಯ ಹುಡುಗರು ಹೇಗೆ ಹೇಗೆ ನಡೆಯಬೇಕು? ೨. ಹೇಗೆ ಹೇಗೆ ನಡೆಯಬಾರದು? (ಶಿಕ್ಷಕ–ಒಳ್ಳೆಯ ಹುಡುಗರು ಕೆಲವು ಕೆಲಸಗಳನ್ನು ಮಾಡಬೇಕು, ಕೆಲವುಗಳನ್ನು ಮಾಡಬಾರದು, ಮಾಡಬಾರದ ಕೆಲಸಗಳಲ್ಲಿ ನೀವು ಹೇಳಿದುವಲ್ಲದೆ ಇನ್ನೊಂದು ಮಾತು ಇದೆ.) ೨ನೆಯ ಪಾಠವನ್ನು ತೆರೆಯಿರಿ (ಒಬ್ಬನು ಶಿರೋಲೇಖವನ್ನು ಓದಲಿ.) ಇಲ್ಲಿ ಮಾಡಬಾರದ ಯಾವ ಮಾತು ಹೇಳಿದೆ?

[ಇಯತ್ತೆ ನಾಲ್ಕನೆಯದು; ಎರಡನೆಯ ಷಾಣ್ಮಾಸ; ಈ ಇಯತ್ತೆಯಲ್ಲಿ ಕಲಿಯಬೇಕಾದ ಸುಮಾರು ೪೦ ಪಾಠಗಳಲ್ಲಿ ೨೬ ಪಾಠಗಳನ್ನು ಕಲಿತಿರುವರು; ವಿದ್ಯಾರ್ಥಿಗಳು ತಕ್ಕಷ್ಟು ಪ್ರಬುದ್ಧರು ಎಂದು, "ಶಿಕ್ಷಕನ ಭಾವಬೋಧಕ ವಾಚನ" ಎಂಬ ೨ನೆಯ ಮೆಟ್ಟು ಬಿಟ್ಟಿದೆ.]

೨ನೆಯ ಮೆಟ್ಟು— ವಿದ್ಯಾರ್ಥಿಗಳ ಮೌನವಾಚನ.

ಕ. ಹ. ಯ ಮೇಲೆ ಬರೆಯುವ ಪ್ರಶ್ನೆಗಳು.

೧. ದೇವರು ನಮಗೆ ಯಾವ ಯಾವ ಜ್ಞಾನವನ್ನು ದಯಪಾಲಿಸಿರುವನು?

೨. ಈ ಜಗತ್ತಿನಲ್ಲಿ ಎಲ್ಲರೂ ಕೊರತೆಯುಳ್ಳವರು, ಅದು ಹೇಗೆ?

೩. ಒಬ್ಬರು ಮತ್ತೊಬ್ಬರಿಗೆ ನಗಬಾರದು; ಯಾಕೆ?

೪. ಹುಟ್ಟುಗುರುಡರು ಮೊದಲಾದವರನ್ನು ಕಂಡು ನಗಬಾರದು; ಯಾಕೆ?

೫. ಮನುಷ್ಯರು ತಾವು ಮಾಡುವ ಕೆಲಸಗಳಲ್ಲಿ ತಪ್ಪುಗಳನ್ನು ಮಾಡುವರು, ಅವು ಯಾವವು? ಆಗ ನಾವು ಹೇಗೆ ನಡೆಯಬೇಕು?

ಕ. ಹ. ಯ ಮೇಲೆ ಬರೆದಿಡುವ ಶಬ್ದಾರ್ಥ.

ಕೊರತೆ–ಕಡಿಮೆ ಇರುವಿಕೆ; ಇಲ್ಲದಿರುವಿಕೆ; ದೋಷ. ಹಳಿ–ಹೀಯಾಳಿಸು, ನಿಂದೆಮಾಡು. ಅಧಿಕಾರ–ಹಕ್ಕು. ವಿಕೃತ–ಕೆಟ್ಟುಹೋದ, ಊನವಾದ. ಕೃತಿ–ಕೆಲಸ. ಕ್ಷುಲ್ಲಕತನ–ಕೀಳುತನ, ನಾಣ್ಣುಡಿ–ರೂಢಿಯ ಮಾತು, (ನಾಡು + ನುಡಿ)

ಕ. ಹ. ಯ ಮೇಲೆ ಬರೆದ ಪ್ರಶ್ನೆಗಳನ್ನು ಒಬ್ಬೊಬ್ಬರು ಒಂದೊಂದನ್ನು ಓದಲಿ. ಪಾಠವನ್ನು ಓದಿಕೊಂಡ ಬಳಿಕ ಈ ಪ್ರಶ್ನೆಗಳ ಉತ್ತರಗಳನ್ನು ನೀವು ಕೊಡಬೇಕು ಎಂದು ಶಿಕ್ಷಕನು ಬಾಲಕರನ್ನು ಎಚ್ಚರಿಸುವುದು. ಇಲ್ಲಿ ಬರೆದ ಕಠಿಣ ಶಬ್ದಗಳ ಅರ್ಥವನ್ನು ನೋಡಿಕೊಂಡು ಪಾಠದ ಭಾವವನ್ನು ನೀವು ತಿಳಿದು ಕೊಳ್ಳಬೇಕೆಂದು ಬಾಲಕರಿಗೆ ಹೇಳಿ ಮೌನವಾಚನವನ್ನು ಆರಂಭಿಸಲು ಹೇಳುವುದು.

೪ನೆಯ ಮೆಟ್ಟು, ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು.

ಪ್ರಶ್ನೆಗಳು.

೧. ಈ ಪಾಠದಲ್ಲಿ ಯಾವ ಮಾತಿನ ವಿಷಯವಾಗಿ ಹೇಳಿದೆ ?

೨. ಎಂಥ ಎಂಥವರನ್ನು ನೋಡಿ ನಗೆ ಬರುವದು ? ಬರಿಯ ನೋಡಿಯೇ ನಗೆ ಬರುವದೋ ?

೩. ಯಾಕೆ ನಗಬಾರದು ? ಮತ್ತೊಂದು ಕಾರಣವನ್ನು ಹೇಳು; ಇನ್ನೊಂದು ಕಾರಣವನ್ನು ಹೇಳು.

೪. ಮನುಷ್ಯರು (ಜನರು ನಗುವಂಥ) ತಪ್ಪುಗಳನ್ನು ಮಾಡಿದಾಗ ನಾವು ಯಾಕೆ ನಗಬಾರದು ? ಆಗ ನಾವು ಹೇಗೆ ನಡೆಯಬೇಕು ?

೫. ಎಲ್ಲರೂ ಕೊರತೆಯುಳ್ಳವರು, ಅದು ಹೇಗೆ ?

೬. ನಗುವದರಿಂದ ದ್ವೇಷವು ಬೆಳೆಯುವುದು; ಅದು ಹೇಗೆ ? ಮುಂ.

(ಕ. ಹ. ಯ ಮೇಲೆ ಬರೆದ ಉಳಿದ ಪ್ರಶ್ನೆಗಳನ್ನೂ ಕೇಳಿಕೊಳ್ಳಬಹುದು.)

೫ನೆಯ ಮೆಟ್ಟು-ವಿವರಣೆ. ವಿವರಣೆಯ ಅನುಕೂಲತೆಗಾಗಿ ೨ನೆಯ ವಾಕ್ಯವೃಂದದಲ್ಲಿ ೩, ೩ನೆಯ ವಾಕ್ಯವೃಂದದಲ್ಲಿ ೨, ೧ನೆಯ ವಾಕ್ಯವೃಂದದಲ್ಲಿ ೪ ಹೀಗೆ ಈ ಪಾಠದಲ್ಲಿ ೫ ಒಟ್ಟು ೯ ಖಂಡಗಳು ಮಾಡಿವೆ. ಶಿಕ್ಷಕರು ಅವನ್ನು ಸಹಜವಾಗಿ ಗುರುತಿಸಬಹುದು. ೨ನೆಯ ವಾಕ್ಯವೃಂದವನ್ನಾರಂಭಿಸಿ ೨, ೩, ೧ ಈ ವಾಕ್ಯವೃಂದಗಳ ಕ್ರಮದಿಂದ ಅವುಗಳೊಳಗಿನ ಖಂಡಗಳನ್ನು ಓದಿಸುವುದು. ೩ನೆಯ ವಾಕ್ಯವೃಂದದೊಳಗಿನ "ಜಿಪ್ಪೆಟ್ಟಿಗಿಂತ.....ನೋಯಿಸುವದು ಸರಿಯಲ್ಲ" ಈ ಖಂಡವನ್ನು ಕೊನೆಯಲ್ಲಿ ಓದಿಸುವುದು. [ಇಯತ್ತೆಯ ಅರ್ಧ ಕಾಲಾವಧಿಯನ್ನು ದಾಟಿರುವುದರಿಂದ ವಿದ್ಯಾರ್ಥಿಗಳಿಂದಲೇ ಓದಿಸುತ್ತ ಈ ಮೆಟ್ಟನ್ನು ಸಾಗಿಸಿದೆ.]

ವಿಷಯದ ಅನುಕ್ರಮದಿಂದ ಈ ಪಾಠದಲ್ಲಿ ಬರುವ, ವಿವರಣೆ ಮಾಡಬೇಕಾದ ಕೆಲವು ಕಠಿಣ ವಾಕ್ಯಗಳು–

೧. ದೇವರು ಮನುಷ್ಯನಿಗೆ ಕೊಟ್ಟಿರುವ ವಿಕೃತವಾದ ಅವಯವಗಳಿಗೆ ಪೆಸರಿಡುವ ಅಧಿಕಾರವು ಮನುಷ್ಯನಿಗಿಲ್ಲ.

೨. ಶರೀರರಚನೆ, ಸಂಪತ್ತು ಸಂತತಿ ಮುಂತಾದವು ದೇವರ ಕೃತಿಗಳಾಗಿರುವವು.

೩. ಬರಿಯ ನಗೆಯಿಂದ ನಗುವವನ ಕ್ಷುಲ್ಲಕತನವು ಮಾತ್ರ ಹೊರಬೀಳುತ್ತದೆ.

೪. ಇದೆಲ್ಲ ಆ ಪರಮಾತ್ಮನ ಕೃಪೆಯ ಫಲವಾಗಿರುವದು.

೫. ಎಲ್ಲರೂ ಕೊರತೆಯುಳ್ಳವರಿರುತ್ತಾರೆ.

೬. ಇದರಿಂದ ದ್ವೇಷ ಮಾತ್ರ ಬೆಳೆಯಬಹುದು.

೭. ಜಿದ್ದಪೆಟ್ಟಿಗಿಂತ ನಕ್ಕಪೆಟ್ಟು ಹೆಚ್ಚೆಂದು ನಾಣ್ಣುಡಿ ಇರುವದು.

IX

ಮೂದರಿಗಾಗಿ ಒಂದೆರಡು ವಾಕ್ಯಗಳ ವಿವರಣೆ

ವಾಕ್ಯ ೧. ನಿನ್ನ ಒಂದು ಅವಯವದ ಹೆಸರು ಹೇಳು. ೨. ಕುರುಡನೆಂದರೆ ಆತನ ಯಾವ ಅವಯವವು ಕೆಟ್ಟಿರುವುದು? ೩. ಮೆಳ್ಳನಿಗೆ ಕಾಗೆ ಕಣ್ಣಿನವ ಎಂದರೆ ಅವನ ಕಣ್ಣಿಗೆ ಹೆಸರಿಟ್ಟಂತಾಯಿತು, ಜೋಲುಗಿವಿಗೆ ಆನೆಯ ಕಿವಿ ಎಂದರೆ ಹೆಸರಿಟ್ಟಂತಾಯಿತು; ಚಪ್ಪಟೆ ಮೂಗಿಗೆ ನೀನು ಹೆಸರಿಟ್ಟು ಹೇಳು. ೪ ಕುರುಡುಗಣ್ಣು, ಮೆಳ್ಳಗಣ್ಣು, ಜೋಲುಗಿವಿ ಇವನ್ನು ಯಾರು ಮಾಡಿರುವರು? ಮನುಷ್ಯನು ಇವಕ್ಕೆ ಹೆಸರಿಡಬಾರದು; ಯಾಕೆ? ಅಧಿಕಾರವೆಂದರೆ ಇಲ್ಲಿ ಹಕ್ಕು. ಕೆಲವರಿಗೆ ಗೌಡಿಕೆಯ ಹಕ್ಕು ಇರುವದು; ಆ ಹಕ್ಕು ಯಾರಿಂದ ಬಂದಿರುವದು? ಅವರು ಗೌಡಿಕೆಯನ್ನು ಮಾಡಬೇಕಾಗುವದು; ಹಾಗೆ ಅವಯವಗಳಿಗೆ ಹೆಸರಿಡುವ ಹಕ್ಕು ಯಾರಿಗೂ ಬಂದಿರಬಾರದು.

ವಾಕ್ಯ ೭. ಬಿದ್ದ ಮನುಷ್ಯನು ಮೊದಲು ಅತ್ತಿತ್ತ ನೋಡುವನು, ಯಾಕೆ? ಬಿದ್ದವನು ಮೊದಲು ಎತ್ತ ಲಕ್ಷ್ಯಗೊಡಬೇಕಾಗಿತ್ತು? ಆತನು ಯಾವದನ್ನು ದೊಡ್ಡದಾಗಿ ತಿಳಿದನು? ಯಾವುದರಿಂದ ಆತನು ತನಗೆ ಹೆಚ್ಚು ನೋವಾಗುವದೆಂದು ತಿಳಿದಂತಾಯಿತು? ಬಿದ್ದ....ಹೆಚ್ಚು ಇದೊಂದು, ಜನರು ಮೇಲೆ ಮೇಲೆ ಹೇಳುವ ಮಾತು. ನಾಡು+ನುಡಿ=ನಾಣ್ಣುಡಿ; ದೇಶದ ಮಾತು, ಎಂದರೆ ಎಲ್ಲ ಜನರು ಆಡುವ ಮಾತು. ಬೇರೆ ಒಂದು ನಾಣ್ಣುಡಿಯನ್ನು ಹೇಳಿರಿ.

(ಇದು ವಿಷಯವನ್ನು ಕಲಿಸುವ ಪಾಠವು; ಆದದರಿಂದ ಇದರಲ್ಲಿ ಒನೆಯ ಒನೆಯ ಪಟ್ಟುಗಳಿಲ್ಲ.)

ಒನೆಯ ಮೆಟ್ಟು, ಮುಗಿಸುವುದು (ಉಪಸಂಹಾರ)

ಪ್ರ. ೧. ಈ ಪಾಠದಲ್ಲಿ ಯಾವ ಮಾತನ್ನು ಹೇಳಿದೆ? ೨. ಯಾವಾಗಲೂ ನಗಬಾರದೇ? ೩. ವಿದೂಷಕನನ್ನು ಇಲ್ಲವೆ ಸರ್ಕಸಿನ ಹಾಸ್ಯಗಾರ (ಬಫೂನ್) ನನ್ನು ನೋಡಿ ನಕ್ಕಾಗ ಆತನಿಗೆ ಹೇಗೆ ಅನಿಸುವದು? ೪. ಕುರುಡ, ಮೂಕ ಮೊದಲಾದವರನ್ನು ನೋಡಿ ನಕ್ಕಾಗ ಅವರಿಗೆ ಹೇಗೆ ಅನಿಸುವದು? ೫. ಹಾಗಾದರೆ ಎಂಥಲ್ಲಿ ನಗಬೇಕು? ಎಂಥಲ್ಲಿ ನಗಬಾರದು? ಹೌದು; ನಕ್ಕಲ್ಲಿ ಯಾರಿಗೂ ಮನಸ್ಸಿಗೆ ಹತ್ತದಿದ್ದರೆ ಬೇಕಾದಷ್ಟು ನಗಿರಿ; *

---

* ನಕ್ಕು ಆನಂದಬಡುವ ಬಾಲಕರ ಸ್ವಭಾವಕ್ಕೆ ಈ ಪಾಠದಿಂದ ತಡೆ ಬರಬಾರದು; ನನುವ ಪ್ರಸಂಗದಲ್ಲಿ ಬೇಕಾದಷ್ಟು ನಗಬಹುದು ಎಂಬುದನ್ನು ಸೂಚಿಸುವುದಕ್ಕೆ ಉಪಸಂಹಾರದಲ್ಲಿ ಈ ಮಾತನ್ನು ಉಲ್ಲೇಖಿಸಿದೆ.

(ಪಾಠದಲ್ಲಿ ಬಂದ ಮುಖ್ಯವಾದ ಮಾತುಗಳಲ್ಲಿ ಒಂದೊಂದನ್ನೂ ಒಬ್ಬೊಬ್ಬರಿಂದ ಕೇಳಿಕೊಳ್ಳುವದು.)

ಕೊರತೆ, ಪೂರ್ಣತ್ವ, ಅಧಿಕಾರ, ಈ ಶಬ್ದಗಳನ್ನು ಪ್ರಯೋಗಿಸಿ ಒಂದೊಂದು ವಾಕ್ಯವನ್ನು ರಚಿಸಿರಿ.

೫ನೆಯ ಪಾಠದಲ್ಲಿ ಎಂದರೆ ಓದುವುದನ್ನು ಕಲಿಸುವ ಪಾಠದಲ್ಲಿ ಪೊದಲು ಪಾಠದ ಕಠಿಣ ಭಾಗಗಳ ಭಾವವು ತಿಳಿದಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವದು.

ಬಳಿಕ ಆರಂಭದ ಇಯತ್ತೆಗಳಲ್ಲಿ ಕಠಿಣ ಶಬ್ದಗಳ ಉಚ್ಚಾರಣೆಯನ್ನು ಮಾಡಿಸಬೇಕು. ಆ ಬಳಿಕ ಶಿಕ್ಷಕನ ಮಾದರಿ ವಾಚನವು. ಇಡಿ ಪಾಠವನ್ನು ಓದುವುದಕ್ಕಿಂತ ಒಂದೊಂದು ಖಂಡವನ್ನು ಓದಿ ತೋರಿಸುವ್ರದು ವಿಹಿತವು. ಆರಂಭದ ಇಯತ್ತೆಗಳಲ್ಲಿ ಬಹಳ ಸ್ವಲ್ಪ ಭಾಗವನ್ನು, ಕೆಲವೆಡೆಯಲ್ಲಿ ಒಂದೊಂದೇ ವಾಕ್ಯವನ್ನು ಓದಿ ತೋರಿಸಬೇಕು. ಕಠಿಣ ಭಾವದ ವಾಕ್ಯಗಳನ್ನು ಭಾವಪೂರ್ಣವಾಗಿ ಓದುವ ಶಕ್ತಿಯು ಬಾಲಕರಲ್ಲಿ ಶಿಕ್ಷಕನ ವಾಚನದ ಮಾದರಿಯಿಂದ ಉಂಟಾಗಬೇಕು. ಕಠಿಣಭಾವದ ವಾಕ್ಯಗಳನ್ನು ಹಲವು ಜನ ವಿದ್ಯಾರ್ಥಿಗಳಿಂದ ಓದಿಸಬೇಕು. ಈ ಪಾಠದಲ್ಲಿ ಬಾಲಕರಿಂದ ಹೆಚ್ಚಿಗೆ ಓದಿಸುವುದೇ ಮುಖ್ಯವಾದ ಕೆಲಸವು. ೫ನೆಯ ಇಯತ್ತೆಯಿಂದ ಮೇಲಿನ ಇಯತ್ತೆಗಳಲ್ಲಿ ಶಿಕ್ಷಕನ ಮಾದರಿಯ ವಾಚನವು ಅಷ್ಟೊಂದು ಆವಶ್ಯಕವಾಗಿಲ್ಲ. ಕಠಿಣವಾದ ಕೆಲವೆಡೆಗಳಲ್ಲಿ ಮಾತ್ರ ಓದಿತೋರಿಸಬಹುದು.

ಟ್ರೇನಿಂಗ್ ಸ್ಕೂಲ್ ಧಾರವಾಡ,
ತಾ॥ ೧೦-೧೨-೧೯೩೬

ಎಂ. ಪಿ. ಪೂಜಾರ.

ಶಿಶು ಶಾಲೆಗಳು

(ಮುಂದೆ ಸಾಗಿದ್ದು)

ಶಿಶುಶಾಲೆಗಳಲ್ಲಿ ಬಾಲಕರಿಗೆ ಈ ರೀತಿಯಾಗಿ ಸಂಪೂರ್ಣ ಸ್ವಾತಂತ್ರ್ಯವಿರುವದು ಅವಶ್ಯವಾಗಿದ್ದರೂ ಶಿಕ್ಷಕರು ತಮ್ಮ ಅಧಿಕಾರವನ್ನು ನಡೆಯಿಸುವ ಸಂದರ್ಭಗಳೂ ಆಗಾಗ ಒದಗುತ್ತಿರುವವು. ತೀರ ಜಗಳಗಂಟರಾದ ಹುಡುಗರು ಮಾಡುತ್ತಿರುವ ತಪ್ಪುಗಳನ್ನೂ ಆ ತಪ್ಪುಗಳ ದುಷ್ಪರಿಣಾಮಗಳನ್ನೂ ಅವರ ಲಕ್ಷ್ಯಕ್ಕೆ ತಂದುಕೊಡಬೇಕಾಗುವದು. ಶಿಕ್ಷಕರ ಉಪದೇಶ ವಾಕ್ಯಗಳು ಪರಿಣಾಮಕಾರಿಯಾಗದೆ ಇರುವ ಸಂದರ್ಭದಲ್ಲಿ ಮಾತ್ರ ಶಿಕ್ಷೆಯನ್ನು ವಿಧಿಸಬೇಕಾಗುವದು. ಶಿಕ್ಷೆಯನ್ನು ವಿಧಿಸುವಾಗ ಶಿಕ್ಷಕರು ಪಕ್ಷಪಾತವನ್ನಾಗಲಿ ವ್ಯಕ್ತಿವಿಷಯಕ ಮುಮತೆ ಅಚ್ಚೆಗಳನ್ನಾಗಲಿ ತೋರಿಸಿದರೆಂಬ ಭಾವನೆ ಹುಟ್ಟದಂತೆ ನೋಡಿಕೊಳ್ಳಬೇಕು. ಶಿಕ್ಷೆಗೂ ಪ್ರೀತಿಯನಡತೆಗೂ ಸಂಬಂಧಿಸಲಾಗದು. ಅಪರಾಧಕ್ಕೆ ಶಿಕ್ಷೆ, ಸದಾಚಾರಕ್ಕೆ ಪ್ರೀತಿ ಎಂಬ ಭಾವನೆಯು ಬಾಲಕರಲ್ಲಿ ನಿಸ್ಸಂದೇಹವಾಗಿರುವಂತೆ ನೋಡಿಕೊಳ್ಳಬೇಕು.

ಬಾಲಕರು ಅವಿಶ್ರಾಂತವಾಗಿ ಕೆಲಸಮಾಡುತ್ತಿರುವಾಗಲೂ ಒಮ್ಮೊಮ್ಮೆ ಶಿಕ್ಷಕರು ಅವರನ್ನು ತಡೆಯಬೇಕಾಗುವದು. ಯಾವದೇ ಕೆಲಸದಲ್ಲಿ ಮಿತಿ ಇರಲೇಬೇಕು. ನಿಯಮವನ್ನು ಮೀರಿ ಯಾವದೂ ನಡೆಯಲಾಗದು. ಹಾಗೆ ಸಂಬಂಧಪಟ್ಟಂತೆ ಸ್ವಾತಂತ್ರ್ಯದಿಂದ ಸತತ ಕೆಲಸ ಮಾಡುತ್ತಿದ್ದರೆ ಬಾಲಕರು ದಣಿಯುತ್ತಾರೆ. ಅವರ ಮನಸ್ಸಿಗೂ ಶರೀರಕ್ಕೂ ಅಪಾಯಕರವಾಗುವಷ್ಟು ಶ್ರಮವೂ ಆಯಾಸವೂ ಆಗಬಹುದು.

ಶಿಶುಶಾಲೆಗಳಲ್ಲಿ ಶಿಕ್ಷಕರು ಕೆಲವು ಹುಡುಗರ ಗುಂಪುಗಳನ್ನು ಕಲ್ಪಿಸಿಟ್ಟು ಆಯಾ ಗುಂಪುಗಳಿಗೆ ತಕ್ಕ ಕೆಲಸಗಳನ್ನು ನಿಯಮಿಸಿ ಕೊಡಬೇಕಾಗುತ್ತದೆ. ಮತ್ತು ಬೇರೆ ಬೇರೆ ಪ್ರಕಾರದ ಕೆಲಸಗಳು ಇಷ್ಟಿಷ್ಟೇ ಹೊತ್ತಿನವರೆಗೆ ಆಗಬೇಕೆಂಬದನ್ನು ಶಿಕ್ಷಕರು ಗೊತ್ತುಮಾಡಿಕೊಡಬೇಕಾಗುವದು. ಮಣ್ಣು ಬೆಂಗಿಗಳಿಂದ ಇವಾರತು ರಚಿಸಿ ಆಡುವದು, ಬಣ್ಣದ ಖಡುಗಳಿಂದ ಚಿತ್ರ ತೆಗೆಯುವದು, ಕಾಗದ ಕತ್ತರಿಸುವದು ಮುಂತಾದ ಕೆಲಸಗಳನ್ನು ಮಾಡುವ ಬೇರೆ

ಬೇರೆ ಗುಂಪುಗಳನ್ನು ರಚಿಸಿಕೊಂಡಬಹುದು. ಮತ್ತು ಅದೇ ಕಾಲಕ್ಕೆ ಇನ್ನೊಂದು ಗುಂಪಿನವರು ಶಿಕ್ಷಕರ ಸುತ್ತಲೂ ಕುಳಿತು ಅವರು ಹೇಳುವ ಕಥೆಯನ್ನು ಇಲ್ಲವೆ ಹಾಡನ್ನು ಕೇಳಬಹುದು. ಮತ್ತೊಂದು ಗುಂಪಿನವರು (ಶಿಶುಗೀತ) ಬಾಲಕರ ಹಾಡುಗಳನ್ನು ತಾಳಬದ್ಧವಾಗಿ ಸ್ವರಮೇಲನದಿಂದ ಹಾಡುತ್ತಿರಬಹುದು.

ಇಂಗ್ಲಂಡದೊಳಗಿನ ಸುವ್ಯವಸ್ಥಿತವಾಗಿ ನಡೆದಿರುವ ಒಂದು ಶಿಶುಶಾಲೆಯಲ್ಲಿ ಈ ಕೆಳಗೆ ಹೇಳುವಂತೆ ಗುಂಪುಗಳನ್ನು ಕಲ್ಪಿಸಿಕೊಂಡಿರುವರು.

ಎರಡು ವರುಷ ವಯಸ್ಸಿನ ಬಾಲಕರ ಗುಂಪು :— ಈ ಗುಂಪಿಗೆ ಹೆಚ್ಚು ಉಪಕರಣಗಳು ಬೇಕು. ವರ್ತಮಾನಪತ್ರಗಳು ಮಾಸಿಕಗಳು ಮುಂತಾದವುಗಳಿಂದ ಆರಿಸಿ ಅಂಟಿಸಿದ ಚಿತ್ರಗಳ ಪುಸ್ತಕ, ಆಟದ ಬೊಂಬೆಗಳು, ಉಣ್ಣೆಯಿಂದ ಹೆಣೆದು ಮಾಡಿದ ಪ್ರಾಣಿಗಳು, ದೊಡ್ಡ ದೊಡ್ಡ ಇಟ್ಟಂಗಿಗಳು ಮುಂತಾದವು. ಈ ವಯಸ್ಸಿನ ಬಾಲಕರು ಅನೇಕ ಬಗೆಯ ಕಾಲ್ಪನಿಕ ಆಟಗಳನ್ನು ಆಡಲು ಪ್ರೀತಿಸುವರು. ಇವರಿಗೆ ಮೈಕೈಗಳನ್ನು ತೊಳೆದುಕೊಳ್ಳುವದು ತಮ್ಮ ಅರಿವೆಲಂಚಿಗಳನ್ನು ಧರಿಸಿಕೊಳ್ಳುವದು ಇವನ್ನೂ ಕಲಿಸುವರು. ಇವರು ಆಟದಲ್ಲಿಯೇ ಬಹಳ ವೇಳೆಯನ್ನು ಕಳೆಯುವರು. ಇವರ ಎಲ್ಲ ಕೆಲಸಗಳು ಇವರಿಗೆ ತಮ್ಮ ಶರೀರದ ರಕ್ಷಣೆಗೂ ಅದನ್ನು ಅಂಕಿತದಲ್ಲಿಟ್ಟುಕೊಳ್ಳಲಿಕ್ಕೂ ಸಹಾಯಕಾರಿಯಾಗಿರುವವು.

ಮೂರು ವರುಷ ವಯಸ್ಸಿನ ಬಾಲಕರ ಗುಂಪು:— ಈ ಗುಂಪಿಗೆ ಕೊಡುವ ಉಪಕರಣಗಳು ಎರಡು ವರುಷದ ಬಾಲಕರ ಗುಂಪಿಗೆ ಕೊಡುವ ಉಪಕರಣಗಳಿಗಿಂತಲೂ ಹೆಚ್ಚು ತೊಡಕಿನ ರಚನೆಯುಳ್ಳವಿರುವವು. ಇವುಗಳಲ್ಲಿ ಬಣ್ಣ, ಆಕಾರ ಇವುಗಳ ಸಮಾವೇಶವಾಗಿದ್ದು ಅವುಗಳ ಮೂಲಕ ಬಾಲಕರ ಇಂದ್ರಿಯಗಳಿಗೆ ಶಿಕ್ಷಣವು ದೊರೆಯುವದು. ಇವುಗಳಿಂದ ಕೈಬೆರಳುಗಳಿಗೂ ಶಿಕ್ಷಣ ದೊರೆಯುವದು. ಹಿಂದೆ ಹೇಳಿದ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸಿಟ್ಟ ಪುಸ್ತಕಗಳ ಬದಲು ಒಳ್ಳೆಯ ಚಿತ್ರಗಳ ಪುಸ್ತಕಗಳನ್ನು ಕೊಡುವರು. ಮತ್ತು ಈ ವಯಸ್ಸಿನ ಬಾಲಕರು ತಮ್ಮ ಉಪಕರಣಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವರು.

ಈ ಗುಂಪಿನವರ ಕೆಲಸಗಳಲ್ಲಿ ಹೆಚ್ಚು ಕೆಲಸಗಳು ಶಿಕ್ಷಕರ ಅಪ್ಪಣೆಯಂತೆ ನಡೆಯಬೇಕಾಗುವದು. ಆದರೂ ಅವು ಬಹುಶಃ ಹೆಚ್ಚು ಕಠಿಣವಾದ ನಿಯಮಬದ್ಧವಾಗಿರುವದಿಲ್ಲ. ತೋಟದ ಕೆಲಸ, ಹೂವುಗಳ ಜೋಡಣೆ, ಬಟ್ಟೆಬಿಗೆಯುವದು ಮೊದಲಾದ ಬಾಲಕರ ನಿತ್ಯದ ವ್ಯವಹಾರದೊಳಗಿನ ಕೆಲಸಗಳು ಮುಂತಾದವುಗಳನ್ನು ಈ ತರಗತಿಯ ಬಾಲಕರು ಶಿಕ್ಷಕರ ಸೂಚನೆಯ ಮೇರೆಗೆ

ನಾಲ್ಕು ಮತ್ತು ಐದು ವರುಷ ವಯಸ್ಸಿನ ಬಾಲಕರ ಗುಂಪು:—(ಇದು ಮುಂದಿನ ವರ್ಗಗಳಿಗೆ ಮಧ್ಯವರ್ತೀ ವರ್ಗದಂತಿರುವದು) ಈ ವರ್ಗವು ಪ್ರಾಥಮಿಕ ಶಿಕ್ಷಣದಲ್ಲಿಯ ಬಾಲಕರ ವರ್ಗಕ್ಕೂ ಶಿಶುಶಾಲೆಗಳ ವರ್ಗಗಳಿಗೂ ಮಧ್ಯವರ್ತಿಯಾಗಿದ್ದು ಇವೆರಡೂ ತರಗತಿಗಳಲ್ಲಿ ಒಂದು ಎಲ್ಲಿಗೆ ಮುಗಿದು ಇನ್ನೊಂದು ಎಲ್ಲಿಗೆ ಪ್ರಾರಂಭವಾಗುವದೆಂಬ ನಿಶ್ಚಿತವಾದ ಮೇರೆ ಇರುವದಿಲ್ಲ; ಎಂದರೆ ಶಿಶುಶಾಲೆಗಳ ಅಭ್ಯಾಸ, ಪ್ರಾಥಮಿಕ ಶಿಕ್ಷಣದ ಬಾಲಕರ ವರ್ಗದ ಅಭ್ಯಾಸ ಇವೆರಡೂ ಇದರಲ್ಲಿ ಸರಿಸರಿಯಾಗಿ ಸಮಾವೇಶವಾಗಿರುವವು. ಹಾಗು ಬಾಲಕರು ನಾನಾ ಬಗೆಯ ಆಟಸೋಟಗಳನ್ನೂ ಕೆಲಸಗಳನ್ನೂ ಮಾಡುವರು. ಇವರು ಹಿಂದಿನ ಗುಂಪಿನವರು ಮಾಡುವ ಮನೆತನದ ಕೆಲಸಗಳನ್ನೂ ಮುಂದೆ ಸಾಗಿಸುವರು. ಮತ್ತು ತಮಗೆ ಪ್ರೀತಿಯವೆನಿಸುವ ಕೆಲಸಗಳನ್ನು ಆರಿಸಿಕೊಳ್ಳಲಿಕ್ಕೆ ಈ ಬಾಲಕರಿಗೆ ತುಂಬ ಸ್ವಾತಂತ್ರ್ಯವಿರುವದು. ಈ ಬಾಲಕರು ಸ್ನಾನದ ಮನೆಯನ್ನು ಸ್ವಚ್ಛ ಮಾಡುವರು; ತಮ್ಮ ಉಪಕರಣಗಳನ್ನೆಲ್ಲ ತಾವೇ ಒರಸಿ ತೊಳೆದು ಗೊತ್ತಾದ ಸ್ಥಳದಲ್ಲಿ ವ್ಯವಸ್ಥಿತವಾಗಿ ಇಟ್ಟುಕೊಳ್ಳುವರು. ಹಿಂದಿನ ತರಗತಿಯ ಬಾಲಕರಿಗೆ ಕೊಟ್ಟಂಥ ಆಟಿಗೆಯ ಉಪಕರಣಗಳನ್ನೇ ಈ ತರಗತಿಯವರಿಗೂ ಕೊಡುವರು; ಆದರೆ ಇವರ ಆಟಸೋಟಗಳಲ್ಲಿ ಸುಲಭ ಸಂಖ್ಯಾಜ್ಞಾನವು ಸಮಾವೇಶವಾಗುವದು. ಈ ವರ್ಗದ ಕಾಗದ ಕತ್ತರಿಸುವದು, ಮಣ್ಣಿನಿಂದ ಆಟಿಗೆಗಳನ್ನೂ ವ್ಯವಹಾರದ ವಸ್ತುಗಳನ್ನೂ ಮಾಡುವದು (ಕ್ಲೇಮಾಡೆಲಿಂಗ್) ಮುಂತಾದ ಕೆಲಸಗಳಲ್ಲಿ ವಸ್ತುಗಳ ಎಣಿಕೆಯು ಸಮಾವೇಶವಾಗುವದರಿಂದ ಮುಂದಿನ ಸಂಖ್ಯಾಜ್ಞಾನಕ್ಕೆ ತಕ್ಕ ತಳಪದಿಯನ್ನು ಪಾಕಿದಂತಾಗುವದು.

ಶಿಶುಶಾಲೆಗಳ ತರಗತಿಗಳನ್ನು ದಾಟಿ ಬಾಲಕರ ವರ್ಗಕ್ಕೆ ಬಂದಿರುವ ಬಾಲಕರ ಎಂದರೆ ಆರು ವರ್ಷ ವಯಸ್ಸಿನ ಬಾಲಕರ ಗುಂಪಿನ ಆಟಗಳು ಹೆಚ್ಚು ವ್ಯವಸ್ಥಿತವಾಗಹತ್ತುವವು. ಇವುಗಳಲ್ಲಿ ಬಾಲಕರು ತಮತಮಗೆ ತೋರಿದಂತೆ ಕೆಲಸಮಾಡಲು ಇರುವ ಅನುಕೂಲತೆಯು ಕಡಿಮೆಯಾಗಿ ಅವರ ಕೆಲಸಗಳು ನಿಯಮಬದ್ಧವಾಗುವವು. ಕೆಲಕೆಲವು ನಿಯಮಿತ ಸಮಯದಲ್ಲಿ ಅವರು ತಾವು ಇಂಥದೊಂದು ಉದ್ದೇಶ ಸಾಧನೆಗಾಗಿಯೇ ಕೆಲಸ ಮಾಡುತ್ತೇವಲ್ಲದೆ ಕೇವಲ ಆಟವೇ ತಮ್ಮ ಧ್ಯೇಯವಲ್ಲವೆಂಬದನ್ನು ತಿಳಿದುಕೊಂಡು ಕೆಲಸ ಮಾಡಬೇಕಾಗುವದು. ಆ ಆಟಗಳಲ್ಲಿ ಓದು ಬರೆಹ ಗಣಿತ ಇವೂ ಸಮಾವೇಶವಾಗುವವು. ಈ ಎಲ್ಲ ಕೆಲಸಗಳು ಸಾರ್ಥಕವಾದವೂ ವಸ್ತುಸ್ಥಿತಿಗೆ ಸಂಬಂಧಿಸಿದವೂ ಇರಬೇಕಲ್ಲದೆ ಯಾವನೂ ಕೇವಲ ಕಾಲ್ಪನಿಕವಾಗಿರಬಾರದು. ಉದಾ:— ಬಾಲಕರಿಗೆ ಅರ್ಥ

ವಾಗದಂಥ ಪರಸ್ಪರ ಸಂಬಂಧವಿಲ್ಲದಂಥ ಶಬ್ದಗಳನ್ನೂ ಅಕ್ಷರಗಳ ಗುಂಪುಗಳನ್ನೂ ಬರೆಯಲಿಕ್ಕೆ ಎಂದೂ ಹೇಳಲಾಗದು.

ಈ ವಯಸ್ಸಿನ ಬಾಲಕರಲ್ಲಿ ಅವಧಾನ ಶಕ್ತಿಯು ಉಂಟಾಗಿರುವದು, ಎಂದರೆ- ಅವರು ಯಾವದಾದರೊಂದು ವಿಷಯದಲ್ಲಿ ಮನಸ್ಸನ್ನು ಹೆಚ್ಚು ವೇಳೆಯ ವರೆಗೆ ತೊಡಗಿಸಿ ಕೆಲಸ ಮಾಡುವದಕ್ಕೆ ಸಮರ್ಥರಾಗಿರುವರು. ಯಾವದಾದರೊಂದು ವಿಷಯದ ಪೂರ್ಣವಾದ ಹಾಗು ಯೋಗ್ಯವಾದ ಜ್ಞಾನವನ್ನು ದೊರಕಿಸುವ ಉದ್ದೇಶದಿಂದ ಅವರು ಯಾವದೇ ಕೆಲಸವನ್ನು ತರತರವಾಗಿ ಮಾಡಲಿಕ್ಕೂ ಅದನ್ನೇ ರೂಢಿಮಾಡಲಿಕ್ಕೂ ಸಮರ್ಥರಾಗುವರು. ಈ ತರಗತಿಯ ಬಾಲಕರು ಮೊದಲನೆಯಸಾರಿ ಮಾಡಿದ ಕೈಕೆಲಸ ಹೆಣಿಕೆಯ ಕೆಲಸ ಹೊಲಿಗೆಯ ಕೆಲಸ ಮುಂತಾದವು ಸರಿಯಾಗಿ ಆಗದೆ ಇದ್ದರೆ ಅವನ್ನೇ ಶಿಕ್ಷಕರ ಸೂಚನೆಯನ್ನು ಅನುಸರಿಸಿ ಪುನಃ ಪುನಃ ಮಾಡಿ ಸರಿಪಡಿಸಿಕೊಳ್ಳಬೇಕೆಂಬ ಇಚ್ಛೆಯೂ ಅತರಹದ ಪ್ರಯತ್ನಮಾಡುವ ಲವಲವಿಕೆಯೂ ಅವರಲ್ಲಿ ಕಂಡುಬರುವದು.

ಶಿಶುಶಾಲೆಗಳಲ್ಲಿಯ ಬಾಲಕರ ಆಟಗಳು ನಿಯಮಬದ್ಧವಾಗಿರುವದಿಲ್ಲ. ಮತ್ತು ಅವು ಬಾಲಕರು ಒಂಟಿಯಾಗಿದ್ದು ತಮ್ಮಿಷ್ಟಕ್ಕೆ ತಾವೇ ಆಡುವಂಥವಿರುವವು; ಆದರೆ ಈ ಆರುವರ್ಷಗಳ ವಯಸ್ಸಿನ ಬಾಲಕರ ವರ್ಗದವರ ಆಟಗಳು ನಿಯಮಬದ್ಧವಿರುವವಲ್ಲದೆ ನಾಲ್ಕು ಜನರು ಕೂಡಿ ಆಡುವಂಥವೂ ಆಗಿರುವವು.

ಶಿಶುಶಾಲೆಗಳಲ್ಲಿಯ ಬಾಲಕರಿಗೆ ಇರುವಂಥ ಸ್ವಾತಂತ್ರ್ಯವು ಈ ತರಗತಿಯಲ್ಲಿಯೂ ಇರುತ್ತಿದ್ದರೂ ಇಲ್ಲಿ ಆ ಸ್ವಾತಂತ್ರ್ಯಕ್ಕೆ ವಿಶಿಷ್ಟಸ್ವರೂಪವು ಬಂದಿರುವದು. ನಾಲ್ಕು ಜನರು ಕೂಡಿ ಆಡುವ, ನಾಲ್ಕು ಜನರೊಡನೆ ಕೂಡಿ ನಡೆಯುವ ಸಂದರ್ಭದಲ್ಲಿ ಅವಶ್ಯವಿರುವ ಸಾಮೂಹಿಕ ನಡೆವಳಿಕೆಯ ವಿಚಾರವು ಅವರ ಮನಸ್ಸಿನಲ್ಲಿ ಉದಯವಾಗುವಂತೆ ಒಬ್ಬನಿಗೆ ಹಿತಕಾರಿಯಾದ ವಿಚಾರಗಳೇ ನಾಲ್ಕು ಜನರು ಕೂಡಿದಾಗಲೂ ಹಿತಕಾರಿಯಾಗಲಾರವು, ಇಷ್ಟೇ ಅಲ್ಲ; ಒಬ್ಬನಿಗೆ ಅನುಕೂಲವಾದವು ಹಲವರ ಸಂಬಂಧವುಂಟಾದಾಗ ಪ್ರತಿಕೂಲವೆನಿಸುವವು, ಇವೇ ಮುಂತಾದ ಹೆಚ್ಚಿನ ವಿಚಾರಗಳು ಈ ಬಾಲಕರಲ್ಲಿ ಉಂಟಾಗಬೇಕಾಗುವದು.

ಬಾಲಕರು ಈ ತರಗತಿಯಲ್ಲಿ ನಾನಾತರದ ಕೆಲಸಗಳನ್ನು ಮಾಡಬೇಕಾಗುವದು. ಆದರೆ ಆ ಎಲ್ಲ ಬಗೆಯ ಕೆಲಸಗಳು ನಿಯಮಿತಕಾಲದವರೆಗೂ ನಿಯಮಿತವೇಳೆಯಲ್ಲಿಯೂ ತಪ್ಪದೆ ನಡೆಯುವಂತೆ ಮಾಡಿ ಅವರಲ್ಲಿ ಸಮಯ

ಷ್ಟ್ರತೆಯ ರೂಢಿಯುಂಟಾಗುವಂತೆ ಮಾಡಬೇಕಾಗುವದು. ಮಧ್ಯಾಹ್ನದ ಊಟ, ಸಂಜೆ ತುಸು ಹೊತ್ತು ಆಟಸೋಟಗಳು, ಬಳಿಕ ನಿದ್ದೆಮಾಡುವದು, ಮುಂತಾ ನವು ನಿಯಮಿತವಾಗಿಯೂ ನಿಯಮಿತ ವೇಳೆಗೆ ಸರಿಯಾಗಿಯೂ ನಡೆಯಬೇಕು. ಉದಾ:— ನಿದ್ರೆಯ ವೇಳೆಯು ಬಂದೊಡನೆಯೇ ಎಲ್ಲರೂ ಮಲಗಲೇಬೇಕು. ನುತ್ತು ಆ ಕಾಲದಲ್ಲಿ ಎಲ್ಲಿಯೂ ಎಷ್ಟು ಮಾತ್ರವೂ ಸದ್ದಾಗದಂತೆ ನೋಡಿಕೊಳ್ಳ ಬೇಕು. ಮಲಗಿದ ಹುಡುಗರಲ್ಲಿ ಕೆಲವರು ಬೇಗನೆ ಏಳಬಹುದು. ಕೆಲವರು ತಡವಾಗಿ ಏಳಬಹುದು. ಹೆಚ್ಚು ನಿದ್ರೆಯು ಬೇಕಾದ ಹುಡುಗರಿಗೆ ಅಷ್ಟು ಸಮಯವನ್ನು ಕೊಡಲೇಬೇಕು; ಆರೆ ನಿದ್ದೆಯಲ್ಲಿ ಬಾಲಕರನ್ನು ಎಂದೂ ಎಬ್ಬಿಸ ಕಾಗದು. ಎಂದರೆ ಅವರವರ ಪ್ರಕೃತಿಗೆ ಅವಶ್ಯವಿದ್ದಷ್ಟುಕಾಲ ಮಲಗಲಿಕ್ಕೆ ಅನುಕೂಲವಿರಲೇಬೇಕು.

ಮುಂಬಯಿಯ ಸ್ಥಾಪನೆಯು

ಲೇಖಕ:— ಜಿ. ಎಮ್. ಸಾತೇನಹಳ್ಳಿ ಅ. ಮಾ. ಪ್ರಾ., ಸ್ಕೂ. ಧಾರವಾಡ

ಈಗ ಸುಮಾರು ಮುನ್ನೂರು ವರ್ಷಗಳ ಹಿಂದೆ ಮುಂಬಯಿಯು ಕಡಿಮೆ ಜನಸತಿಯುಳ್ಳದ್ದೂ ವಿಲಕ್ಷಣ ಪರಿಸ್ಥಿತಿಯದೂ ಆಗಿದ್ದಿತು. ಆಗ ಅಲ್ಲಿ ಲ್ಲ ಸಣ್ಣ ಸಣ್ಣ ನಡುಗಡ್ಡೆಗಳಲ್ಲಿ ಕೂಡಿ ಒಟ್ಟಿಗೆ ೧೦ ಸಾವಿರ ಜನಸಂಖ್ಯೆಯು ದ್ದಿತು. ಆಗ ಮುಂಬಯಿ ನಡುಗಡ್ಡೆಯಲ್ಲಿ ಅಲ್ಲಲ್ಲಿ ಆಖಾತಗಳು ಒಳಸೇರಿದ್ದವು. ಲಾಬಾದಿಂದ ಮಾಹಿಮದವರೆಗೆ ಸಣ್ಣ ಸಣ್ಣ ಏಳು ನಡುಗಡ್ಡೆಗಳಿದ್ದವು. ಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಒತ್ತುಗಳೂ ಅಡ್ಡ ಅಡ್ಡವಾಗಿ ಹಬ್ಬಿದ್ದವು. ಈಗಿನ ಾಯಧುಣಿಯ ಹತ್ತರ ಸಣ್ಣ ಆಖಾತವೊಂದಿತ್ತು. ಅಲ್ಲಿ ಕಾಲುಗಳನ್ನು ತೊಳೆದು ಂಡು ಮುಂಬಾದೇವಿಯ ದರ್ಶನಕ್ಕೆ ಹೋಗಬೇಕಾಗುತ್ತಿತ್ತು. ಆದುದರಿಂದ ನಕ್ಕೆ ಪಾಯಧುಣಿಯೆಂಬ ಹೆಸರು ವಾಡಿಕೆಯಾಗಿದ್ದಿತು. ಅದೇ ಹೆಸರೇ ಈಗಲೂ ಳಕೆಯಲ್ಲಿದೆ. ಈಗಿನ ಉಮರಖಾಡಿ, ಫೆಂಡಿಬಝಾರಗಳು ನೆಲಸಿರುವ ಸ್ಥಳವು ಜಲಮಯವಾಗಿತ್ತು. ಎಲ್ಲೆಲ್ಲಿ ನೋಡಿದರೂ ಕೊಳಚೆ, ತೇವು ಪಸರಿಸಿದ್ದದರಿಂದ ಷಜ್ವರ, ಮೈಲಿ, ಮತಾರಿಕಾ ಮೊದಲಾದ ರೋಗಗಳಿಗೆ ಮುಂಬಯಿಯು ಬೀಡಾ ದ್ದಿತು. ಮೀನುಗಾರರೇ ವಿಶೇಷವಾಗಿ ವಾಸಿಸುತ್ತಿದ್ದರು. ಎಂದಿನಿಂದಲೂ ಅದು

ವ್ಯಾಪಾರಕ್ಕೆ ಪಶ್ಚಿಮದಿಕ್ಕಿನ ಮಧ್ಯಸ್ಥಾನವಾಗಿದೆ. ಹಾಗು ಪಾಶ್ಚಿಮಾತ್ಯರು ಅಂದರೆ ಪೋರ್ತುಗೀಜ, ಡಚ್ಚ, ಇಂಗ್ಲಿಷ ಮುಂತಾದ ಜನಾಂಗದವರು ಬರೆದಿಳಿಯುವಿಕ್ಕೆ ಅನುಕೂಲ ಸ್ಥಳವಾದುದರಿಂದ ರೋಗತಾಪತ್ರಯಗಳನ್ನು ಲೆಕ್ಕಿಸದೆ ವ್ಯಾಪಾರಿಗಳು ಅಲ್ಲಿಗೆ ಬರಲೇಬೇಕಾಗುತ್ತಿತ್ತು. ಪೂರ್ವದಕಡೆಯ ಚೀನ, ಹಿಂದುಸ್ತಾನ, ಆಗ್ನೇಯದ ಮಸಾಲೆ ದ್ವೀಪಗಳು ಮುಂತಾದ ಸಮೃದ್ಧ ದೇಶಗಳ ಕೂಡ ಪಾಶ್ಚಿಮಾತ್ಯರು ವ್ಯಾಪಾರ ಮಾಡಲೇಬೇಕಾಗಿತ್ತು. ಆದ್ದರಿಂದ ಎಲ್ಲ ಸ್ಥಾನಿಕ ತೊಂದರೆಗಳನ್ನು ಸಹಿಸಿ ಸಾಹಸಿಗಳಾದ ವ್ಯಾಪಾರಿಗಳು ಅಲ್ಲಿ ನೆಲೆಸತೊಡಗಿದರು. ಅಂದಿನಿಂದ ಆಲ್ಲಿಯ ಜನ ಸಂಖ್ಯೆಯು ಕೆಲವರ್ಷಗಳಲ್ಲಿ ೧೦ ಸಾವಿರದಿಂದ ೧೬ ಸಾವಿರದವರೆಗೆ ಏರತೊಡಗಿತು. ಒಳ್ಳೇ ಭರದ ವ್ಯಾಪಾರದ (ಸುಗ್ಗಿಯ) ಕಾಲದಲ್ಲಿ ಜನಸಂಖ್ಯೆಯು ಹೆಚ್ಚಾದರೂ ರೋಗ ಹಬ್ಬಿದಕೂಡಲೆ ಮತ್ತೆ ಕಡಿಮೆಯಾಗುತ್ತಿತ್ತು. ಆಗ ದೇಶವಿದೇಶಗಳ ತರತರದ ಜನರೆಲ್ಲ ಅಲ್ಲಿ ಕೂಡಿದ್ದರಿಂದ ಜನಸಂಖ್ಯೆಯ ಜೊತೆಗೆ ಮದ್ಯಪ್ರಾಶನವೂ ದುರಾಚಾರಗಳೂ ಕೂಡಿ ಕೆಟ್ಟ ಹವೆಯ ಪರಿಣಾಮಕ್ಕೆ ಮತ್ತಿಷ್ಟು ಉಕ್ಕು ಬಂದು ಮರಣ ಸಂಖ್ಯೆಯು ಬೆಳೆಯುತ್ತಿತ್ತು. ಈ ಪ್ರಕಾರದ ಪರಿಸ್ಥಿತಿಯಲ್ಲಿ ನಮ್ಮಲ್ಲಿಯ ಒಳದೇಶದ ನಾಗರಿಕರು ಈಗಿನಂತೆ ಅಲ್ಲಿಗೆ ಹೋಗಿ ನೆಲೆಸಲಿಕ್ಕೆ ಕಾರಣವೇ ಇರಲಿಲ್ಲ.

ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಿದ್ದರೂ ಸುರತದಲ್ಲಿದ್ದ ಇಂಗ್ಲಿಷ ಕಂಪನಿಯವರು ಮರಾಟರ ಸುಲಿಗೆಗೂ ಉತ್ತರದ ರಾಜಕರಣಕ್ಕೂ ತೊಂದರೆಪಟ್ಟು ಮುಂಬಯಿಯೇ ಸುರತಕ್ಕಿಂತಲೂ ಸುರಕ್ಷಿತಸ್ಥಾನವೆಂದರಿತು ಅಲ್ಲಿ ನೆಲೆಸಿ ವ್ಯಾಪಾರಮಾಡಲಿಕ್ಕೆ ಆಶಿಸುತ್ತಿದ್ದರು. ಸುರತದಲ್ಲಿದ್ದ ಆಗಿನ ಬ್ರಿಟಿಶ ಕಂಪನಿಯ ಪ್ರೆಸಿಡೆಂಟನಾದ ಏ. ಜರಲ್ಡ ಆಜಿಯರ (೧೬೬೯ ರಿಂದ ೧೬೭೭ ರ ವರೆಗೆ ಪ್ರೆಸಿಡೆಂಟನಾಗಿದ್ದನು) ಎಂಬವನು ಮುಂಬಯಿಯಲ್ಲಿ ಬ್ರಿಟಿಶ ಪಡಗುಗಳನ್ನು ಇಟ್ಟು ಅದನ್ನು ಬ್ರಿಟಿಶ ಬಂದರದ ಮುಖ್ಯ ಸ್ಥಾನವನ್ನಾಗಿ ಮಾಡಿಕೊಂಡನು. ಇವನೇ ಮುಂಬಯಿಯ ಆದ್ಯ ಸಂಸ್ಥಾಪಕನು. ಇಲ್ಲಿಯೂ ಮರಾಟರ ಹಾಗು ಸಿದ್ದಿಗಳ ತೊಂದರೆಯಿದ್ದರೂ ಸುರತದಷ್ಟು ಕಠಿಣ ಪರಿಸ್ಥಿತಿಯು ಇರಲಿಲ್ಲ. ವ್ಯಾಪಾರದ ಪದಾರ್ಥಗಳ ಸಂರಕ್ಷಣೆಗಾಗಿ ಸುತ್ತಲೂ ಚನ್ನಾಗಿ ಗೋಡೆಗಳನ್ನು ಕಟ್ಟಿಸಿದನು. ಹಾಗು ಅನುಕೂಲವಾಗುವಂತೆ ಬಂದರದ ಕಟ್ಟಿಗಳನ್ನು ಕಟ್ಟಿಸಿದನು. ಹಾಗು ೬೦೦ ಜನ ಏತದ್ದೇಶೀಯರ ಸೈನ್ಯ ಯುರೋಪಿಯನ್ನರ ದಂಡನ್ನು ಸಿದ್ಧಪಡಿಸಿ ಆ ಸೈನ್ಯದ ಮೇಲೆ ಒಬ್ಬ ಇಂಗ್ಲಿಷ ಮುಖ್ಯಸ್ಥನನ್ನು ನೇಮಿಸಿದನು. ಅಲ್ಲದ್ದ ಪದಾರ್ಥಗಳ ವ್ಯವಸ್ಥೆಗಾಗಿ ಒಂದು ಕೌನ್ಸಿಲವನ್ನು ಸಿದ್ಧಪಡಿಸಿದನು. ಹೀಗಾಗಿ ಸುರತದ ಪ್ರೆಸಿಡೆಂಟನು ಮುಂಬಯಿಯಲ್ಲಿ ಇಂಗ್ಲಿಷರ ಸಾರ್ವಭೌಮತ್ವದ ಅಸ್ತಿವಾರದ ಬೀಜವನ್ನು ಸುಮುಹೂರ್ತದಲ್ಲಿ ಊರಿದನೆಂದು ಹೇಳಬಹುದು.

ಇಷ್ಟೆಲ್ಲ ವ್ಯವಸ್ಥೆಯು ತನ್ನಷ್ಟಕ್ಕೆ ತಾನೇ ಎಂದೂ ಆಗಲಾರದು. ಆಗಿನ ಬ್ರಿಟಿಶ ಕಂಪನಿಯವರ ಮುತ್ಸದ್ದಿತನ, ಪ್ರಾಮಾಣಿಕತನ, ಧೈರ್ಯ ಇವೆಲ್ಲವುಗಳ ಏಕೀಕರಣದಿಂದ ಬ್ರಿಟಿಶರು ಪ್ರಗತಿಹೊಂದಿದರು. ಪೋರ್ತುಗೀಜ ಡಚ್ಚ ಮುಂತಾದ ವಿದೇಶೀಯರೂ ಮರಾಠಾ ಸಿದ್ದೀ ಮುಂತಾದ ಏತದ್ದೇಶೀಯರೂ ಹ್ಯಾಗೆ ಹ್ಯಾಗೆ ಹಿಂದೆ ಸರಿದರೆಂಬದನ್ನು ತಿಳಿದುಕೊಳ್ಳುವದು ಈ ಸಂದರ್ಭದಲ್ಲಿ ಅವಶ್ಯವು. ಇದರಿಂದ ಯಾವದೊಂದೂ ಜನತೆಯ ಸರ್ವ ಸಾಮಾನ್ಯವಾದ ಗುಣಗಳು ಇವರ ಹೆಚ್ಚಳಕ್ಕೆ ಹ್ಯಾಗೆ ಕಾರಣವಾಗುವವೆಂಬ ಸಂಗತಿಯು ಮನದಟ್ಟಾಗುವದು.

ಮುಂಬಯಿಯು ಮೊದಲು ಮೊಗಲರ ಕೈಕೆಳಗೆ ಬರುವ ಪೂರ್ವದಲ್ಲಿ ಗುಜರಾಥದ ಸುಲ್ತಾನನ ಕೈಯಲ್ಲಿತ್ತು. ಪಾಶ್ಚಿಮಾತ್ಯರಿಗೆ ಹಿಂದುಸ್ತಾನಕ್ಕೆ ಬರುವ ಹೆಬ್ಬಾಗಿಲು ಈಗಿನಂತೆ ಆಗಲೂ ಮುಂಬಯಿಯೇ ಆಗಿತ್ತು. ಆದುದರಿಂದ ಪೋರ್ತುಗೀಜರು ಬಂದು ಅಲ್ಲಿ ಇಳಿಯುತ್ತಿದ್ದರು. ಹಾಗೆ ಬರಲಿಕ್ಕೆ ಅಲ್ಲಿದ್ದ ಸಣ್ಣ ಸಣ್ಣ ದ್ವೀಪಗಳಲ್ಲಿ ಹಡಗುಗಳಿಗೆ ನಿಲ್ಲಲಿಕ್ಕೆ ಅನುಕೂಲ ಸ್ಥಳಗಳು ಇದ್ದವು. ಆಗ ಮುಂಬಯಿ ದ್ವೀಪವು ವಸಯಿಯ ಕೆಳಗೆ ಇದ್ದಿತು. ಪೋರ್ತುಗೀಜರ ಗವರ್ನರನಾದ ನ್ಯನೋ-ಡಾ-ಕುನ್ಹಾ ಎಂಬವನು ಜಾಣತನದಿಂದ ಗುಜರಾಥದ ಬಹಾದ್ದೂರಶಹನ ಕಡೆಯಿಂದ ಮುಂಬಯಿ ಸಹಿತವಾಗಿ ವಸಯಿಯನ್ನು ಸಂಪಾದಿಸಿದನು. ಗುಜರಾಥದ ಬಹಾದ್ದೂರ ಶಹನಿಗೂ ಹುಮಾಯೂನನಿಗೂ ಕಾಳಗವು ನಡೆದಾಗ ಪೋರ್ತುಗೀಜ ಗವರ್ನರನು ಜೆನ್ನಾಗಿ ಸಹಾಯಮಾಡಿದ್ದರಿಂದ ಬಹಾದ್ದೂರಶಹನು ಪೋರ್ತುಗೀಜರಿಗೆ ಋಣಿಯಾಗಿದ್ದನು.

ಈ ಪ್ರಕಾರ ಮುಂಬಯಿ, ವಸಯಿ ಸಮುಚ್ಚಯಗಳು ತಮಗೆ ಅಂಕಿತವಾದ ಕೂಡಲೆ ವಸಯಿಗೆ ಪೋರ್ತುಗೀಜರು ಭದ್ರವಾದ ಕೋಟೆಯನ್ನು ಕಟ್ಟಿಕೊಂಡರು. ಇದರಿಂದ ಆಗಿನಕಾಲದಲ್ಲಿ ಅಶಾಂತತೆಯು ಪಸರಿಸಿತ್ತೆಂದು ತಾನೇ ವ್ಯಕ್ತವಾಗುತ್ತದೆ. ಆಗ ಮುಂಬಯಿಯಲ್ಲಿ ಏತದ್ದೇಶೀಯ ಕ್ರೈಸ್ತರು, ಪರಭು, ಕೋಳಿ, ಭಂಡಾರಿ, ಕುಣಬಿ, ಮುಹಮ್ಮದೀಯರು ಇತ್ಯಾದಿ ಜನಾಂಗದವರು ವಾಸವಾಗಿದ್ದರು. ಪಾರ್ಸೀಯರು ಮಾತ್ರ ಆಗ ಅಲ್ಲಿ ಇರಲಿಲ್ಲ. ಅವರು ಮುಂದೆ ಬಂದರು. ಈ ಸಂದರ್ಭದಲ್ಲಿ ಪೋರ್ತುಗೀಜರು ತಮ್ಮ ಧರ್ಮ ಪ್ರಸಾರವನ್ನು ಒಳ್ಳೇ ಭರದಿಂದ ನಡೆಯಿಸಿದರು. ಪೊರ್ತುಗೀಜ ಪಾದ್ರಿಗಳು ವಿಶೇಷವಾಗಿ ಜೆಸ್ಯುಯಿಟ ಪಂಥದ ಪಾದ್ರಿಗಳು ಅಲ್ಲಿ ಬಹಳ ಬಲಾತ್ಕಾರವನ್ನು ನಡೆಯಿಸಿದರು. ಪೋರ್ತುಗೀಜರ ವರ್ಚಸ್ಸವು ಇಳಿಯಲಿಕ್ಕೆ ಬಲುಮೆಯು ಧರ್ಮ ಪ್ರಸಾರವೇ

ಬಹುಮಟ್ಟಿಗೆ ಕಾರಣವಾಯಿತು. ಇತ್ತ ಮುಂಬಯಿ ಬಂದರವು ತಮಗೆ ದೊರೆದರೆ ಅನುಕೂಲವಾಗುವದೆಂದು ಇಂಗ್ಲಿಷ ಕಂಪನಿಯವರೂ ಉತ್ಕಂಠಿತರಾಗಿದ್ದರು.

ಆಗ (೧೬೬೦) ಇಂಗ್ಲಂಡದ ಪಟ್ಟದಮೇಲೆ ಅಧಿಕಾರಾರೂಢನಾಗಿದ್ದ ಎರಡನೆಯ ಚಾರ್ಲಸರಾಜನು ಇಂಗ್ಲಂಡದ ಪ್ರಜೆಗಳಿಗೆ ಬಹಳ ಪ್ರಿಯಕರನಾಗಿದ್ದನು. ಕಂಪನಿಯವರ ಮೇಲೆಯಂತೂ ಅತಿಶಯ ನಂಬಿಗೆಯನ್ನು ಇಟ್ಟಿದ್ದನು. ಕಂಪನಿಯವರು ಬೇಡಿದ ಸಹಾಯವನ್ನು ಈಯಲಿಕ್ಕೆ ಅವನು ಯಾವಾಗಲೂ ಸಿದ್ಧನಾಗಿದ್ದನು. ಇದಕ್ಕೆ ವಿಪರೀತವಾಗಿ ಪೊರ್ತುಗಾಲದ ಪರಿಸ್ಥಿತಿಯಿತ್ತು; ಇಲ್ಲಿ ವಸಯಿ ಮುಂಬಯಿಗಳನ್ನು ದೊರಕಿಸಿದ ಪೋರ್ತುಗೀಜ ಗವರ್ನರನಾದ ಸ್ಯನೋ-ಡಾ-ಕುನ್ಹಾ ಎಂಬಾತನಿಗೆ ಮುಂದೆ ಪೋರ್ತುಗಾಲ ದೇಶದಲ್ಲಿ ಕಾರಾಗೃಹವು ಪ್ರಾಪ್ತವಾಯಿತು. ಚಾರ್ಲಸ ರಾಜನು ಕಂಪನಿಯವರಿಗೆ ಇಲ್ಲಿ ವ್ಯಾಪಾರದ ಹಕ್ಕನ್ನು ಕೊಟ್ಟದ್ದಲ್ಲದೆ ಕಾಲಕಾಲಕ್ಕೆ ಅವಶ್ಯಬಿದ್ದಂತೆ ಒಟ್ಟಿಗೆ ಐದು ಸನದುಗಳನ್ನು ಕೊಟ್ಟನು. ಸ್ವತಂತ್ರವಾಗಿ ನಾಣ್ಯಗಳನ್ನು ಮುದ್ರಿಸುವದು, ಕೋಟಿಕೊತ್ತಲಗಳನ್ನು ಕಟ್ಟುವದು, ಸೈನ್ಯವನ್ನು ನಿರ್ಮಿಸಿಕೊಳ್ಳುವದು, ಯುದ್ಧೋಪಕರಣಗಳನ್ನು ಇಂಗ್ಲಂಡದಿಂದ ತರುವದು, ಏತದ್ದೇಶೀಯ ರಾಜರೊಡನೆ ಸಂಧಿವಿಗ್ರಹಗಳನ್ನು ಮಾಡಿಕೊಳ್ಳುವದು ಇತ್ಯಾದಿ, ರಾಜರಿಗೆ ಉಚಿತವಾದ ಅಧಿಕಾರಿಗಳನ್ನು ಚಾರ್ಲಸರಾಜನು ಕಂಪನಿಯವರಿಗೆ ದಯಪಾಲಿಸಿದ್ದನು. ಅವರಾದರೂ ಅವುಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಂಡರು. ಇದಲ್ಲದೆ ಪೋರ್ತುಗೀಜ ಡಚ್ಚ ಮೊದಲಾದ ಪರಶತ್ರುಗಳ ಹಾಗು ಕಂಪನಿಯ ವಿರುದ್ಧವಾಗಿ ಯತ್ನಿಸಿದ ಇಂಗ್ಲಿಷ ಗೃಹಸ್ಥನ ಪಾರುಪತ್ಯಮಾಡಲಿಕ್ಕೆ ಚಾರ್ಲಸರಾಜನಿಂದ ಕಂಪನಿಯವರಿಗೆ ಒಳ್ಳೇ ಬೆಂಬಲವು ದೊರೆಯುತ್ತಿತ್ತು. ಇದಕ್ಕನುಸರಿಸಿ ಸ್ವದೇಶದಲ್ಲಿ ಚಾರ್ಲಸ ರಾಜನಮೇಲೆ ಕಠಿಣ ಪ್ರಸಂಗವು ಬಂದಾಗ ಕಂಪನಿಯವರು ಚೆನ್ನಾಗಿ ಸಹಾಯ ಮಾಡಿದರು. ಅರಸನು ತನಗೆ ಅನುಕೂಲರಾದವರನ್ನೇ ಕಂಪನಿಯ ಮುಖ್ಯಾಧಿಕಾರಿಗಳನ್ನಾಗಿ ನೇಮಿಸಿಕೊಳ್ಳುತ್ತಿದ್ದನು. ಪ್ರತಿಯೊಂದು ಪರ್ಯಟನಕ್ಕೆ ೫ ಲಕ್ಷ ರೂಪಾಯಿಗಳವರೆಗೆ ಹಣವನ್ನು ಹೊರಗೆ ಒಯ್ಯಬಹುದೆಂದು ಅರಸನು ಕಂಪನಿಯವರಿಗೆ ಅಧಿಕಾರಕೊಟ್ಟಿದ್ದನು.

ಡಚ್ಚ ಕಂಪನಿಯವರ ವ್ಯಾಪಾರವು ನಡೆದೇ ಇತ್ತು. ಮತ್ತು ಅವರ ಹಾಗು ಇಂಗ್ಲಿಷ ಕಂಪನಿಯವರ ನ್ಯಾಯವು ಬೆಳೆಯುತ್ತ ಸಾಗಿತ್ತು. ಚಾರ್ಲಸನ ಸಹೋದರನಾದ ಜೇಮ್ಸನು ಆಫ್ರಿಕದ ಪೂರ್ವದಂಡೆಯಮೇಲೆ ವ್ಯಾಪಾರಮಾಡಲಿಕ್ಕಾಗಿ ಒಂದು ಹೊಸ ಕಂಪನಿಯನ್ನು ಸ್ಥಾಪಿಸಿದನು. ಈ ಕೆಲಸದಲ್ಲಿ ಡಚ್ಚರಿಂದ

ಇಂಗ್ಲಿಷರಿಗೆ ತೊಂದರೆ ಬರಲಾರಂಭಿಸಿತು. ಇತ್ತ ಪೋರ್ತುಗೀಜರಿಗೂ ಡಚ್ಚರಿಂದ ಬಹಳ ಉಪದ್ರವವಾಗಲಾರಂಭಿಸಿತ್ತು. ಆ ಉಪದ್ರವದ ಪ್ರತೀಕಾರಕ್ಕಾಗಿ ಪೋರ್ತುಗೀಜರು ಇಂಗ್ಲಿಷರ ಆಶ್ರಯವನ್ನು ಬೇಡಲಾರಂಭಿಸಿದರು. ಹಿಂದುಸ್ತಾನದ ಪಶ್ಚಿಮದಂಡೆಯಮೇಲೆ ಇಂಗ್ಲಿಷರು ಕಾಲೂರಿ ನಿಂತರೆ ತಮಗೆ ಅಡ್ಡ ಬರುತ್ತಿದ್ದ ಡಚ್ಚರಿಗೆ ಪ್ರತೀಕಾರಮಾಡಲಿಕ್ಕೆ ಅನುಕೂಲವಾಗುವದೆಂದು ಪೋರ್ತುಗೀಜರು ನಿರ್ಧರಿಸಿದರು. ಈ ಉದ್ದೇಶಕ್ಕನುಗುಣವಾಗಿ ೧೬೬೫ನೆ ಇಸವಿಯ ಜೂನ ತಿಂಗಳ ೨೩ನೆಯ ತಾರೀಖಿನ ದಿವಸ ಪೋರ್ತುಗಾಲದ ಅರಸನು ಇಂಗ್ಲಂಡದ ಅರಸನಾದ ೨ನೆಯ ಚಾರ್ಲಸನಿಗೆ ತನ್ನ ಮಗಳಾದ ಕ್ಯಾಥರೀನಳನ್ನು ಲಗ್ನಮಾಡಿ ಕೊಟ್ಟು ಸಂಬಂಧ ಬೆಳೆಯಿಸಿದನು. ವರದಕ್ಷಿಣೆಯೆಂದು ಮುಂಬಯಿಯನ್ನೂ ಅದರ ಸುತ್ತಲಿನ ದ್ವೀಪಗಳನ್ನೂ ಕೊಡಬೇಕೆಂದು ಗೊತ್ತಾಯಿತು. ಈ ಪ್ರಕಾರವಾಗಿ ಲಂಡನದಲ್ಲಿ ಒಪ್ಪಂದವಾಯಿತು.

ಪೂರ್ವದ ಕಡೆಯ ವ್ಯಾಪಾರದ ನಿಮಿತ್ತವಾಗಿ ಡಚ್ಚರಿಗೂ ಇಂಗ್ಲಿಷರಿಗೂ ಕಾಳಗವು ನಡೆಯಿತು. ಈ ಯುದ್ಧಕ್ಕಾಗಿ ಇಂಗ್ಲಿಷ ಪಾರ್ಲಮೆಂಟಿನವರು ಹಣವನ್ನು ನೀರಿನಂತೆ ವೆಚ್ಚಮಾಡಿದರು. ಈ ಪ್ರಸಂಗದಲ್ಲಿ ದಿಲ್ಲಿಯ ಔರಂಗಜೇಬ ಬಾದಶಹನು ನಿಮ್ಮಿಬ್ಬರ ನ್ಯಾಯದ ನಿಮಿತ್ತವಾಗಿ ನಮ್ಮ ರಾಜ್ಯದಲ್ಲಿ ಅಶಾಂತಿಯು ಪಸರಿಸುವದೆಂದು ಅಡ್ಡಬಂದದ್ದರಿಂದ ಆ ಯುದ್ಧವು ಅಷ್ಟಕ್ಕೇ ನಿಂತಿತು. ಈ ಯುದ್ಧದಲ್ಲಿ ಡಚ್ಚರ ಕೈ ಪ್ರಬಲವಾದರೆ ತಮಗೆ ತೊಂದರೆಯಾಗುವದೆಂದು ಸೂರತದ ಪ್ರೆಸಿಡೆಂಟನು ಬಗೆದಿದ್ದನು. ಇದೇ ಸಮಯಕ್ಕೆ ೧೬೬೭ರಲ್ಲಿ ಇಂಗ್ಲಿಷರಿಗೂ ಡಚ್ಚರಿಗೂ ಯುರೋಪದಲ್ಲಿ ಬ್ರೇಡಾ ಎಂಬಲ್ಲಿ ಒಪ್ಪಂದವಾಯಿತು. ಇಂಗ್ಲಿಷ ಹಡಗುಪಡೆಗಳ ಮುಂದೆ ಏತದ್ದೇಶೀಯರ ಆಟವು ನಡೆಯುವಂತೆ ಇರಲಿಲ್ಲ. ಡಚ್ಚರ ಹಾಗು ಪೋರ್ತುಗೀಜರ ಉಪದ್ರವವು ಮೇಲೆ ವಿವರಿಸಿದಂತೆ ಮುಂಬಯಿಯ ಮೇಲೆ ತಪ್ಪಿ ಹೋಯಿತು. ಆದುದರಿಂದ ಮುಂಬಯಿಯು ಅಂದರೆ ಹಿಂದುಸ್ತಾನದಪಶ್ಚಿಮದ ಹೆಬ್ಬಾಗಿಲು ಇಂಗ್ಲಿಷರಿಗೆ ತೆರೆದಂತಾಯಿತು.

ಸುದೈವದಿಂದ ಮುಂಬಯಿ ಬಂದರವು ಬೆಳೆದು ಬೆಳೆದು ಜನಸಂಖ್ಯೆಯು ೧೫ ಸಾವಿರದಿಂದ ೧೦ ಲಕ್ಷದವರೆಗೆ ಬೆಳೆದಿದೆ. ಅದು ಈಗ ಪರದೇಶದವರಿಗೆ ಸಹ ಕುತೂಹಲದಿಂದ ನೋಡತಕ್ಕ ಸ್ಥಳವಾಗಿದೆ. ಅದು ಈಗ ಹಿಂದುಸ್ಥಾನದಲ್ಲೆಲ್ಲ ಅಷ್ಟೇಕೆ, ಏಶಿಯಾಖಂಡದಲ್ಲಿ ಸಹ ಒಂದನೆಯ ಪ್ರತಿಯ ಬಂದರವೂ ಉದ್ಯೋಗಗಳ ಆಗರವೂ ಆಗಿ ಲಕ್ಷ್ಮಿಯ ಭುವನವಾಗಿದೆ.

ಬಿಲ್ವ ಹಾಗು ತುಳಸೀಗಿಡಗಳು

ಲೇಖಕ:— ಗಂ. ಚಿ. ಮತದ ಏನೆಯ ವರ್ಷದ ವಿದ್ಯಾರ್ಥಿ, ಟ್ರೇ. ಸ್ಕೂ. ಧಾರವಾಡ

'ಗುಣಾಃ ಪೂಜಾಸ್ಥಾನಂ' ಎಂಬಂತೆ ಪೂಜ್ಯವಾದ ವಸ್ತುಗಳಲ್ಲಿ ಶ್ರೇಷ್ಠವಾದ ಗುಣಗಳು ಇದ್ದೇ ಇರುತ್ತವೆ. ನಮ್ಮ ಪೂರ್ವದ ಋಷಿವರ್ಯರು ಬಿಲ್ವ ಹಾಗೂ ತುಳಸೀಗಿಡಗಳ ಅಲೌಕಿಕ ಗುಣಗಳನ್ನು ಕಂಡುಹಿಡಿದು ಇವುಗಳಿಗೆ ಪೂಜ್ಯ ಸ್ಥಾನವನ್ನು ಕೊಟ್ಟಿರುವರು. ಹಿಂದೂ ಧರ್ಮದಲ್ಲಿ ಇವುಗಳಿಗೆ ಯೋಗ್ಯ ಸ್ಥಾನವನ್ನು ಕೊಟ್ಟಿರುವುದರಿಂದ ಪ್ರತಿಯೊಬ್ಬ ಆಸ್ತಿಕನಾದ ಹಿಂದುವು ಇವುಗಳ ದರ್ಶನ, ಸ್ಪರ್ಶಲಾಭಗಳನ್ನು ನೈಮಿತ್ತಿಕವಾಗಿಯಾದರೂ ಪಡೆದುಕೊಳ್ಳಬೇಕಾಯಿತು. ಈ ಯೋಜನೆಯಲ್ಲಿ ಆ ಋಷಿವುಂಗವರ ಪೂರ್ಣ ಜಾಣ್ಮೆಯು ವ್ಯಕ್ತವಾಗುತ್ತದೆ. ಧಾರ್ಮಿಕ ಭಾವನೆಯು ಈ ಉಪಯುಕ್ತವಾದ ವೃಕ್ಷಗಳ ರಕ್ಷಣೆಗೆ ಕಾರಣವಾಯಿತು. ಈ ಗಿಡಗಳ ಉಪಯೋಗವು ಅಪರಿಮಿತವಾಗಿದ್ದರೂ ಅದನ್ನು ಆಯುರ್ವೇದ ದೃಷ್ಟಿಯಿಂದ ಕೆಲಮಟ್ಟಿಗೆ ವಿವರಿಸುತ್ತೇನೆ.

ತುಳಸೀಗಿಡ

ಈ ಗಿಡದಿಂದ ಓಝೋನ ಎಂಬ ತೀಕ್ಷ್ಣವಾಯುವು ಉತ್ಪನ್ನವಾಗಿ ರೋಗಕಾರಕ ಹವೆಯನ್ನು ಶುದ್ಧಿಗೊಳಿಸುತ್ತದೆ. ಕ್ಷಯರೋಗಿಗಳಿಗಂತೂ ಈ ವಾಯುವು ಅತಿ ಹಿತಕರವಾದದ್ದು. ಇದಕ್ಕಾಗಿ ಬಾಗಿಲಮುಂದೆ ಕಟ್ಟೆಗಳನ್ನು ಕಟ್ಟಿ ಅದರಲ್ಲಿ ಈ ಗಿಡಗಳನ್ನು ಬೆಳಿಸುವರು. ಪಾಶ್ಚಿಮಾತ್ಯ ವೈದ್ಯರು ಸಹ ಬಾಗಿಲು, ಕಿಡಕಿಗಳಿಗೆ ಹೊಂದಿ ತುಲಸೀ ಸಸಿಗಳನ್ನು ಬೆಳಿಸುವದು ಉತ್ತಮವಾದುದೆಂದು ಅಭಿಪ್ರಾಯಪಡುತ್ತಾರೆ.

ಇದರಲ್ಲಿ ಅನೇಕ ಜಾತಿಗಳುಂಟು. ಕೃಷ್ಣತುಲಸಿ, ಶ್ವೇತತುಲಸಿ ಎಂಬ ಎರಡು ಪ್ರಕಾರಗಳು ಮುಖ್ಯವಾಗಿ ವಾಡಿಕೆಯಲ್ಲಿವೆ. ನಾಯಿತುಳಸಿ, ಕಾಮಕಸ್ತೂರಿ, ನೊಣದಕಸ ಇವಾದರೂ ಇದೇ ವರ್ಗಕ್ಕೆ ಸೇರಿದವು.

ಸಾಮಾನ್ಯಗುಣ:— ಅಗ್ನಿದೀಪಕ, ಉಷ್ಣ, ರುಚಿಕರ, ಕಫವಾತ, ಕ್ರಿಮಿ, ಶ್ವಾಸಕಾಸ, ರಕ್ತದೋಷ, ಜ್ವರ ಇವುಗಳ ನಾಶಕಾರಕ.

ಅಡವೀತುಳಸಿಯ ಸೊಪ್ಪನ್ನು ಜಜ್ಜಿ ರಸಿಕೆಯಾಗದ ಒಣ ಹುಣ್ಣುಗಳ ಮೇಲೆ ಹಾಕಿ ಕಟ್ಟಿದರೆ ಒಳಗಿನ ಹೊಲಸು ಹೊರಬಿದ್ದು ಹುಣ್ಣು ತೀವ್ರ ಮಾಯುವವು.

ಅಡವೀತುಳಸಿಯ ಗಿಡದಿಂದ ಮನೆಯನ್ನು ಜಾಡಿಸಿದರೆ ಚಿಕ್ಕಾಡು ಗುಂಗಾಡು ನಾಶವಾಗುವವು.

ಅಡವೀ ತುಳಸೀಸೊಪ್ಪು, ಬೇವಿನಸೊಪ್ಪು, ಹುಲಗಲಬೀಜ, ರಾಳ ಇವುಗಳ ಚೂರ್ಣದ ಹೊಗೆಯನ್ನು ಪ್ಲೇಗಿನ ಕಾಲದಲ್ಲಿ ಮನೆಯಲ್ಲಿ ಹಾಕುವುದು ಪ್ಲೇಗಪ್ರತಿಬಂಧಕ ಉಪಾಯಗಳಲ್ಲೊಂದು.

ಅಡವೀತುಳಸಿಯಸೊಪ್ಪನ್ನು ಜಜ್ಜಿ ಅದನ್ನೂ ಜಲಮುರಲಿಸೊಪ್ಪಿನರಸವನ್ನೂ ಕುಸುಬೀಎಣ್ಣೆಯಲ್ಲಿ ಕಲಿಸಿ ದನದ ಕಾಲಲ್ಲಿ ಹುಳಬಿದ್ದಲ್ಲಿ ಹಾಕಿ ಕಟ್ಟಿದರೆ ಹುಳಗಳು ಸತ್ತು ಹುಣ್ಣು ಬೇಗ ಮಾಯುವವು.

ಅನೇಕ ರೋಗಗಳ ಮೇಲೆ ಉಪಯೋಗವಾಗುವ ಹಿಂಗ್ವಾದಿ ಚೂರ್ಣದಲ್ಲಿ ಇದರ ಬೇರನ್ನು ಉಪಯೋಗಿಸುವರು.

ವಿಷಮಜ್ವರಕ್ಕೆ:— ಕರೇತುಳಸಿಯ ಸೊಪ್ಪು, ಬಿಲ್ವದಳ, ಜೀರಿಗೆ, ಲವಂಗ, ಅಮೃತಬಳ್ಳಿ, ಬೇವಿನ ಒಳದೋಟಿ, ಜೇಕಿನಗಡ್ಡೆ ಇವುಗಳ ಕಷಾಯವು ಉತ್ತಮ.

ಮಕ್ಕಳ ವಾಂತಿ ಅತಿಸಾರಕ್ಕೆ:— ತುಳಸೀಬೀಜವನ್ನು ಆಕಳ ಹಾಲಿನಲ್ಲಿ ಅರೆದು ಕುಡಿಸುವದು.

ಇರುಳುಗಣ್ಣಿಗೆ:— ಕರೇತುಳಸೀ ರಸದಲ್ಲಿ ಬಿಳೇಗಣಜಲಿ ಬೇರನ್ನು ತೆಯ್ದು ಕಣ್ಣಲ್ಲಿ ಮುಲಗಿಕೊಳ್ಳುವಾಗ್ಗೆ ನಾಲ್ಕು ಹನಿ ಹಾಕುವದು ಕಣ್ಣಿನ ಎಲ್ಲ ರೋಗಗಳಿಗೂ ಹಿತಕರವಾದದ್ದು.

ಪಿತ್ತಗಾದರಿ ಎದ್ದರೆ:— ತುಳಸೀರಸವನ್ನು ಮೈಗೆಲ್ಲ ಲೇಪಿಸುವರು.

ರಕ್ತಾತಿಸಾರಕ್ಕೆ:— ತುಳಸೀಬೀಜವನ್ನು ಡಾಳಿಂಬಕಾಯಿಯ ರಸದಲ್ಲಿ ಅರೆದು ಕುಡಿಸುವುದು.

ವಾತವಿಕಾರಕ್ಕೆ:— ಕರೇತುಳಸಿ, ಬಿಳಿಯಸಂಕೇಶ್ವರ, ಕಾಡಿಗ್ಗರಗು, ಕರೆಲಕ್ಕಿ ಇವುಗಳ ಚೂರ್ಣವನ್ನು ಅರ್ಧ ತೊಲೆಯಷ್ಟು ಜೇನುತುಪ್ಪದಲ್ಲಿ ದಿನಾಲು ಸೇವಿಸುವುದು.

ಜೇಳಿನಕಡಿತಕ್ಕೆ:— ತುಳಸೀರಸದಲ್ಲಿ ಎಕ್ಕೆಯ ಅಥವಾ ಬಿಳೇಗಣಜಲಿಯ ಬೇರನ್ನು ತೆಯ್ದು ಲೇಪಿಸಿ ಕಾಸುವದು.

ಬಿಲ್ವ ಹಾಗು ತುಳಸೀಗಿಡಗಳು

ಲೇಖಕ:— ಗಂ. ಚಿ. ಮೊದಲ ಸಿನೆಯ ವರ್ಷದ ವಿದ್ಯಾರ್ಥಿ, ಟ್ರೇ. ಸ್ಕೂ. ಧಾರವಾಡ

'ಗುಣಾಃ ಪೂಜಾಸ್ಥಾನಂ' ಎಂಬಂತೆ ಪೂಜ್ಯವಾದ ವಸ್ತುಗಳಲ್ಲಿ ಶ್ರೇಷ್ಠವಾದ ಗುಣಗಳು ಇದ್ದೇ ಇರುತ್ತವೆ. ನಮ್ಮ ಪೂರ್ವದ ಋಷಿವರ್ಯರು ಬಿಲ್ವ ಹಾಗೂ ತುಳಸೀಗಿಡಗಳ ಅಲೌಕಿಕ ಗುಣಗಳನ್ನು ಕಂಡುಹಿಡಿದು ಇವುಗಳಿಗೆ ಪೂಜ್ಯ ಸ್ಥಾನವನ್ನು ಕೊಟ್ಟಿರುವರು. ಹಿಂದೂ ಧರ್ಮದಲ್ಲಿ ಇವುಗಳಿಗೆ ಯೋಗ್ಯ ಸ್ಥಾನವನ್ನು ಕೊಟ್ಟಿರುವುದರಿಂದ ಪ್ರತಿಯೊಬ್ಬ ಆಸ್ತಿಕನಾದ ಹಿಂದುವು ಇವುಗಳ ದರ್ಶನ, ಸ್ಪರ್ಶಲಾಭಗಳನ್ನು ನೈಮಿತ್ತಿಕವಾಗಿಯಾದರೂ ಪಡೆದುಕೊಳ್ಳಬೇಕಾಯಿತು. ಈ ಯೋಜನೆಯಲ್ಲಿ ಆ ಋಷಿಪುಂಗವರ ಪೂರ್ಣ ಜಾಣ್ಮೆಯು ವ್ಯಕ್ತವಾಗುತ್ತದೆ. ಧಾರ್ಮಿಕ ಭಾವನೆಯು ಈ ಉಪಯುಕ್ತವಾದ ವೃಕ್ಷಗಳ ರಕ್ಷಣೆಗೆ ಕಾರಣವಾಯಿತು. ಈ ಗಿಡಗಳ ಉಪಯೋಗವು ಅಪರಿಮಿತವಾಗಿದ್ದರೂ ಅದನ್ನು ಆಯುರ್ವೇದ ದೃಷ್ಟಿಯಿಂದ ಕೆಲಮಟ್ಟಿಗೆ ವಿವರಿಸುತ್ತೇನೆ.

ತುಳಸೀಗಿಡ

ಈ ಗಿಡದಿಂದ ಓಝೋನ ಎಂಬ ತೀಕ್ಷ್ಣವಾಯುವು ಉತ್ಪನ್ನವಾಗಿ ರೋಗಕಾರಕ ಹವೆಯನ್ನು ಶುದ್ಧಿಗೊಳಿಸುತ್ತದೆ. ಕ್ಷಯರೋಗಿಗಳಿಗಂತೂ ಈ ವಾಯುವು ಅತಿ ಹಿತಕರವಾದದ್ದು. ಇದಕ್ಕಾಗಿ ಬಾಗಿಲಮುಂದೆ ಕಟ್ಟೆಗಳನ್ನು ಕಟ್ಟಿ ಅದರಲ್ಲಿ ಈ ಗಿಡಗಳನ್ನು ಬೆಳಿಸುವರು. ಪಾಶ್ಚಿಮಾತ್ಯ ವೈದ್ಯರು ಸಹ ಬಾಗಿಲು, ಕಿಡಕಿಗಳಿಗೆ ಹೊಂದಿ ತುಲಸೀ ಸಸಿಗಳನ್ನು ಬೆಳಿಸುವದು ಉತ್ತಮವಾದುದೆಂದು ಅಭಿಪ್ರಾಯಪಡುತ್ತಾರೆ.

ಇದರಲ್ಲಿ ಅನೇಕ ಜಾತಿಗಳುಂಟು. ಕೃಷ್ಣತುಲಸಿ, ಶ್ವೇತತುಲಸಿ ಎಂಬ ಎರಡು ಪ್ರಕಾರಗಳು ಮುಖ್ಯವಾಗಿ ವಾಡಿಕೆಯಲ್ಲಿವೆ. ನಾಯಿತುಳಸಿ, ಕಾಮಕಸ್ತೂರಿ, ನೊಣದಕಸ ಇವಾದರೂ ಇದೇ ವರ್ಗಕ್ಕೆ ಸೇರಿದವು.

ಸಾಮಾನ್ಯಗುಣ:— ಅಗ್ನಿದೀಪಕ, ಉಷ್ಣ, ರುಚಿಕರ, ಕಫವಾತ, ಕ್ರಿಮಿ, ಶ್ವಾಸಕಾಸ, ರಕ್ತದೋಷ, ಜ್ವರ ಇವುಗಳ ನಾಶಕಾರಕ.

ಅಡವೀತುಳಸಿಯ ಸೊಪ್ಪನ್ನು ಜಜ್ಜಿ ರಸಿಕೆಯಾಗದ ಒಣ ಹುಣ್ಣುಗಳ ಮೇಲೆ ಹಾಕಿ ಕಟ್ಟಿದರೆ ಒಳಗಿನ ಹೊಲಸು ಹೊರಬಿದ್ದು ಹುಣ್ಣು ತೀವ್ರ ಮಾಯುವವು.

ಅಡವೀತುಳಸಿಯ ಗಿಡದಿಂದ ಮನೆಯನ್ನು ಜಾಡಿಸಿದರೆ ಚಿಕ್ಕಾಡು ಗುಂಗಾಡು ನಾಶವಾಗುವವು.

ಅಡವೀ ತುಳಸೀಸೊಪ್ಪು, ಬೇವಿನಸೊಪ್ಪು, ಹುಲಗಲಬೀಜ, ರಾಳ ಇವುಗಳ ಚೂರ್ಣದ ಹೊಗೆಯನ್ನೆ ಪ್ಲೇಗಿನ ಕಾಲದಲ್ಲಿ ಮನೆಯಲ್ಲಿ ಹಾಕುವುದು ಪ್ಲೇಗಪ್ರತಿಬಂಧಕ ಉಪಾಯಗಳಲ್ಲೊಂದು.

ಅಡವೀತುಳಸಿಯಸೊಪ್ಪನ್ನು ಜಜ್ಜಿ ಅದನ್ನೂ ಜಲಮುರಲಿಸೊಪ್ಪಿನರಸವನ್ನೂ ಕುಸುಬೀಎಣ್ಣೆಯಲ್ಲಿ ಕಲಿಸಿ ದನದ ಕಾಲಲ್ಲಿ ಹುಳಬಿದ್ದಲ್ಲಿ ಹಾಕಿ ಕಟ್ಟಿದರೆ ಹುಳಗಳು ಸತ್ತು ಹುಣ್ಣು ಬೇಗ ಮಾಯುವವು.

ಅನೇಕ ರೋಗಗಳ ಮೇಲೆ ಉಪಯೋಗವಾಗುವ ಹಿಂಗ್ವಾದಿ ಚೂರ್ಣದಲ್ಲಿ ಇದರ ಬೇರನ್ನು ಉಪಯೋಗಿಸುವರು.

ವಿಷಮಜ್ವರಕ್ಕೆ:— ಕರೇತುಳಸಿಯ ಸೊಪ್ಪು, ಬಿಲ್ವದಳ, ಜೀರಿಗೆ, ಲವಂಗ, ಸಮ್ಮತಬಳ್ಳಿ, ಬೇವಿನ ಒಳದೋಟೆ, ಜೇಕಿಸಗಡ್ಡೆ ಇವುಗಳ ಕಷಾಯವು ಉತ್ತಮ.

ಮಕ್ಕಳ ವಾಂತಿ ಅತಿಸಾರಕ್ಕೆ:— ತುಳಸೀಬೀಜವನ್ನು ಆಕಳ ಹಾಲಿನಲ್ಲಿ ಅರೆದು ಕುಡಿಸುವದು.

ಇರುಳುಗಣ್ಣಿಗೆ:— ಕರೇತುಳಸೀ ರಸದಲ್ಲಿ ಬಿಳೇಗಣಜಲಿ ಜೀರನ್ನು ತೆಯ್ದು ಕಣ್ಣಲ್ಲಿ ಮುಲಗಿಕೊಳ್ಳುವಾಗ್ಗೆ ನಾಲ್ಕು ಹನಿ ಹಾಕುವದು ಕಣ್ಣಿನ ಎಲ್ಲ ರೋಗಗಳಿಗೂ ಹಿತಕರವಾದದ್ದು.

ಪಿತ್ತಗಾದರಿ ಎದ್ದರೆ:— ತುಳಸೀರಸವನ್ನು ಮೈಗೆಲ್ಲ ಲೇಪಿಸುವರು.

ರಕ್ತಾತಿಸಾರಕ್ಕೆ:— ತುಳಸೀಬೀಜವನ್ನು ಡಾಳಿಂಬಕಾಯಿಯ ರಸದಲ್ಲಿ ಅರೆದು ಸೇವಿಸುವುದು.

ವಾತವಿಕಾರಕ್ಕೆ:— ಕರೇತುಳಸಿ, ಬಿಳಿಯಸಂಕೇಶ್ವರ, ಕಾಡಿಗ್ಗರಗು, ಕರೆಲಕ್ಕಿ ಇವುಗಳ ಚೂರ್ಣವನ್ನು ಅರ್ಧ ತೊಲೆಯಷ್ಟು ಜೇನುತುಪ್ಪದಲ್ಲಿ ದಿನಾಲು ಸೇವಿಸುವುದು.

ಚೇಳಿನಕಡಿತಕ್ಕೆ:— ತುಳಸೀರಸದಲ್ಲಿ ಎಕ್ಕೆಯ ಅಥವಾ ಬಿಳೇಗಣಜಲಿಯ ಬೇರನ್ನು ತೆಯ್ದು ಲೇಪಿಸಿ ಕಾಸುವದು.

ಚರ್ಮರೋಗಗಳಿಗೆ:— ತುಳಸಿಯ ರಸದಲ್ಲಿ ಗಂಧಕ, ಸೀಸು ಜೆಯ್ದು ಲೇಪಿಸುವುದು.

ಪಾಂತಿಗೆ:— ತುಳಸೀರಸದಲ್ಲಿ ನವಿಲಗರಿಯ ತುಂಬು ಸುಟ್ಟಬೂದಿ, ಬೆಳಪು ಪರಟಿಯ ಬೂದಿ, ಜೇನುತುಪ್ಪ ಕಲಸಿ ನೆಕ್ಕಿಸುವುದು.

ಇಲಿ ಕಡಿದದ್ದಕ್ಕೆ— ತುಳಸೀರಸದಲ್ಲಿ ಬೆಕ್ಕಿನ ಹಲ್ಲು ತೆಯ್ದು ಹಚ್ಚುವದು.

ಕಿವಿ ಒಡೆದದ್ದಕ್ಕೆ— ಕರೇತುಳಸಿ, ಕಾಡಿಗ್ಗರಗು, ಕರೇಮದ್ದುಗುಣಿಕೆ. ಇವುಗಳ ರಸಗಳ ಚತುರ್ಥಾಂಶ ಹುಲಗಲ ಎಣ್ಣೆಯನ್ನು ಹಾಕಿ ಕುದಿಸಿ ಉಂಟಾದ ಎಣ್ಣೆಯನ್ನು ಕಿವಿಯಲ್ಲಿ ನಾಲ್ಕು ಹನಿಯಂತೆ ಹಾಕುವದು.

ಮಕ್ಕಳ ಕೆಮ್ಮಿಗೆ— ತುಳಸೀ ಗುಟ್ಟಿಯನ್ನು ಹಾಕುವ ರೂಢಿಯು ಒಳ್ಳೆಯದು.

ಧನುರ್ವಾತಕ್ಕೆ— ಕೃಷ್ಣತುಲಸಿ, ಅಲ್ಲ, ಬಳ್ಳೊಳ್ಳಿ, ಜಲಮುರಲೆಸೊಪ್ಪು, ಮೆಣಸು ಇವುಗಳನ್ನು ಅರೆದು ೩-೪ ಮಾಸಿಯಷ್ಟು ಜೇನುತುಪ್ಪದಲ್ಲಿ ಹಾಕುವದು. ಇದು ಬಾಲಗ್ರಹಕ್ಕೂ ಉತ್ತಮವಾದದ್ದು.

ಬಿಲ್ವವೃಕ್ಷ

ಬಿಲ್ವವೃಕ್ಷದ ನೆರಳು ತಂಪಾಗಿ ಆರೋಗ್ಯಕರವಾಗಿದೆ. ಹಗಲು ಇದರ ನೆರಳಲ್ಲಿ ಕೂಡುತ್ತಿರಹೋದರೆ ಕ್ಷಯ ಮುಂತಾದ ಅನೇಕ ರೋಗಗಳು ಗುಣವಾಗುತ್ತವೆ. ಈ ವೃಕ್ಷದ ಸನ್ನಿಧಿಯಲ್ಲಿ ಮಂತ್ರ ಪುನಶ್ಚರಣಾದಿಗಳು ತೀವ್ರ ಸಿದ್ಧಿಸುವವು.

ಸಾಮಾನ್ಯ ಗುಣಧರ್ಮ—ಪೌಷ್ಟಿಕ, ಪಾಚಕ, ರಕ್ತಶುದ್ಧಿಕಾರಕ, ಆತಿಸಾರ, ವಾತ, ತ್ರಿದೋಷ ಜ್ವರ ಇವುಗಳ ನಾಶಕ.

ಅಮಾಂಶಕ್ಕೆ— ಬಿಲ್ವಫಲದ ತಿಳಲಿನಲ್ಲಿ ಬೆಲ್ಲ, ತುಪ್ಪ, ಶುಂಠಿ ಕಲಿಸಿ ತಿನ್ನಲು ಪದರಿಂದ ಗುಲ್ಮವಾಯು, ಉದರಶೂಲೆ, ಆಮಶೂಲೆ, ಮಲಬದ್ಧತೆ, ರಕ್ತಾತಿಸಾರ ಇವು ನಾಶವಾಗುವವು.

ಹೊಟ್ಟೆಯಲ್ಲಿ ಕ್ರಿಮಿಯಾದರೆ— ಬಿಲ್ವಪತ್ರದರಸ, ಜೀರಿಗೆ ಅರೆದು ಕುಡಿಸುವದು.

ಸರ್ವ ಅತಿಸಾರಕ್ಕೆ— ಬಿಲ್ವಫಲದ ತಿಳಲು, ಮಾವಿನಗೊಟ್ಟದ ತಿಳಲು ಮೊಸರು ಕಲಿಸಿ ಕೊಡುವದು.

ಅಶುದ್ಧ ರಸಾಯನ ಭಕ್ಷಣದಿಂದ ಬಾಯಿಬಂದರೆ— ಬಿಲ್ವಫಲದ ತಿಳಲು, ಜಾಲಯು ಒಳದೋಟಿ, ಪಟಕ ಇವುಗಳನ್ನು ಕುದಿಸಿದ ನೀರು ಮುಕ್ಕಳಿಸುವದು.

ಗರ್ಭಿಣಿ ವಾಂತಿಗೆ— ಬಿಲ್ವಫಲದ ತಿರುಳಿನ ನೀರು ಜೇನುತುಪ್ಪ ಕೂಡಿಸಿ ಕೊಡುವದು.

ವಿಷಮಜ್ವರಕ್ಕೆ— ಬಿಲ್ವಪತ್ರ, ಬೆಲ್ಲ, ಶುಂಠಿ, ಅಮೃತಬಳ್ಳಿಸತ್ವ ಇವನ್ನು ಅರೆದು ಗುಳಿಗೆಮಾಡಿ ತಿನ್ನಿಸುವದು.

ಪ್ರಮೇಹಕ್ಕೆ:— ಬಿಲ್ವರಸದಲ್ಲಿ ಒಟವಟಿಗನ ಬೇರನ್ನು ತೆಯ್ದು ಜೀರಿಗೆ ಪುಡಿಸಿ ಕೊಡಲು ಅಸಾಧ್ಯ ಪ್ರಮೇಹಕ್ಕೂ ಗುಣ ಬರುವದು.

ಮೂಲವ್ಯಾಧಿಗೆ— ಜೀರಿಗೆ, ದಾಲಚಿನ್ನಿ, ಸೂರಣ, ಸಕ್ಕರೆ ಇವುಗಳನ್ನು ಬಿಲ್ವರಸದಲ್ಲಿ ತಕ್ಕೊಂಡರೆ ಮಲಬದ್ಧತೆ, ಮೂಲವ್ಯಾಧಿ, ಮೂತ್ರೀಬೇನೆ, ಕಾಮಣಿ ಇವು ನಾಶವಾಗುವವು.

ಬಿಲ್ವಮೂಲವನ್ನು ಬಾಳಂತಿರೋಗಕ್ಕೆ ಅತಿ ಗುಣಕಾರಿಯಾದ ದಶಮೂಲದಲ್ಲಿ ಸೇರಿಸಿರುವರು.

ಬಿಲ್ವಮೂಲವನ್ನು ಹಾಲಲ್ಲಿ ತೆಯ್ದು ಕುಡಿಯಲು ಸತ್ವವೃದ್ಧಿ, ಬುದ್ಧಿವೃದ್ಧಿ ಆಗುವದು. ಬಿಲ್ವಮೂಲವನ್ನು ಲಿಂಬೇಹುಳಿಯಲ್ಲಿ ತೆಯ್ದು ನಾಲಿಗೆಗೆ ತಿಕ್ಕಲು ನಾಲಿಗೆ ರೋಗಗಳು ಹೋಗುವವು.

ಬಿಲ್ವಮೂಲವನ್ನು ನೀರಲ್ಲಿ ತೆಯ್ದು ಕುಡಿಸಿದರೆ ಸರ್ಪ ವಿಷವು ಇಳಿಯುವದು. ಬಿಲ್ವಪತ್ರ, ಗಜಗದ ಬೇರು ಇವುಗಳ ಕಷಾಯದ ಸ್ನಾನ ಮಾಡಿಸಿದರೆ ಮಕ್ಕಳ ಗ್ರಹಬಾಧೆಯು ನಿವೃತ್ತಿಯಾಗುವದು.

ಬಿಲ್ವಪತ್ರ, ಲವಂಗ, ಜೀರಿಗೆ, ಉಳ್ಳೀಗಡ್ಡಿ ಇವುಗಳನ್ನು ಅರೆದು ಗುಳಿಗೆಮಾಡಿ ೧ ತೊಲಿಯಷ್ಟು ತಿನ್ನುತ್ತ ಹೋದರೆ ಅಸ್ಥಿಗತ ಜ್ವರವು ನಿವೃತ್ತಿಯಾಗುವುದು.

ಬಿಲ್ವದ ತೋಟಿಯ ಕಷಾಯವನ್ನು ಜೇನುತುಪ್ಪದಲ್ಲಿ ಕೊಟ್ಟರೆ ತ್ರಿದೋಷಜನ್ಯ ವಾಂತಿಯು ನಾಶವಾಗುವದು.

ಬಿಲ್ವಫಲ, ಚಿತ್ರಮೂಲ, ಚವಕ, ಶುಂಠಿ ಇವುಗಳ ಕಲ್ಕವನ್ನು ಆಡಿನ ಹಾಲಲ್ಲಿ ಕೊಟ್ಟರೆ ಸಂಗ್ರಹಣಿ, ಶೂಲೆ, ಅಗ್ನಿಮಾಂದ್ಯ, ಅರುಚಿ ಇವುಗಳ ನಾಶವಾಗುವದು.

ಕ್ವಚಿದ್ಧರ್ಮಃ ಕ್ವಚಿನ್ಮೈತ್ರೀ ಕ್ವಚಿದರ್ಥಃ ಕ್ವಚಿದ್ಯಶಃ ।
ಕರ್ಮಾಭ್ಯಾಸಃ ಕ್ವಚಿಚ್ಚೇತಿ ಚಿಕಿತ್ಸಾನಾಸ್ತಿ ನಿಷ್ಫಲಾ ॥

ಭದ್ರಂ। ಶುಭಂ। ಮಂಗಲಂ।

ಬಾಕಿಗಳ ತಾಳೆಯ ವಿಷಯವಾಗಿ ಕೆಲವು ವಿಚಾರಗಳ

ಲೇಖಕ:— ಎಂ. ಕಮಡೊಳ್ಳಿ ಸಿನೆಯರ ವಿ. ವಿ. ಟ್ರೇ. ಸ್ಕೂ. ಧಾರವಾಡ.

ಕೆಲವೊಂದು ನಿಯಮಿತ ಅವಧಿಯಲ್ಲಿ ಬರೆದ ಜಮಾಖರ್ಚು ಸರಿಯಾಗಿದೆಯೋ ಇಲ್ಲವೋ ಎಂಬದರ ಪರೀಕ್ಷೆಗಾಗಿ ಮೇಳುನೋಡಬೇಕಾಗುತ್ತದೆ. ತಾಳೆಗಳಿಂದ, ಬರೆದ ಜಮಾಖರ್ಚಿನ ತಪ್ಪು ಒಪ್ಪುಗಳು ತಿಳಿಯುವವಲ್ಲದೆ ಜಮಾಖರ್ಚು ಬರೆಯುವರ ಪ್ರಾಮಾಣಿಕತನವು ಸಹ ವ್ಯಕ್ತವಾಗುತ್ತದೆ. ಅಂದಮೇಲೆ ಕೆಲವೊಂದು ಅವಧಿಯವರೆಗೆ ಬರೆದ ಜಮಾಖರ್ಚಿನ ಸತ್ಯತೆಗಾಗಿ ತಾಳೆಗಳ ಮಹತ್ವವು ಎಷ್ಟು ಮಟ್ಟಿಗೆ ಅವಶ್ಯಕವಿರುತ್ತದೆಯೆಂಬದನ್ನು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ ಮೇಲೆ ಬರೆದಂತೆ ತಾಳೆ ನೋಡುವ ಪ್ರಕಾರಗಳಲ್ಲಿ ಬಾಕಿಗಳ ತಾಳೆಯು ಒಂದಾದದ್ದು.

ಕೆಲವೊಂದು ನಿಯಮಿತ ಅವಧಿಯ ವರೆಗೆ ಜಮಾಖರ್ಚು ನಡೆನಡೆದ ಹಾಗಾದ ವ್ಯವಹಾರಗಳ ಕೀರ್ದಿ ಬರೆದು ಖಾತೆಗೆ ಕೀರ್ದಿಯ ರಕಮುಗಳನ್ನು ಏರಿಸುತ್ತೇವೆ. ಕೀರ್ದಿಯೊಳಗಿನ ಜಮಾಖರ್ಚಿನ ರಕಮುಗಳೆಲ್ಲ ಖಾತೆಗೆ ಸರಿಯಾಗಿ ಏರಿಸಿದ್ದರೇ ಮಾತ್ರ ಬಾಕಿಗಳ ತಾಳೆಯು ಸರಿಯಾಗಿ ಕೂಡುವದು; ಇಲ್ಲದಿದ್ದರೆ ಕೂಡುವದಿಲ್ಲ.

ಈ ತಾಳೆಯನ್ನು ಖಾತೆಯನ್ನು ಬರೆದಂತೆ ಬರೆದು ಅದರ ಜಮೆಯ ಕಡೆಗೆ ಎಲ್ಲ ಜಮೆಯ ಬಾಕಿಗಳನ್ನೂ, ಖರ್ಚಿನ ಕಡೆಗೆ ಎಲ್ಲ ಖರ್ಚಿನ ಬಾಕಿಗಳನ್ನೂ ಬರೆಯಬೇಕು. ಜಮೆಯ ಬಾಕಿಗಳ ಬೇರೀಜಿಗೆ ಖರ್ಚಿನ ಬಾಕಿಗಳ ಬೇರೀಜು + ಬೋಜಿಲ್ಕು ಸರಿಯಾಗಬೇಕು.

ಬಾಕಿಗಳು ಎರಡು ಪ್ರಕಾರದವು. ೧ ಕಚ್ಚಾ ಬಾಕಿ ೨ ಪಕ್ಕಾ ಬಾಕಿ.

ಯಾವದೊಂದು ಖಾತೆಯ ಬಾಕಿಯು ಎಂದೂ ತಿರುಗಿ ಬಾರದಂಥದು ಅಥವಾ ಕೊಡದಂಥದು ಇದ್ದರೆ ಅದಕ್ಕೆ ಕಚ್ಚಾ ಬಾಕಿ ಎನ್ನುವರು.

ಉದಾಹರಣಾರ್ಥವಾಗಿ ಎಲ್ಲ ಬಾಬಿನ ಖಾತೆಗಳ ಬಾಕಿಗಳು, ಜೀನಸವಾರ ಖಾತೆಯ ಬಾಕಿಗಳು. ಜೀನಸುವಾರ ಖಾತೆಗಳಲ್ಲಿ ಶಿಲ್ಕು ಮಾಲಿನ ಬೆಲೆಯು ಎಂದಾದರೂ ಬರುವಂತೆ ಇರುತ್ತದೆ; ಆದರೆ ಅದರ ಮೇಲಿಂದ ತೆಗೆದ ಲಾಭವಾಗಲಿ ಅಥವಾ ಹಾನಿಯಾಗಲಿ ತಿರುಗಿ ಬಾರದು. ಆದುದರಿಂದ ಅದು ಕಚ್ಚಾ ಬಾಕಿ

ಎನಿಸುವದು. ಇಸವಿವಾರ ಖಾತೆಗಳ ಬಾಕಿಗಳು ಬರಡಂತೆ ಇದ್ದರೆ, ಇಲ್ಲವೆ ಮುಳುಗಿದ್ದರೆ ಅವು ಸಹ ಕಚ್ಚಾ ಬಾಕಿಗಳಾಗುವವು.

ಯಾವದೊಂದು ಖಾತೆಯ ಬಾಕಿಯು, ಕೈಯಲ್ಲಿದ್ದರೆ ಅಥವಾ ಎಂದಾದರೂ ಬರುವಂತೆ ಇದ್ದರೆ ಇಲ್ಲವೆ ಕೊಡುವಂತೆ ಇದ್ದರೆ ಅದು ಪಕ್ಕಾಬಾಕಿ ಎನಿಸುವದು.

ಉದಾಹರಣಾರ್ಥವಾಗಿ ಇಸವಿನ ಖಾತೆಗಳ ಬಾಕಿಗಳು, ರೋಖು, ಮೇಲೆ ಬರೆದಂತೆ ಜೀನಸುವಾರ ಖಾತೆಗಳ ಶಿಲ್ಕು ಮಾಲು ಇವೆಲ್ಲ ಪಕ್ಕಾ ಬಾಕಿಗಳೆನಿಸುವವು.

ಕೆಲವೊಂದು ಖಾತೆಯಮೇಲಿಂದ ಬಾಕಿಗಳನ್ನು ಹೇಗೆ ತೆಗೆಯಬೇಕೆಂಬದನ್ನು ಮೊದಲು ವಿಚಾರಿಸಿ ಬಳಿಕ ಅವುಗಳ ತೋಂಡ ವಿುಳವಣಿ ಹ್ಯಾಗೆ ಮಾಡಬೇಕೆಂಬದನ್ನು ವಿಚಾರಮಾಡೋಣ. ಇಸವುವಾರ, ಬಾಬುವಾರ, ಜೀನಸುವಾರ ಖಾತೆಗಳ ಒಂದೊಂದು ಉದಾಹರಣೆಯನ್ನು ತೆಗೆದುಕೊಂಡು ಬಾಕಿಗಳನ್ನು ತೆಗೆದು ತೋರಿಸೋಣ– (ಮುಂದೆ ಮಾಡುವ ಎರಡೂ ಕಡೆಯ ಬೇರೀಜುಗಳನ್ನು ಈಗಲೆ ಸರಿಮಾಡಿದೆ).

(೧) ಬಸಪ್ಪ ಜಂಬಿಗಿ ಇವರ ಖಾತೆ

ಜಮಾ		ರೂ.	ಖರ್ಚು		ರೂ.
೧೦೦	ಕಿ। ಪಾ. ೮ ತಾ॥	೩–೯–೨೦	೫೦೦	ಕಿ। ಪಾ. ೩ ತಾ॥	೧–೭–೨೦
೨೦೦	ಪಾ. ೧೫	,, ೪–೧೦–೨೦			
೫೦	ಕಿ। ಪಾ. ೨೦	,, ೩–೧೨–೨೦	೫೦೦		
೩೫೦					
೧೫೦	ಉಧಾವೆ.	೩೧–೧೨–೨೦	(೧೫೦ ರೂ. ಬಸಪ್ಪ ಜಂಬಿಗಿ ಇವರ ಖಾತೆಯ ಬಾಕಿಯು)		
೫೦೦					

ವರ್ಷದಲ್ಲೆಲ್ಲ ಒಯ್ದ ರಕಮು ಒಂದೇ ಇರುತ್ತದೆ. ಅದರ ಬೇರೀಜು ಅಂದರೆ ಖರ್ಚಿನ ಕಡೆಯ ರಕಮಿನ ಬೇರೀಜು ೫೦೦ ಮಾತ್ರ ಆಗುತ್ತದೆ. ಇದರಂತೆ ಜಮೆಯ ರಕಮುಗಳ ಬೇರೀಜು ೩೫೦ ಆಗುತ್ತದೆ. ಖರ್ಚಿನ ಬೇರೀಜು ಜಮೆಯ ಬೇರೀಜಿಗಿಂತ ೧೫೦ ರೂ. ಹೆಚ್ಚಾಯಿತು. ಅಂದರೆ ಅವನಿಂದ ಬರತಕ್ಕ ರಕಮು ೧೫೦ ಉಳಿಯಿತು. ಬಸಪ್ಪ ಜಂಬಿಗಿ ಇವನಿಂದ ಬರತಕ್ಕ ಬಾಕಿಯು ೧೫೦ ರೂ. ಆಯಿತು. ಇದರಂತೆ ಜಮೆಯ ಕಡೆಯ ಬೇರೀಜಿಗಿಂತ ಖರ್ಚಿನ ಕಡೆಯ ಬೇರೀಜೇ ಹೆಚ್ಚಾಗಿದ್ದರೆ ಬಸಪ್ಪ ಜಂಬಗಿ ಇವನಿಗೆ ನಾವು ಕೊಡತಕ್ಕ ಬಾಕಿಯು ಹೊರಡುತ್ತಿತ್ತು. ಮೇಲಿನ ಬಸಪ್ಪ ಜಂಬಿಗಿ ಇವರ ಖಾತೆಯ ಜಮೆಯ ಕಡೆಯ ಹಾಗು ಖರ್ಚಿನ ಬೇರೀಜುಗಳು ಸರಿಮಾಡುವದಕ್ಕಾಗಿ ಅಂದರೆ ಖಾತೆ ಬಾಯಿಗೂದಿಸುವ ಪಕ್ಕಾಗಿ ಏನು ಮಾಡಬೇಕೆಂಬದರ ವಿವರಣೆಯು ಮುಂದೆ ತೋರಿಸಿದ ತೋಂಡ ವಿುಳವಣಿಯಲ್ಲಿ ಗೊತ್ತಾಗುವದು.

೨. ಪಗಾರ ಖಾತೆ

ಜಮಾ _____ ರೂ. ಖರ್ಚು _____ ರೂ.

		೧೨	ರೂ.	೩೧।೭।೨೦	ಕಿ. ಪಾ. ೯
೬೪	ರೂ.	ತೊ.	ಮಿ.	೨೦	,,	೩೧।೪।೨೦	ಕಿ. ಪಾ. ೧೫
—		೩೧–೧೨–೨೦		೩೨	,,	೩೦।೯।೨೦	ಕಿ. ಪಾ. ೫೩ ೧
೬೪							
				೬೪			

ಈಗ ಪಗಾರ ಖಾತೆ (ಬಾಬುವಾರ ಖಾತೆ)ಯು ಖರ್ಚಿನ ಕಡೆಯ ಬೇರೀಜು ೬೪ ರೂ. ಆಯಿತು. ಇದೇ ಪಗಾರಖಾತೆಯ ಬಾಕಿಯು.

ತಾ॥ ೩೧–೧೨–೨೦ ದಿವಸ ಬಂಗಾರದ ದಾರಣಿಯು ತೊಲೆಗೆ ೧೯ ರೂ. ಹಿಡಿದು ಆ ಖಾತೆಯ ಬಾಕಿಯನ್ನು ತೆಗೆ.

(೩) ಬಂಗಾರ ಖಾತೆ

ಜಮಾ _____ ರೂ. ಖರ್ಚು _____ ರೂ.

೧೬೦೦	ತೊಲಿ ೫೦ ದರ ೩೨		೧೫೦೦೦	ತೊಲಿ ೫೦೦ ದರ ೩೦	
	೨–೧–೨೦		———		೧–೧–೨೦
೪೧೨೫	ತೊಲಿ ೧೨೫ ದರ ೩೩		೧೫೦೦೦		
	೨೦–೧–೨೦				
೫೬೦೦	ತೊಲಿ ೨೦೦ ದರ ೨೮				
	———	೧೦–೨–೨೦			
	೩೭೨೫				
೨೩೭೨೫	ಶಿಲ್ಕು ಮಾಲಿನ ಬೆಲೆ (ಪಕ್ಕಾಬಾಕಿ)				
———	ಬಂಗಾರ ಶಿಲ್ಕು ತೊಲಿ ೧೨೫				
೧೫೭೨೦೦					
೧೫೭೦೦	ಹಾನಿ ತೋ. ಮಿ. (ಕಚ್ಚಾ ಬಾಕಿ)				
———		೩೧–೧೨–೨೦			
೧೫೭೦೦೦					

(ಮುಂದೆಸಾಗುವದು)

ಪುಸ್ತಕಪರಿಚಯ

ಮಿಲನ (ಪದ್ಯಕಾವ್ಯ)

ಹಲಸಂಗಿಯ ಅರವಿಂದ ಗ್ರಂಥಮಾಲೆಯ ೩ನೆಯ ಕುಸುಮ.

ಕವಿ :—ಸಿಂಪಿ ಲಿಂಗಣ್ಣ ಪದ್ಯಸಂಖ್ಯೆ ಸು. ೩೬೦

ರಾಷ್ಟ್ರಭಾಷೆಯಾಗಲೆಳಸುತ್ತಿರುವ ಹಿಂದಿ ಭಾಷೆಯಲ್ಲಿ ಸುಪ್ರಸಿದ್ಧ ಕವಿಗಳೆನಿಸಿದ ಶ್ರೀ. 'ತ್ರಿಪಾಠೀಜೀ'ಯವರು ಬರೆದ ಜನಪ್ರಿಯವಾದ 'ಮಿಲನ' ಎಂಬ ಪ್ರೇಮಕಾವ್ಯದ ಪದ್ಯಾನುವಾದವಿದು. ಕನ್ನಡದಲ್ಲಿ ಗ್ರಂಥಗಳನ್ನು ಬರೆದು ಪ್ರಸಿದ್ಧರಾದ ಶ್ರೀ. ಸಿಂಪಿ ಲಿಂಗಣ್ಣವರು ಅನುವಾದಕರು. ಪುಸ್ತಕದ ಅಂತರಂಗದಂತೆ ಬಹಿರಂಗವೂ ಸುಂದರವಾಗಿದೆ. ರಕ್ಷಾಪತ್ರದ ಮೇಲ್ಗಡೆಯಲ್ಲಿ ಕಾವ್ಯದ ನಾಯಿಕಾ-ನಾಯಕರ ಮಿಲನದ ಸುಂದರ ಚಿತ್ರವಿದೆ. ಒಳ್ಳೆಯ ಕಾಗದ ಮುದ್ರಣಗಳು. ಬೆಲೆ ೧೫ ಆಣೆ ಮಾತ್ರ.

ಮೊದಲಲ್ಲಿ ಸಂಪಾದಕ–ಪ್ರಕಾಶಕರ 'ನಮ್ಮ ಮಾತು' ಎಂಬ ಮುನ್ನುಡಿ ಇದೆ. ಬಳಿಕ ಕಾವ್ಯದ ಗದ್ಯರೂಪಕಥೆ, ತರುವಾಯ ಕಾವ್ಯಾರಂಭ.

ಈ ಕಾವ್ಯದ ಕಥಾವಸ್ತುವಿನ ವಿಷಯವಾಗಿ ಮುನ್ನುಡಿಯಲ್ಲಿರುವ ವಿವರಣೆಯನ್ನು ಇಲ್ಲಿ ಕೊಡುವೆವು—"ಪ್ರೇಮಕಾವ್ಯ ಪ್ರೇಮಕಾವ್ಯ ಎಂದ ಕೂಡಲೆ ಕಾಮುಕರ ಕಳವಳಕಾತರಗಳಿಗೂ ಕಾಡಲರ ತಪಕತಾಮಸಗಳಿಗೂ ಇದರಲ್ಲಿ ಅಗ್ರಪಟ್ಟವಿರಬಹುದೆಂದು ಭಾವನೆಯಾಗುವದು ಸಹಜ; ಆದರೆ ಇದು ಪ್ಲಾಸ್ಟೋಯರ ಶೃಂಗಾರಸಾಧನೆಯ ರಂಗಸ್ಥಳವಾಗಿರದೆ ಧ್ಯೇಯಕ್ಕಾಗಿ ನಿಗ್ರಹ ಪ್ರೇತವನ್ನು ಕೈಕೊಳ್ಳುವ ವೀರದಂಪತಿಗಳ ತಪೋಭೂಮಿಯಾಗಿದೆ. ಹೀಗಿದು ಧ್ಯೇಯಾತ್ಮಕ ಪ್ರೇಮಕಾವ್ಯ."

ಈ ಕಾವ್ಯದ ಕಥೆ ಕಲ್ಪಿತವಾದುದು. ಮುನ್ನುಡಿಯಲ್ಲಿ ಹೇಳಿದಂತೆ ಇದು ಶೃಂಗಾರದ ಕಥೆಯಲ್ಲವೆಂಬುದು ಮುಂದಿನ ಕಥಾಸಾರದಿಂದ ಓದುಗರು ಮನಗಾಣಬಹುದು.

ಕಾವ್ಯ ಕಥಾಸಾರ — ಕಥಾನಾಯಕನಾದ ಆನಂದಕುಮಾರನು ಬನವಸೆಯಿನ ಅರಸನ ಮಗನು. ಈತನು ಸಣ್ಣವನಿದ್ದಾಗ ಬನವಸೆ ನಾಡಿಗೆ ಕೇರಳವರ ಉಪದ್ರವವು ಹೆಚ್ಚಿತು. ಆಗ ಅರಸನು ರಾಜಧಾನಿಯ ಸಮೀಪದಲ್ಲಿಯ ಆಶ್ರಮದಲ್ಲಿ ವಾಸವಾಗಿದ್ದ ಒಬ್ಬ ವಿರಕ್ತನಾದ ಶರಣನಿಗೆ ತನ್ನ ಕುಮಾರ

ನನ್ನು ಒಪ್ಪಿಸಿ ತಾನು ನಾಡಿನ ಜನರಲ್ಲಿ ಜಾಗೃತಿಯನ್ನು ಮಾಡಲೋಸುಗ ವೇಷಾಂತರವನ್ನು ಕೈಕೊಂಡು ರಾಜಧಾನಿಯನ್ನು ತೊರೆದು ರಾಜ್ಯದಲ್ಲಿ ಅಲೆದಾಡುತ್ತ ಇದ್ದನು. ಆ ಶರಣನಿಗೆ ವಿಜಯೆ ಎಂಬ ಒಬ್ಬ ಮಗಳಿದ್ದಳು. ಅವಳೊಡನೆ ಆನಂದಕುಮಾರನು ಆಶ್ರಮದಲ್ಲಿ ಬಳೆಯುತ್ತ ಇದ್ದನು. ಒಂದು ದಿನ ಶರಣನು ಪ್ರಾಪ್ತವಯಸ್ಕನಾದ ಆನಂದಕುಮಾರನ ಕೈಯಲ್ಲಿ ತನ್ನ ಮಗಳ ಕೈಯನ್ನು ಕೊಟ್ಟು, ನಾಡಿನ ಕಿಡುದಶೆಯನ್ನು ಕಳೆಯುವುದೇ ನಿನ್ನ ಜೀವನದ ಕರ್ತವ್ಯವಾಗಿರಬೇಕು ಎಂಬೀ ಆತನ ಪಿತೃಸಂದೇಶವನ್ನು ಹೇಳಿ, ಆಶೀರ್ವದಿಸಿ ಮಾನವಲೀಲೆಯನ್ನು ಮುಗಿಸಿದನು. ಕುಮಾರನು ತಂದೆಯ ಸಂದೇಶವನ್ನು ನಡೆಸುವುದಕ್ಕಾಗಿ ಮಡದಿಯೊಡನೆ ಆಶ್ರಮದಿಂದ ಹೊರಟನು. ದಾರಿಯಲ್ಲಿ ಮಹಾಪೂರವು ಬಂದ ಒಂದುಹೊಳೆಯನ್ನು ದಾಟುವಾಗ ತೆಪ್ಪವು ಹೊರಳಿ ಇಬ್ಬರೂ ಮುಳುಗಿದರು. ಮೃತಾವಸ್ಥೆಯಲ್ಲಿ ಸಿಕ್ಕಿದ ಅವರಿಬ್ಬರನ್ನು ಒಬ್ಬ ಮುನಿ ತಂದು ಆರಯಿಸಿದನು. ಮೊದಲು ಆರಯ್ಕೆ ಹೊಂದಿದ ವಿಜಯೆ, ಪತಿ ಎಲ್ಲಿ ಹೋದನೋ ಎಂದು ಆತನನ್ನು ಹುಡುಕುತ್ತ ಎತ್ತಲೋ ನಡೆದಳು. ತರುವಾಯ ಆರಯ್ಕೆಹೊಂದಿದ ಆನಂದಕುಮಾರನು ಮಡದಿಯ ಅಗಲಿಕೆಯಿಂದ ನೊಂದು ನಾಡಿನ ಸೇವೆಗೆ ನಿಂತನು. ಅತ್ತ ವಿಜಯೆಯು ಪತಿಯನ್ನು ಕೂಡದೆ ನಿರಾಶಳಾಗಿ ದೇಶಸೇವೆಗೆ ತೊಡಗಿದಳು. ಇವರಿಗೆ ಆರಯ್ಕೆ ಮಾಡಿದ ಮುನಿಯು ವೇಷಾಂತರ ಮಾಡಿದ ಬಸವಸೆಯ ಅರಸು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ಈ ಮೂವರ ಪ್ರಯತ್ನದಿಂದ ಜಾಗೃತಿಯುಂಟಾಗಲು, ಮತ್ಸರದಿಂದ ಕೇರಳದವರು ನಾಡಿನ ಮೇಲೆ ನುಗ್ಗಿ ಉಧ್ವಂಸಗೊಳಿಸತೊಡಗಿದರು. ಬಸವಸೆಯವರಿಗೂ ಕೇರಳದವರಿಗೂ ಕಾಳೆಗವು ನಡೆಯಿತು. ಅದರಲ್ಲಿ ಮುನಿವೇಷದ ಬಸವಸೆಯರಸು ಮಡಿದನು. ವೇಷಾಂತರದಲ್ಲಿದ್ದ ವಿಜಯೆಯ ನೆರವಿನಿಂದ ಆನಂದಕುಮಾರನು ಗೆಲುವನ್ನು ಪಡೆದನು. ತರುವಾಯ ವಿಜಯೆಯೂ ಆನಂದಕುಮಾರನೂ ಕೂಡಿದರು. ಇದೀಗ ವಿಲಸ. ಇದರಿಂದ ಕಾವ್ಯವೂ 'ವಿಲಸ'ವೆನಿಸಿತು.

ಮನೋಹರವಾದ ಕಥೆ, ಉದಾತ್ತವಾದ ಪಾತ್ರಗಳು, ಉದ್ದೀಪಕವಾದ ಭಾವಗಳು, ಸಮಯೋಚಿತ ವರ್ಣನೆಗಳು, ಪ್ರಸನ್ನವಾದ ಭಾಷೆ ಇವೆಲ್ಲವುಗಳಿಂದ ಕಾವ್ಯವು ಚೆಂದದಿಂದ ಸಾಗುತ್ತಿದೆ. ಓದುಗರ ಆನಂದಸಾಮಗ್ರಿಗೆ ಕೊರತೆಯಿಲ್ಲ.

ಈ ಕಾವ್ಯದ ಒಂದೆರಡು ಸಂದರ್ಭಗಳನ್ನು ಇಲ್ಲಿ ತೋರಿಸುವೆವು. ಮೊದಲನೆಯದು 'ಸನ್ನಾಹ' ಸಂಧಿ; ಆವಗಲ್ಲುವಾಗವರ ವಿಜಯೆಯೂ ಶರಣನ ಎಲೆವನೆಯಿಂದ ಹೊರಟಿದ್ದಾರೆ –

ವಿಜಯ ಹೇಳಿದಳಿಂತು–'ಪ್ರಾಣಾಧಿಕ ಪ್ರಿಯನೆ,
ಈ ಚೆಲುವ ತರುಲತೆಯ ನಿಲಯವನ್ನು |
ತ್ಯಜಿಸಿ ಹೋಗುವುದೆಂಬ ಎಣಿಕೆ ಬಗೆಯನು ಕೊರೆದು
ಕಳವಳದಲೊಗೆಯುವುದು ಪ್ರಾಣವನ್ನು || ೧. ೪೯. ||

ಶಾಂತಿಸುಖಗಳನೀವ ಮಾತಿರಲಿಯೊಂದೆಡೆಗೆ
ಬನಕು ಮಿಗಿಲೇನುಂಟು ಭುವನದಲ್ಲಿ |
ಕಾಂತ ಹೇಳಿನಗಿನ್ನು ವನ್ಯಮಿತ್ರರಿಗಿಂತ |
ಅನ್ಯ ಪ್ರಿಯರೆಲ್ಲಿಹರು ಜನತೆಯಲ್ಲಿ || ೧. ೫೦. ||

ವಿಷಮಸಂಸಾರವಿದು ದ್ವೇಷನೋಸದ ಬೀಡು
ಕೇಳುತಿರುವೆನು ಇಂತು ಲೋಕವಾರ್ತೆ |
ಲೇಸನರಿಯದ ಇಂಥ ಜನತೆಯಲಿ ಮತ್ತೇಕೆ
ಪ್ರಾಣನಾಥನೆ ಹೇಳು ಇದರ ವಾರ್ತೆ || ೧. ೫೨. ||

ವಿಜಯೆ ಇಂತು ನುಡಿಯಲು ಆನಂದಕುಮಾರನು—

ನಲ್ಲನಾಡಿದನಾಗ ಜೀವದರಸಿಯೆ ಕೇಳು
ನುಡಿಯುದಿರು ನೀನಿಂಥ ನುಡಿಗಳನ್ನು |
ಅಲ್ಲೆ ಸಂಸಾರದಲೆ ಮಾನವತ್ವದ ಬೆಲೆಯ
ಅಳೆಯ ಬಲ್ಲವರುಂಟು ತಿಳಿಯೆ ನೀನು || ೧ ೫೪. ||

ಲೋಕಸೇವೆಯು ಮತ್ತೆ ಪರಮೇಶಭಕ್ತಿಯದು
ಹೆಸರೆರಡು ಮಾತೊಂದೆ ಅರ್ಥದಲ್ಲಿ |
ಏಕಾಂತವನದೊಳಗೆ ಕುಳಿತರಾಗುವದೇನು ?
ಉಚಿತಪೌರುಷ ವೀರಕರ್ಮವೆಲ್ಲಿ ? || ೧. ೫೫. ||

ತನುಶಕ್ತಿ ಶ್ರಮಗಳನು ನೀಡಿ ಜಗಪದತಲಕೆ
ಬೆಳೆಸುವದು ಲೋಕ ಸುಖಶಾಂತಿಗಳನು |
ಮನುಜಜನ್ಮದ ಮರ್ಮ ಇದುವೆ ಕೇಳ್ ಮಡದಿಯೇ
ಪರಮೇಶಭಕ್ತಿ ಇದೆ ತಿಳಿಯೆ ನೀನು || ೧. ೫೬. ||

ಜನದ ಕೇಳ್ಕೈಗೆ ಹೇಸಿ ಲೋಕಸೇವೆಯನ್ನು ಬಿಡಬೇಕೇ, ಉದಾರಾಂತಃಕರಣದಿಂದ ಅದನ್ನು ಮನಮುಟ್ಟಿ ಮಾಡಬೇಕೇ ಎಂಬ ಸಂಶಯಕ್ಕೆ ಇದೀಗ ಕಾವ್ಯ ಮುತ್ತರವು.

೨ನೆಯ ಸಂಧಿಯಲ್ಲಿ ಪ್ರೇಮವಿಷಯವಾಗಿ ಹೇಳಿದ ವಿಚಾರಗಳು ಆಕರ್ಷಕವಾಗಿವೆ:—

ಪ್ರೇಮವೆಂಬುದದೊಂದು ಅಚ್ಚರಿಯ ವಸ್ತುವದು
ಅದ್ಭುತದ ಶಕ್ತಿಸಂಚಯದ ಬೀಡು |
ಪ್ರೇಮದಾನಾಡಿನಲಿ ನಿದ್ದೆಯೊಳಗೆಚ್ಚರವು
ಎಚ್ಚರದೊಳಿದೆ ನಿದ್ದೆಯಂತೆ ನೋಡು || ೨. ೨೧. ||

ಪ್ರೇಮಮುದ ಹೊನಲಾಗಿ ಕಣ್ಣಕೊಳವನು ಕೊಚ್ಚಿ
ಕೋಡಿವರಿಯಲು ಕಡಲಿನುಕ್ಕಿನಂತೆ |
ಸೀಮೆ ಬಿಟ್ಟೋಡುವವು ಏಳುಮಲಗುಗಳಿರಡು
ಬಿಳಗಿನಲಿ ಕತ್ತಲೆಯು ಅಡಗುವಂತೆ || ೨. ೨೨. ||

ಒಲುಮೆಯೆಂಬುವುದೊಂದೆ ಮುಖಗಳದಕೆರಡುಂಟು
ಹೊಚ್ಚಹೊನ್ನಿನ ನಾಣ್ಯದಚ್ಚಿನಂತೆ |
ಒಲುಮೆ ಕೂಡಿಕೆಯಲ್ಲಿ ಸೊಗದ ಪರಿಮಳದಂತೆ
ಅಗಲಿಕೆಯ ತಾಪಿನಲಿ ಕಿಚ್ಚಿನಂತೆ || ೨. ೨೩. ||

ಪ್ರೇಮವೆಂಬುದು ಸ್ವರ್ಗ, ಆ ಸ್ವರ್ಗವೇ ಪ್ರೇಮ
ದೇವನಿರುವನು ಪ್ರೇಮ ರೂಪದಲ್ಲಿ |
ಪ್ರೇಮದಿಂದಲೆ ವಿಶ್ವಜನ್ಮ ತಾಳಿತು ಮತ್ತೆ
ಪ್ರಾಣವಾಗಿದೆ ಇದುವೆ ವಿಶ್ವದಲ್ಲಿ || ೨. ೨೫. ||

ಕಾವ್ಯವು ಹೇಗೆ ಸಾಗುತ್ತಿದೆಯೆಂಬುದನ್ನು ಈ ಅವತರಣಗಳಿಂದ ಪಾಠಕರು ತಿಳಿಯಬಹುದು. ಮುಂದಿನ ಸಂಧಿಗಳಲ್ಲಿಯೂ ಹಲವು ಸಂದರ್ಭಗಳು ಓದುಗರ ಮನವನ್ನು ಹಿಡಿದೆಳೆದುಕೊಳ್ಳುವಂತಿವೆ.

ಪ್ರಕಾಶಕ-ಸಂಪಾದಕರು ಮುನ್ನುಡಿಯಲ್ಲಿ— ತಮ್ಮ ಈ ಅನುವಾದದಲ್ಲಿ ಮೂಲಕಾವ್ಯದ ಸೌಂದರ್ಯವೂ ಸ್ವಾರಸ್ಯವೂ ಇಂದಿಲ್ಲವೆಂದು ಹೇಳಿರುವರು. ಇದೀಗ ವಿನಯ. ಈ ಮಾತು ಕೆಲಮಟ್ಟಿಗೆ ನಿಜವಿರಬಹುದು; ಅನುವಾದದ ಭಾಷೆ ಪ್ರವಾಹರೂಪವಾಗಿರುವುದೂ ವಿರಲ. ಆದರೂ ಅನುವಾದವು ಮೂಲವನ್ನು ನೋಡಿದ ಹೊರತು ಅರ್ಥವಾಗದಂತಿದ್ದರೆ ಅದು ದೊಡ್ಡ ದೋಷವೆಂದು ಬಲ್ಲವರ ಮತ. ಅನುವಾದವು ತಕ್ಕುದೇ ಅಲ್ಲವೇ ಎಂಬುದಕ್ಕೆ ಅದೇ ಒರೆಗಲ್ಲು. ಈ ಅನುವಾದವು ಈ ದೋಷವನ್ನೊಳಗೊಂಡಂತೆ ಕಾಣಬರುವುದಿಲ್ಲ. ಕನ್ನಡ ನಾಡುಗರು 'ವಿಲನ'ವನ್ನು ಮುದ್ದಿಡುವರೆಂದು ಹಾರಯ್ಸುತ್ತೇನೆ.

೨೫೫	**ಲಾಭ ಹಾನಿ ಖಾತೆ:—** ತೋಂ. ವಿು. ಕಾಲಕ್ಕೆ ಆದ ಲಾಭವನ್ನು ಖರೀದಿ ವಿಕ್ರಿ ಖಾತೆಗೆ ಖರ್ಚು. ಖಾ. ಪಾ.		೨೫೫	**ಖರೀದಿ ವಿಕ್ರಿ ಖಾತೆ:—** ತೋ. ವಿು. ಕಾಲಕ್ಕೆ ಆದ ಲಾಭವನ್ನು ಲಾಭಹಾನಿ ಖಾತೆಗೆ ಜಮಾ. ಖಾ. ಪಾ.	

೭ ಸಾದಿಲವಾರ ಖಾತೆ:—
ಲಾಭಹಾನಿ ಖಾತೆಗೆ ಖರ್ಚು.
ಖಾ. ಪಾ.

೨೦ ಪಗಾರ ಖಾತೆ:—
ಲಾಭಹಾನಿ ಖಾತೆಗೆ ಖರ್ಚು.
ಖಾ. ಪಾ.

೩೦ ಬಾಡಿಗೆ ಖಾತೆ:—
ಲಾಭಹಾನಿ ಖಾತೆಗೆ ಖರ್ಚು.
ಖಾ. ಪಾ.

೧೭೮ ಅಢಾವೆ ಖಾತೆ:—
ನಿವಳ ಲಾಭವನ್ನು ಲಾಭ ಹಾನಿ ಖಾತೆಗೆ ಖರ್ಚು ಬರೆದು.
ಖಾ. ಪಾ.

೧೭೪೯

೩೩೫ ಲಾಭ ಹಾನಿ ಖಾತೆ:—
ತೋ೧. ವಿ. ಕಾಲಕ್ಕೆ ಆ
ಹಾನಿಯನ್ನು ಆಯಾ ಖಾ
ಗಳಿಗೆ ಜಮಾ ಬರೆದು
೭ ಸಾದಿಲವಾರ
೨೦ ಪಗಾರ
೩೦ ಭಾಡಿಗೆ
೧೭೮ ನಿವಳ ಲಾಭ ಅಢಾ
—— ಖಾತೆಗೆ ಜಮೆ.
೩೩೫ ಖಾ. ಪ

೧೭೪೯

ಗಂಡುಮಕ್ಕಳ ವ್ಹ. ಫಾ. ಪರೀಕ್ಷೆ ೧೯೩೭.

ದಕ್ಷಿಣ ಭಾಗ.

ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಜನೆಯು ಎಪ್ರಿಲ್ ೧೯೩೭ನೆಯ ದಿವಸ ಸೋಮವಾರ ಹಾಗು ಅದರ ಮುಂದಿನ ದಿನಗಳಲ್ಲಿ ನಡೆಯುವದು.

ಡಿಸ್ಟ್ರಿಕ್ಟ

೧. ಧಾರವಾಡ, ೨. ಬೆಳಗಾವ, ೩. ವಿಜಾಪೂರ, ೪. ಕಾರವಾರ, ೫. ಕೊಲ್ಹಾಪೂರ.

ಸೆಂಟರು

೧. ಧಾರವಾಡ, ೨. ಗದಗ, ೩. ಹುಬ್ಬಳ್ಳಿ, ೪. ಬೆಳಗಾವ, ೫. ಚಿಕ್ಕೋಡಿ, ೬. ವಿಜಾಪೂರ, ೭. ಬಾಗಲಕೋಟ, ೮. ಕಾರವಾರ, ೯. ಕೊಲ್ಹಾಪೂರ.

ಧಾರವಾಡ ಜಿಲ್ಲೆಯ ಗದಗ, ನವಲಗುಂದ, ರೋಣ ತಾಲೂಕುಗಳ ಮತ್ತು ಸಂಸ್ಥಾನದ ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳ ಉಮೇದವಾರರು ಗದಗ ಸೆಂಟರಿನಲ್ಲಿ ಪರೀಕ್ಷೆಗೆ ಕೂಡತಕ್ಕದ್ದು.

ಧಾರವಾಡ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು ಧಾರವಾಡ ಸೆಂಟರಿನಲ್ಲಿ ಕೂಡ್ರಬೇಕು. ಧಾರವಾಡ ಜಿಲ್ಲೆಯ ಎಲ್ಲ ಉರ್ದು ಉಮೇದವಾರರು ಹುಬ್ಬಳ್ಳಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡಬೇಕು.

ಬೆಳಗಾವ ಜಿಲ್ಲೆಯ ಅಥಣಿ, ಚಿಕ್ಕೋಡಿ ತಾಲೂಕುಗಳ ಉಮೇದವಾರರು ಚಿಕ್ಕೋಡಿ ಸೆಂಟರಿನಲ್ಲಿಯೂ ಆ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು ಬೆಳಗಾಂವ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡ್ರಬೇಕು.

ವಿಜಾಪೂರ ಜಿಲ್ಲೆಯ ಬಾಗಲಕೋಟ, ಹುನಗುಂದ, ಬದಾಮಿ, ಮುದ್ದೇಬಿಹಾಳ ತಾಲೂಕುಗಳ ಮತ್ತು ಜಮಖಿಂಡಿ, ರಾಮದುರ್ಗ, ಮುಧೋಳ ಸಂಸ್ಥಾನಗಳ ಎಲ್ಲ ಕನ್ನಡ ಉಮೇದವಾರರು ಬಾಗಲಕೋಟಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕು. ವಿಜಾಪೂರ ಜಿಲ್ಲೆಯ ಮಿಕ್ಕ ಕನ್ನಡ ಮರಾಠಿ

ಉರ್ದು ಅಗ್ರಿಕಲ್ಚರಲ್ ಬಾಯಾಸದ ಎಲ್ಲ ಉಮೇದವಾರರು ವಿಜಾಪೂರ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕು.

ಕಾರವಾರ ಜಿಲ್ಲೆಯ ಹಳಿಯಾಳ ತಾಲೂಕಿನ ಹಾಗು ಶಿರಸಿ ತಾಲೂಕಿನ ಬನವಾಸಿ ಊರಿನ ಉಮೇದವಾರರು ಧಾರವಾಡ ಸೆಂಟರಿನಲ್ಲಿಯೂ ಸಾಂಗಲಿ ಸಂಸ್ಥಾನದ ಕೂಚಿ ತಾಲೂಕಿನ ಉಮೇದವಾರರು ಸಾತಾರಾ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡ್ರಬಹುದು. ಔಂಧ ಸಂಸ್ಥಾನದ ಗುಂಡಳ ತಾಲೂಕಿನ ಉಮೇದವಾರರು ವಿಜಾಪೂರ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬಹುದು.

ಈ ಪರೀಕ್ಷೆಯು, ಮುಂಬಯಿ ಗವರ್ನಮೆಂಟ ಗ್ಯಾಝೆಟಿನ ವಿದ್ಯಾ ಖಾತೆಯ ನೋಟಿಫಿಕೇಶನ್ನಿನ ನಂ $\frac{೨೨೮೮}{೧೯೦೯-೧೦-೧೯೨೮}$ ಹಾಗು ೨೯-೭-೧೯೨೯ ಮತ್ತು ೧೪-೩-೧೯೩೦ ಹಾಗು ೩-೮-೧೯೩೧ ಮುಂಬಯಿ ಗ್ಯಾಝೆಟಿನ ಭಾಗ $\frac{೧೯೬೮}{೨೨-೯-೧೯೨೮}$ $\frac{೧೬೬೩}{೧-೮-೧೯೨೯}$ $\frac{೬೨೭}{೩-೪-೩೦}$ $\frac{೧೭೮೪}{೬-೮-೧೯೩೧}$ ಈ ಪುಟಗಳಲ್ಲಿ ಪ್ರಸಿದ್ಧಿಸಿದ ಮೇರೆಗೆ ನಡೆಯುವದು.

ಮೇಲೆ ಹೇಳಿದ ಪ್ರತಿಯೊಂದು ಸೆಂಟರಿನಲ್ಲಿ ಒಂದೊಂದು ಪರೀಕ್ಷಾ ಕಮೀಟಿಯು ಇರುವದು. ಹಾಗು ಆಯಾ ಕಮೀಟಿಯ ಪ್ರೆಸಿಡೆಂಟರು ಕೆಳಗೆ ಬರೆದ ಪ್ರಕಾರ ಇರುವದು.

ಧಾರವಾಡ ಸೆಂಟರ— ಹೆಡ್‌ಮಾಸ್ತರ ಗವರ್ನಮೆಂಟ ಹಾಯಸ್ಕೂಲ ಧಾರವಾಡ.

ಗದಗ— ಸೀನಿಯರ ಅಸಿಸ್ಟಂಟ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಧಾರವಾಡ.

ಹುಬ್ಬಳ್ಳಿ — ಹೆಡ್‌ಮಾಸ್ತರ ಆಂಗ್ಲೋ ಉರ್ದು ಹಾಯಸ್ಕೂಲು ಹುಬ್ಬಳ್ಳಿ.

ಬೆಳಗಾವ — ಹೆಡ್‌ಮಾಸ್ತರ ಸರದಾರ ಹಾಯಸ್ಕೂಲು ಬೆಳಗಾವ.

ಚಿಕ್ಕೋಡಿ — ಸೀನಿಯರ ಅಸಿಸ್ಟಂಟ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಬೆಳಗಾವ.

ವಿಜಾಪೂರ — ಹೆಡ್‌ಮಾಸ್ತರ ಗವರ್ನಮೆಂಟ ಹಾಯಸ್ಕೂಲು ವಿಜಾಪೂರ.

ಬಾಗಲಕೋಟೆ— ಸೀನಿಯರ ಅಸಿಸ್ಟಂಟ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ವಿಜಾಪೂರ.

ಕಾರವಾರ— ಹೆಡ್‌ಮಾಸ್ಟರ ಗವರ್ನಮೆಂಟ ಹಾಯಸ್ಕೂಲು ಕಾರವಾರ.

ಕೊಲ್ಲಾಪೂರ— ಎಜ್ಯುಕೇಶನಲ್ ಇನಸ್ಪೆಕ್ಟರ ಕೊಲ್ಲಾಪೂರ ಸಂಸ್ಥಾನ.

ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರು ತಾವು ಪರೀಕ್ಷೆಗೆ ಕೂಡುವ ಸೆಂಟರಿನ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ತಾರೀಖು ೧-೩-೧೯೩೭ನೆಯ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂತೆ ಪರೀಕ್ಷೆಯ ಪರವಾನಿಗಿಯ ಬಗ್ಗೆ ಗೊತ್ತಾದ ಫಾರೀ ನಮೂನೆಯ ಮೇಲೆ ಅರ್ಜಿಯನ್ನು ಕಳಿಸತಕ್ಕದ್ದು. ೧-೩-೧೯೩೭ ರ ತರುವಾಯ ಬಂದ ಅರ್ಜಿಯನ್ನು ಹಿಡಿಯಲಿಕ್ಕಿಲ್ಲ. ಯಾವದೊಂಡು ಬ್ರಿಟಿಶ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಚಿಸುವ ದೇಶೀಯ ಸಂಸ್ಥಾನಗಳ ಉಮೇದವಾರರು ಆಯಾ ಸಂಸ್ಥಾನದ ವಿದ್ಯಾಖಾತೆಯ ಯೋಗ್ಯ ಅಧಿಕಾರಸ್ಥರ ಮುಖಾಂತರವಾಗಿ ತಮ್ಮ ಅರ್ಜಿಯನ್ನು ಕಳಿಸತಕ್ಕದ್ದು. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು ಹಾಗು (ಆತನು ಯಾವದೊಂದು ಸಾಲೆಯಿಂದ ಪರೀಕ್ಷೆಗೆ ಬಂದಿದ್ದರೆ ಆ) ಸಾಲೆಯ ಹೆಸರು ಇರಲಿಕ್ಕೆಬೇಕು. ಅರ್ಜಿಯ ಸಂಗಡಲೇ ೩ ರೂಪಾಯಿ ಪರೀಕ್ಷೆಯ ಫೀಯನ್ನು ಸಹ ಕಳಿಸಲೇಬೇಕು. ಸಂಪೂರ್ಣ ಮಾಹಿತಿ ಇಲ್ಲದಿದ್ದ ಅರ್ಜಿಯೂ ಫೀ ತುಂಬದಿದ್ದ ಅರ್ಜಿಯೂ ಅರ್ಜಿಯಿಲ್ಲದೆ ಕಳಿಸಿದ ಫೀ ಹಣವೂ ಯಾವ ಸೇವನೂ ಕೇಳದೆ ತಿರಸ್ಕರಿಸಲ್ಪಡುವವು.

ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರ ವಯಸ್ಸು ೧-೪-೩೭ ಕ್ಕೆ ೨೫ ವರ್ಷಕ್ಕೆ ವಿುಕ್ಕಿರಬಾರದು. ತಾವು ಯಾವ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಚಿಸುವರೋ ಆ ಜಿಲ್ಲೆಯಲ್ಲಿ ಅವರು ಅದಕ್ಕೂ ಹಿಂದೆ ೬ ತಿಂಗಳು ವಾಸವಾಗಿರಬೇಕು. ಆ ಪ್ರಕಾರ ವಾಸವಾಗಿದ್ದ ಬಗ್ಗೆ ಯಾವದೊಂದು ರಿಕಗ್ನಾಯಿಝಡ ಶಾಲೆಯ ಮಾಸ್ತರರ ಸರ್ಟಿಫಿಕೇಟ ಹಾಜರಪಡಿಸಬೇಕು. ಎಂದೂ ಶಾಲೆಗೆ ಹೋಗದಿದ್ದ ಉಮೇದವಾರರು ಈ ಬಗ್ಗೆ ಸರಕಾರದಿಂದ ಮಾನ್ಯವಾದ ಶಾಲೆಯ ಮಾಸ್ತರನ ಇಲ್ಲವೆ ಪಾಟೀಲರಿಗಿಂತ ಕಡಿಮೆ ದರ್ಜೆಯಲ್ಲದ ಸನ್ಮಾನ್ಯ ಗೃಹಸ್ಥನ ಸರ್ಟಿಫಿಕೇಟನ್ನು ಹಾಜರಮಾಡಬೇಕು

ಅರ್ಜಿಯ ನಮೂನೆಗಳು ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ದೊರೆಯುವವು. ಬೇಕಾದವರು ತರಿಸಿಕೊಳ್ಳಬಹುದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

ಧಾರವಾಡ, ಕಾರವಾರ ಜಿಲ್ಲೆಗಳ ದೇಶಭಾಷೆಯು ಕನ್ನಡವೆಂದೂ ವಿಜಾಪೂರ ಹಾಗು ಬೆಳಗಾವ ಜಿಲ್ಲೆಗಳ ದೇಶಭಾಷೆಗಳು ಕನ್ನಡ ಹಾಗು ಮರಾಠಿ

ಎಂದೂ ಕೊಲ್ಹಾಪೂರ ಸಂಸ್ಥಾನದ ದೇಶಭಾಷೆಯು ಮರಾಠಿ ಎಂದೂ ಎಣಿಸಲ್ಪಟ್ಟಿದೆ.

ಧಾರವಾಡ ಹಾಗು ಕಾರವಾರ ಜಿಲ್ಲೆಗಳಿಂದ ಮರಾಠೀ ಭಾಷೆಯಲ್ಲಿ ಪರೀಕ್ಷೆಗೆ ಕೂಡುವ ಉಮೇದವಾರರು ಬೆಳಗಾವಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬೇಕಾಗುವದು.

ಈ ಪರೀಕ್ಷೆಗೆ ನೇಮಿಸಿದ ಪುಸ್ತಕಗಳು ಮುಂಬಯಿ ಸರಕಾರದ ೨೪-೧೦-೧೯೩೫ ಇಸ್ವಿಯ ಗ್ಯಾಝೆಟಿನ ೨ನೇ ಭಾಗದ ೨೦೭೫ನೆಯ ಪುಟದಲ್ಲಿ ಈ ಮೊದಲೇ ಪ್ರಸಿದ್ಧವಾಗಿವೆ. ಈ ಪರೀಕ್ಷೆಗೆ ಬೇಕಾದ ವಿಷಯ ಎಲ್ಲ ವಿಷಯಗಳು, ಪರೀಕ್ಷೆಯ ಅಭ್ಯಾಸಕ್ರಮ ಮುಂತಾದ್ದು ಮೇಲೆ ಬರೆದ ಗ್ಯಾಝೆಟಿನ ಪುಟದ ೨ನೆಯ ಪ್ಯಾರಾದಲ್ಲಿ ಪ್ರಕಟವಾಗಿವೆ.

ಶೇತಕೀ ವಿಷಯವನ್ನು ಆರಿಸಿಕೊಂಡ ಉಮೇದವಾರರ (ಅಗ್ರಿಕಲ್ಚರಲ್ ಬಾಯಸ್) ವ್ಯ. ಫಾ. ಪರೀಕ್ಷೆಯೂ ಸಹ ಇವೇ ತಾರೀಖುಗಳ ದಿವಸ ಧಾರವಾಡ, ಬೆಳಗಾವ, ವಿಜಾಪೂರ, ಕಾರವಾರ ಈ ಸೆಂಟರುಗಳಲ್ಲಿ ಮಾತ್ರ ನಡೆಯುವದು. ಈ ಪರೀಕ್ಷೆಯು ಎಜ್ಯುಕೇಶನ್ ಡಿಪಾರ್ಟಮೆಂಟಿನ ಸರಕಾರಿ ತರಾವಿನ ನಂ. ೧೧೯೯ ತಾ. ೬-೨-೧೯೨೫ ಹಾಗು ೯-೬-೧೯೨೮ ರ ಮೇರೆಗೆ ಪ್ರಸಿದ್ಧವಾದ ಪ್ರಕಾರ ನಡೆಯುವದು. ಈ ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರು ಪರೀಕ್ಷೆಯ ಪರವಾನಿಗಿ ಅರ್ಜಿಯ ಸಂಗಡ ತಾವು ಅಗ್ರಿಕಲ್ಚರಲ್ ಬಾಯಿಸ್ ಅಭ್ಯಾಸದ ಮೂರು ವರ್ಷದ ಅಭ್ಯಾಸಕ್ರಮವನ್ನು ಮುಗಿಸಿರುವ ಬಗ್ಗೆ ಸರ್ಟಿಫಿಕೇಟನ್ನು ಕಳಿಸಬಹುದು.

ಎಜ್ಯುಕೇಶನಲ್ ಇನಸ್ಪೆಕ್ಟರ
ಪ. ಭಾ. ಇವರ ಆಫೀಸು,
೧೪-೧೨-೧೯೩೬

ಸೈಯ್ಯದ ನೂರುಲ್ಲಾ
ಎ. ಇ. ಸ. ಭಾಗ

ಪ್ರಕಟಣೆ

ಕನ್ನಡ ಬುಕ್ ಕಮಿಟಿ ಧಾರವಾಡ ಇವರು ಮುಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ಕ್ರ. ಸಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮುಂಜೂರ.	ಮುಂಜೂರ ನಂಬರು.
೧	ಧಾರವಾಡ ತಾಲೂಕಿನ ವರ್ಣನೆಯು	ಮಿ. ಆಯ್. ಪಿ. ನಿಂಬಾಳಕರ	ಆಯ್. ಪಿ. ನಿಂಬಾಳಕರ, ಮಿಶನ್ ಕಂ. ಧಾರವಾಡ.	೦–೨–೬	ಪ್ರಾಥಮಿಕ ಶಾ. ಗಳ ಶಿಕ್ಷಕರ ಲಾಯಬ್ರರಿ ಬುಕ್ಕಾಗಿ	ಎ. ಇ. ಸಾ. ನಂ. 47 P 6461 5-1-37
೨	ಹಿಂದುಸ್ಥಾನದಲ್ಲಿಯ ಶಿಕ್ಷಣ	ಮಿ. ವ್ಹಿ. ಎನ್. ಮುಗದಾಳ ಹೆ. ಮಾ. ಗು ಹಾ. ಸ್ಕೂಲು ಧಾರವಾಡ.	ಗ್ರಂಥಕರ್ತರು.	೦–೪ ೦	ವ್ಯ. ಟ್ರೇ. ಸಂ. ಗಳ ವಿ. ಗಳ ಲಾಯಬ್ರರಿ ಬುಕ್ಕಾಗಿಯೂ ಪ್ರಾಥಮಿಕ ಶಾಲೆಗಳ ಶಿಕ್ಷಕರ ಲಾಯಬ್ರರಿ ಬುಕ್ಕಾಗಿಯೂ	6368 31-12-36 6370 31-12 31
೩	ಇಂಗ್ಲಂಡದಲ್ಲಿಯ ಶಿಕ್ಷಣ	ಸದರ	ಸದರ	೦–೨–೦	ಸದನ	

೪—೭೫೨೦

ಪ್ರಕಟಣೆ

ಉರ್ದು ಬುಕ್ ಕಮೀಟಿ ಮುಂಬೈ ಇವರು ಮುಂಬಯಿ ಇಲಾಖೆಯೊಳಗಿನ ಉರ್ದು ಪ್ರಾಥಮಿಕ ಶಾಲೆಗಳಿಗೋಸ್ಕರ ೨೬-೯-೧೯೩೬ ನೆಯ ದಿವಸ ಮಂಜೂರ ಮಾಡಿದ ಪುಸ್ತಕಗಳ ಯಾದಿಯು.

T= ಟಿಕ್ಸ್ಟ P ಪ್ರಾಯಿರು L= ಲಾಯಬ್ರರಿ ಶಿ=ಶಿಕ್ಷಕರು ವಿ=ವಿದ್ಯಾರ್ಥಿಗಳು.

ಅ. ನಂಬರ	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂಜೂರ.
೧	ಆಸಾನ ಇಲ್ ಮುಸ್ಲೆಹತ್	ಕಾಜಿಮಹಮ್ಮದಲಿ ಹಸನ ಹೆಡ್‌ಮಾಸ್ತರ ಖೋಜಾ ಪೊಹಲಾ ಉರ್ದುಬಾಯ್ಸ್ ಸ್ಕೂಲ ಮುಂಬಯಿ	ಅಜಮುಲ್ ಪ್ರೆಸ್ ಬಾಂಬೆ	೦–೨–೦	ಪ್ರಾ. ಶಾ. ಗಳ ಶಿ. ರ ಹಾಗು ವಿ. ಗಳ L ಬುಕ್ಕಾಗಿ
೨	ಉರ್ದು ಅಟ್ಲಾಸ್ ಆಫ್ ಬಾಂಬೆ ಪ್ರೆಸಿಡೆನ್ಸಿ ೧ನೆ ಆ. ೧೯೩೬	—	ಲಾಂಗಮೆನ್ಸ ಗ್ರೀನ ಆ್ಯಂಡ ಕಂ। ಲಿಮಿ. ಬಿಕ್ಕೋಟಿದಡ ಬಾಂಬೆ	೦–೬–೦	ಪ್ರಾ. ಶಾ. ಗಳ ಉಪಯೋಗಕ್ಕಾಗಿ
೩,೪,೫	ದಿಲ್ಲೀಕಿ ಸೈರ ಕಾಶ್ಮೀರಕಿ ಸೈರ ಅಜಮೀರಕಿ ಸೈರ	—	ಆಲ್ ಇಂಡಿಯನ್ ಎ. ಲಿಟ್ರೇಚರಿ ಬು. ಸೊಸೈಟಿ ಲಾಹೋರ	೦ ೧–೬ ೦–೧–೩ ೦ ೧–೩	ಪ್ರಾ. ಶಾ. ಗಳ ವಿ. ಗಳ L ಬುಕ್
೬	ಉರ್ದು ಎಲಿಮೆಂಟರಿ ಸಿವಿಕ್ಸ ಭಾ. ೧	ಸೈಯ್ಯದಲಿ ಹೈದರ ಟೀಚರ ಎ. ಪಿ. ಸ್ಕೂ. ಖಾಂಡವಾ	ನಿಝಾಮಿ ಪ್ರೆಸ್ ಲಖನೌ	೦-೫ ೦	ಪ್ರಾ. ಶಾ. ಗಳ ಶಿ. ರ L ಬುಕ್ಕಾಗಿ
೭	ಜದೀದ ಜಾಗ್ರಫಿ ಪೂನಾ ಡಿಸ್ಟ್ರಿಕ್ಟ್ ಫಾರ್ ಸ್ಟಾಂಡರ್ಡ III	ಮುನ್ಸಿ ಅಬ್ದುರ್ರಹಮಾನ ಅಹ್ಮದ ಸಾ. ಹೆ. ಮಾ. ಉರ್ದು ಪ್ರಾ. ಶಾ. ನಂ ೧೦. ಪೂನಾ	ಮುಫೈದ ಆಮ್ ಪ್ರೆಸ್ ಲಾಹೋರ	೦-೫–೦	ಸದರ

ಪ್ರಕಟಣೆಗಳ ಪಟ್ಟಿ

೧೯೩೭ನೆಯ ಇಸ್ವಿಯ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ (ಕನ್ನಡ, ಮರಾಠಿ, ಉರ್ದು) ವೇಳಾಪತ್ರಿಕೆ

ತಾರೀಖು	ಸ್ಟಾ.ಶ. ಟಾಯಿಮು ಇಂದ	ವರೆಗೆ	ವಿಷಯಗಳು	ಗುಣಗಳು
ಸೋಮವಾರ ೧-೩-೩೭	೧೦	೧೦-೪೫ ಪೂರ್ವಾಹ್ಣ	ಉಮೇದವಾರರ ಹಾಜರಿ ತೆಗೆದುಕೊಳ್ಳುವರು	
ಸದರ	೧೧	೧ ಪರಾಹ್ಣ	೧ನೆಯ ಸದರ (ಬ) ಹಾಗು (ಕ) ದೇಶಭಾಷೆ	ಬ. ೪೫ ಹಾಗು ಕ. ೩೦
ಸದರ	೨	೪ ,,	೨ನೆಯ ಸದರ (ಬ) ಹಾಗು (ಅ) ಉಕ್ತಲೇಖನ ನಿಬಂಧ	ಬ. ೧೫ ಹಾಗು (ಅ) ೬೦
ಮಂಗಳವಾರ ೨-೩-೧೯೩೭	೧೧	೧	೫ನೆಯ ಸದರ ಇತಿಹಾಸ [ಕೈಬರಹ	೭೫
ಸದರ	೨	೪	೬ನೆಯ ಸದರ ಆರೋಗ್ಯಶಾಸ್ತ್ರ	೭೫
ಬುಧವಾರ ೩-೩-೩೭	೧೧	೨	೩ನೆಯ ಸದರ (ಅ) ಮತ್ತು (ಬ) ಗಣಿತ ಹಾಗು ಮನೆಯ ಜಮಾ ಖರ್ಚು	(ಅ) ೮೦ ಹಾಗು (ಬ) ೨೦
ಸದರ	೩	೫	೪ನೆಯ ಸದರ ಭೂಗೋಲ	೭೫
ಗುರುವಾರ ೪-೩-೩೭	೧೧	೨	೭ನೆಯ ಸದರ ಹೊಲಿಗೆ ಕೆಲಸ	೧೦೦
ಸದರ	೩	೫	೮ನೆಯ ಸದರ ಐಚ್ಛಿಕ ವಿಷಯಗಳು ಡ್ರಾಯಿಂಗ ಪ್ರಕೃತಿವಿಮರ್ಶೆ ಅಥವಾ ಗಾಯನ	೭೫ ಬಾಯಿಪರೀಕ್ಷೆ (ಅ)೩೦ (ಡ)೨೦

ಸೂಚನೆ:— ೧ನೆಯ ಸದರ (ಅ) ಹಾಗು (ಡ) ಭಾಗದ ಬಾಯಿ ಪರೀಕ್ಷೆಯು ಪ್ರತಿದಿನ ಬರಹದ ಪರೀಕ್ಷೆಯು ಮುಗಿದಬಳಿಕ ಸಾಯಂಕಾಲ ಯೋಗ್ಯಕಾಲಾವಧಿಯ ವರೆಗೆ ತೆಗೆದುಕೊಳ್ಳಲಾದೀತು. ಪರೀಕ್ಷೆಗೆ ಬರುವ ಉಮೇದವಾರರ ಸಂಖ್ಯೆಯನ್ನು ಅನುಲಕ್ಷಿಸಿ ಹೊರಗಿನಿಂದ ಬಂದ ವಿದ್ಯಾರ್ಥಿನಿಯರ ಪರೀಕ್ಷೆಯು ಮೊದಲು ತೆಗೆದುಕೊಳ್ಳಲ್ಪಡುವದು; ಆಯಾಸ್ಥಳದ ಸ್ಥಳಿಕ ವಿದ್ಯಾರ್ಥಿನಿಯರು ಅವಶ್ಯಕಂಡರೆ ಇನೆ ತಾರೀಖು ಶುಕ್ರವಾರ ದಿವಸ ಪರೀಕ್ಷೆಗೆ ಬರಬೇಕಾಗುವದು

ಉಮೇದವಾರರು ಒಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇಬೇಕು. ಉಮೇದವಾರರು ೧-೩-೩೭ನೆ ದಿವಸ ಮಾತ್ರ ಪರೀಕ್ಷೆ ಆರಂಭವಾಗುವ ಮೊದಲು ೧ ತಾಸು ಮುಂಚಿತವಾಗಿ ಪರೀಕ್ಷೆ ಹಾಲದಲ್ಲಿ ಹಾಜರ ಇರಲೇಬೇಕು.

ಪತ್ರಗಳ ಸಾರಾಂಶ

೧. **ಬೆಲ್ಲದಬಾಗೇವಾಡಿ** ತಾಲೂಕ **ಹುಕ್ಕೇರಿ**— ಈ ಶಾಲೆಯ ಪಟಾ ಮಾಸ್ತರರು ತಿಳಿಸುವದೇನೆಂದರೆ—

ತಾ. ೧೧-೧೧-೧೯೩೬ನೆಯ ದಿವಸ ನಮ್ಮ ಶಾಲೆಗೆ ಎಂ. ಎಮ್. ಎಸ್. ಕತ್ತಿ ಬಿ. ಎ. ಹಾಗು ಎಂ. ಎಸ್. ಎಮ್. ಪಾಟೀಲ, (ಕಬ್ಬೂರ) ಇವರಿಬ್ಬರೂ ಆಗಮಿಸಿ ಶಾಲೆಯ ಮೇಲಿನ ಇಯತ್ತೆಗಳ ಅಭ್ಯಾಸವನ್ನು ಪರೀಕ್ಷಿಸಿ ಸಂತೋಷ ಭರಿತರಾಗಿ ಸ್ಕೌಟ ಶಿಕ್ಷಣದ ಉತ್ತೇಜನಾರ್ಥವಾಗಿ ೫೫ ರೂ. ಗಳನ್ನು ದಯಪಾಲಿಸಿದರು. ಸ್ತುತ್ಯವು.

೨. ವಿಜಾಪೂರ ಮ್ಯುನಿಸಿಪಾಲಿಟಿ ಕನ್ನಡ ೧ನೆಯ ನಂಬರ ಶಾಲೆಯ ಅಸಿ। ಮಾ ಎಂ. ಜಾಡಗೌಡರ ಇವರು ಬರೆದದ್ದು—ನಮ್ಮ ಶಾಲೆಯಲ್ಲಿ ಪಾಲಕರ ದಿನಾಚರಣೆಯು ತಾ. ೨೦-೧೦-೧೯೩೬ ಇಸ್ವಿ ದಿವಸ ಇಲ್ಲಿಯ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರಾದ ಶ್ರೀ. ಬಿ. ಡಿ. ತಾಳೀಕೋಟಿ ಬಿ. ಎ., ಎಲ್.ಎಲ್. ಬಿ. ಇವರ ಅಧ್ಯಕ್ಷತೆಯ ಕೆಳಗೆ ನೆರವೇರಿಸಲ್ಪಟ್ಟಿತು. ಶಾಲೆಯಲ್ಲಿ ತೆಗೆಸಿಟ್ಟಿದ್ದ ಸಕಾಶ ಮೊದಲಾದ ಉಪಕರಣಗಳು ಚೆನ್ನಾಗಿ ಇಡಲ್ಪಟ್ಟಿದ್ದವು. ಬಳಿಕ ಪದ್ಧತಿಗನು ಸರಿಸಿ, ಶಾಲಾವಿದ್ಯಾರ್ಥಿಗಳ ಸಂಭಾಷಣೆ, ಸ್ಕೌಟ, ಡ್ರಿಲ್ ಮುಂತಾದವು ಜರುಗಿದವು. ಶಾಲೆಯಲ್ಲಿ ಹೊಸ ಶಿಕ್ಷಣ ಪದ್ಧತಿಯ ಪ್ರಕಾರ ಶಿಕ್ಷಣವು ಸಾಗಿದೆಯೆಂದೂ ಶಾಲೆಯ ಸ್ಥಿತಿಯು ಚನ್ನಾಗಿದೆಯೆಂದೂ ಪ್ರೆಸಿಡೆಂಟರು ಅಭಿಪ್ರಾಯ ಪಟ್ಟರು.

ಶಾಲೆಯ ವಿದ್ಯಾರ್ಥಿಗಳ ಪಾಟಿ ಪುಸ್ತಕಗಳಿಗಾಗಿ ಶ್ರೀಮಂತ ವಿಠ್ಠಲದಾಸ ಭಗವಾನದಾಸ ದರಬಾರ ಇವರು ೧೧ ರೂ. ಗಳನ್ನು ಕೊಟ್ಟರು. ಸ್ತುತ್ಯವು. ಒಕ್ಕ ಶಾಲಾಹುಡುಗರಿಗೆ ಮಿಠಾಯಿ ಹಂಚಲ್ಪಟ್ಟಿತು. ಬಳಿಕ ರೀತಿಗೆ ಸರಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

(೩) ಧಾರವಾಡ ನಗರಸಭೆಯು ಶಿಕ್ಷಣದ ಚಟುವಟಿಕೆಗಳು

ಲೇ— ನಾ. ಲ. ಧಾರವಾಡಕರ, ಹೆ. ಮಾ. ಬಾಯ್ಸ್‌ಸ್ಕೂಲ ನಂ. ೬ ಧಾರವಾಡ

ನಮ್ಮ ಸ್ಕೂಲಬೋರ್ಡಿನ ಜೆಅರಮನ್ನರಾದ ಡಾ. ನಾರಾಯಣರಾವ ಕಬ್ಬೂರ ಇವರು ತಮ್ಮ ಉಡಳಿತದಲ್ಲಿ ಶಿಕ್ಷಣಖಾತೆಯ ಅಧಿಕಾರಸ್ಥರೊಡನೆಯೂ ಅನುಭವಿಕ ಶಿಕ್ಷಕರೊಡನೆಯೂ ತಮ್ಮ ಸದಸ್ಯರೊಡನೆಯೂ ವಿಚಾರವಿನಿಮಯ ಮಾಡಿಕೊಂಡು ಧಾರವಾಡ ನಗರ ಸಭೆಯ ಶಿಕ್ಷಣಖಾತೆಯಲ್ಲಿ ಬಹುಮುಖದಿಂದ ಸುಧಾರಣೆಗಳನ್ನು ಮಾಡಲುಪಕ್ರಮಿಸಿರುವರು. ಅವರಿಗೂ ಶಿಕ್ಷಕರಿಗೂ ಅವಶ್ಯಕವಾದ ಸಹಾಯವನ್ನು ಅಡ್‌ಮಿನಿಸ್ಟ್ರೇಟಿವ್ ಆಫೀಸರ ಶ್ರೀ. ಶಿರಸಂಗಿ ಪತ್ರಾತ್ರಯರಾಯರು ಮಾಡುತ್ತಲಿರುವರು. ವಾರಕೊಮ್ಮೆ ಶಿಕ್ಷಣದ ಮಾದರಿ ಪಾಠಗಳಿಗಾಗಿ ವೇಳೆಯನ್ನು ಕಾದಿಟ್ಟಿರುವರು. 'ಶಿಕ್ಷಣದ ಮಾದರಿ ಪಾಠಮಾಲೆ' ಎಂಬ ಹೆಸರಿನಿಂದ ಮಾದರಿ ಪಾಠಗಳ ಪ್ರಯೋಗಗಳನ್ನು ಬಲ್ಲವರಿಂದ ಮುನಸಿ ಪಾಲ್ಟಿ ಶಿಕ್ಷಕರಿಗೋಸ್ಕರ ಮಾಡಿಸಿ ತೋರಿಸುತ್ತಿರುವರು. ಅದರಿಂದ ಆದ ಲಾಭವ ನಿರೀಕ್ಷಣೆಗಾಗಿ ನಡುನಡುವೆ ನಮ್ಮಲ್ಲಿಯ ಶಿಕ್ಷಕರಿಂದಲೂ ಮಾದರಿ ಪಾಠಗಳನ್ನು ಕೊಡಿಸುತ್ತಿರುವರು. ವ್ಯಾಯಾಮ ಶಿಕ್ಷಣ (ಲೇಜೀಮು ಡ್ರಿಲ್, ಸಮಸ್ಕಾರ, ಡ್ರಿಲ್) ವು ಶಿಕ್ಷಕರಿಗೆ ಚೆನ್ನಾಗಿ ಅವಗತವಾಗುವದಕ್ಕೋಸ್ಕರ ತಜ್ಞರಿಂದ ಶಿಕ್ಷಕರಿಗೆ ಶಿಕ್ಷಣ ಕೊಡಿಸುತ್ತಲಿರುವರು. ಕ್ರಮಿಕ ಪುಸ್ತಕಗಳಲ್ಲಿಯ ಶಾಸ್ತ್ರೀಯ ಪಾಠಗಳ ಜ್ಞಾನವು ಶಿಕ್ಷಕರಿಗೆ ಪೂರ್ಣವಾಗಬೇಕೆಂದು ಇಲ್ಲಿಯ ಇಂಗ್ಲಿಷ ಶಾಲೆಯ ಸಾಯನ್ಸ ಟೀಚರರಿಂದ ಮಾದರಿಪಾಠಗಳನ್ನು ಕೊಡಿಸುತ್ತಿರುವರು. ವ್ಯಾಯಾಮಕ್ಕೂ ಶಾಸ್ತ್ರೀಯ ಪಾಠಗಳಿಗೂ ಬೇಕಾಗುವ ಉಪಕರಣಗಳನ್ನು ಶಾಲೆಗಳಿಗೆ ಪೂರಯಿಸುತ್ತಿರುವರು. ಔದ್ಯೋಗಿಕ ಶಿಕ್ಷಣವು ಪೌಢಿಕ ಶಿಕ್ಷಣಕ್ಕೆ ನೆರವಾಗಲೆಂದು ಬಡಿಗತನ, ಬುಕ್‌ಬಾಯಿಂಡಿಂಗ ಮೊದಲಾದ ಔದ್ಯೋಗಗಳ ಶಿಕ್ಷಣವನ್ನು ಶಾಲೆಗಳಲ್ಲಿ ಆರಂಭಿಸಿದ್ದಾರೆ.

ಭೂಗೋಲ ಶಿಕ್ಷಣವು ಬರಿಯ ಶಾಬ್ದಿಕವಾಗಬಾರದೆಂದು ಮ್ಯಾಪಿಂಗ್ ಲ್ಯಾಂಟರ್ನದ ಚಿತ್ರಗಳ ಸಹಾಯದಿಂದ ಭೂಗೋಲದ ಪಾಠಗಳನ್ನು ಕಲಿಸಲಿಕ್ಕೆ ಶಿಕ್ಷಕರು ಸಮರ್ಥರಾಗಬೇಕೆಂದು ಯೋಜನೆ ನಡೆಯಿಸಿರುವರು.

ಡ್ರಾಯಿಂಗ ಶಿಕ್ಷಣವೂ ಪ್ರಕೃತಿವಿಮರ್ಶೆಯೂ ಹೊಸ ಅಭ್ಯಾಸಪತ್ರಿಕೆಗೆ ಅನುಸರಿಸಿ ನಡೆಯಬೇಕೆಂದು ಮೇಲ್ವಿಚಾರಣೆ ನಡೆಯಿಸಿರುವರು.

ಇನ್ನೆಲ್ಲವು ನೇಳೆಗೆ ಸರಿಯಾಗಿ ತಕ್ಕ ರೀತಿಯಿಂದ ನಡೆಯಲಿಕ್ಕೆ ಪಿ. ಆಡ್‌ವಿ॥ ಆಫೀಸರರು ಜಾಗರೂಕತೆಯಿಂದ ನೋಡುತ್ತಿರುವರು.

ನಮ್ಮಲ್ಲಿಯ ಪ್ರಾಥಮಿಕ ಶಿಕ್ಷಣವು ಸರ್ವಾಂಗಸುಂದರವಾಗಿಯೂ ಪರಿಣಾಮಕಾರಿಯಾಗಿಯೂ ಸಾಗುವಂತೆ ಅಧಿಕಾರಿಗಳು ಪ್ರತಿನಿತ್ಯ ನೋಡುತ್ತಲಿರುವರು. ಶ್ರೀ. ಕಬ್ಬೂರ ನಾರಾಯಣರಾಯರು ತಮ್ಮ ಮಹತ್ವದ ಡಾಕ್ಟರಿಕೆಯ ಉದ್ಯೋಗದಲ್ಲಿ ವೇಳೆಯನ್ನು ಮಿತವಾಗಿ ಉಳಿಸಿಕೊಂಡು ಇಷ್ಟೆಲ್ಲ ಸುಧಾರಣೆಗಳನ್ನು ಮೂರ್ತಸ್ವರೂಪಕ್ಕೆ ತಂದದ್ದು ನಮ್ಮ ಶಿಕ್ಷಕವರ್ಗಕ್ಕೂ ವಿದ್ಯಾರ್ಥಿವೃಂದಕ್ಕೂ ಪಾಲಕರಿಗೂ ತುಂಬ ಅಭಿನಂದನೀಯವಾದ ಸಂಗತಿಯೇ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಪಾಠ ಕಲಿಸಿ ತೋರಿಸಿದವರು	ವಿಷಯಗಳು
ವಿ. ಜಿ. ಗೋ. ಕುಲಕರ್ಣಿ	ಬಾಲಕವರ್ಗ ಅಂಕಿಯ ಪಾಠ:
,,	ಚಿತ್ರಗಳ ಸಾಹಾಯ್ಯದಿಂದ ಬಾಲಕವರ್ಗಕ್ಕೆ ವಾಚನಪಾಠ
ವಿ. ಕೊಪ್ಪರ	ಇಳುಕಲು (ಶಾಸ್ತ್ರೀಯ ಪಾಠ)
ವಿ. ಸಾತೇನಹಳ್ಳಿ	ಕವಿತಾಪಾಠ; ಳನೆಯ ಇಯತ್ತೆ
ವಿ. ಎಸ್. ಜಿ. ಶಿನೋಳಕರ	ತಂತೀ ಟಪಾಲು
ವಿ. ಕೆ. ಎಸ್. ಪಾಟೀಲ	ವ್ಯವಹಾರೀ ಅಪೂರ್ಣಾಂಕಗಳ ಭಾಗಾಕಾರ ೫ನೆಯ ಇ.
ವಿ. ಕುರಡಿ ಹೆ. ಮಾ. ಪ್ರಾ. ಸ್ಕೂ.	ವ್ಯಾಕರಣ ೩ನೆಯ ಇಯತ್ತೆ

ಮುಂದೆ ೧೯೩೫-೧೯೩೬ನೆಯ ಸಾಲಿನ ಇನಸ್ಪೆಕ್ಶನ್ ಕಾಲಕ್ಕೆ ಪಿ. ಜೇಶ ಪಾಂಡೆ ಹಣಮಂತರಾಯರ ಅಧ್ಯಕ್ಷತೆಯಲ್ಲಿ ನಮ್ಮಲ್ಲಿಯ ಶಿಕ್ಷಕರು ಸೂತನ ಪದ್ಧತಿಯಿಂದ ಪಾಠಗಳನ್ನು ಕಲಿಸಿತೋರಿಸಿದರು. ಆಗ ನಮ್ಮ ಶಿಕ್ಷಕರು ಮೇಲಿನ ಪ್ರಯತ್ನಗಳಿಂದ ಪ್ರಗತಿಹೊಂದಿರುವರೆಂಬದು ಒಡೆದುತೋರಿತು.

ಹೀಗಾಗಿ ಟ್ರೇಂಡರಿಗೂ ಅಂಟ್ರೇಂಡರಿಗೂ ಲಾಭದಾಯಕವಾಗಿಯೂ ಶಿಕ್ಷಣವು ಸರ್ವತೋಮುಖಿಯಾಗಿ ಉನ್ನತಿಯಾಗುವಂತೆಯೂ ಜೆಲಿರಮನ್ನರು ಆಡ್‌ವಿ॥ ಆಫೀಸರರೂ ಶಿಕ್ಷಕರೂ ನಮ್ಮಲ್ಲಿ ಯತ್ನಿಸಿಯಿಸುತ್ತಿರುವರು. ಇದು ನಿಜವಾಗಿ ನಮ್ಮ ಸುದೈವವೆಂದು ಹೇಳಬೇಕಾಗಿದೆ.

೪. **ಶಾಳಾ ಮುಡಗೇರಿ ಜಿ. ಕಾರವಾರ:**—ಇಲ್ಲಿಯ ಕನ್ನಡ ಶಾಲೆಯ ಪೆಡ್‌ಮಾಸ್ತರ ವಿ. ದೇಸಾಯಿ ಇವರು ಬರೆದದ್ದು:—

"ಈ ಊರ ಸೊಸಾಯಿಟಿಯ 'ಡೆ' ಉತ್ಸವವು ತಾ॥ ೭–೧೧–೩೬ನೆಯ ದಿವಸ ನಡೆಯಿತು. ಆ ಕಾಲಕ್ಕೆ ಸೊಸೈಟಿಯ ಜೇಅರಮನ್ ಶ್ರೀ. ನಾರಾಯಣ ಬಾಳಕೃಷ್ಣ ದೇಸಾಯಿಯವರೂ, ಸೆಕ್ರೆಟರಿಯವರೂ ಮೆಂಬರರೂ ನಮ್ಮ ಶಾಲೆಗೆ ಬಂದು ನೋಡಿ ಬಡವಿದ್ಯಾರ್ಥಿಗಳಿಗೆ ಎಕ್ಸರಸಾಯಿಜ, ಪಾಟಿಪುಸ್ತಕಗಳನ್ನು ಕೊಟ್ಟರು. ಶಾಲೆಯ ಉಪಯೋಗಕ್ಕಾಗಿ ಒಂದು ತಾಮ್ರದ ಬಿಂದಿಗೆಯನ್ನು ದಯಪಾಲಿಸಿದರು" ಸ್ತುತ್ಯವು.

೫. **ಶಾಳಾ ಕುರ್ತಕೋಟಿ ತಾಲೂಕ ಗದಗ:**— ಇಲ್ಲಿಯ ಗರ್ಲಶಾಳಾ ಹೆ. ಮಾ. ರರು ಬರೆದದ್ದು — ಶಾಲಾ ಇಲ್ಲಿಯ ಸ್ಕೂಲ ಕಮಿಟಿ ಜೇಅರಮನ್ನರಾದ ಶ್ರೀ. ಫ. ಫ. ಮುಳಗುಂದ ಇವರು ತಾ॥ ೨೨–೧೨–೧೯೩೬ನೇ ದಿವಸ ನಮ್ಮ ಶಾಲೆಯ ಉಪಯೋಗಕ್ಕಾಗಿ ೧೦ ರೂ. ೮ ಆ. ಬೆಲೆ ಬಾಳುವ ಗಡಿಯಾರವನ್ನು ಕೊಟ್ಟರು. ಇದು ಸ್ತುತ್ಯವು.

೬. **ಶಾಳಾ ನಂದಗಡ ಜಿಲ್ಲಾ ಬೆಳಗಾಂವ:**—ಇಲ್ಲಿಯ ಹೆ. ಮಾ. ವಿ. ಆರ್. ಎಸ್. ಕುಲಕರ್ಣಿ ಇವರು ಬರೆದದ್ದು "ನಮ್ಮಲ್ಲಿ ತಾ॥ ೧೧–೧–೧೯೩೭ನೆಯ ದಿವಸ ಎನೆಯ ಬಾಲ ದಿನೋತ್ಸವವು ಜರುಗಿತ್ತು. ಆ ಸಭೆಗೆ ಮೆ॥ ಮಾಮುಲೇದಾರ ಸಾ॥ ತಾಲೂಕ ಖಾನಾಪುರ ಇವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಬೆಳವಡಿ ಮಲ್ಲಮ್ಮನ ನಾಟಕಮಾಡಿ ತೋರಿಸಿದರು. ಅದು ಪರಿಣಾಮಕಾರಕವಾಗಿ ಜರುಗಿತು. ಆಗ ಶಾಲೆಯ ಸಹಾಯಕ್ಕಾಗಿ ಶ್ರೀ. ಬಾಬುರಾವ ಪಾಟೀಲ ಇವರು ೫ ರೂ. ಶ್ರೀ. ಅಪ್ಪಾಸಾಹೇಬ ಕಂಠಾಲ ಇವರು ೧ ರೂ. ಇನ್ನು ಶ್ರೀ. ಬಾಬಾ ಸಾ॥ ಕಲಾಲ ಇವರು ೧೫ ಪಾಟಿ, ೨ ಪೆನ್ಸಿಲ್ ಪೆಟ್ಟಿಗೆಗಳನ್ನು ಉದಾರಹಸ್ತದಿಂದ ದಯಪಾಲಿಸಿದರು. ಇದು ಸ್ತುತ್ಯವು. ಶ್ರೀ. ಆರ್. ಜಿ. ಕುಲಕರ್ಣಿ, ಶ್ರೀ. ಬಿ. ಎನ್ ಪಾಥರ್ಡೆ ಇವರು ಈ ಉತ್ಸವ ಕಾರ್ಯವು ಚೆನ್ನಾಗಿ ಸಾಂಗವಾಗುವದಕ್ಕೆ ಸಹಾಯಮಾಡಿದರು. ಇದು ಅವರಿಗೆ ಭೂಷಣವು.

೭. **ಶಾಳಾ ಅಣ್ಣಿಗೇರಿ ತಾಲೂಕ ನವಲಗುಂದ:**— ಈ ಶಾಲೆಯ ವತಿಯಿಂದ ವ್ಹಿ. ಎಸ್. ಹುಬ್ಬಳ್ಳಿ ಟಿ. ಎಲ್. ಬಿ ಮೆಂಬರ ಇವರು ಬರೆದದ್ದು.—

" ಅಣ್ಣಿಗೇರಿ ಕನ್ನಡ ಬಾಯ್ಸ ಶಾಲೆಗೆ ಮೆಹರ್ಬಾನ ಸರದಾರ ಮುಹಮ್ಮದ ಅಲ್ಲೀಖಾನ ಬಿರಾದರ ನವಾಬ ಸಾ॥ ಎಮ್. ಎಲ್. ಸಿ. ಬಾಂಬೆ ಹಾಗು ಜೆಅಕಮನ್ ಸಾ॥ ಡಿ. ಎಲ್. ಬಿ. ಎಸ್‌ಬಿ. ಧಾರವಾಡ ಮತ್ತು ಹುಬ್ಬಳ್ಳಿ ಮ್ಯು. ಪಾ. ಪ್ರೆಸಿಡೆಂಟರು ತಾರೀಖು ೧೧-೧-೩೭ನೆ ದಿವಸ ಆಗಮಿಸಿದ್ದರು. ಶಿಷ್ಟ ಸಾಂಪ್ರದಾಯಕ್ಕನುಸರಿಸಿ ಮೆ॥ ರವರ ಸ್ವಾಗತವು ಶಾಲೆಯಲ್ಲಿ ಮಾಡಲ್ಪಟ್ಟಿತು. ಪದ್ಧತಿಯಂತೆ ಕೆಲಸ ನಡೆದ ಬಳಿಕ ಶಾಲೆಗೆ ಕಂಪೌಂಡವನ್ನು ಕಟ್ಟಿಸಿ ಕೊಡುವ ಬಗ್ಗೆಯೂ ಬೋರಿಂಗ ಬಾವಿಯನ್ನು ತೋಡಿಸಿ ಕೊಡುವ ಬಗ್ಗೆಯೂ ಒಕ್ಕಲತನ, ಬಡಿಗತನ ಮೊದಲಾದ ಔದ್ಯೋಗಿಕ ಶಾಖೆಗಳಿಗೆ ತಕ್ಕ ಸಹಾಯವನ್ನು ಶಾಲೆಗೆ ಪೂರೈಸಿ ಕೊಡುವ ಬಗ್ಗೆಯೂ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಸ್ಕೌಟ ವಿದ್ಯಾರ್ಥಿಗಳಿಗಾಗಿ ೫ ರೂ. ಪಾರಿತೋಷಕವನ್ನು ಕೊಟ್ಟರು ಸ್ತುತ್ಯವು.

ಲ. ಟ್ರೇ. ಸ್ಕೂಲಿನ ಸ್ಕೌಟಲೀಡರ ಶಿ. ಸ. ಪಾಟೀಲ ಹಾಗು ಬೆಂಗೇರಿ ಇವರಿಂದ:- ನಮ್ಮ ಟ್ರೇನಿಂಗ ಕಾಲೇಜಿನಿಂದ ಮೈಸೂರ ಪ್ರವಾಸಕ್ಕೆ ಸನ್ ೧೯೩೬ನೆಯ ಇಸ್ವಿ ಅಕ್ಟೋಬರ ತಿಂಗಳಲ್ಲಿ ೪೧ ಜನ ವಿದ್ಯಾರ್ಥಿಗಳು ಹೊರಟಿದ್ದೆವಷ್ಟೇ, ನಾವೆಲ್ಲರೂ ಸ್ಕೌಟ ಡ್ರೆಸ್ಸಿನಿಂದ ಪ್ರವಾಸಮಾಡಿ ವಿಜಯಾದಶಮಿದಿವಸ ಶ್ರೀ. ಮಹಾರಾಜರವರ ಸೀಮೋಲ್ಲಂಘನ (ದಸರೆಯ ಉತ್ಸವ)ದ ಕಾಲಕ್ಕೆ ಸ್ಕೌಟ ಶಿಸ್ತಿನಿಂದ ಹೋಗಿ ನಮ್ಮ ಟ್ರೇನಿಂಗ ಕಾಲೇಜ ಸ್ಕೌಟ ಕ್ಯಾಂಪಪತಿಯಿಂದ ಹಾರ ತುರಾಯಿಗಳನ್ನು ಅರ್ಪಿಸಿದೆವು. ಆ ಬಗ್ಗೆ ಮಹಾರಾಜರು ಬಹಳ ಸಂತೋಷ ವ್ಯಕ್ತಪಡಿಸಿದರು. ಅನಂತರ ಅಲ್ಲಿಯ ಸ್ಕೌಟ ಅಧಿಕಾರಿಗಳು ನಮ್ಮೆಲ್ಲರಿಗೆ ಬಹಳ ಆದರವನ್ನು ತೋರಿಸಿ ಟೌನ ಹಾಲದಲ್ಲಿ ನಮಗಾಗಿ ಉಪಹಾರವನ್ನು ಕೊಟ್ಟರು. ಈ ಸಂಗತಿಯನ್ನು ತಿಳಿಸಲಿಕ್ಕೆ ನಮಗೆ ಅತ್ಯಾನಂದವಾಗುತ್ತದೆ.

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ಖ್ಹಿ. ಕಾಮತ, ಬಿ. ಎ. (ಆನರ್ಸ್), ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ನುಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತಿಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಶಿರ್ಸಿ, ಉ. ಕಾನಡಾ

ಪ್ಪದಿಮೂಡಿರಿ ! ಬೆಲೆ ಕಡಿವೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು : ಚಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ವ್ಯ. ಫಾ. ಪರೀಕ್ಷೆ, ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೨ನೆಯ ೩ನೆಯ ಇಯತ್ತೆಗಳು, ಹಾಗು ಸ್ಕಾಲರಸಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಪಡೆದು ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ಇಲ್ಲ. ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಎಲ್ಲ ಪ್ರಸಿದ್ಧ ಬುಕ್‌ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ನ, ಎ. ವ್ಹಿ. ಸ್ಕೂಲು,

ಮಾಳಮಡ್ಡಿ ಧಾರವಾಡ.

" ಅಣ್ಣೀಗೇರಿ ಕನ್ನಡ ಬಾಯ್ಸ ಶಾಲೆಗೆ ಮೆಹಬರ್ಬಾನ ಸರದಾರ ಮಹಬೂಬ ಅಲ್ಲೀಖಾನ ಬಿರಾದರ ನವಾಬ ಸಾ॥ ಎಮ್. ಎಲ್. ಸಿ. ಬಾಂಬೆ ಹಾಗು ಚೆಅರಮನ್ ಸಾ॥ ಡಿ. ಎಲ್. ಬಿ. ಎಸ್‌ಬಿ. ಧಾರವಾಡ ಮತ್ತು ಹುಬ್ಬಳ್ಳಿ ಮ್ಯು. ಪಾ. ಪ್ರೆಸಿಡೆಂಟರು ತಾರೀಖು ೧೧-೧-೩೭ನೆ ದಿವಸ ಆಗಮಿಸಿದ್ದರು. ಶಿಷ್ಟ ಸಾಂಪ್ರದಾಯಕ್ಕನುಸರಿಸಿ ಮೆ॥ ರವರ ಸ್ವಾಗತವು ಶಾಲೆಯಲ್ಲಿ ಮಾಡಲ್ಪಟ್ಟಿತು. ಪದ್ಧತಿಯಂತೆ ಕೆಲಸ ನಡೆದ ಬಳಿಕ ಶಾಲೆಗೆ ಕಂಪೌಂಡವನ್ನು ಕಟ್ಟಿಸಿ ಕೊಡುವ ಬಗ್ಗೆಯೂ ಬೋರಿಂಗ ಬಾವಿಯನ್ನು ತೋಡಿಸಿ ಕೊಡುವ ಬಗ್ಗೆಯೂ ಒಕ್ಕಲತನ, ಬಡಿಗತನ ಮೊದಲಾದ ಔದ್ಯೋಗಿಕ ಶಾಖೆಗಳಿಗೆ ತಕ್ಕ ಸಹಾಯವನ್ನು ಶಾಲೆಗೆ ಪೂರಯಿಸಿ ಕೊಡುವ ಬಗ್ಗೆಯೂ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಸ್ಕೌಟ ವಿದ್ಯಾರ್ಥಿಗಳಿಗಾಗಿ ೫ ರೂ. ಪಾರಿತೋಷಕವನ್ನು ಕೊಟ್ಟರು ಸ್ತುತ್ಯವು.

೮. ಟ್ರೇ. ಸ್ಕೂಲಿನ ಸ್ಕೌಟಲೀಡರ ಶಿ. ಸ. ಪಾಟೀಲ ಹಾಗು ಬೆಂಗೇರಿ ಇವರಿಂದ:- ನಮ್ಮ ಟ್ರೇನಿಂಗ ಕಾಲೇಜಿನಿಂದ ಮೈಸೂರ ಪ್ರವಾಸಕ್ಕೆ ಸನ್ ೧೯೩೬ನೆಯ ಇಸ್ವಿ ಅಕ್ಟೋಬರ ತಿಂಗಳಲ್ಲಿ ೪೧ ಜನ ವಿದ್ಯಾರ್ಥಿಗಳು ಹೊರಟಿದ್ದೆವಷ್ಟೇ, ನಾವೆಲ್ಲರೂ ಸ್ಕೌಟ ಡ್ರೆಸ್ಸಿನಿಂದ ಪ್ರವಾಸಮಾಡಿ ವಿಜಯಾದಶಮಿದಿವಸ ಶ್ರೀ. ಮಹಾರಾಜರವರ ಸೀಮೋಲ್ಲಂಘನ (ದಸರೆಯ ಉತ್ಸವ)ದ ಕಾಲಕ್ಕೆ ಸ್ಕೌಟ ಶಿಸ್ತಿನಿಂದ ಹೋಗಿ ನಮ್ಮ ಟ್ರೇನಿಂಗ ಕಾಲೇಜ ಸ್ಕೌಟ ಕ್ಯಾಂಪಪತಿಯಿಂದ ಹಾರ ತುರಾಯಿಗಳನ್ನು ಅರ್ಪಿಸಿದೆವು. ಆ ಬಗ್ಗೆ ಮಹಾರಾಜರು ಬಹಳ ಸಂತೋಷ ವ್ಯಕ್ತಪಡಿಸಿದರು. ಅನಂತರ ಅಲ್ಲಿಯ ಸ್ಕೌಟ ಅಧಿಕಾರಿಗಳು ನಮ್ಮೆಲ್ಲರಿಗೆ ಬಹಳ ಆದರವನ್ನು ತೋರಿಸಿ ಟೌನ ಹಾಲದಲ್ಲಿ ನಮಗಾಗಿ ಉಪಹಾರವನ್ನು ಕೊಟ್ಟರು. ಈ ಸಂಗತಿಯನ್ನು ತಿಳಿಸಲಿಕ್ಕೆ ನಮಗೆ ಅತ್ಯಾನಂದವಾಗುತ್ತದೆ.

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ಬ್ಹಿ. ಕಾಮತ, ಬಿ. ಎ. (ಆನರ್ಸ್), ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ಪುಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ತನ ಜಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಶಿಶಿ, ಉ. ಕಾನಡಾ

ತ್ವರೆಮಾಡಿರಿ ! ಬೆಲೆ ಕಡಿಮೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು : ಚಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ವ್ಯ. ಫಾ. ಪರೀಕ್ಷೆ, ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೫ನೆಯ ೩ನೆಯ ಇಯತ್ತೆಗಳು, ಹಾಗು ಸ್ಕಾಲರಸಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಪಡೆದು ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ಇಲ್ಲ. ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಎಲ್ಲ ಪ್ರಸಿದ್ಧ ಬುಕ್‌ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ಸ್, ಎ. ವ್ಹಿ. ಸ್ಕೂಲು,

ಮಾಳಮಡ್ಡಿ ಧಾರವಾಡ.

" ಅಣ್ಣಿಗೇರಿ ಕನ್ನಡ ಬಾಯ್ಸ ಶಾಲೆಗೆ ಮೆಹರ್ಬಾನ ಸರದಾರ ಮಹಮ್ಮದ ಅಲ್ಲೀಖಾನ ಬಿರಾದರ ನವಾಬ ಸಾ॥ ಎಮ್. ಎಲ್. ಸಿ. ಬಾಂಬೆ ಹಾಗು ಜೆಅರಸುನ್ ಸಾ॥ ಡಿ. ಎಲ್. ಬಿ. ಎಸ್‌ಬಿ. ಧಾರವಾಡ ಮತ್ತು ಹುಬ್ಬಳ್ಳಿ ಮ್ಯು. ಪಾ. ಪ್ರೆಸಿಡೆಂಟರು ತಾರೀಖು ೧೧-೧-೩೭ನೆ ದಿವಸ ಆಗಮಿಸಿದ್ದರು. ಶಿಷ್ಟ ಸಾಂಪ್ರದಾಯಕ್ಕನುಸರಿಸಿ ಮೆ॥ ರವರ ಸ್ವಾಗತವು ಶಾಲೆಯಲ್ಲಿ ಮಾಡಲ್ಪಟ್ಟಿತು. ಪದ್ಧತಿಯಂತೆ ಕೆಲಸ ನಡೆದ ಬಳಿಕ ಶಾಲೆಗೆ ಕಂಪೌಂಡವನ್ನು ಕಟ್ಟಿಸಿ ಕೊಡುವ ಬಗ್ಗೆಯೂ ಬೋರಿಂಗ ಬಾವಿಯನ್ನು ತೋಡಿಸಿ ಕೊಡುವ ಬಗ್ಗೆಯೂ ಒಕ್ಕಲತನ, ಬಡಿಗತನ ಮೊದಲಾದ ಔದ್ಯೋಗಿಕ ಶಾಖೆಗಳಿಗೆ ತಕ್ಕ ಸಹಾಯವನ್ನು ಶಾಲೆಗೆ ಮಾಡಿಸಿ ಕೊಡುವ ಬಗ್ಗೆಯೂ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಸ್ಕೌಟ ವಿದ್ಯಾರ್ಥಿಗಳಿಗಾಗಿ ೫ ರೂ. ಪಾರಿತೋಷಕವನ್ನು ಕೊಟ್ಟರು ಸ್ತುತ್ಯವು.

ಲ. ಟ್ರೇ. ಸ್ಕೂಲಿನ ಸ್ಕೌಟಲೀಡರ ಶಿ. ಸ. ಪಾಟೀಲ ಹಾಗು ಬೆಂಗೇರಿ ಇವರಿಂದ:- ನಮ್ಮ ಟ್ರೇನಿಂಗ ಕಾಲೇಜಿನಿಂದ ಮೈಸೂರ ಪ್ರವಾಸಕ್ಕೆ ಸನ್ ೧೯೩೬ನೆಯ ಇಸ್ವಿ ಅಕ್ಟೋಬರ ತಿಂಗಳಲ್ಲಿ ೪೧ ಜನ ವಿದ್ಯಾರ್ಥಿಗಳು ಹೊರಟಿದ್ದೆವಷ್ಟೇ, ನಾವೆಲ್ಲರೂ ಸ್ಕೌಟ ಡ್ರೆಸ್ಸಿನಿಂದ ಪ್ರವಾಸಮಾಡಿ ವಿಜಯಾದಶಮಿದಿವಸ ಶ್ರೀ. ಮಹಾರಾಜರವರ ಸೀಮೋಲ್ಲಂಘನ (ದಸರೆಯ ಉತ್ಸವ)ದ ಕಾಲಕ್ಕೆ ಸ್ಕೌಟ ಶಿಸ್ತಿನಿಂದ ಹೋಗಿ ನಮ್ಮ ಟ್ರೇನಿಂಗ ಕಾಲೇಜ ಸ್ಕೌಟ ಕ್ಯಾಂಪಪತಿಯಿಂದ ಹಾರ ತುರಾಯಿಗಳನ್ನು ಅರ್ಪಿಸಿದೆವು. ಆ ಬಗ್ಗೆ ಮಹಾರಾಜರು ಬಹಳ ಸಂತೋಷ ವ್ಯಕ್ತಪಡಿಸಿದರು. ಅನಂತರ ಅಲ್ಲಿಯ ಸ್ಕೌಟ ಅಧಿಕಾರಿಗಳು ನಮ್ಮೆಲ್ಲರಿಗೆ ಬಹಳ ಆದರವನ್ನು ತೋರಿಸಿ ಟೌನ ಹಾಲದಲ್ಲಿ ನಮಗಾಗಿ ಉಪಹಾರವನ್ನು ಕೊಟ್ಟರು. ಈ ಸಂಗತಿಯನ್ನು ತಿಳಿಸಲಿಕ್ಕೆ ನಮಗೆ ಅತ್ಯಾನಂದವಾಗುತ್ತದೆ.

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ಪ್ಹಿ. ಕಾಮುತ, ಬಿ. ಎ. (ಆನರ್ಸ್), ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ಸಂಪೂರ್ಣವಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟುತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ಬಾವ ಕಾಮುತ

ಶಿರ್ಸಿ, ಉ. ಕಾನಡಾ

ತ್ವರೆಮಾಡಿರಿ ! ಬೆಲೆ ಕಡಿಮೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು : ಚಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆ, ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೫ನೆಯ ಫಾರ್ಮಗಳು, ಹಾಗು ಸ್ಕಾಲರಸಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಪಡೆದು ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ಇಲ್ಲ. ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಎಲ್ಲ ಪ್ರಸಿದ್ಧ ಬುಕ್‌ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ಸ, ಎ. ವ್ಹಿ. ಸ್ಕೂಲು,

ಮೂಳಮಡ್ಡಿ ಧಾರವಾಡ.

Reg. No. B. 3691

ಮಾರ್ಚ್-೧೯೨೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ.	ಪುಟ.
೧.	ನಾಮುದಾರ ದಿವಾಣ ಬಹಾದ್ದೂರ ಸರ ಸಿದ್ದಪ್ಪ ತೋಟಪ್ಪ ಕಂಬಳಿಯವರು ಜೆ. ಪಿ.	೧
೨.	ಕಾಲಮಾಪನ	೩
೩.	ಇಂಗ್ಲಂಡದಲ್ಲಿ ಶಾರೀರಿಕ ಶಿಕ್ಷಣ	೯
೪.	ಉಪವಾಸ	೧೦
೫.	ಸ್ಕೌಟಿನ ಮೇಲ್ಮೆ	೧೪
೬.	ಶಿಶುಕಾಲೆಗಳು	೧೬
೭.	ಪ್ರಕಟನೆ	೨೪

Printed by K. B. Bhise at the Karnatak Printing Works, Dharwar
and Published by D. V. Kale, B. A., Head Master.
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು

	ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಕೃತ)	೦– ೦–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪–೦
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೧– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೨–೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩–೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೨–೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦– ೨–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪–೦
,, ೩ನೇ ,,	೦– ೫–೦
,, ,, ೪ನೇ ,,	೦– ೮–೦
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೫–೦
ಧಾರವಾಡ ಜಿಲ್ಲಾ ವರ್ಣನೆ (ಅಣ್ಣಿಗೇರಿ ಕೃತ) ೩ನೇ ಇ. ಗೆ	೦– ೪–೬
ವಿಜಾಪೂರ ,, ,, (,,) ೩ನೇ ,,	೦– ೪–೬
ಧಾರವಾಡ ಜಿಲ್ಲಾ ,, (ಕುರಡೀಕೃತ)	೦– ೫–೦
ಹಿಂದುಸ್ಥಾನ ಭೂಗೋಲು (ಮಗದಾಲಕೃತ)	೦– ೮–೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦–೧೨–೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦– ೫–೦
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೬–೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–೦
ಭೂಮಿತಿ (ಚಂದಾವರಕರ ಕೃತ)	೦– ೬–೦
ಸರಸ್ವತೀ ವಿಜಯ (ಬೂದೀಹಾಳಕೃತ)	೦– ೪–೦

ಪತ್ರೆ:— ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೫	ಮಾರ್ಚ ೧೯೩೭	ವರ್ಷ ೮ ಸಂ. ೧೨

ನಾಮದಾರ ದಿವಾಣಬಹಾದ್ದೂರ
ಸರ ಸಿದ್ದಪ್ಪ ತೋಟಪ್ಪ ಕಂಬಳಿಯವರು ಜೆ. ಪಿ.

ನಮ್ಮ ಕರ್ಣಾಟಕಕ್ಕೆ ಭೂಷಣಪ್ರಾಯರಾಗಿರುವ ಆನರೇಬಲ್ ದಿವಾಣ ಬಹಾದ್ದೂರ ಕಂಬಳಿಯವರ ಹೆಸರು ಕೇಳದ ಕನ್ನಡಿಗರಿಲ್ಲ; ಅವರ ಕೀರ್ತಿಯು ಬೆಳಕು ಪೀಠ ಸ್ಥಳವಿಲ್ಲ; ಎಂದರೆ ಅತಿಶಯೋಕ್ತಿಯಾಗಲಾರದು. ಹುಬ್ಬಳ್ಳಿಯ ಮುನಸಿ ಪಾಲಿ, ಧಾರವಾಡ ಡಿ. ಎಲ್. ಬಿ. ಇವುಗಳ ಅಧ್ಯಕ್ಷಪದದಲ್ಲಿಯೂ ಮುಂಬಯಿ ಕಾಯಿದೆಯ ಸಭಾಸದರಾಗಿಯೂ ಬಹುಕಾಲ ಪರಿಶ್ರಮ ಮಾಡಿದ ಮಹನೀಯರು ಸನ್ ೧೯೩೩ರಲ್ಲಿ ಮುಂಬಯಿ ಇಲಾಖೆಯ ಆಡಳಿತೆಯಲ್ಲಿ ಮಂತ್ರಿಪದಕ್ಕೆ ಏರಿದರು. ಮತ್ತು ಮರುವರ್ಷವೇ ಶಿಕ್ಷಣ ಖಾತೆಯ ಆಡಳಿತೆಯು ಅವರಿಗೆ ಒಪ್ಪಿಸಲ್ಪಟ್ಟಿತು. ಅಂದಿನಿಂದ ಇಂದಿನ ವರೆಗೂ ಇವರು ಮಾಡುತ್ತ ಬಂದಿರುವ ಜನಸೇವೆಯನ್ನು ಎಲ್ಲರೂ ಬಲ್ಲರು. ೧೯೩೭ನೆಯ ಇಸ್ವಿಯ ಹೊಸ ವರ್ಷದ ಪದವಿದಾನದ ಸಮಯದಲ್ಲಿ ನಮ್ಮ ಕನ್ನಡಿಗರೆಲ್ಲರಿಗೂ ಅತ್ಯಂತ ಅಭಿಮಾನ ಪಡಿಸುವಂತೆ ಬ್ರಿಟಿಶ ಸಾಮ್ರಾಜ್ಯದ ಬಾದಶಹರವರು ಈ ಮಹಾನುಭಾವರಿಗೆ 'ಸರ' ಎಂಬ ಅತ್ಯಂತ ಬಹುಮಾನಸೂಚಕವಾದ ಪದವಿಯನ್ನು ದಯಪಾಲಿಸಿರುವರು. ಸರಕಾರದವರು ಈ ಪದವಿಯನ್ನು ಅತ್ಯಂತ ಪ್ರತಿಷ್ಠೆಯನ್ನು ಪಡೆದವರ ಹೊರತು ಸಾಮಾನ್ಯ ಪ್ರತಿಷ್ಠಿತರಿಗೆ ಕೊಡುತ್ತಿರುವದಿಲ್ಲ. ಆದದ

ರಿಂದ ಈ ಪದವಿಯನ್ನು ಹೊಂದಿದವರು ತೀರ ವಿರಳ. ನಮ್ಮ ಉತ್ತರ ಕರ್ನಾಟಕಸ್ಥರಲ್ಲಿ ಬಹುಕಾಲದ ಹಿಂದೆ ಸರ ನಾರಾಯಣ ಚಂದಾವರಕರರೊಬ್ಬರು

ಈ ಗೌರವದ ಬಿರುದನ್ನು ಪಡದಿದ್ದರು. ವೀರಶೈವ ಸಮಾಜದಲ್ಲಿಯಂತೂ ಈ ಗೌರವದ ಪದವಿಯನ್ನು ಪಡೆದವರಲ್ಲಿ ಇವರೇ ಮೊದಲಿಗರು. ಲೋಕಲ ಬೋರ್ಡ, ಮುನಸಿಪಾಲಟಿ ಮುಂತಾದ ಸ್ಥಾನಿಕ ಸಂಸ್ಥೆಗಳಲ್ಲಿಯೂ, ಮುಂಬಯಿಯ ಕಾಯದ ಮಂಡಳದಲ್ಲಿಯೂ ಬಹುಕಾಲ ಬಹು ಪರಿಶ್ರಮ,

ಪೂರ್ವಕವಾಗಿ ಲೋಕಸೇವೆಯನ್ನು ಮಾಡಿದ್ದಲ್ಲದೆ ಐದಾರು ವರ್ಷಗಳಿಗಿಂತ ಹೆಚ್ಚು ಕಾಲ ಮುಂತ್ರಿಪದದಲ್ಲಿ ವಿರಾಜಮಾನರಾಗಿ, ರಾಜಪ್ರಜಾಮಾನ್ಯರಾಗಿ, ಬಹುಜನ ಸಮ್ಮತವಾಗುವಂತೆ ಕೆಲಸಮಾಡಿದ್ದರ ಕುರುಹೆಂದು ಸರಕಾರದವರು ನಾಡುದಾರ ಸಿದ್ದಪ್ಪನವರಿಗೆ ಇಂಥ ಬಹುಮಾನದ ಪದವಿಯನ್ನು ಅರ್ಪಿಸಿ, ಕನ್ನಡಿಗರನ್ನೂ ಕರ್ನಾಟಕ ಮಾತೆಯನ್ನೂ ಗೌರವಿಸಿದರೆಂದು ಹೇಳಲು ಅಭ್ಯಂತರವಿಲ್ಲ. ಇದು ಕನ್ನಡಿಗರಿಗೆಲ್ಲ ಅತ್ಯಂತ ಸಂತೋಷದ ಸಂಗತಿಯು. ದೇವರು ಕರ್ನಾಟಕ ಮಾತೆಯ ಪ್ರೀತಿಯ ವರಪುತ್ರರೆನಿಸಿಕೊಂಡಿರುವ ಈ ಮಹನೀಯರಿಗೆ ಇತೋಪ್ಯತಿಶಯವಾಗಿ ಗೌರವವನ್ನೂ ಆಯುರಾರೋಗ್ಯಭಾಗ್ಯಗಳನ್ನೂ ದಯಪಾಲಿಸಲೆಂದೂ, ಇವರಿಂದ ಕರ್ನಾಟಕ ಮಾತೆಯ ನಿಜವಾದ ಸೇವೆಯು ಅವಿರತವಾಗಿ ಸಾಗಲೆಂದೂ ಮನಃಪೂರ್ವಕವಾಗಿ ಕೋರುವೆವು.

ಕಾಲಮಾಪನ

ಕಳೆದ ವರ್ಷದಂತೆ ಈ ವರ್ಷವೂ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಒಂದು ವ್ಯಾಖ್ಯಾನ ಮಾಲೆಯು ಏರ್ಪಡಿಸಲ್ಪಟ್ಟಿತು. ಹಳ್ಳಿಯ ಜನಜೀವನಕ್ಕೆ ಸಂಬಂಧಿಸಿದ ಒಕ್ಕಲತನ, ಶಿಕ್ಷಣ, ಆರೋಗ್ಯ, ಮುಂತಾದ ಸರ್ವ ಸಾಮಾನ್ಯ ವಿಷಯಗಳೂ ಹಲಕೆಲವು ವಿಶಿಷ್ಟಜ್ಞಾನಕ್ಕೆ ಸಂಬಂಧಿಸಿದ ಮಾತುಗಳೂ ಉಪನ್ಯಾಸದ ವಿಷಯಗಳು. ಧಾರವಾಡದೊಳಗಿನ ಸುಶಿಕ್ಷಿತರಾದ ಸದ್ಗೃಹಸ್ಥರನೇಕರು, ಮುಂದೆ ಹಳ್ಳಿಗೆ ಹೋಗಿ ಶಿಕ್ಷಕರಾಗಲಿರುವ ನಮ್ಮ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವಾಗಲು ಬಯಸಿ ತಾವು ಅಭ್ಯಾಸಿಸಿದ ಇಂತಹ ಮಹತ್ವದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಲು ಒಪ್ಪಿಕೊಂಡಿರುವರು. ಆ ಮಹನೀಯರೆಲ್ಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುವದು ನಮ್ಮ ಕರ್ತವ್ಯವಾಗಿದೆ. ಈ ತಿಂಗಳಲ್ಲಿ ಈಗಾಗಲೇ ಆರೇಳು ವ್ಯಾಖ್ಯಾನಗಳು ಸಡೆದವು. ಕರ್ನಾಟಕ ಕಾಲೇಜಿನ ಪ್ರೊಫೆಸರರಲ್ಲೊಬ್ಬರಾದ ಶ್ರೀ. ಪಾಟೀಲ ತಿರುಮಲರಾಯರು ಜನವರಿ ತಿಂಗಳ ೩೧ನೆಯ ತಾರೀಖಿನ ದಿನ "ಕಾಲಮಾಪನ" ಎಂಬ ವಿಷಯದ ಮೇಲೆ ಬಹು ವಿಚಾರಪರಿಪ್ಲುತವಾಗಿಯೂ ಸರಸವಾಗಿಯೂ ಮಾತಾಡಿದರು. ಅವರ ಉಪನ್ಯಾಸದ ಮುಖ್ಯಾಂಶಗಳನ್ನು ಇಲ್ಲಿ ಕೊಟ್ಟಿರುವೆವು. ಇದಂತೆಯೇ ಮಿಕ್ಕ ಮಹನೀಯರ ಉಪನ್ಯಾಸಗಳ ಸಾರಾಂಶವನ್ನೂ ನಮ್ಮ ಪಾಠಕರ ಮುಂದಿಡಬೇಕೆಂಬ ವಿಚಾರವಿರುವದು.

ಕಾಲವೆಂದರೇನು? ಈ ಪ್ರಶ್ನೆಗೆ ಉತ್ತರ ಹೇಳುವದು ಸುಲಭವಲ್ಲ. ಇದು ಕಣ್ಣಿಗೆ ಕಾಣಿಸುವದಿಲ್ಲ, ಕಿವಿಗೆ ಕೇಳಿಸುವದಿಲ್ಲ, ಹಿಡಿಯಲಿಕ್ಕೆ ಸಾಧ್ಯವಿಲ್ಲ. ಇದರ ಅಸ್ತಿತ್ವವು ಕೂಡ ಸಂಶಯಾಸ್ಪದವೇ ಸರಿ. ಆದರೆ ಮನುಷ್ಯ ಪ್ರಾಣಿಯು ತನ್ನ ಕಲ್ಪನೆಯಿಂದ ಇದನ್ನು ಸೃಷ್ಟಿಸಿಕೊಂಡಿರುವನು. ಕೇವಲ ಕಲ್ಪನಾಸೃಷ್ಟಿಗೆ ಒಳಗಾದ ಈ ವಿಷಯವನ್ನು ವಿವೇಚನೆಮಾಡಲು ಹೊರಟಿರುವ ನಾವು ಕೆಲವು ಕಲ್ಪನೆಗಳನ್ನು ಅವಲಂಬಿಸಿಯೇ ಮುಂದೆ ಸಾಗಬೇಕಾಗುವದು. ಕಾಲವು ಎಲ್ಲಿ ಆರಂಭವಾಗಿ ಎಲ್ಲಿ ಮುಗಿಯುವದು ಎಂಬದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲ. ಇಂಥ ಅನಾದಿ ಅನಂತವಾದ ವಸ್ತುವಿನ ಅಳತೆ ಮಾಡುವದು ಹೇಗೆ? ನಾವು ಅಡಿಗಡಿಗೆ ಉಪಯೋಗಿಸುತ್ತಿರುವ ಕಾಲ, ವೇಳೆ, ಸಮಯ ಮುಂತಾದವುಗಳ ಅರ್ಥವೇನೆಂದು ಯಾರನ್ನಾದರೂ ಕೇಳಿದರೆ ಯಾರೂ ಅದಕ್ಕೆ ಸಮರ್ಪಕವಾದ ಉತ್ತರ ಕೊಡಲಾರರು. ಶಾಸ್ತ್ರಜ್ಞರು ಇದನ್ನು ಅವಧಿ (duration) ಎಂದು ಕರೆಯುವರು.

ನಾವು ಅಡಿಗಡಿಗೆ ಉಪಯೋಗಿಸುತ್ತಿರುವ ಹಲವು ಸಂಗತಿಗಳ ಮೂಲವು ಎಂದರೆ ಶಾಸ್ತ್ರೀಯ ವಿವೇಚನೆಯು ನಮಗೆ ಎಷ್ಟು ಮಾತ್ರವೂ ತಿಳಿದಿರುವದಿಲ್ಲ. ಹುಟ್ಟುಸಾವುಗಳನ್ನು ಕಾಣದಿರುವವರು ಯಾರು? ಹಾಗೆಯೇ ಅದರ ರಹಸ್ಯವನ್ನು ತಿಳಿದವರು ಎಷ್ಟು ಜನರಿರುವರು? ಗಣಿತ ಶಾಸ್ತ್ರದೊಳಗಿನ ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಸರಳರೇಖೆಯೆಂದರೇನು? ಗಣಿತ ಶಾಸ್ತ್ರದಲ್ಲಿ ಈ ಪ್ರಶ್ನೆಗೆ ಸಮರ್ಪಕವಾದ ಸುಲಭ ಉತ್ತರವೇ ಇಲ್ಲ. ಸರಳರೇಖೆಯೇ ಇಲ್ಲವೆಂದೂ ಅದು ಎಲ್ಲಿ ಆರಂಭವಾಗಿ ಎಲ್ಲಿ ಮುಗಿಯುವದೆಂದು ಹೇಳಲು ಸಾಧ್ಯವಿಲ್ಲವೆಂದೂ ಗಣಿತ ಶಾಸ್ತ್ರದ ವೇದಾಂತವು (Mathamatical Philosophy) ಹೇಳುವದು. ಭೂಮಿತಿ ಮೊದಲಾದವುಗಳಲ್ಲಿ ನಾವು ಒಂದು ನಿಯಮಿತ ಸರಳರೇಖೆಯನ್ನು ಎಳೆದು ಅದರ ಸಂಬಂಧದಿಂದಷ್ಟೇ ವಿಚಾರ ಮಾಡುತ್ತೇವೆ. ಅದರೆ ಆ ಸರಳರೇಖೆಯನ್ನು ಎರಡೂ ಕಡೆಗೆ ಬೆಳಿಸಬಹುದಷ್ಟೇ? ಹಾಗೆ ಬೆಳಿಸುತ್ತ ಹೋದರೆ ಅದು ಎಲ್ಲಿಯವರೆಗೆ ಬೆಳೆಯಬಹುದೆಂಬದನ್ನು ಕಲ್ಪಿಸಿದರೆ ನಮಗೆ ಈ ಮಾತಿನ ಸತ್ಯವು ಗೊತ್ತಾಗಬಹುದು. ಹಾಗೆಯೇ ಕಾಲದ ವಿಚಾರದಲ್ಲಿಯೂ ನಾವು ನಿರುತ್ತರರಾಗಬೇಕಾಗುವದು. ಅದು ಎಲ್ಲಿ ಆರಂಭವಾಗಿ ಎಲ್ಲಿ ಮುಗಿಯುವದೆಂಬದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲ.

ಮೇಲಣ ಕಲ್ಪನೆಯಂತೆ ಸರಳರೇಖೆಯು ಅನಾದಿ ಅನಂತವಾಗಿದ್ದರೂ ಅದರ ಯಾವುದು ನಿಯಮಿತ ಭಾಗವನ್ನು ನಾವು ಇಂಚು ಫೂಟು ಯಾರ್ಡು ಮೈಲುಗಳ

ಮುಂತಾದ ಪರಿಮಾಣಗಳ ಸಹಾಯದಿಂದ ಅಳೆದು ಹೇಳುತ್ತೇವೆ; ವ್ಯವಹಾರದಲ್ಲಿ ಅವನ್ನು ಉಪಯೋಗಿಸುತ್ತೇವೆ; ಲೆಕ್ಕ ಮಾಡುತ್ತೇವೆ. ಆ ಸಂದರ್ಭಗಳಲ್ಲಿ ನಾವು ಆ ಸರಳರೇಖೆಯ ಕೆಲವೊಂದು ಭಾಗವನ್ನು ಮಾತ್ರ ನಮ್ಮ ಲಕ್ಷ್ಯದಲ್ಲಿಟ್ಟು ಕೊಂಡು ಈ ಎಲ್ಲ ವಿಚಾರ ಮಾಡುವೆವೆಂದಹಾಗಾಯಿತಷ್ಟೇ? ಇದೇ ರೀತಿಯಾಗಿ ಕಾಲದ ವಿಷಯದಲ್ಲಿಯೂ ಕೆಲವೊಂದು ವಿಶಿಷ್ಟಭಾಗವನ್ನು ತೆಗೆದುಕೊಂಡು ಅದರ ಸಂಬಂಧದಿಂದಲೇ ವಿಚಾರಮಾಡಬೇಕಾಗುವದು.

ಕಾಲದ ಸಂಬಂಧದಿಂದ ವಿಚಾರ ಮಾಡುವಾಗ, ಅದರದೊಂದು ವಿಶಿಷ್ಟ ಧರ್ಮವು ನಮ್ಮ ಲಕ್ಷ್ಯಕ್ಕೆ ಮೊದಲು ಬರುವದು. ಅದು ಯಾವಾಗಲೂ ಚಲಿಸುತ್ತಿರುವದು; ಮುಂದೆ ಸಾಗುತ್ತಿರುವದು ಅದರ ಪ್ರಧಾನ ಧರ್ಮ. ಅದು ಎಂದೂ ಹಿಂದೆ ತಿರುಗುವದಿಲ್ಲ. ಕಳೆದ ಕಾಲವು ಎಂದೆಂದಿಗೂ ತಿರುಗಿ ಬರಲಾರದು. ವ್ಯವಹಾರದಲ್ಲಿ ನಾವು ಭೂತಕಾಲ ವರ್ತಮಾನಕಾಲ ಭವಿಷ್ಯತ್ಕಾಲಗಳೆಂದು ಮೂರು ಭಾಗಗಳನ್ನು ಕಲ್ಪಿಸುವೆವಾದರೂ ಅವುಗಳಲ್ಲಿ ಒಂದು ಎಲ್ಲಿಗೆ ಮುಗಿಯುವದೆಂಬದನ್ನಾಗಲಿ ಇನ್ನೊಂದು ಎಲ್ಲಿ ಆರಂಭವಾಗುವದೆಂಬದನ್ನಾಗಲಿ ಯಾರೂ ಹೇಳಲು ಸಾಧ್ಯವಿಲ್ಲ. ಭೂತಕಾಲವು ನಮ್ಮ ಕೈಮೀರಿ ಹೋಗಿರುವದರಿಂದ ಅದು ನಮ್ಮ ಕೈಯಲ್ಲಿರುವದಿಲ್ಲ. ಭವಿಷ್ಯದ ಒಡಲಲ್ಲಿ ಏನಿರುವದೋ ಹೇಳುವದು ನಮ್ಮ ಬುದ್ಧಿಶಕ್ತಿಗೆ ಅಗಮ್ಯವಾದ ವಿಷಯವಾಗುವದು. ಇನ್ನುಳಿದುದು ವರ್ತಮಾನಕಾಲ. ಅದರ ಅಳತೆಯು ಎಷ್ಟು? ಭೂತಕಾಲವು ಎಲ್ಲಿ ಮುಗಿಯಿತು, ವರ್ತಮಾನವು ಯಾವದು, ಭವಿಷ್ಯವು ಯಾವಾಗ ಪ್ರಾರಂಭವಾಗುವದು, ಎಂಬ ಮಾತೇ ಅತಿ ಸಂದಿಗ್ಧವಾಗಿರುವದರಿಂದ ನಾವು ಇಲ್ಲಿಯೂ ನಿರುತ್ತರರಾಗಬೇಕಾಗುವದು.

ಸಂತತವಾಗಿ ಸಮವೇಗದಿಂದ ನಡೆಯುತ್ತಿರುವ ಸೃಷ್ಟಿಕಾರ್ಯಗಳನ್ನು ಅವಲಂಬಿಸಿ ನಾವು ಕಾಲದ ಕಲ್ಪನೆಯನ್ನು ಮಾಡಬೇಕಾಗುವದು. ಆ ಕಾರ್ಯಗಳು ನಮ್ಮ ಕಣ್ಣಿಗೆ ಕಾಣಿಸುತ್ತಿರಬೇಕು, ಅಥವಾ ಕಿವಿಗೆ ಕೇಳಿಸುತ್ತಿರಬೇಕು. ಆ ಕಾರ್ಯವು ಮಿಂಚಿನಂತೆ ಅತಿ ತೀವ್ರವಾಗಿಯೂ ನಡೆಯಬಾರದು; ಅಥವಾ ಅತಿ ಸಾವಕಾಶವಾಗಿಯೂ ನಡೆಯಬಾರದು. ಸೃಷ್ಟಿಯಲ್ಲಿ ಸಂತತವಾಗಿಯೂ ಸಮವೇಗದಿಂದಲೂ ನಡೆಯುವ ಕಾರ್ಯಗಳಲ್ಲಿ ಸೂರ್ಯೋದಯ ಸೂರ್ಯಾಸ್ತಗಳು ನಮ್ಮ ದೃಷ್ಟಿಯನ್ನು ಮೊದಲು ತಮ್ಮ ಕಡೆಗೆ ಸೆಳೆಯುವವು. ಸೂರ್ಯೋದಯದಿಂದ ಪುನಃ ಸೂರ್ಯೋದಯದ ವರೆಗಿನ (ಉದಯಾದುದಯಂವಾರಂ) ಕ್ರಿಯೆಯು ಒಂದು ದಿನವೆನಿಸುವದು. ಹಾಗೆಯೇ ಬೇರೆ ಬೇರೆ ಋತುಮಾನಗಳು

ತಿರುಗಿ ತಿರುಗಿ ಬರುವ ಅವಧಿಯು – ಪೃಥ್ವಿ ಸೂರ್ಯನ ಸುತ್ತಲೂ ಒಂದು ಪ್ರದಕ್ಷಿಣೆ ಮಾಡುವ ಅವಧಿಯು – ಒಂದು ವರ್ಷವು. ಮಿಕ್ಕ ಕಾಲಮಾಪಕ ಪರಿಮಾಣಗಳೆಲ್ಲಾ ಇವುಗಳು ಪಟ್ಟುಗಳು ಇಲ್ಲವೆ ಪಾಲುಗಳು.

ಕಾಲಮಾಪನದ ಉಪಕರಣಗಳಲ್ಲಿ ಉಸುಕಿನ ಗಡಿಯಾರ, ನೀರಿನ ಗಡಿಯಾರ, ನೆಳಲಿನ ಗಡಿಯಾರ (Sundial) ಆಂದೋಲಕ (ಸಾಂಪ್ರತ ಕಾಲದ ಗಡಿಯಾರಗಳ ರಚನೆಯಲ್ಲಿ ಆಂದೋಲಕವೇ ಮುಖ್ಯವಾಗಿದೆ) ಮುಂತಾದವು ಮುಖ್ಯವಾಗಿವೆ. ಈ ಎಲ್ಲ ಉಪಕರಣಗಳಲ್ಲಿ " ಒಂದು ಕಾರ್ಯವು ನಿಶ್ಚಿತ ವೇಗದಿಂದ ಸಂತತವಾಗಿ ನಡೆಯುವದು. " ಎಂಬ ತತ್ವವೇ ಪ್ರಾಮುಖ್ಯವಾಗಿರುವದು. ಉಸುಕಿನ ಗಡಿಯಾರವನ್ನು ಅನೇಕರು ನೋಡಿರಬಹುದು. ಗಳಿಗೆ ಬಟ್ಟಲವು ನೀರಿನ ಗಡಿಯಾಳದ ಉದಾಹರಣೆಯಾಗಬಹುದು. " ಅಡಿಯನಿಮ್ಮಡಿ ಮಾಡಿ ಹನ್ನೊಂದನೊಡಗೂಡಿ ಇನ್ನೂರ ಹತ್ತಕ್ಕೆ ಭಾಗಿಸಲು " ಬರುವ ಸಂಖ್ಯೆಯು ಗಳಿಗೆಯಾಗುವದೆಂಬ ಸರ್ವಜ್ಞನ ವಚನವು ಒಂದುಬಗೆಯ ನೆಳಲಿನ ಗಡಿಯಾಳವೆನಿಸಬಹುದಾದರೂ ಸದ್ಯದ ಶಾಸ್ತ್ರೀಯ ತತ್ವವನ್ನು ಅವಲಂಬಿಸಿ ತಯಾರಿಸಿದ ನೆಳಲಿನ ಗಡಿಯಾರಗಳು ಬೇರೆಯಾಗಿರುವವು. ಸೂರ್ಯನಿರುವಾಗ ಅವು ನಿಶ್ಚಿತ ವೇಳೆಯನ್ನು ತೋರಿಸುವವು. ಆಂದೋಲಕದ ಚಾಲನೆಯನ್ನು ಆಧಾರವಾಗಿಟ್ಟುಕೊಂಡು ಸದ್ಯದ ಎಲ್ಲ ಗಡಿಯಾಳಗಳು ರಚಿತವಾಗಿರುವವು.

ನಾವು ವ್ಯವಹಾರದಲ್ಲಿ ಉಪಯೋಗಿಸುವ ದಿವಸ ತಿಂಗಳು ವರ್ಷ ಇವು ಶಾಸ್ತ್ರಜ್ಞರ ದೃಷ್ಟಿಯಿಂದ ತುಂಬ ಅನಿಯಮಿತವಾಗಿವೆ. ಸಾಮಾನ್ಯರ ಕಲ್ಪನೆಯಂತೆ ಒಂದು ಹಗಲು ಒಂದು ರಾತ್ರಿ ಕೂಡಿ ಒಂದು ದಿವಸವಾಗುವದು. ಆದರೆ ಇದರಲ್ಲಿ ಹಗಲಿನಷ್ಟೇ ರಾತ್ರಿಯಿರುವದಿಲ್ಲ. ಒಂದು ಹಗಲು ಒಂದು ರಾತ್ರಿ ಕೂಡಿ ಆಗುವ ಅಳತೆಯು ಕೂಡ ಎಲ್ಲ ಋತುಗಳಲ್ಲಿಯೂ ಅಷ್ಟೇ ಇರುವದಿಲ್ಲ. ಬೇರೆ ಬೇರೆ ತಿಂಗಳುಗಳಲ್ಲಿ ಈ ಅವಧಿಯು ಬೇರೆ ಬೇರೆ ಇರುವದು. ಇವುಗಳಲ್ಲಿ ೧೨ ರಿಂದ ೧೫ ನಿನಿಟುಗಳ ವರೆಗೆ ಅಂತರವಿರುವದು. ಆದ್ದರಿಂದ ಮೇಲೆ ಹೇಳಿದ (ಉದಯಾಮದಯಂವಾರಂ) ಸೂರ್ಯೋದಯದಿಂದ ಸೂರ್ಯೋದಯದ ವರೆಗಿನ ಅವಧಿಯು ಒಂದು ದಿವಸವೆಂಬ ಮಾತು ಶಾಸ್ತ್ರಜ್ಞರಿಗೆ ಸಮ್ಮತವಾಗುವದಿಲ್ಲ. ಅವರು ಮಧ್ಯಾಹ್ನದಿಂದ ಮಧ್ಯಾಹ್ನದವರೆಗಿನ ಅವಧಿಯು ಒಂದು ದಿನವೆಂದು ಹೇಳುವರು. ಮಧ್ಯಾಹ್ನವೆಂದರೆ ಸೂರ್ಯನು ನೆತ್ತಿಯಮೇಲೆ ಬರುವ ವೇಳೆಯಲ್ಲ. ಭೂಮಿಯ ಬಹುಭಾಗದಲ್ಲಿ ಸೂರ್ಯನು ನೆತ್ತಿಯಮೇಲೆ ಬರುವದೇ ಇಲ್ಲ. ಸೂರ್ಯನು ಮಧ್ಯಾಹ್ನ ರೇಖೆಯ ಮೇಲೆ ಬಂದಾಗ ಮಧ್ಯಾಹ್ನವಾಗ್ದು

ವದು. ಮಧ್ಯರಾತ್ರಿಯಿಂದ ಮಧ್ಯರಾತ್ರಿಯವರೆಗಿನ ಕಾಲವು ಒಂದು ದಿನವೆಂದು ಕೆಲವು ಕಂಪನಿಯವರ ಗಡಿಯಾಳವು ಹೇಳುವದು. ಆ ಗಡಿಯಾಳಗಳಲ್ಲಿ ೧ ರಿಂದ ೨೪ರವರೆಗೆ ಅಂಕಿಗಳಿರುವದನ್ನು ನಾವು ನೋಡಬಹುದು. ಈ ದಿನಮಾನದಲ್ಲಿಯೂ ಸ್ವಲ್ಪ ಅಂತರವಿರುವದು. ಉದಯದಿಂದ ಉದಯದವರೆಗೆ ದಿನವೆಂದು ಎಣಿಸಿದಾಗ ೧೨-೧೫ ನಿಮಿಷಗಳ ಅಂತರವು ಹೊರಡುತ್ತಿದ್ದರೆ ಮಧ್ಯಾಹ್ನದಿಂದ ಮಧ್ಯಾನ್ನದವರೆಗೆ ದಿನವೆಂದು ಎಣಿಸಿದಾಗ ಅದಕ್ಕಿಂತ ಸ್ವಲ್ಪ ಕಡಿಮೆ ಅಂತರವು ಹೊರಡುವದು. ಆದ್ದರಿಂದ ದಿನಗಣನೆಗೆ ಸೂರ್ಯನ ಚಲನೆಯನ್ನೇ ಆಧಾರವಾಗಿಟ್ಟುಕೊಳ್ಳದೆ ಸೂರ್ಯನ ಹತ್ತಿರವೇ ಇರುವ ನಿಯಮಿತ ಚಲನೆಯುಳ್ಳ ಒಂದು ಬಿಂದುವನ್ನು ಮಾಧ್ಯಮಿಕ ಸೂರ್ಯವೆಂದು ಕಲ್ಪಿಸಿ ಆ ಮಾಧ್ಯಮಿಕ ಸೂರ್ಯನು ಮಧ್ಯಾಹ್ನ ರೇಷೆಗೆ ಬಂದಾಗ ನಿಜ ಮಧ್ಯಾಹ್ನವಾಗುವದೆಂದು ತಿಳಿಯುವರು. ನಕ್ಷತ್ರದ ಚಲನೆಯಿಂದ ಗೊತ್ತುಮಾಡಿದ ನಾಕ್ಷತ್ರ ದಿವಸವು ಹೆಚ್ಚು ಶುದ್ಧವಾದದ್ದೆಂದು ಶಾಸ್ತ್ರಜ್ಞರು ತಿಳಿಯುವರು. ಕೆಲವೊಂದು ನಕ್ಷತ್ರವು ಮಧ್ಯಾಹ್ನ ರೇಷೆಯಮೇಲೆ ಬರುವ ಅವಧಿಯು ನಾಕ್ಷತ್ರ ದಿವಸವೆಂದು ತಿಳಿಯಲಾಗಿದೆ. ವೇಧಶಾಲೆಗಳಲ್ಲಿ ಈ ನಾಕ್ಷತ್ರ ದಿವಸವನ್ನೇ ಉಪಯೋಗಿಸುವದು. ದಿವಸದ ಭಾಗಗಳಾದ ತಾಸು, ಗಳಿಗೆ ನಿಮಿಷ ಸೇಕಂಡು ಇವೆಲ್ಲ ಮನುಷ್ಯನು ಕೇವಲ ತನ್ನ ಅನುಕೂಲಕ್ಕಾಗಿ ಕಲ್ಪಿಸಿಕೊಂಡ ಕಾಲಯಾಪಕ ಪರಿಮಾಣಗಳು.

ದಿನಮಾನದಂತೆ ವರ್ಷವೂ ಕೂಡ ಸೃಷ್ಟಿಯಿಂದಲೇ ಹುಟ್ಟಿದ್ದಾಗಿರುವದು. ಪೃಥ್ವಿಯು ಸೂರ್ಯನ ಸುತ್ತಲು ಒಂದು ಪ್ರದಕ್ಷಣೆ ಮಾಡಲಿಕ್ಕೆ ಬೇಕಾಗುವ ಅವಧಿಯು ಒಂದು ವರ್ಷವೆನಿಸುವದು. ಈ ಅವಧಿಯು ಸುಮಾರು ೩೬೫ ದಿವಸ ೬ ತಾಸು ೯ ನಿ. ಎಂದು ತಿಳಿಯಲ್ಪಡುವದು. ವರ್ಷದ ಹನ್ನೆರಡನೇ ಭಾಗವು ಒಂದು ತಿಂಗಳವೆನಿಸುವದು. ಈ ಲೆಕ್ಕದಿಂದ ನೋಡಿದರೆ ಒಂದು ತಿಂಗಳಿಗೆ ಪೂರ್ಣ ದಿವಸಗಳು ಬರದೆ ಅಪೂರ್ಣ ದಿವಸಗಳು ಬರಬೇಕಾಗುವದು. ಇದರಿಂದ ವ್ಯವಹಾರದಲ್ಲಿ ಅನವಸ್ಥೆಯುಂಟಾಗಬಹುದು. ನಮ್ಮವರು ೩೦ ದಿವಸಗಳಿಗೆ ಒಂದು ತಿಂಗಳೆಂದು ತಿಳಿಯುವರು. ಆದರೆ ಅದು ಸರಿಯಲ್ಲ. ಇಂಗ್ಲಿಷರು ೩೬೫ ದಿವಸಗಳನ್ನು ೧೨ ಭಾಗಗಳಾಗಿ ವಿಭಾಗಿಸಿ ಒಂದು ತಿಂಗಳವೆಂದು ಗೊತ್ತುಮಾಡಿರುವರು. ಒಂದು ತಿಂಗಳಿಗೆ ೨೮-೩೧ ದಿವಸಗಳನ್ನೂ ಏಕ್ಕವುಗಳಲ್ಲಿ ಕೆಲವಕ್ಕೆ ೩೦ ಕೆಲವಕ್ಕೆ ೩೧ ದಿವಸಗಳನ್ನೂ ಕಲ್ಪಿಸಿರುವರು. ಆದರೂ ಮೇಲೆ ೬ ತಾಸು, ೯ ನಿ. ಗಳು ಉಳಿದೇ ಉಳಿದವು. ನಮ್ಮವರು ಪೂರ್ಣ ಚಂದ್ರ (ಹುಣ್ಣಿವೆ) ನಿಂದ ಪೂರ್ಣ ಚಂದ್ರನಿಗೆ ಒಂದು ತಿಂಗಳೆಂದು ತಿಳಿಯುವರು. ಇದರಿಂದ ೨೯½ ದಿವಸಕ್ಕೆ

ಒಂದು ತಿಂಗಳಾಯಿತು. ಹೀಗಾದ್ದರಿಂದ ತಿಥಿಗೂ ತಾರೀಖಿಗೂ ಸಂಬಂಧವು ತಪ್ಪಿ ಹೋಯಿತು. ಚಾಂದ್ರಮಾನದ ವರ್ಷಕ್ಕೆ ೩೫೪ ದಿವಸಗಳಾಗುವವು. ಚಾಂದ್ರ ವರ್ಷಕ್ಕೂ ಸೌರ ವರ್ಷಕ್ಕೂ ಸ್ಥೂಲಮಾನದಿಂದ ೧೧ ದಿನಗಳ ಅಂತರ ಒಂದು ಈ ಅಂತರವನ್ನು ಹೊಂದಿಸಿಕೊಳ್ಳಲಿಕ್ಕೆ ೩೨ ತಿಂಗಳಿಗೆ ಒಂದರಂತೆ ಅಧಿಕಮಾಸವನ್ನು ಮಾಡತೊಡಗಿದರು. ಈ ಗಣನೆಯಲ್ಲಿ ಸುಮಾರು ೬೦ ವರ್ಷಕ್ಕೆ ಒಂದು ಕ್ಷಯಮಾಸವು ಬರಬೇಕಾಗುವದು.

ರೋಮನ್ನರ ಕಾಲಕ್ಕೆ ೩೦ ದಿನಗಳ ೧೦ ತಿಂಗಳೆಂದರೆ ಒಂದು ವರ್ಷವೆಂದು ತಿಳಿಯಲ್ಪಡುತ್ತಿದ್ದವಂತೆ. ಜುಲೈ ಆಗಷ್ಟ ಈ ಎರಡು ತಿಂಗಳುಗಳೇ ಇರಲಿಲ್ಲ. ಸಪ್ಟಂಬರವು ವರ್ಷದ ಏಳನೆಯ ತಿಂಗಳೆಂದು ತಿಳಿಯಲ್ಪಡುತ್ತಿತ್ತು. ಜೂಲಿಯಸ್ ಸೀಝರನಿಂದ ಜುಲೈ ತಿಂಗಳವೂ ಆಗಷ್ಟಸನಿಂದ ಆಗಷ್ಟ ತಿಂಗಳವೂ ಪ್ರಚಾರದಲ್ಲಿ ಬಂದವು. ಆಗ ೩೬೫ ದಿವಸಗಳ ಒಂದು ವರ್ಷವಾಯಿತು. ಆದರೆ ಮೇಲೆ ಹೇಳಿದ ೫ ತಾಸು ೪೯ ಮಿನೀಟುಗಳಿಗಿಂತಲೂ ಹೆಚ್ಚಿನ ಅಂತರದ ಮೂಲಕ ೧೪೦೦ ವರ್ಷಗಳಲ್ಲಿ ೧೧ ದಿನಗಳ ಅಂತರವು ಹೊರಟಿತು. ಪೋಪಗ್ರೆಗರಿಯ ಕಾಲಕ್ಕೆ ಒಮ್ಮೆ ಸಪ್ಟಂಬರ ತಿಂಗಳಲ್ಲಿ ೩೫ನೆಯ ತಾರೀಖು ಆದ ಮರುದಿವಸವೇ ಸಪ್ಟಂಬರ ತಿಂಗಳ ೧೪ ತಾರೀಖು ಎಂದು ಎಣಿಸಲ್ಪಟ್ಟು ಈ ಹನ್ನೊಂದು ದಿನಗಳ ಅಂತರವನ್ನು ಕಡಿದುಹಾಕಿದರು. ಈ ರೀತಿಯಾಗಿ ಶಾಸ್ತ್ರಜ್ಞರು ಸೂರ್ಯ ಚಂದ್ರರ ಗತಿಯೊಂದನ್ನೇ ಅಲ್ಲದೆ ಮಿಕ್ಕ ಅನೇಕ ಸಂಗತಿಗಳನ್ನು ಅವಲೋಕಿಸಿ ಕಾಲಮಾಪನ ಕಾರ್ಯವನ್ನು ಸಶಾಸ್ತ್ರೀಯವಾಗಿ ಸಾಗಿಸುತ್ತಿದ್ದಾರೆ. ಅಧಿಕಮಾಸದಂತೆಯೇ ಇಂಗ್ಲಿಷು ಕಾಲಗಣನೆಯಲ್ಲಿ ೪ ವರ್ಷಕ್ಕೊಮ್ಮೆ ಒಂದು ಅಧಿಕ ದಿವಸವು ಬರುವದು. ಆ ವರ್ಷ ಫೆಬ್ರುವರಿ ತಿಂಗಳಿಗೆ ೨೯ ದಿವಸಗಳಾಗುವವು. ಇಸ್ವಿಯನ್ನು ಹೇಳುವ ಸಂಖ್ಯೆಗೆ ೪ ರಿಂದ ಭಾಗಹೋಗುವ ವರ್ಷ (ಉದಾ– ೧೯೩೬+೪=೧೯೪೦) ದಲ್ಲಿ ಒಂದು ದಿವಸ ಹೆಚ್ಚಾಗುವದು. ಇಸ್ವಿಯ ಸಂಖ್ಯೆಗೆ ೪೦೦ ರಿಂದ ಭಾಗ ಹೋಗುವ ವರ್ಷದಲ್ಲಿ ಇನ್ನೂ ಒಂದು ದಿವಸ ಹೆಚ್ಚಿಗೆ ದಿವಸವಾಗುವದು.

ವಾರವು ಕಾಲಗಣನೆಯ ಸಾಧನಗಳಲ್ಲಿ ಒಂದೆಂದು ಎಣಿಸಲ್ಪಡುತ್ತಿದ್ದರೂ ತಿಂಗಳಿಗಾಗಲಿ ವರ್ಷಕ್ಕಾಗಲಿ ಇದರ ಪೂರ್ಣ ಸಂಬಂಧವು ಹತ್ತುತ್ತಿರುವದಿಲ್ಲ ಎಂದರೆ ಇಷ್ಟು ಪೂರ್ಣ ವಾರವೆಂದರೆ ಒಂದು ತಿಂಗಳ ಅಥವಾ ಇಷ್ಟು ಪೂರ್ಣ ವಾರವೆಂದರೆ ಒಂದು ವರ್ಷ ಎಂದು ಹೇಳಲು ಸಾಧ್ಯವಿಲ್ಲ. ವಾರಗಳ ಹೆಸರುಗಳ ಉಪಪತ್ತಿಯ ವಿಚಾರವು ನಮ್ಮವರಿಗೆ ಹೊಸದಲ.

ಇಂಗ್ಲಂಡದಲ್ಲಿ ಶಾರೀರಿಕ ಶಿಕ್ಷಣ

ಇಂಗ್ಲಂಡದಲ್ಲಿ ದೇಶದ ಶಾರೀರಿಕ ಬಲವನ್ನು ಹೆಚ್ಚಿಸುವದಕ್ಕಾಗಿ ಸರಕಾರದವರು ಒಂದು ಯೋಜನೆಯೆನ್ನು ಸಿದ್ಧಪಡಿಸಿ ಫೆಬ್ರುವರಿ ತಿಂಗಳ ಳನೆಯ ತಾರೀಖಿನ ದಿನ ಬಂದು ಪ್ರಕಟನೆಯನ್ನು ಹೊರಡಿಸಿರುವರು. ಅದರಲ್ಲಿ ದೇಶದ ಪ್ರಜೆಗಳೆಲ್ಲರಿಗೂ ತಮ್ಮ ಇಚ್ಛಾನುಕೂಲತೆಯ ಮೇರೆಗೆ ಶಾರೀರಿಕ ಶಿಕ್ಷಣವನ್ನು ಹೊಂದಲು ಅನುಕೂಲತೆಯನ್ನು, ಸರಕಾರದಿಂದ ೫೦ ಲಕ್ಷ ಪೌಂಡುಗಳನ್ನು ಬೆಚ್ಚ ಮಾಡಿ, ಕಲ್ಪಿಸಲಾಗಿದೆಯೆಂದು ಸಾರಿದ್ದಾರೆ.

ಶಾಲೆ ಕಾಲೇಜಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಶಾರೀರಿಕ ಶಿಕ್ಷಣಕ್ಕಾಗಿ ಈಗಾಗಲೇ ಸಾಕಾದಷ್ಟು ಅನುಕೂಲವು ಕಲ್ಪಿಸಲ್ಪಟ್ಟಿದ್ದು ಸರಕಾರದವರು ಅದನ್ನು ಸಾಧ್ಯವಿದ್ದ ಮಟ್ಟಿಗೂ ಉಪಯೋಗಮಾಡಿಕೊಳ್ಳುವರು. ಆದರೂ ದೇಶದ ಶರೀರ ಸಂಪತ್ತು ಸರಿಯಾಗಿ ಅಭಿವೃದ್ಧಿಹೊಂದಬೇಕಾದರೆ ಕಾರಖಾನೆಗಳಲ್ಲಿಯೂ ಕಚೇರಿಗಳಲ್ಲಿಯೂ ಕೆಲಸಮಾಡಿ ದಿನಗಳೆಯುತ್ತಿರುವ ತರುಣರಿಗೂ ಪ್ರಬುದ್ಧರಿಗೂ ಶಾರೀರಕ ಶಿಕ್ಷಣವನ್ನು ಕೊಡಲು ಸಾಕಾದಷ್ಟು ಅನುಕೂಲತೆಯನ್ನು ಕಲ್ಪಿಸಿ ಕೊಡುವದು ಅವಶ್ಯವೆಂದೂ ಹಾಗೆ ಮಾಡದೆ ಇದ್ದರೆ ದೇಶದ ಶಾರೀರಬಲವು ಬೆಳೆಯಲು ಸಾಕಷ್ಟು ಅನುಕೂಲತೆ ಮಾಡಿಕೊಟ್ಟಂತಾಗುವದಿಲ್ಲವೆಂದೂ ಸರಕಾರದ ಲಕ್ಷ್ಯಕ್ಕೆ ಬಂದಿರುವದು.

ಲೋಕಲ್‌ಬೋರ್ಡ ಮುನಸಿಪಾಲಟಿಗಳಂಥ ಸ್ಥಾನಿಕ ಸಂಘಗಳೂ ಬೇರೆ ಬೇರೆ ಊರುಗಳಲ್ಲಿರುವ ಖಾಸಗೀ ಸಂಸ್ಥೆಗಳೂ ಹೀಗೆ ಪ್ರಬುದ್ಧರಾದವರ ಶಾರೀರಿಕ ಶಿಕ್ಷಣಕ್ಕಾಗಿ ಪ್ರಯತ್ನಮಾಡುತ್ತಿರುವವು. ಆದರೆ ಆ ಸಂಸ್ಥೆಗಳಿಗೆ–ವಿಶೇಷವಾಗಿ ಬಡಜನರು ವಾಸವಾಗಿರುವ ಸ್ಥಳಗಳಲ್ಲಿರುವಂಥವುಗಳಿಗೆ–ಆಗಾಗ ಹಣದ ಕೊರತೆಯುಂಟಾಗಿ ಅವುಗಳ ಕಾರ್ಯಕ್ರಮವು ಸರಿಯಾಗಿ ನಡೆಯುತ್ತಿರುವದಿಲ್ಲ. ಅಲ್ಲದೆ ಅಂಥ ಎಲ್ಲ ಸಂಸ್ಥೆಗಳು ಪರಸ್ಪರ ಸಹಕಾರ ಸಹಾನುಭೂತಿಗಳಿಂದ ಕೆಲಸ ಮಾಡುತ್ತಿರುವದಿಲ್ಲ. ಆದ್ದರಿಂದ ಇದಕ್ಕಾಗಿ ಸರಕಾರದವರು ಸದ್ಯಕ್ಕೆ ಎರಡು ನ್ಯಾಶನಲ್ ಎಡ್ವಯಜರಿ ಕೌನ್ಸಿಲ್ಲು (ಮಾರ್ಗದರ್ಶಕ ಸಭೆ)ಗಳನ್ನು ಸ್ಥಾಪಿಸುವರು. ಅವುಗಳಲ್ಲಿ ಒಂದು ಇಂಗ್ಲಂಡ ಮತ್ತು ವೇಲ್ಸಗಳಿಗೆ ಕೂಡಿ; ಇನ್ನೊಂದು ಸ್ಕಾಟಲಂಡಕ್ಕೆ. ಇವೆಲ್ಲದೆ ಸಹಾಯಕ ದ್ರವ್ಯವನ್ನು ಹೊಂದಿಸಿಕೊಡುವದಕ್ಕಾಗಿ ಎರಡು

ಕಮೀಟಿಗಳು ಸ್ಥಾಪಿಸಲ್ಪಡುವ ಸಂಭವವದೆ. ಇವು ಬೇರೆ ಬೇರೆ ಸಂಸ್ಥೆಗಳಿಗೆ ಹಣವನ್ನು ಹಂಚಿಕೊಡುವ ಕೆಲಸವನ್ನು ಮಾಡುವವು. ಅಲ್ಲದೆ ಅಲ್ಲಲ್ಲಿ ಸ್ಥಾಪಿಸಲ್ಪಡುವ ಸ್ಥಾನಿಕ ಕಮೀಟಿಗಳು ಜನತೆಯ ಲಕ್ಷ್ಯವನ್ನು ಈ ವಿಷಯದ ಕಡೆಗೆ ಎಳೆದು ಚಳವಳಿ ಮಾಡುವವು.

ಸರಕಾರದವರು ಈ ವಿಷಯದ ಶಿಕ್ಷಕರನ್ನು ತಯಾರಿಸುವದಕ್ಕಾಗಿ ಒಂದು ನ್ಯಾಶನಲ್ ಕಾಲೇಜವನ್ನು ಪ್ರಾರಂಭಿಸುವರು. ಗರಡಿಯ ಮನೆಗಳನ್ನೂ ಆಟದ ಬೈಲುಗಳನ್ನೂ ಈಸುವ ಚಿಕ್ಕಕೆರೆಗಳನ್ನೂ ಬಯಲುಗಳನ್ನೂ ಒದಗಿಸಿಕೊಡುವದು ಸರಕಾರದ ಮುಖ್ಯ ಉದ್ದೇಶವಾಗಿರುವದು. ಈ ಯೋಜನೆಯನ್ನು ಸರಿಯಾಗಿ ಅಮಲಿನಲ್ಲಿ ತರುವದಕ್ಕಾಗಿ ಸರಕಾರದವರು ಬೇರೊಂದು ಕಾಯದೆಯನ್ನು ಮಾಡ ತಕ್ಕವರಿದ್ದಾರೆ. ಈ ಎಲ್ಲ ಕಾರ್ಯಕ್ಕಾಗಿ ಮೂರು ವರ್ಷಗಳಲ್ಲಿ ಕೂಡಿ ೨೦ ಲಕ್ಷ ಪೌಂಡು ವೆಚ್ಚಮಾಡುವದಲ್ಲದೆ ಪ್ರತಿವರ್ಷ ೧ಲಕ್ಷ ೫೦ಸಾವಿರ ಪೌಂಡುಗಳಂತೆ ವಾರ್ಷಿಕ ವೆಚ್ಚವನ್ನೂ ಮಾಡಬೇಕೆಂದು ಸರಕಾರದವರು ನಿರ್ಣಯಿಸಿದ್ದಾರೆ ಯಿಕ್ಕ ದೇಶಗಳಿಗೂ ಈ ಮಾತು ಅನುಕರಣೀಯವೆಂಬದನ್ನು ನಾವು ಒಡೆದು ಹೇಳಬೇಕಾಗಿಲ್ಲ.

ಉಪವಾಸ

—೦೦೫೦೦—

ಲೇಖಕ:— ಗಂ. ಚಿ. ಮಠದ ೩ನೆಯ ವರ್ಷದ ವಿದ್ಯಾರ್ಥಿ ಟ್ರೇ. ಸ್ಕೂ. ಧಾರವಾಡ.

ಪ್ರತಿಯೊಂದು ಧರ್ಮದಲ್ಲಿ ಆಚಾರಕ್ಕೇ ಪ್ರಾಧಾನ್ಯ. ಆಚಾರವೇ ಆರೋಗ್ಯ ವೆಂಬುವದು ಬಲ್ಲವರ ನುಡಿ. ಹಿಂದುಗಳಲ್ಲಿ ಶಿವರಾತ್ರಿಯ ವ್ರತ, ಏಕಾದಶಿಯ ವ್ರತ ಮುಂತಾದವು ಸೇರಿಸಲ್ಪಟ್ಟು ಅವುಗಳ ಆಚರಣೆಯನ್ನು ಬಲಪಡಿಸಲಿಕ್ಕೆ "ಶಿವರಾತ್ರಿ ದಿನೀ ಉಪಾಸ ಕರೀಲ ॥ ತಯಾಜೆ ಜಾಯೀಲ ಸರ್ವಪಾಪ... ಅದರಂತೆ ವರಂ ಸ್ವಮಾತೃಗಮನಂ ವರಂ ಬ್ರಾಹ್ಮಣ ಮಾರಣಂ - ಏಕಾದಶಿ ದಿನೇ ನೈವ ವರಮನ್ನಸ್ಯ ಭಕ್ಷಣಂ" ॥ ಮುಂತಾಗಿ ಮುನ್ನಿನ ಮಹಾತ್ಮರು ನುಡಿದರು ಮತ್ತು ನಡೆದರು. ಇಜಿಪ್ಶಿಯನ್ನರ ಪೂರ್ವಾಚಾರ್ಯರೂ ಜ್ಯೂ ಜನ ಶಾಸ್ತ್ರಕಾರರೂ ಉಪವಾಸವನ್ನು ಆಚರಿಸಿದರು; ಹಾಗು ಶಾಸ್ತ್ರಗಳಲ್ಲಿ ವಿಧಿಸಿದರು ಮುಸಲ್ಮಾನರಲ್ಲಿಯೂ ಹೀಗೆಯೇ ಇದೆ. ಇದರಿಂದ ಆರೋಗ್ಯಕ್ಕೇನು ಎಂದು ಆಯುರ್ವೇದಾಚಾರ್ಯರು 'ಲಂಘನಂ ಪರಮೌಷಧಂ' ಎಂದು ಉತ್ತರವನ್ನೀಯುವರು.

ಪಶುಪಕ್ಷ್ಯಾದಿಗಳು ಶರೀರವು ಅಸ್ವಸ್ಥವಿದ್ದಾಗ ಆಹಾರವನ್ನು ತೆಗೆದು ಳ್ಳುವದಿಲ್ಲ. ಮನುಷ್ಯನಿಗಾದರೂ ಆರೋಗ್ಯವು ಇಲ್ಲದಾಗ ಆಹಾರವು ಚಿಸುವದಿಲ್ಲ, ಒತ್ತಾಯದಿಂದ ಒತ್ತಿ ತುಂಬಿದರೂ ವಾಂತಿಯಾಗುವದುಂಟು. ದು ಆಗ ಆಹಾರದ ಆವಶ್ಯಕತೆ ಇಲ್ಲೆಂದು ನಿಸರ್ಗವು ಕೊಟ್ಟ ಸೂಚನೆಯಲ್ಲವೆ? ದಕ್ಕಾಗಿ ನಾವು ನಿಸರ್ಗಕ್ಕೆ ಧನ್ಯವಾದಗಳನ್ನರ್ಪಿಸಬೇಕಲ್ಲವೆ? ಉಪವಾಸವು ೋಗನಿವಾರಣೆಯ ಸ್ವಾಭಾವಿಕ ಉಪಾಯವು. ಹೀಗಿದ್ದರೂ ರೋಗಿಗಳಿಗೆ ಹಾರವನ್ನು ಏಕೆ ಒತ್ತಾಯದಿಂದ ಕೊಡಬೇಕು? ಆಹಾರವು ಹೋಗದಿದ್ದರೆ ದುಕುವದಿಲ್ಲೆಂಬ ಹುಚ್ಚು ತಿಳುವಳಿಕೆಯು ನಿಸರ್ಗದನಿಜಸಂಬಂಧವನ್ನರಿಯದ ೂಢರಿಗೆ ಇರುವದು. ಉಪವಾಸದಿಂದ ಸಾಯುವವರು ತೀರ ವಿರಳ. ಆದರೆ ತ್ಯಾಹಾರದಿಂದ ಸಾಯುವವರು ವಿಪುಲ. ಈ ಕ್ರಮವನ್ನು ಅನುಸರಿಸಿ ಎಲ್ಲ ೋಗಗಳನ್ನು ಕಳೆದುಕೊಂಡ ಉದಾಹರಣೆಗಳಿವೆ. ಇದು ಸರ್ವರಿಗೂ ಸಾಧ್ಯ ವಾದದ್ದು, ಸ್ವಾಭಾವಿಕವಾದದ್ದು ಹಾಗು ಸುಲಭವಾದದ್ದು.

ಬೇನೆಯುಂಟಾಗುವದು ದೇಹದಲ್ಲಿ ಸಂಗ್ರಹವಾಗುತ್ತಿದ್ದ ವಿಷಪದಾರ್ಥ ಳಿಂದಲೇ. ಅವು ಹೆಚ್ಚಾಗುತ್ತ ಹೋದಂತೆ ಅಸ್ವಸ್ಥತೆಯು ಉಂಟಾಗಹತ್ತುತ್ತದೆ. ೀರ ರಚನೆಯು ಅವನ್ನು ಹೊರದೂಡಲು ಹವಣಿಸುತ್ತದೆ. ಆದರೆ ರೋಗಿಯು ೀಲಿಂದ ಮೇಲೆ ತುಂಬುತ್ತಾನೆ. ಹೆಚ್ಚಾಗಿ ತುಂಬಿದ ಆಹಾರದಿಂದ ಶಕ್ತಿಯು ಳೆಯದೆ ವಿಷವೇ ಬೆಳೆಯುತ್ತದೆ. ನಾಲಿಗೆಯ ರುಚಿಗಾಗಿ ಶರೀರದಲ್ಲಿ ಶತ್ರುಗ ನ್ನು ತುಂಬಿದಂತಾಗುವದು. ಆಹಾರವು ಅಪಚನವಾಗಲು ವಿಷವು ಉತ್ಪನ್ನ ವಾಗಿ ರಕ್ತವು ಕೆಡುತ್ತದೆ. ರಕ್ತದೋಷವೇ ಸಕಲ ರೋಗಗಳ ಮೂಲವು. ಕ್ತಿಯು ಉಂಟಾಗಲೆಂದು ಹೆಚ್ಚಿಗೆ ತೆಗೆದುಕೊಂಡ ಆಹಾರವು ಶಕ್ತಿಯನ್ನೇ ನಾಶಗೊಳಿಸುತ್ತದೆ. ಅದಕ್ಕೆ ವಿಪರೀತವಾಗಿ ಉಪವಾಸವು ಶಕ್ತಿಯನ್ನು ಳಿಸುತ್ತದೆ. ಬರ್ನರ್ ಮ್ಯಾಕ್‌ಫ್ಯಾಡನ್ ಎಂಬವನು ಏಳುದಿವಸ ಉಪವಾಸವಿದ್ದು ಂದು ನೂರು ಪೌಂಡು ಭಾರವನ್ನು ಎತ್ತಿದನು.

ಉಪವಾಸವು ರಕ್ತಸಂಚಲನವನ್ನು ಸರಿಗೊಳಿಸಿ ರೋಗವನ್ನು ಹೋಗ ಾಡಿಸುವನು. ವಿಷಗಳನ್ನು ಹೊರಗೆ ಹಾಕುವದು. ಸವೆದ ಹಾಗು ರ್ಜಿತ ಅಣುಗಳನ್ನು ಸುಡುವದು. ದಣಿದ ಸ್ನಾಯುಗಳನ್ನು ಒಲಪಡಿಸು ದು. ಉಪವಾಸವು ಮುಗಿದ ಮೇಲೆ ಸರಿಯಾದ ಆಹಾರವನ್ನು ತೆಗೆದು ಂಡರೆ ಹೊಸ ಅಣುಗಳು ಹುಟ್ಟುವವು. ಶಕ್ತಿಯೂ ಚಟುವಟಿಕೆಯೂ ಹೆಚ್ಚಾಗುವವು.

ಕಮೀಟಿಗಳು ಸ್ಥಾಪಿಸಲ್ಪಡುವ ಸಂಭವವಿದೆ. ಇವು ಬೇರೆ ಬೇರೆ ಸಂಸ್ಥೆಗಳಿಗೆ ಹಣವನ್ನು ಹಂಚಿಕೊಡುವ ಕೆಲಸವನ್ನು ಮಾಡುವವು. ಅಲ್ಲದೆ ಅಲ್ಲಲ್ಲಿ ಸ್ಥಾಪಿಸಲ್ಪಡುವ ಸ್ಥಾನಿಕ ಕಮೀಟಿಗಳು ಜನತೆಯ ಲಕ್ಷ್ಯವನ್ನು ಈ ವಿಷಯದ ಕಡೆಗೆ ಎಳೆದು ಚಳವಳಿ ಮಾಡುವವು.

ಸರಕಾರದವರು ಈ ವಿಷಯದ ಶಿಕ್ಷಕರನ್ನು ತಯಾರಿಸುವದಕ್ಕಾಗಿ ಬಿಜಾಪುರ ನ್ಯಾಶನಲ್ ಕಾಲೇಜವನ್ನು ಪ್ರಾರಂಭಿಸುವರು. ಗರಡಿಯ ಮನೆಗಳನ್ನೂ ಆಟದ ಬೈಲುಗಳನ್ನೂ ಈಸುವ ಚಿಕ್ಕ ಕೆರೆಗಳನ್ನೂ ಬಯಲುಗಳನ್ನೂ ಒದಗಿಸಿಕೊಡುವದು ಸರಕಾರದ ಮುಖ್ಯ ಉದ್ದೇಶವಾಗಿರುವದು. ಈ ಯೋಜನೆಯನ್ನು ಸರಿಯಾಗಿ ಅಮಲಿನಲ್ಲಿ ತರುವದಕ್ಕಾಗಿ ಸರಕಾರದವರು ಬೇರೊಂದು ಕಾಯದೆಯನ್ನು ಮಾಡ ತಕ್ಕವರಿದ್ದಾರೆ. ಈ ಎಲ್ಲ ಕಾರ್ಯಕ್ಕಾಗಿ ಮೂರು ವರ್ಷಗಳಲ್ಲಿ ಕೂಡಿ ೫೦ ಲಕ್ಷ ಪೌಂಡು ವೆಚ್ಚ ಮಾಡುವದಲ್ಲದೆ ಪ್ರತಿವರ್ಷ ೧೫ಲಕ್ಷ ಜಂಸಾವಿರ ಪೌಂಡುಗಳಂತೆ ವಾರ್ಷಿಕ ವೆಚ್ಚವನ್ನೂ ಮಾಡಬೇಕೆಂದು ಸರಕಾರದವರು ನಿರ್ಣಯಿಸಿದ್ದಾರೆ. ಯಿಕ್ಕ ದೇಶಗಳಿಗೂ ಈ ಮಾತು ಅನುಕರಣೀಯವೆಂಬದನ್ನು ನಾವು ಬಿಡಿದು ಹೇಳಬೇಕಾಗಿಲ್ಲ.

ಉಪವಾಸ

—೦:೦:೦—

ಲೇಖಕ:— ಗಂ. ಚಿ. ಮಠದ ೩ನೆಯ ವರ್ಷದ ವಿದ್ಯಾರ್ಥಿ ಟ್ರೇ. ಸ್ಕೂ. ಧಾರವಾಡ.

ಪ್ರತಿಯೊಂದು ಧರ್ಮದಲ್ಲಿ ಆಚಾರಕ್ಕೇ ಪ್ರಾಧಾನ್ಯ. ಆಚಾರವೇ ಆರೋಗ್ಯ ವೆಂಬುವದು ಬಲ್ಲವರ ನುಡಿ. ಹಿಂದುಗಳಲ್ಲಿ ಶಿವರಾತ್ರಿಯ ವ್ರತ, ಏಕಾದಶಿಯ ವ್ರತ ಮುಂತಾದವು ಸೇರಿಸಲ್ಪಟ್ಟು ಅವುಗಳ ಆಚರಣೆಯನ್ನು ಬಲಪಡಿಸಲಿಕ್ಕೆ "ಶಿವರಾತ್ರಿ ದಿನೀ ಉಪಾಸ ಕರೀಲ ॥ ತಯಾಜೆ ಜಾಯೀಲ ಸರ್ವಪಾಪ.... ಅದರಂತೆ ವರಂ ಸ್ವಮಾತೃಗಮನಂ ವರಂ ಬ್ರಾಹ್ಮಣ ಮಾರಣಂ - ಏಕಾದಶೀ ದಿನೇ ನೈವ ವರಮನ್ನಸ್ಯ ಭಕ್ಷಣಂ" ॥ ಮುಂತಾಗಿ ಮುನ್ನಿನ ಮಹಾತ್ಮರು ಸುಡಿದರು ಮತ್ತು ನಡೆದರು. ಇಜಿಪ್ಶಿಯನ್ನರ ಪೂರ್ವಾಚಾರ್ಯರೂ ಜ್ಯೂ ಜನರ ಶಾಸ್ತ್ರಕಾರರೂ ಉಪವಾಸವನ್ನು ಆಚರಿಸಿದರು; ಹಾಗು ಶಾಸ್ತ್ರಗಳಲ್ಲಿ ವಿಧಿಸಿದರು. ಮುಸಲ್ಮಾನರಲ್ಲಿಯೂ ಹೀಗೆಯೇ ಇದೆ. ಇದರಿಂದ ಆರೋಗ್ಯಕ್ಕೇನು ಎಂದರೆ ಆಯುರ್ವೇದಾಚಾರ್ಯರು 'ಲಂಘನಂ ಪರಮೌಷಧಂ' ಎಂದು ಉತ್ತರವನ್ನೀಯುವರು.

ಪಶುಪಕ್ಷ್ಯಾದಿಗಳು ಶರೀರವು ಅಸ್ವಸ್ಥವಿದ್ದಾಗ ಆಹಾರವನ್ನು ತೆಗೆದು ಕೊಳ್ಳುವದಿಲ್ಲ. ಮನುಷ್ಯನಿಗಾದರೂ ಆರೋಗ್ಯವು ಇಲ್ಲದಾಗ ಆಹಾರವು ರುಚಿಸುವದಿಲ್ಲ, ಒತ್ತಾಯದಿಂದ ಒತ್ತಿ ತುಂಬಿದರೂ ವಾಂತಿಯಾಗುವದುಂಟು. ಇದು ಏಕೆ ಆಹಾರದ ಆವಶ್ಯಕತೆ ಇಲ್ಲೆಂದು ನಿಸರ್ಗವು ಕೊಟ್ಟ ಸೂಚನೆಯಲ್ಲವೆ? ಇದಕ್ಕಾಗಿ ನಾವು ನಿಸರ್ಗಕ್ಕೆ ಧನ್ಯವಾದಗಳನ್ನರ್ಪಿಸಬೇಕಲ್ಲವೆ? ಉಪವಾಸವು ರೋಗನಿವಾರಣೆಯ ಸ್ವಾಭಾವಿಕ ಉಪಾಯವು. ಹೀಗಿದ್ದರೂ ರೋಗಿಗಳಿಗೆ ಆಹಾರವನ್ನು ಏಕೆ ಒತ್ತಾಯದಿಂದ ಕೊಡಬೇಕು? ಆಹಾರವು ಹೋಗದಿದ್ದರೆ ಬದುಕುವದಿಲ್ಲೆಂಬ ಹುಚ್ಚು ತಿಳುವಳಿಕೆಯು ನಿಸರ್ಗದನಿಜಸಂಬಂಧವನ್ನರಿಯದ ಮೂಢರಿಗೆ ಇರುವದು. ಉಪವಾಸದಿಂದ ಸಾಯುವವರು ತೀರ ವಿರಳ. ಆದರೆ ಅತ್ಯಾಹಾರದಿಂದ ಸಾಯುವವರು ವಿಪುಲ. ಈ ಕ್ರಮವನ್ನು ಅನುಸರಿಸಿ ಎಲ್ಲ ರೋಗಗಳನ್ನು ಕಳೆದುಕೊಂಡ ಉದಾಹರಣೆಗಳಿವೆ. ಇದು ಸರ್ವರಿಗೂ ಸಾಧ್ಯವಾದದ್ದು, ಸ್ವಾಭಾವಿಕವಾದದ್ದು ಹಾಗು ಸುಲಭವಾದದ್ದು.

ಬೇನೆಯುಂಟಾಗುವದು ದೇಹದಲ್ಲಿ ಸಂಗ್ರಹವಾಗುತ್ತಿದ್ದ ವಿಷಪದಾರ್ಥ ಗಳಿಂದಲೇ. ಅವು ಹೆಚ್ಚಾಗುತ್ತ ಹೋದಂತೆ ಅಸ್ವಸ್ಥತೆಯು ಉಂಟಾಗಹತ್ತುತ್ತದೆ. ತೀರ ರಜನೆಯು ಅವನ್ನು ಹೊರದೂಡಲು ಹವಣಿಸುತ್ತದೆ. ಆದರೆ ರೋಗಿಯು ಮೇಲಿಂದ ಮೇಲೆ ತುಂಬುತ್ತಾನೆ. ಹೆಚ್ಚಾಗಿ ತುಂಬಿದ ಆಹಾರದಿಂದ ಶಕ್ತಿಯು ಗಳಿಯದೆ ವಿಷವೇ ಬೆಳೆಯುತ್ತದೆ. ನಾಲಿಗೆಯ ರುಚಿಗಾಗಿ ಶರೀರದಲ್ಲಿ ಶತ್ರುಗ ಳನ್ನು ತುಂಬಿದಂತಾಗುವದು. ಆಹಾರವು ಅಪಚನವಾಗಲು ವಿಷವು ಉತ್ಪನ್ನ ವಾಗಿ ರಕ್ತವು ಕೆಡುತ್ತದೆ. ರಕ್ತದೋಷವೇ ಸಕಲ ರೋಗಗಳ ಮೂಲವು. ಶಕ್ತಿಯು ಉಂಟಾಗಲೆಂದು ಹೆಚ್ಚಿಗೆ ತೆಗೆದುಕೊಂಡ ಆಹಾರವು ಶಕ್ತಿಯನ್ನೇ ನಾಶಗೊಳಿಸುತ್ತದೆ. ಅದಕ್ಕೆ ವಿಪರೀತವಾಗಿ ಉಪವಾಸವು ಶಕ್ತಿಯನ್ನು ಗಳಿಸುತ್ತದೆ. ಬರ್ನರ್ ಮ್ಯಾಕ್‌ಫ್ಯಾಡನ್ ಎಂಬವನು ಏಳುದಿವಸ ಉಪವಾಸವಿದ್ದು ಒಂದು ಸೂರು ಪೌಂಡು ಭಾರವನ್ನು ಎತ್ತಿದನು.

ಉಪವಾಸವು ರಕ್ತಸಂಜಲನವನ್ನು ಸರಿಗೊಳಿಸಿ ರೋಗವನ್ನು ಹೋಗ ಲಾಡಿಸುವದು. ವಿಷಗಳನ್ನು ಹೊರಗೆ ಹಾಕುವದು. ಸವೆದ ಹಾಗು ಜರ್ಜರಿತ ಅಣುಗಳನ್ನು ಸುಡುವದು. ದಣಿದ ಸ್ನಾಯುಗಳನ್ನು ಬಲಪಡಿಸು ವದು. ಉಪವಾಸವು ಮುಗಿದ ಮೇಲೆ ಸರಿಯಾದ ಆಹಾರವನ್ನು ತೆಗೆದು ಕೊಂಡರೆ ಹೊಸ ಅಣುಗಳು ಹುಟ್ಟುವವು. ಶಕ್ತಿಯೂ ಚಟುವಟಿಕೆಯೂ ಹೆಚ್ಚಾಗುವವು.

ಎಷ್ಟೋ ಜನರು ಉಪವಾಸದ ನಿಜವಾದ ಕಲ್ಪನೆ ಹಾಗು ಅನುಭವಗಳಿಲ್ಲದೆ ಅದನ್ನು ತಿರಸ್ಕರಿಸುತ್ತಾರೆ. ರೋಗಕ್ಕಿಂತ ಅಪಾಯಕರವಾದ ಔಷಧಗಳನ್ನು ಸೇವಿಸುತ್ತಾರೆ. ಔಷಧಗಳು ಶರೀರದ ಅಕ್ರಮವನ್ನು ಕೃತ್ರಿಮವಾಗಿ ಸರಿಪಡಿಸುತ್ತವೆ. ಅವುಗಳ ಸತ್ವವು ಕಡಿಮೆಯಾಗಲು ಮೊದಲಿನಂತೆಯೇ ಆಗುವದು. ಇಂದ್ರಿಯಗಳ ಕಾರ್ಯಗಳನ್ನು ಹೆಚ್ಚಾಗಿ ನಡಿಸಿ ಶಕ್ತಿಯನ್ನು ಕುಂದಿಸುತ್ತವೆ. ಆಲಿವ್ಹರ್‌ವಿಂಡಲ್‌ನೆಂಬ ಮೆಡಿಕಲ್ ಸ್ಕೂಲಿನ ಪ್ರೊಫೆಸರನು "ಔಷಧಗಳೆಲ್ಲ ಒಂದಿಲ್ಲೊಂದು ರೋಗವನ್ನು ಹುಟ್ಟಿಸುತ್ತವೆ. ಅದ್ದರಿಂದ ಅವುಗಳನ್ನೆಲ್ಲ ಸಮುದ್ರದಲ್ಲಿ ಬಿಸಾಟಿರಿ" ಎಂದು ಸುಡಿದಿರುವನು. ಸರ್ ಉಲಿಯಂ ಓಸ್ಲರನು "ಔಷಧಗಳೆಲ್ಲ ನಿರುಪಯುಕ್ತವಾದವುಗಳೆಂದು ಕಲಿತವನೇ ಉತ್ತಮ ಡಾಕ್ಟರನು" ಎಂದಿರುವನು.

ಜರ್ಮನ್ ಡಾಕ್ಟರ ಲುಯಿಸ್ ಕುನ್ಹೆಯವರು ಉಪವಾಸ ಚಿಕಿತ್ಸೆಗೆ ಮಹತ್ವ ಕೊಟ್ಟಿರುವರು. ಫಾಂದೋಗ್ಯೋಪನಿಷತ್ತಿನಲ್ಲಿ ಮನಸ್ಸಿನಲ್ಲಿ ಹದಿನಾರು ಭಾಗಗಳಿದ್ದು ಹದಿನೈದು ದಿವಸ ಉಪವಾಸಮಾಡಿ ಹದಿನಾರನೆಯ ದಿವಸ ನೀರು ತೆಗೆದುಕೊಂಡಡೆ ಬುದ್ಧಿಶಕ್ತಿಯು ಬೆಳೆಯುವದೆಂದು ಹೇಳಿದೆ.

ಹೆಚ್ಚಾಗಿ ಉಣ್ಣುವದರಿಂದ ಸ್ನಾಯುಗಳ ಹಾಗು ನರಗಳ ಚಟುವಟಿಕೆಗಳು ನಾಶವಾಗಿ ವೃದ್ಧಾಪ್ಯವು ತೀವ್ರ ಬರುತ್ತದೆ. ತಾರುಣ್ಯವು ಬಹುದಿವಸ ಉಳಿದು ಚಟುವಟಿಕೆಯುಂಟಾಗಿ ಸಶಕ್ತತೆಯೂ ಸಂತೋಷವೂ ನೆಲೆಗೊಳ್ಳಬೇಕಾದರೆ ಇಂದ್ರಿಯಗಳಿಗೆ ನಿಯಮಿತ ಕಾಲದಲ್ಲಿ ವಿಶ್ರಾಂತಿಯು ದೊರೆಯಬೇಕು. ಅದಕ್ಕಾಗಿ ವಾರಕ್ಕೊಮ್ಮೆ ಪಕ್ಷಕ್ಕೊಮ್ಮೆ ಇಲ್ಲವೆ ತಿಂಗಳಿಗೊಮ್ಮೆಯಾದರೂ ಉಪವಾಸ ಮಾಡಬೇಕೆಂದು ಧಾರ್ಮಿಕ ನಿಯಮಗಳಲ್ಲಿ ಹೇಳಿದ್ದಾರೆ.

ಕೆಲವರು ಹಣ್ಣುತಿಂದು ಕೆಲವರು ಹಾಲು ಕುಡಿದು ಇನ್ನೂ ಕೆಲವರು ಅವಲಕ್ಕಿ ಮುಂತಾದವುಗಳನ್ನು ತಿಂದು ಉಪವಾಸಮಾಡುತ್ತೇವೆನ್ನುತ್ತಾರೆ ಇದರಿಂದ ಅನ್ನಾಶಯ ಹಾಗು ಕರುಳುಗಳಿಗೆ ವಿಶ್ರಾಂತಿಯು ದೊರೆಯುವುದೇ ಸ್ವಾಭಾವಿಕ ಹಸಿವೆಯುಂಟಾಗುವಂತೆ, (ಚಟದ ಹಸಿವೆಯಲ್ಲ) ಯಾವನೇ ಫಲ ಅಥವಾ ಪ್ರವಾಹಿ ಆಹಾರವನ್ನು ತೆಗೆದುಕೊಳ್ಳದಿರುವುದೇ ಉಪವಾಸವು.

ಯಾವಾಗ ಹಸಿವೆ ಕಡಿಮೆಯಾಗುವದು, ಬಾಯಿಂದ ಕೆಟ್ಟ ನಾತ ಬರುವದು, ತಲೆಯು ಜಡವಾಗುವದು, ಜೀವರಿನಿಂದ ಕೆಟ್ಟ ನಾತವುಂಟಾಗುವದು ನಾಲಿಗೆಯ ಮೇಲೆ ಬಿಳಿಯ ಹೊಲಸು ಕೂಡುವದು ಆಗಹತ್ಯುತ್ತವೆಯೋ ಆಗ ಉಪವಾಸವನ್ನು ಮಾಡತಕ್ಕದ್ದೆಂದು ತಿಳಿಯಬೇಕು.

ಉಪವಾಸ ಮಾಡಬೇಕೆಂದಿದ್ದಾಗ ಮನಸ್ಸಿನ ಸ್ಥಿತಿಯು ಸಮಾಧಾನಕರವಾಗಿರಬೇಕು. ಉಪವಾಸವಿದ್ದಾಗ ಶರೀರಕ್ಕೆ ದಣಿವಾಗದಂಥ ಉದ್ಯೋಗಗಳನ್ನು ಮಾಡುತ್ತಿರಬೇಕು. ಅಂದರೆ ಲಕ್ಷ್ಯವು ಅತ್ತ ಹೋಗುವದು; ಇಲ್ಲದಿದ್ದರೆ ಹಸಿವೆಯು ಚಟವು ನಮ್ಮನ್ನು ಆಧೀನ ಮಾಡಿಕೊಳ್ಳುತ್ತದೆ. ಉಪವಾಸವಿದ್ದಾಗ ನಿತ್ಯಸ್ನಾನವನ್ನು ಮಾಡಬೇಕು. ಉಪವಾಸದ ಜೊತೆಗೆ ಶುದ್ಧಹವೆ, ಸ್ವಚ್ಛ ನೀರು, ನಿರ್ಮಲವಾದ ಹೊದಿಕೆಗಳು ಆವಶ್ಯಕವಾಗಿವೆ. ಉಪವಾಸವಿದ್ದಾಗ ಸಾಕಷ್ಟು ನೀರು ಕುಡಿಯಲಿ; ಅವಶ್ಯವಿದ್ದರೆ ಲಿಂಬೇ ರಸವನ್ನು ಸೇರಿಸಿಕೊಳ್ಳಬಹುದು. ಇದರಿಂದ ಶರೀರದೊಳಗಿನ ವಿಷಪದಾರ್ಥಗಳು ಆದಷ್ಟು ತೀವ್ರ ಹೊರಬಿದ್ದು ಹೋಗುತ್ತವೆ. ಮಲಬದ್ಧವಾಗುವಂತೆ ತೋರಿದರೆ ಎನೆಮಾ ಮಾಡಿಸಿಕೊಳ್ಳಬಹುದು. ಆದರೆ ಮೇಲಿಂದ ಮೇಲೆ ತಕ್ಕದ್ದಲ್ಲ. ನಿದ್ರೆಯು ಸಾಕಷ್ಟಾಗಬೇಕು.

ಉಪವಾಸವನ್ನು ಆರಂಭ ಮಾಡಿದ ಮೂರು ದಿವಸಗಳ ವರೆಗೆ ಚಟದ ಹಸಿವೆಯು ತಳಮಳ, ಶಾರೀರಿಕ ಅಥವಾ ಮಾನಸಿಕ ಕೆಲಸ ಮಾಡಲಿಕ್ಕೆ ಆಗದಿರುವಿಕೆ, ಮೈ ಜಡವಾಗುವದು, ತಲೆ ನೋಯುವದು, ಇವೆಲ್ಲ ಆಗುವವು. ಮುಂದೆ ತುಸು ಅಭ್ಯಂತರವುಂಟಾಗುವದು. ಹಸಿವೆ ಕಡಿಮೆಯಾಗಿ ಬಾಯಿಂದ ಕೆಟ್ಟ ವಾಸನೆ ಬರಹತ್ತುವದು. ಮಾನಸಿಕ ಚಟುವಟಿಕೆ ಹೆಚ್ಚಾಗುವದು. ಏಳು ದಿವಸಕ್ಕೆ ಸಮಾಧಾನವುಂಟಾಗುವದು. ನಾಲಿಗೆಯು ಸ್ವಚ್ಛವಾಗುವದು. ಬಾಯಿಂದ ಸುವಾಸನೆ ಬರುವದು. ಮುಂದ ಹಸಿವೆಯು ಉಂಟಾಗುವದು. ಹೀಗಾಗಲು ಉಪವಾಸವು ಸಾಕಷ್ಟಾಯಿತೆಂದು ಬಿಡಬೇಕು. ಈಗ ಉಂಟಾಗುವ ಜ್ವರ, ತಲೆನೋವುಗಳಿದ್ದಾಗ ಶರೀರದಲ್ಲಿ ಹೊಸ ಸೆಲ್ಲುಗಳು ಹುಟ್ಟುತ್ತಿರುತ್ತವೆ.

ಕೆಲವರಿಗೆ ಉಪವಾಸದಿಂದ ವಿಪರೀತ ಪರಿಣಾಮವುಂಟಾಗುವದು. ಹಾಸಿಗೆ ಹಿಡಿಯುವದು, ದಿನಕ್ಕೆ ಮೂರು ಪೌಂಡಿಗಿಂತ ಹೆಚ್ಚು ತೂಕ ಕಡಿಮೆಯಾಗುವದು, ಅಶಕ್ತತೆಯುಂಟಾಗುವದು, ಇ. ಹೀಗಾಗುತ್ತಿದ್ದರೆ ಉಪವಾಸ ಮಾಡಬಾರದು. ಉಪವಾಸವು ವ್ಯಕ್ತಿತ್ವವನ್ನವಲಂಬಿಸಿರುತ್ತದೆ. ವೃದ್ಧರೂ ಮಕ್ಕಳೂ ೨-೩ ದಿವಸಗಳ ಮಟ್ಟಿಗೆ ಮಾಡಬಹುದು. ಇಳಿಕೆಯ ವಯಸ್ಸಿನಲ್ಲಿ ಕ್ರಿಸ್ತನು ೪೦ ದಿವಸ ಉಪವಾಸ ಮಾಡಿದನು. ಮಹಾತ್ಮಾಜಿಯು ೨೧ ದಿವಸ ಮಾಡಿದನು.

ಉಪವಾಸವನ್ನು ಮುಗಿಸುವಾಗ ಬಹಳ ಎಚ್ಚರಪಡಬೇಕು. ಮೊದಲು ಎರಡು ದಿವಸಗಳ ವರೆಗೆ ಕಿತ್ತಳೆ, ದ್ರಾಕ್ಷೆ, ಲಿಂಬೆ ಮುಂತಾದ ಹಣ್ಣುಗಳ ರಸವನ್ನೇ ಸೇವಿಸಬೇಕು. ಆ ಮೇಲೆ ಎರಡು ದಿವಸ ಕೇವಲ ತಾಜಾ

ಹಣ್ಣುಗಳನ್ನೇ ಸೇವಿಸುತ್ತಿರಬೇಕು ಆಮೇಲೆ ಪ್ರವಾಹಿ ಆಹಾರವನ್ನೂ ಬರ ಬರುತ್ತ ಘನ ಆಹಾರವನ್ನೂ ತೆಗೆದುಕೊಳ್ಳಬೇಕು.

ಉಪವಾಸವನ್ನು ಸರಿಯಾಗಿ ಮಾಡಿದರೆ ಎಲ್ಲ ರೋಗಗಳು ನಾಶವಾಗುವವು. ದಮ್ಮು, ಶ್ವಾಸಕಾಸ, ಅಜೀರ್ಣ, ಆಮಾಂಶ, ಅಗ್ನಿಮಾಂದ್ಯ, ನಪುಂಸಕತ್ವ, ಗುಲ್ಮ, ಆಮ್ಲಪಿತ್ತ, ಮೂಲವ್ಯಾಧಿ, ಕಣ್ಣಿನ ರೋಗ, ಕಿವಿಯ ರೋಗ, ಕರುಳಿನ ರೋಗ, ಮುಂತಾದ ಹಲವು ರೋಗಗಳು ಗುಣವಾಗುವವು.

ಡಾ. ರಿಚರ್ಡ ಫಾಸೆಲ್, ಡಾ. ಟಾನ್ನರ ಮೊದಲಾದವರು ಇದರ ಅದ್ಭುತ ಗುಣವನ್ನು ಕಂಡು ಅಚ್ಚರಿಬಟ್ಟಿದ್ದಾರೆ. ನನ್ನ ವೈದ್ಯರಿಗೂ ಇದರ ಮಹಿಮೆಯು ಗೊತ್ತಿದೆ.

ಅದಕ್ಕಾಗಿ ನೂರಾರು ರೂಪಾಯಿ ವೆಚ್ಚ ಮಾಡಿ ಔಷಧಗಳನ್ನು ನುಂಗುತ್ತ ಶ್ರಮಪಡುವುದಕ್ಕಿಂತ ಸುಲಭವಾದ ಈ ಉಪಾಯನ್ನು ಕೈಕೊಳ್ಳುವದು ಉಚಿತವಲ್ಲವೆ?

ಸ್ಕೌಟನ ಮೇಲ್ಮೆ !

ಕವಿ— ಮಾ. ತ್ರಿ. ಕುಲಕರ್ಣಿ, ೩ನೆಯ ವರ್ಷ ಟ್ರೇ. ಕಾ. ಧಾರವಾಡ

[೧೭-೧-೩೭ನೇ ದಿವಸ ಧಾರವಾಡ ಗವ್ವರ್ಮೆಂಟ ಹಾಯಸ್ಕೂಲಿನ ಸ್ಕೌಟ ಪಂದ್ಯಾಟದಲ್ಲಿ ಹಾಡಿದ್ದು]

ಆಲಿಪುದು ಸುಹೃದಯರೆ |
ಲೀಲೆಯೆಲಿ ಸ್ಕೌಟನ ಮೇಲ್ಮೆಯ ಪರಿಕಿಸುತ ||
ಸಾರ ನೈತಿಕ ಜ್ಞಾನಸಂಯುತ ಪೂರ್ಣವಿಶ್ವಾಸಾರ್ಹನು |
ಧೀರ ವೀರ ವಿಚಾರ ನಿಷ್ಠೆಯ ವಿನಯವಶ ವರಸ್ಕೌಟನು ॥ ೧ ॥

ಪರರ ಸಹಾಯವನು ಗೈಯುವದೇ ।
ಪರತರ ಧರ್ಮವೆಂದರಿತಿಹನು ॥
ನಿರುತದಲಿ ಸತ್ಕರ್ಮವನು ತಾನಿರದೆ ಗೈವುದೆ ತನ್ನ ಕಜ್ಜವು ।
ಧರಣಿಯೊಳು ಕೈವಲ್ಯವೆಂದರೆ, ಪರರಿಗುಪಕಾರವಿದೆ ! ತಿಳಿವನು ॥ ೨ ॥

ರಾಜರಾಷ್ಟ್ರದ ಭಕ್ತಿಯ ।
ತೇಜವದು ಹೊಳೆವುದು ಮಾಜದೆ ಮುಖದ ಛಾಯೆ ॥
ವಾಜಿತೆರದಿಂ ಚಪಲತೆಯನಾಚರಿಸಿ ಜಗದೊಳು ಮಾನ್ಯನಾಗುವ ।
ಸಾಜಪರಿಯಿದು ಧರೆಯೊಳುದಿಸಿದ ಮನುಜ ಜನ್ಮಕೆ ಪೊಚ್ಚವು ॥ ೩ ॥

ಪ್ರಾಣಿದಯದ ಮೂರ್ತಿಯು ।
ಸತ್ಯದ ಖಣಿಯು ಸಾನುರಾಗದ ಪುತ್ಥಳಿಯು ॥
ಧ್ಯಾನದಲಿ ಸಧ್ಭಾವ ! ಚರ್ಯದಲಿ ಮಾನವಂತರ ಮಾಳ್ಕೆಯು ।
ಹೀನಕರ್ಮಕೆ ಮನವನಿರಿಸನು ರೌರವದ ಸಮವರಿವನೂ ॥ ೪ ॥

ವಿಶ್ವಬಂಧುವು ಸ್ಕೌಟನು ।
ದೇಶದ ಭಕ್ತಿಯ ಮೂರ್ತಿಮಂತನಿವನು ॥
ನಶ್ವರದ ಸುಖಲಾಲಸೆಯನು ಬದಿಗಿರಿಸಿ ತಾ ಮೆರೆವನು ।
ವಿಶ್ವರಕ್ಷಕನಂತರಂಗದ ಪ್ರೇಮ ಪೀಯೂಷ ಬಿಂದುವು ॥ ೫ ॥

ಆಜ್ಞಾಧಾರಕನಿವನು ।
ಪ್ರಜ್ಞೆಯಲಿ ಶ್ರೇಷ್ಠನು ಪ್ರಾಜ್ಞಜನರಾಳಿನಾಳು ॥
ಸಂಜ್ಞೆ ಸಂಸ್ಕೃತಿ ಬಲ್ಲನಿವ ತಾನಾಜ್ಞೆ ಭಂಗವ ಗೈಯನು ।
ಸುಜ್ಞಾನಿ, ಸುಖಕರ ವಾಣಿ ಮುಖದೊಳು ನಲಿಯುವದು
ಅನುದಿನದೊಳು ॥ ೬ ॥

ಹಸನ ಮುಖಿಯು ಸ್ಕೌಟನು, ಕಷ್ಟದ ।
ಮುಸಕವ ಕಳೆಯುತಲಿರುತಿಹನು ।
ಮಿಸುಪ ಭಾರತ ಭೂಮಿಯೊಳು ತಾ ಜಸವ ಪಡೆಯಲು ಪರಿವನು ।
ವಸುಧೆಯೊಳು ಮಿರುಗುವನು ಸ್ಕೌಟನು ಪೊಸತರದ ಪರಿಜುವನು
ಪೊಂದಿ ॥ ೭ ॥

ಹಣ್ಣುಗಳನ್ನೇ ಸೇವಿಸುತ್ತಿರಬೇಕು ಆಮೇಲೆ ಪ್ರವಾಹಿ ಆಹಾರವನ್ನೂ ಬರ ಬರುತ್ತ ಘನ ಆಹಾರವನ್ನೂ ತೆಗೆದುಕೊಳ್ಳಬೇಕು.

ಉಪವಾಸವನ್ನು ಸರಿಯಾಗಿ ಮಾಡಿದರೆ ಎಲ್ಲ ರೋಗಗಳು ನಾಶವಾಗುವವು. ದಮ್ಮು, ಶ್ವಾಸಕಾಸ, ಅಜೀರ್ಣ, ಆಮಾಂಶ, ಅಗ್ನಿಮಾಂದ್ಯ, ನಪುಂಸಕತ್ವ, ಗುಲ್ಮ, ಆಮ್ಲಪಿತ್ತ, ಮೂಲವ್ಯಾಧಿ, ಕಣ್ಣಿನ ರೋಗ, ಕಿವಿಯ ರೋಗ, ಕರುಳಿನ ರೋಗ, ಮುಂತಾದ ಹಲವು ರೋಗಗಳು ಗುಣವಾಗುವವು.

ಡಾ. ರಿಚರ್ಡ್ ಫಾಸೆಲ್, ಡಾ. ಟಾನ್ನರ ಮೊದಲಾದವರು ಇದರ ಅದ್ಭುತ ಗುಣವನ್ನು ಕಂಡು ಅಚ್ಚರಿಬಟ್ಟಿದ್ದಾರೆ. ನಮ್ಮ ವೈದ್ಯರಿಗೂ ಇದರ ಮಹಿಮೆಯು ಗೊತ್ತಿದೆ.

ಅದಕ್ಕಾಗಿ ನೂರಾರು ರೂಪಾಯಿ ವೆಚ್ಚ ಮಾಡಿ ಔಷಧಗಳನ್ನು ನುಂಗುತ್ತ ಶ್ರಮಪಡುವುದಕ್ಕಿಂತ ಸುಲಭವಾದ ಈ ಉಪಾಯನ್ನು ಕೈಕೊಳ್ಳುವದು ಉಚಿತವಲ್ಲವೆ?

ಸ್ಕೌಟನ ಮೇಲ್ಮೆ!

ಕವಿ— ಮಾ. ತ್ರಿ. ಕುಲಕರ್ಣಿ, ೩ನೆಯ ವರ್ಷ ಟ್ರೇ. ಕಾ. ಧಾರವಾಡ

[೧೬-೧-೩೬ನೇ ದಿನಸ ಧಾರವಾಡ ಗವ್ಹರ್ಮೆಂಟ ಹಾಯಸ್ಕೂಲಿನ ಸ್ಕೌಟ ಪಂದ್ಯಾಟವಲ್ಲಿ ಹಾಡಿದುದು]

ಆಲಿಪುದು ಸುಹೃದಯರೆ |
ಲೀಲೆಯೆಲಿ ಸ್ಕೌಟನ ಮೇಲ್ಮೆಯ ಪರಿಕಿಸುತ ||
ಸಾರ ನೈತಿಕ ಜ್ಞಾನಸಂಯುತ ಪೂರ್ಣವಿಶ್ವಾಸಾರ್ಹನು |
ಧೀರ ವೀರ ವಿಚಾರ ನಿಷ್ಠೆಯ ವಿನಯವಶ ವರಸ್ಕೌಟನು ॥ ೧ ॥

ಪರರ ಸಹಾಯವನು ಗೈಯುವದೇ ।
ಪರತರ ಧರ್ಮನೆಂದರಿತಿಹನು ॥
ನಿರುತದಲಿ ಸತ್ಕರ್ಮವನು ತಾನಿರದೆ ಗೈವುದೆ ತನ್ನ ಕಜ್ಜವು ।
ಧರಣಿಯೊಳು ಕೈವಲ್ಯವೆಂದರೆ, ಪರರಿಗುಪಕಾರವಿದೆ ! ತಿಳಿವನು ॥ ೨ ॥

ರಾಜರಾಷ್ಟ್ರದ ಭಕ್ತಿಯು ।
ತೇಜವದು ಹೊಳೆವುದು ಮಾಜದೆ ಮುಖದ ಛಾಯೆ ॥
ವಾಜಿತೆರದಿಂ ಚಪಲತೆಯನಾಚರಿಸಿ ಜಗದೊಳು ಮಾನ್ಯನಾಗುವ ।
ಸಾಜಪರಿಯಿದು ಧರೆಯೊಳುದಿಸಿದ ಮನುಜ ಜನ್ಮಕೆ ಪೊಚ್ಚವು ॥ ೩ ॥

ಪ್ರಾಣದಯದ ಮೂರ್ತಿಯು ।
ಸತ್ಯದ ಖಣಿಯು ಸಾನುರಾಗದ ಪುತ್ಥಳಿಯು ॥
ಧ್ಯಾನದಲಿ ಸಧ್ಭಾವ ! ಚರ್ಯದಲಿ ಮಾನವಂತರ ಮಾಳ್ಕೆಯು ।
ಹೀನಕರ್ಮಕೆ ಮನವನಿರಿಸನು ರೌರವದ ಸಮವರಿವನೂ ॥ ೪ ॥

ವಿಶ್ವಬಂಧುವು ಸ್ಕೌಟನು ।
ದೇಶದ ಭಕ್ತಿಯ ಮೂರ್ತಿಮಂತನಿವನು ॥
ನಶ್ವರದ ಸುಖಲಾಲಸೆಯನು ಬದಿಗಿರಿಸಿ ತಾ ಮೆರೆವನು ।
ವಿಶ್ವರಕ್ಷಕನಂತರಂಗದ ಪ್ರೇಮ ಪೀಯೂಷ ಬಿಂದುವು ॥ ೫ ॥

ಆಜ್ಞಾಧಾರಕನಿವನು ।
ಪ್ರಜ್ಞೆಯಲಿ ಶ್ರೇಷ್ಠನು ಪ್ರಾಜ್ಞಜನರಾಳಿನಾಳು ॥
ಸಂಜ್ಞೆ ಸಂಸ್ಕೃತಿ ಬಲ್ಲನಿವ ತಾನಾಜ್ಞೆ ಭಂಗವ ಗೈಯನು ।
ಸುಜ್ಞಾನಿ, ಸುಖಕರ ವಾಣಿ ಮುಖದೊಳು ನಲಿಯುವದು
ಅನುದಿನದೊಳು ॥ ೬ ॥

ಹಸನ ಮುಖಿಯು ಸ್ಕೌಟನು, ಕಷ್ಟದ ।
ಮಸಕವ ಕಳೆಯುತಲಿರುತಿಹನು ।
ಮಿಸುಪ ಭಾರತ ಭೂಮಿಯೊಳು ತಾ ಜಸವ ಪಡೆಯಲು ಪರಿವನು ।
ವಸುಧೆಯೊಳು ಮಿರುಗುವನು ಸ್ಕೌಟನು ಪೊಸತರದ ಪರಿಜುವನು
ಪೊಂದಿ ॥ ೭ ॥

ಬಡತನದ ದೇಶವೆಂದು ।
ಕಡುಬಳಲುವ ಬಡವರ ಸೇವೆಗೆಂದು ॥
ದುಡಿದುಡಿದು ವೆಚ್ಚವನು ತಾ ಹಿಡಿದು ಮಾಡುವ ತೆರವನು ।
ಪಡೆದಿಹನು ಈ ಗುಣವ ಸ್ಕೌಟನು ಪೊಡವಿಯೊಳು ಬಾಳಿಕೆಯ
ತೆರವಿದು ॥ ೮ ॥

ಆತ್ಮಗೌರವ ಪಡೆಯಲ್ಕೆ ಧರೆಯೊಳು ಪರ ।
ಮಾತ್ಮನ ದಯೆಗೂಡಲ್ಕೆ ।
ಸಾತ್ಮ್ಯ ಸ್ಕೌಟನು ತಕ್ಕಪಾತ್ರನು ! ಅಚ್ಚರಿಯೆ ? ಪೇಳಿನ್ನು ಭೂ ।
ತಾತ್ಮನಾಥನವೊಲುಮೆ ಪಡೆಯಲ್ಕದುವೆ ಸುಲಭಮೆ ? ಸುಗಮವೆ ? ॥ ೯ ॥

ಶುದ್ಧಕಾಯವು ಸ್ಕೌಟನದು ವಚನವು ಮನವು ।
ಶುದ್ಧರೀತಿಯಲಿರುವವು ॥
ಬದ್ಧನಿಹನ್ಯೆ ದೇಶಕಾರ್ಯದೊಳದ್ದು ಮಾನಪಯೋಧಿಯೊಳಗೆ ।
ವೃದ್ಧಿಗೈಯುವ ನಾಡಿನಾಳಿವ ಪಿರಿದು ಬಾಳಲಿ ಪೊಡವಿಯಲ್ಲಿ !! ॥ ೧೦ ॥

ಶಿಶುಶಾಲೆಗಳು

(ಮುಂದೆ ಸಾಗಿದುದು.)

೪. ಶಿಶುಶಾಲೆಗಳ ಉಪಕರಣಗಳು.

೧. ಸ್ವಚ್ಛ ಬೆಳಕೂ ಶುದ್ಧ ಹವೆಯೂ ವಿಪುಲವಾಗಿ ಇರುವ ವಿಶಾಲವಾದ ಕೋಣೆ:– ಚಿಕ್ಕ ಮಕ್ಕಳಿಗೆ ಶುದ್ಧ ಹವೆಯು ಸಾಕಾದಷ್ಟು ಬೇಕೇಬೇಕೆಂಬದು ನಿರ್ವಿವಾದವಾದ ಮಾತು, ಮತ್ತು ಅವರಿಗೆ ತಾವು ದಟ್ಟಣೆಯ ಮೂಲಕ ಅಡಚಣೆಯಲ್ಲಿರುವವೆಂದು ಭಾಸವಾಗದಷ್ಟು ವಿರಳವಾಗಿರುವಂತೆ ಸುತ್ತಲೂ ತಕ್ಕಷ್ಟು ಅವಕಾಶವಿರಬೇಕಾಗುವದು; ವಿಪುಲವಾಗಿ ಬೆಳಕೂ ಬೇಕು.

೨. ಶಿಶುಶಾಲೆಗಳಲ್ಲಿ ಚಿಕ್ಕ ಬಾಲಕರ ಕೈಗೆ ನಿಲುಕುವಷ್ಟೇ ಎತ್ತರವಾದ ಕಪಾಟುಗಳಿರಬೇಕಾಗುವದು. ಮತ್ತು ಅವುಗಳ ಖಾನೆಗಳಲ್ಲಿ ಬಾಲಕರ ಉಪಯೋಗಕ್ಕೆ ಬೇಕಾಗುವ ಬೇಗನೆ ಹರಿದು ಮುರಿದು ಹಾಳಾಗದಂಥ ಆಟಿಗೆಯ ಬೊಂಬೆಗಳು, ಚಿತ್ರದ ಪುಸ್ತಕಗಳು ಮುಂತಾದ ಆಟದ ಉಪಕರಣಗಳನ್ನು ತುಂಬಿಟ್ಟಿರಬೇಕಾಗುವದು. ಬಾಲಕರು ತಮಗೆ ಬೇಕಾದಾಗ ಅವನ್ನು ತಾವೇ ತೆಗೆದು ಕೊಂಡು ಉಪಯೋಗಿಸಲಿಕ್ಕೆ ಬರುವಂತೆ ಅವುಗಳ ವ್ಯವಸ್ಥೆಯಿರಬೇಕು. ಚಾಪೆ, ಮೇಜು, ಖುರ್ಚಿ ಮುಂತಾದವು ಬಾಲಕರು ತಾವೇ ಅತ್ತಿತ್ತ ಸರಿಸಾಡಲಿಕ್ಕೂ ತೆಗೆದಿಡಲಿಕ್ಕೂ ಬರುವಷ್ಟು ಸಣ್ಣವೂ ಹಗುರಾದವೂ ಇರಬೇಕು. ಶಿಶುಶಾಲೆಗಳಲ್ಲಿ ಉಪಯೋಗಿಸುವ ಚಿತ್ರಗಳು ಆಕರ್ಷಕವಾಗಿರಬೇಕು; ಮತ್ತು ಅವನ್ನು ಬಾಲಕರಿಗೆ ಸುಲಭವಾಗಿ ಕಾಣಿಸುವಷ್ಟೇ ಎತ್ತರದಲ್ಲಿ ಗೋಡೆಗೆ ತೂಗಹಾಕಿರಬೇಕು. ಕರಿಯ ಹಲಗೆಯು ಬಾಲಕರ ಕೈಗೆ ಸುಲಭವಾಗಿ ನಿಲುಕುವಷ್ಟು ಎತ್ತರದಲ್ಲಿ ಇರಬೇಕಲ್ಲದೆ ಎಲ್ಲ ಹುಡುಗರು ಕೆಲಸಮಾಡಲಿಕ್ಕೆ ಸಾಕಾದಷ್ಟು ಸ್ಥಳವುಳ್ಳದ್ದಾಗಿಯೂ ಇರಬೇಕು.

೩. ಆಟದ ಬೈಲಿನಲ್ಲಿ ಜೋಕಾಲಿ, ಜರಗುಂಡಿಯನ್ನು ಆಡುವ ಇಳಕಲು, ಜಿಜೆ ಜಾಚೆ ಇಳುಕಲಾಗುವಂತೆ ಇಟ್ಟ ಹಲಗೆಯ ಕುದುರೆಗಳು ಇವು ಇರಬೇಕು.

೪. ಶಿಶುಶಾಲೆಗೆ ಸಂಬಂಧಿಸಿ ಒಂದು ತೋಟವಿರಬೇಕು ಮತ್ತು ತೋಟದ ಕೆಲಸಕ್ಕೆ ಬೇಕಾಗುವ ಚಿಕ್ಕ ಅಳತೆಯ ಗುದ್ದಲಿ ಸಲಿಕೆ ಮುಂತಾದ ಉಪಕರಣ

ಗಳು ಇರಬೇಕು. ಅಲ್ಲಿ ಬಾಲಕರು ಪ್ರಕೃತಿಯ ಕಾರ್ಯಗಳನ್ನು ನಿರೀಕ್ಷಣೆ ಮಾಡುವದಲ್ಲದೆ ಅಲ್ಲಿರುವ ಪ್ರಾಣಿ ವನಸ್ಪತಿಗಳನ್ನು ಪ್ರೀತಿಸಲು ಕಲಿಯುವರು: ಮತ್ತು ಸಸ್ಯಗಳು ಬೆಳೆಯುವದನ್ನೂ ಅವಕ್ಕೆ ಹೂ ಕಾಯಿಗಳಾಗುವದನ್ನೂ ಪತಂಗ ಗಳು ಕ್ರಿಮಿ ಕೀಟಕಗಳು ಪಕ್ಷಿಗಳು ಮುಂತಾದವು ತೋಟದಲ್ಲಿ ನಡೆಯಿಸಿರುವ ಕಾರ್ಯಗಳನ್ನೂ ಅವುಗಳ ಸ್ವಭಾವಶೀಲಗಳನ್ನೂ ನಿರೀಕ್ಷಣೆ ಮಾಡುವರು.

೫. ಶಿಶುಶಾಲೆಗಳಲ್ಲಿ ಕೆಲವು ಪ್ರಾಣಿಗಳನ್ನು ಸಾಕಿರಬೇಕು. ಕೋಳಿ ಮೊಲ ಬೆಕ್ಕಿನಮರಿ ಆಡಿನಮರಿ ಮುಂತಾದವುಗಳನ್ನು ಸಾಕಿದ್ದರೆ ಬಾಲಕರು ಅವನ್ನು ಸಾಕುವ ರೀತಿಯನ್ನು ಕಲಿಯುವದಲ್ಲದೆ ಆ ಪ್ರಾಣಿಗಳ ವಿಷಯದಲ್ಲಿ ಅವರಿಗೆ ಪ್ರೀತಿಯು ಹುಟ್ಟುವದು; ಮತ್ತು ಅವನ್ನು ಹೇಗೆ ನಡೆಯಿಸಿಕೊಳ್ಳ ಬೇಕೆಂಬದೂ ಅವರಿಗೆ ಗೊತ್ತಾಗುವದು.

೬. ಶಾಲೆಯ ಆಟದ ಬಯಲಿನಲ್ಲಿ ಒಂದುಕಡೆಗೆ ಹಸಿಯ ಮತ್ತು ಒಣಗಿದ ಉಸುಕಿನ ಗುಂಪಿಗಳಿರಬೇಕು. ಮತ್ತು ಚಿಕ್ಕ ದೋಣಿಗಳನ್ನು ತೇಲಿಬಿಡುವದಕ್ಕೆ ಅನುಕೂಲವಾಗುವಂತೆ ಒಂದು ನೀರಿನ ಹೊಂಡವೂ ಇರಬೇಕು. ಆಲ್ಲಿ ಬಾಲಕರು ನೀರಲ್ಲಿ ಕೆಲವು ಪದಾರ್ಥಗಳು ತೇಲುವವು, ಕೆಲವು ಮುಳುಗುವವು, ಎಂಬದನ್ನು ಸಹಜವಾಗಿ ಕಲಿತುಕೊಳ್ಳಲು ಅನುವಾಗುವದು.

೭. ಚಿಕ್ಕವುಕ್ಕಳ ಬಳಕೆಗಾಗಿ ತಕ್ಕ ಅಳತೆಯ ಮಲಮೂತ್ರ ವಿಸರ್ಜನೆಯ ಸ್ಥಳಗಳೂ ಒಗೆಯುವ, ಕೈಕಾಲು ಮೋರೆ ತೊಳೆದುಕೊಳ್ಳುವ, ಮತ್ತು ಸ್ನಾನದ ಮನೆಗಳೂ ಇರಬೇಕು. ಇದರಿಂದ ಬಾಲಕರು ಸ್ವಚ್ಛತೆಯ ಚಟವುಳ್ಳವರೂ ಸ್ವಾವಲಂಬಿಗಳೂ ಆಗುವರು.

ಇಷ್ಟೆಲ್ಲ ಉಪಕರಣಗಳಲ್ಲದೆ ಇನ್ನೊಂದು ಮಹತ್ವದ ಆವಶ್ಯಕತೆಯು ಶಿಶು ಶಾಲೆಗಳಿಗೆ ಇದ್ದೇ ಇರುವದು. ಅದೇನೆಂದರೆ ಯೋಗ್ಯ ಶಿಕ್ಷಕಿಯರು. ಅವರಿಗೆ ಬಾಲಕರ ಶೀಲ ಸ್ವಭಾವ ಮನೋವೃತ್ತಿಗಳ ಅರಿವು ಇರಬೇಕು. ಅವರು ಬಾಲಕರನ್ನು ಚೆನ್ನಾಗಿ ಪ್ರೀತಿಸಬೇಕು. ಅವರು ಮುಕ್ಕಳ ಒಡನಾಟದಲ್ಲಿ ತುಂಬ ನ್ಯಾಯಶೀಲರೂ ಸತ್ಯನಿಷ್ಠರೂ ಆಗಿರಬೇಕು. ಅಲ್ಲದೆ ಬಾಲಕರ ವ್ಯವಹಾರದಲ್ಲಿ ನೈತಿಕ ಬೌದ್ಧಿಕ ಇಲ್ಲವೆ ಶಾರೀರಿಕ ಕಾರ್ಯಗಳಲ್ಲಿ ಕಂಡುಬರುವ ನ್ಯೂನಾತಿರಿಕ್ತತೆಗಳನ್ನು (ಕುಂದುಕೊರತೆಗಳನ್ನು ಇಲ್ಲವೆ ಮಿತಿಮೀರಿದ ಆಧಿಕ್ಯವನ್ನು) ಕೂಡಲೆ ಕಂಡು ಕೊಂಡು ಅದನ್ನು ಸರಿಪಡಿಸುವಷ್ಟು ತೀಕ್ಷ್ಣ ದೃಷ್ಟಿಯವರೂ ತೀಕ್ಷ್ಣ ಬುದ್ಧಿಯವರೂ ಆಗಿದ್ದು ಅವರ ಲಕ್ಷ್ಯವು ಯಾವಾಗಲೂ ಬಾಲಕರ ಕಡೆಗೇ ಇರಬೇಕಾಗುವದು. ಬಾಲಕರು ಆಟದಿಂದಲೇ ಅನುಭವವನ್ನು ಪಡೆಯಬೇಕಾಗಿರುವದರಿಂದ

ಶಿಕ್ಷಕರು ಬಾಲಕರ ಆಟದ ನಾಯಕರಾಗಿರಬೇಕಾಗುವದು. ಅವರು ಬಾಲಕರೊಡನೆ ಸರಿಬೆರಕೆಯಿಂದ ಬೆರೆತು ಅವರ ಸಹಾಯಕರೂ ಮಾರ್ಗದರ್ಶಿಗಳೂ ಆಗಿರಬೇಕಲ್ಲದೆ ಅವರ ತಪ್ಪುತಡೆಗಳನ್ನೂ ಕುಂದುಕೊರತೆಗಳನ್ನೂ ಸಹಾನುಭೂತಿಪೂರ್ವಕವಾಗಿ ಸರಿಪಡಿಸಲು ಆತುರರಾಗಿರಬೇಕು. ಅವರಿಗೆ ಬೇಕಾಗುವ ಎಲ್ಲ ಮಾಹಿತಿಯನ್ನು ಒದಗಿಸಿ ಕೊಡಬೇಕು. ಶಿಕ್ಷಕರು ತಾವೇ ಆಟದ ಪಾಲಕರಾಗಬೇಕಾಗದಿದ್ದರೂ ಇರಬಹುದು; ಆಟದಲ್ಲಿ ಪರಿಸ್ಥಿತಿಗನುಗುಣವಾಗಿ ಬಾಲಕರನ್ನು ಅನುಸರಿಸಿ ನಡೆಯಬೇಕಾಗಬಹುದು. ಆದರೂ ಆಟದ ಎಲ್ಲ ಜಬಾಬುದಾರಿಯು ಬಾಲಕರಿಗೇ ಒಪ್ಪಿಸಲ್ಪಡಬೇಕು. ಯಾಕಂದರೆ ಆಟದಲ್ಲಿ ಅಭಿರುಚಿಯು ಬಾಲಕರ ಹುಟ್ಟು ಗುಣವು ಮತ್ತು ಹೆಚ್ಚು ಹುಡುಗರು ಆಟವನ್ನು ಹೇಗೆ ಆಡಬೇಕೆಂಬದನ್ನು ಸುಲಭವಾಗಿ ತಿಳಿದುಕೊಂಡಿರುವರು. ಕೆಲವರಿಗೆ ಮಾತ್ರ ಆಟದಲ್ಲಿ ಅನುಭವವೂ ಅಭಿರುಚಿ ಉತ್ಸಾಹಗಳೂ ಸಾಕಾದಷ್ಟು ಇಲ್ಲದಿರುವದರಿಂದ ನೀರಸವಾಗಿ ನಡೆದು, ಆಟದ ಕಟ್ಟಳೆಗಳನ್ನಷ್ಟೇ ಅಕ್ಷರಶಃ ಅನುಸರಿಸಿ ನಡೆದು, ಅದರಲ್ಲಿರುವ ಆನಂದವೃತ್ತಿಗೆ ಭಂಗತರುವ ಸಂಭವವುಂಟು. ಶಿಕ್ಷಕರು ಅಂಥವರಿಗೆ ಯೋಗ್ಯ ರೀತಿಯಿಂದ ನೆರವಾಗಬೇಕು.

ಅನುವಂಶಿಕ ಹಾಗು ಪರಿಸ್ಥಿತಿಯ ಪರಿಣಾಮಗಳು

ಬಾಲಕರು ವೈಕಟ್ಟು ಮುಖಚರ್ಯೆಗಳಲ್ಲಿ ತಮ್ಮ ತಂದೆತಾಯಿಗಳನ್ನು ಹೋಲುತ್ತಿರುವರೆಂಬದನ್ನು ನಾವೆಲ್ಲರೂ ಬಲ್ಲೆವು. ಚಿಕ್ಕ ಮಗುವು ವೈಕಟ್ಟಿನಲ್ಲಿ ಇಲ್ಲವೆ ಮುಖಚರ್ಯೆಯಲ್ಲಿ ತಂದೆತಾಯಿಗಳನ್ನು ಹೋಲುತ್ತಿರುವದಷ್ಟೇ ಅಲ್ಲದೆ ನಡೆವಳಿಯಲ್ಲಿಯೂ ಮಕ್ಕಳು ಹಿರಿಯರನ್ನು ಹೋಲುವದುಂಟು. "ತಾಯಿಯಂತೆ ಕರು" ಎಂಬ ನಾಣ್ನುಡಿಯು ಈ ಮಾತಿನ ಸತ್ಯತೆಗೆ ಆಧಾರವಾಗಿದೆ. ತಾಯಿತಂದೆಗಳ ನಡೆವಳಿಯಲ್ಲಿಯ ಗುಣಾವಗುಣಗಳು ಮಕ್ಕಳಲ್ಲಿ ಕಂಡುಬರುವದು. ಅನುಕರಣದ ಪರಿಣಾಮವೆಂದು ಹೇಳಬಹುದಾಗಿದ್ದರೂ ತೀರ ಬಾಲ್ಯದಲ್ಲಿಯೇ ತಾಯಿತಂದೆಗಳನ್ನು ಕಳೆದುಕೊಂಡ ಮಕ್ಕಳಲ್ಲಿಯೂ ಕೂಡ ಈ ಮಾತು ಒಡೆದುಕಾಣಿಸುವಂಥ ಉದಾಹರಣೆಗಳೆಷ್ಟೋ ವ್ಯವಹಾರದಲ್ಲಿ ಕಂಡು ಬರುವವು. ಇದಕ್ಕೇ ನಾವು ಅನುವಂಶಿಕವೆನ್ನುವೆವು. ತಂದೆತಾಯಿಗಳಿಂದ ಇಲ್ಲವೆ ಅಜ್ಜ ಅಮ್ಮಂದಿರಿಂದ ಮಕ್ಕಳಲ್ಲಿಯೂ ಮೊಮ್ಮಕ್ಕಳಲ್ಲಿಯೂ ಬರುವಂಥ ಗುಣಾವಗುಣಗಳು ಅನುವಂಶಿಕವೆನಿಸುವವು.

ಕೆಲಕೆಲವು ಕುಟುಂಬಗಳಲ್ಲಿ ಕೆಲವೊಂದು ಶಾರೀರಿಕ ಘಟನೆಯು ಅನೇಕ ತಲೆಮಾರಾಂತರಗಳವರೆಗೂ ಒಂದೇಸವನೆ ನಡೆದು ಬಂದಿರುವದುಂಟು. ಮಾನಸಿಕ

ಗುಣಾವಗುಣಗಳು ಕೂಡ ವಂಶಪರಂಪರಾಗತವಾಗಿ ನಡೆದುಬರುವವೆಂಬುದು ನಿಜವಾಗಿದ್ದರೂ ಮಾನಸ ಶಾಸ್ತ್ರಜ್ಞರಿಗೆ ಈ ಮಾತು ಯಾವ ನಿಯಮವನ್ನು ಅನುಸರಿಸಿ ಹೇಗೆ ನಡೆದುಬರುವದೆಂಬದನ್ನು ಹೇಳಲು ಇನ್ನೂ ಸಾಧ್ಯವಾಗಿಲ್ಲ. ತಂದೆತಾಯಿಗಳಿಬ್ಬರೂ ಮಂದಬುದ್ಧಿಯವರಾಗಲಿ ಚಂಚಲಚಿತ್ತದವರಾಗಲಿ ಇದ್ದರೆ ಅವರ ಮಕ್ಕಳೂ ಹಾಗೆಯೇ ಮಂದಬುದ್ಧಿಯವರಾಗಲಿ ಚಂಚಲ ಚಿತ್ತದವರಾಗಲಿ ಆಗುವರೆಂಬ ಒಂದು ನಿಯಮವನ್ನು ತಕ್ಕಮಟ್ಟಿಗೆ ಸಾಮಾನ್ಯ ನಿಯಮವೆಂದು ಹೇಳಲು ಬರುವಂತಿದೆ. ಆದರೂ ಅತಿಶಯ ಜಾಗರೂಕಬುದ್ಧಿಯ ತಂದೆತಾಯಿಗಳ ಹೊಟ್ಟೆಯಲ್ಲಿ ಕೇವಲ ಮಂದಬುದ್ಧಿಯ ಮಕ್ಕಳು ಹುಟ್ಟಿದ ಉದಾಹರಣೆಗಳೇನೂ ಪ್ರಪಂಚದಲ್ಲಿ ಕಡಿಮೆಯಾಗಿಲ್ಲ. ಏನೇ ಇದ್ದರೂ ಸಪ್ಪಕ್ಕೆ ಸಾವು ಮಕ್ಕಳು ಹುಟ್ಟುವಾಗ ಕೆಲವೊಂದು ಆನುವಂಶಿಕ ಗುಣಾವಗುಣಗಳ ಬೀಜಗಳನ್ನೂ ಮಾನಸಿಕ ಶಕ್ತಿಗಳ ಅಂಕುರಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಹುಟ್ಟುವರು; ಪರಿಸ್ಥಿತಿ, ಸಹವಾಸ, ಶಿಕ್ಷಣ ಇವುಗಳಿಂದ ಆ ಮಾನಸಿಕ ಅಂಕುರಗಳು ಬೆಳೆದುಬಂದು ಮನುಷ್ಯನ ಬುದ್ಧಿ, ವಿಚಾರ, ಶೀಲ, ಚಟ, ಅಭ್ಯಾಸ ಮುಂತಾದ ಮಾನಸಿಕಶಕ್ತಿ ವ್ಯಾಪಾರಗಳ ಸ್ವರೂಪವನ್ನು ನಿದರ್ಶನ ತೊಡಗುವವು; ಎಂದು ಹೇಳಲು ಅಡ್ಡಿಯಿಲ್ಲ. ಆದುದರಿಂದ ಮಗುವಿನ ಮನಸ್ಸಿನೊಳಗಿನ ಆನುವಂಶಿಕ ಮನಃಶಕ್ತಿಯೆ ಬೀಜಗಳು ನಮಗೆ ಅನುಕೂಲವಾಗಿದ್ದಾಗ ಅವನ್ನೇ ಬೆಳಿಸಿ ವಿಕಾಸಗೊಳಿಸಿಕೊಳ್ಳಬಹುದು. ನಮಗೆ ಬೇಡಾದ ಗುಣಗಳ ಅಂಕುರಗಳು ಬಾಲಕರಲ್ಲಿ ಕಂಡುಬರತೊಡಗಿದರೆ ಅವನ್ನು ಎಳೆಯತನದಲ್ಲಿಯೇ ಹತ್ತಿಕ್ಕಿ ಕಮರಿಸಿಬಿಡಬಹುದು. ಶಿಶುಶಾಲೆಗಳಲ್ಲಿಯ ಶಿಕ್ಷಕರ ಕರ್ತವ್ಯವಾದರೂ ಈ ವಿಷಯದಲ್ಲಿ ಇಷ್ಟೇ ಇರುವದು. ಮೊದಲು ಬಾಲಕರ ಮನಃಪ್ರವೃತ್ತಿಗಳನ್ನು ಕಂಡುಕೊಂಡು ಒಳ್ಳೆಯವುಗಳನ್ನು ಪ್ರೋತ್ಸಾಹಿಸಿ ಬೆಳಸಿ ಬೆಳಕಿಗೆ ತರಬೇಕು; ಕೆಟ್ಟವುಗಳನ್ನು ಸಾಧ್ಯವಿದ್ದಮಟ್ಟಿಗೂ ಹತ್ತಿಕ್ಕಿ ಹಿಂದೆ ಇಡಬೇಕು. ಬಾಲಕರಿಗೆ ಅಂತಹ ಪರಿಸ್ಥಿತಿ ಸಹವಾಸ ಸನ್ನಿವೇಶಗಳನ್ನು ಒದಗಿಸಿಕೊಟ್ಟು ಈ ಕಾರ್ಯವು ತಾನಾಗಿಯೇ ನಡೆಯುವಂತೆ ಮಾಡಬೇಕಲ್ಲದೆ ಎಲ್ಲಿಯೂ ಬಲತ್ಕಾರವು ಕಂಡು ಬರಲಾಗದು. ಹುಟ್ಟುಗುಣವಾಗಿ ತೋರಿಬಂದು ಅಸಮಾಧಾನಕರವಾದ ಮನೆತನದ ವಾತಾವರಣದಲ್ಲಿ ಬೆಳೆಯಬಹುದಾದ ಅವಗುಣಗಳು ಶಿಶುಶಾಲೆಯ ವಾತಾವರಣದಲ್ಲಿ ಪರಿಶುದ್ಧಿ ಹೊಂದುವ ಸಂಭವವಿರುವದು.

ಮನೆತನದ ಅಸಮಾಧಾನಕರವಾದ ವಾತಾವರಣವೆಂದರೇನು? ಬಾಲಕರ ಅವಗುಣಗಳ ಬೆಳವಣಿಗೆಗೆ ಕುಟುಂಬದ ಬಡತನವೇ ಕಾರಣವೆಂದಾಗಲಿ ಮನೆತನ

ದಲ್ಲಿ ಇಂತಹ ಪರಿಸ್ಥಿತಿ ಸಹವಾಸ ಸನ್ನಿವೇಶಗಳ ಬಡತನದ ಮೂಲಕವಾಗಿಯೇ ಬದಗುವವೆಂದಾಗಲಿ ಹೇಳಲಾಗುವದಿಲ್ಲ. ಸೆರೆ ಕುಡಿದು ದುಂದಾಗಿ ಕುಣಿದಾಡುವದು. ಕುಟುಂಬದ ಜನರಲ್ಲಿ ಪರಸ್ಪರರು ಅವಾಚ್ಯಶಬ್ದಗಳಿಂದ ಬೈದಾಡುವದು, ಬಗಳಾಡುವದು, ಸದಾ ಅಶ್ಲೀಲ ಅಸಭ್ಯ ಆಚರಣೆಗಳು ನಡೆಯುವದು ಇವೇ ಮೊದಲಾದವುಗಳನ್ನು ನೋಡುವದರಿಂದ ಬಾಲಕರಲ್ಲಿ, ಕಟುಕನ ಮನೆಯಲ್ಲಿ ಸಾಕಿದ ಗಿಳಿಯ ವರಿಯಂತೆ, ಈ ಗುಣಗಳು ತಾವಾಗಿ ಸೇರಿ ಬೆಳೆಯತೊಡಗುವವು, ಅಲ್ಲದೆ ಅನುಚಿತವಾದ ಅಚ್ಚಿಯಿಂದ ಸಾಕಿದ ಮಗುವಿಗೆ ಅದರ ತಾಯಿ ತಂದೆಗಳು ಇದು ಬೇಡಿದ್ದನ್ನೆಲ್ಲ ಕೊಟ್ಟು ಹೇಳಿದ್ದನ್ನೆಲ್ಲ ಕೇಳಿ ಮಾಡಿದ್ದನ್ನೆಲ್ಲ ಮಾಡಿಸಿ ಕೊಳ್ಳುವದರಿಂದ, ಅದನ್ನೊಂದು ಹಟಮಾರಿತನದ ಮೂರ್ತಿಯನ್ನಾಗಿಯೂ ಸ್ವಾರ್ಥದ ಗೊಂಬೆಯನ್ನಾಗಿಯೂ ಮಾರ್ಪಡಿಸುವರೆಂದರೆ ಏನೂ ಅಡ್ಡಿಯಿಲ್ಲ. ಇದೀಗ ಅಸಮಾಧಾನವಾದ ಮನೆತನದ ವಾತಾವರಣವೆನಿಸುವದು. ಇದಕ್ಕೆ ವಿರುದ್ಧವಾಗಿ ಮನೆತನದ ಜೀವನಕ್ರಮವು ತುಂಬಾ ಸಮಾಧಾನಕರವಾಗಿದ್ದು ಮಗುವಿನ ಬೆಳವಣಿಗೆಗೆ ತುಂಬ ಅನುಕೂಲವಾದ ಪರಿಸ್ಥಿತಿಯುಳ್ಳದ್ದಾಗಿರುವದೂ ಉಂಟು. ಅಲ್ಲಿ ಮಗುವಿಗೆ ಸುರುಚಿರವಾದ ಸುಖಕರವಾದ ಅನ್ನವಸ್ತ್ರಗಳು ದೊರೆಯುವವು; ಒಳ್ಳೆಯ ಶೀಲ ಚಟ ಅಭ್ಯಾಸಗಳಿಗೆ ಬೇಕಾದಷ್ಟು ಮನೆತನದ ಜನರ ಒಳ್ಳೆಯ ಮಾದರಿಗಳು ಅವರ ಮುಂದಿರುವವು. ಅದಕ್ಕೆ ಒಳ್ಳೆಯ ಶೀಲ ಸ್ವಭಾವಗಳನ್ನು ಕಲಿಸುವರು; ಅದರ ಆಟನೋಟಗಳಿಗೂ ಮನಃಪ್ರವೃತ್ತಿಗಳ ಬೆಳವಣಿಗೆಗೂ ಬೇಕಾದ ಎಲ್ಲಬಗೆಯ ಉಪಕರಣಗಳ ಅನುಕೂಲತೆಯಿರುವದು; ಆದರೆ ಅದಕ್ಕೂ ಅಲ್ಲಿ ಒಂಸೇ ಒಂದು ಕೊರತೆಯಿರುವ ಸಂಭವವಿರುವದು. ಸಮಾನ ವಯಸ್ಸಿನ ಬಾಲಕರ ಸಹವಾಸ, ಅವರೊಡನೆ ಆಟನೋಟಗಳಿಂದ ಆನಂದಪಡುವದು ಇವು ಇರವ್ವರಿಂದ ಮುಂದಿನ ಜೀವನದಲ್ಲಿ ಸಂಭವಿಸುವ ಅತಿ ಮಹತ್ವವಿದ್ದಾದ ಸಾಮಾಜಿಕ ಜೀವನಕ್ಕೆ ತಕ್ಕ ತಳಹದಿಯನ್ನು ಹಾಕಬೇಕಾಗಿರುವ ಈ ವಯಸ್ಸಿನಲ್ಲಿ ಇಂಥ ಸಹವಾಸ ಸನ್ನಿವೇಶಗಳು ಇಲ್ಲದಿರುವದೊಂದೇ ಆ ಮಗುವಿಗಿರುವ ಕೊರತೆ ಯೆನಿಸುವದು.

ಶಿಶುಶಾಲೆಗಳು ಮೇಲೆ ಹೇಳಿದಂಥ ಮನೆತನದ ಅಸಮಾಧಾನಕರವಾದ ವಾತಾವರಣವನ್ನು ಬದಲಿಸಿ ಕೆಟ್ಟ ಪರಿಸ್ಥಿತಿಯಿಂದ ಆಗಬಹುದಾದ ದುಷ್ಪರಿಣಾಮ ಗಳನ್ನು ತಪ್ಪಿಸಿ ದುಸ್ಥಿತಿಯಿಲ್ಲದಿದ್ದರೂ ಸಮ ವಯಸ್ಸಿನ ಸಹವಾಸಿಗಳ ಒಡನಾಟದ ಕೊರತೆಯೆಂಬ ಮತ್ತೊಂದು ಪ್ರಕಾರದ ನ್ಯೂನತೆಯನ್ನು ಪೂರ್ತಿಗೊಳಿಸಿ ಬಾಲಕ ರಲ್ಲಿ ಸದ್ಗುಣಗಳ ಪೋಷಣೆಗೂ ಒಳ್ಳೆಯ ಮನಃಪ್ರವೃತ್ತಿಗಳ ಉತ್ಪತ್ತಿ ಬೆಳವಣಿಗೆ ಗಳಿಗೂ ಸಹಾಯಮಾಡುವವು.

ಹುಟ್ಟು ಗುಣಗಳು

ಹುಟ್ಟುಗುಣವೆಂದರೇನು? ಸ್ವಭಾವ ಅಥವಾ ಹುಟ್ಟುಗುಣವೆಂಬದು ಪ್ರಾಣಿಗಳಿಗೆ ಸಹಜವಾಗಿ ಬಂದಿರುವದು. ಇದರ ಮೂಲಕವಾಗಿ ಮನುಷ್ಯ ಪ್ರಾಣಿಯ ಶರೀರಕ್ಕೂ ಮನಸ್ಸಿಗೂ ಸೃಷ್ಟಿಯೊಳಗಿನ ಪದಾರ್ಥಗಳಿಗೂ ಒಂದು ಬಗೆಯ ವಿಶಿಷ್ಟಸಂಬಂಧವುಂಟಾಗುವದು. ಒಬ್ಬನು ಒಂದು ಪದಾರ್ಥವನ್ನು ಒಂದುಬಗೆಯಾಗಿ ನೋಡಿದರೆ ಮತ್ತೊಬ್ಬನು ಅದೇ ಪದಾರ್ಥವನ್ನು ಇನ್ನೊಂದು ಪ್ರಕಾರವಾಗಿ ನೋಡುವನು. ಒಬ್ಬನಿಗೆ ರುಚಿಯೆನಿಸುವ ಪದಾರ್ಥವು ಇನ್ನೊಬ್ಬನಿಗೆ ಸೇರಲಿಕ್ಕಿಲ್ಲ. ಒಬ್ಬನು ಪ್ರೀತಿಸುವ ಪದಾರ್ಥವನ್ನು ಇನ್ನೊಬ್ಬನು ಅನಾದರ ಮಾಡಬಹುದು. ಇಲ್ಲವೆ ಅದರ ಮೇಲೆ ತಿರಸ್ಕಾರವನ್ನೂ ತೋರಿಸಬಹುದು. ಒಬ್ಬನು ಕೇಳಿ ಆನಂದಪಡುವ ದನಿಯಿಂದ ಇನ್ನೊಬ್ಬನಿಗೆ ಬೇಸರವುಂಟಾಗಬಹುದು. ಅರ್ಥಾತ್ ಮನುಷ್ಯನು ಕಂಡು ಕೇಳುವ ಅನುಭವಿಸುವ ಬೇರೆ ಬೇರೆ ಪದಾರ್ಥಗಳ ಸಂಬಂಧದಿಂದ ಅವನಿಗಿರುವ ಇಲ್ಲವೆ ಉಂಟಾಗುವ ಮಾನಸಿಕ ಸಹಜವಾದ ಪ್ರವೃತ್ತಿಯು ಒಂದು ಬಗೆಯಿಂದ ಅವನ ಹುಟ್ಟು ಗುಣದ ದ್ಯೋತಕವಾಗಿರುವದು.

ಪ್ರಾಣಿಗಳಿಗೆ ವಿಚಾರಶಕ್ತಿಯಿರುವದಿಲ್ಲ. ಎಂದರೆ ಒಳಿತು ಹೀನಗಳನ್ನಾಗಲಿ ಮುಂದೆ ಆಗಬಹುದಾದ ಪರಿಣಾಮವನ್ನಾಗಲಿ ಕುರಿತು ಅವು ಆಲೋಚಿಸಲಾರವು. ಆದ್ದರಿಂದ ಅವುಗಳಲ್ಲಿ ಹುಟ್ಟುಗುಣಗಳಿಗೇ ಪ್ರಾಧಾನ್ಯವಿರುವದು. ಎಂದ ಅವುಗಳ ಕಾರ್ಯಗಳೆಲ್ಲ ಆ ಹುಟ್ಟುಗುಣಗಳನ್ನು ಅವಲಂಬಿಸಿಯೇ ನಡೆಯುವವು. ಉದಾ:— ಚಳಿಗಾಲಕ್ಕಾಗಿ ಆಹಾರವನ್ನು ಸಂಗ್ರಹಿಸಿಡುವದು ಇಣಚಿಯ ಒಂದು ಹುಟ್ಟುಗುಣವು. ಅದು ಅಡವಿಯಲ್ಲಿರುವಾಗಲೂ ಈ ಕಾರ್ಯವನ್ನು ಮಾಡುವದು. ನಾವು ಸಾಕಿದ ಇಣಚಿಯೂ ಈ ಕಾರ್ಯವನ್ನು ಮಾಡುವದು. ಹುಟ್ಟನ್ನು ಕಟ್ಟುವದರಲ್ಲಿಯೂ ಮರಿಗಳಿಗಾಗಿ ತುಪ್ಪವನ್ನು ಸಂಗ್ರಹಿಸುವದರಲ್ಲಿಯೂ ಆಯುಷ್ಯವನ್ನೆಲ್ಲ ಕಳೆಯುವದು ಜೇನುನೊಣದ ಹುಟ್ಟುಗುಣವಾಗಿದೆ. ಕೆಲಕೆಲವು ಕ್ರಿಮಿಕೀಟಗಳು ಮೊಟ್ಟೆಯಿಂದ ಹೊರಗೆ ಬಂದ ಕೂಡಲೆ ತಮ್ಮ ಮರಿಗಳಿಗೆ ಸಾಕಷ್ಟು ಆಹಾರವು ದೊರೆಯಬಹುದಾದ ಸ್ಥಳವನ್ನು ನೋಡಿಯೆ ತತ್ತಿಯಿಡುವವು. ಈ ಎಲ್ಲ ಕಾರ್ಯಗಳು ಆ ಪ್ರಾಣಿಗಳ ವಿಚಾರದ ಪರಿಣಾಮವೆಂದು ಹೇಳಲಾಗುವದಿಲ್ಲ. ಅವು ಆ ಪ್ರಾಣಿಗಳಲ್ಲಿರುವ ಹುಟ್ಟುಗುಣದ ದ್ಯೋತಕವಾಗಿರುವವು. ಈ ಹುಟ್ಟುಗುಣಗಳ ಮೂಲಕವಾಗಿ ಅವು ಈ ಬಗೆಯ ಕಾರ್ಯಗಳನ್ನು ಎಲ್ಲಿದ್ದರೂ ಮಾಡೇತೀರುವವು. ಇವು ಆ ಪ್ರಾಣಿಗಳ ಸ್ವಭಾವವೆನಿಸಿಕೊಂಡಿರುವವು. ಮನುಷ್ಯ ಪ್ರಾಣಿಯಲ್ಲಿಯೂ ಇಂಥ ಹಲವು ಹುಟ್ಟುಗುಣಗಳು ಅನೂಚಾನವಾಗಿ

ಸಿದು ಬಂದಿರುವವು. ಹುಟ್ಟಿದ ಮಗುವಿಗೆ ಮೊಲೆಯುಣ್ಣಲು ಯಾರೂ ಕಲಿಸ
ೀಕಾಗುವದಿಲ್ಲ. ಅಳುವದನ್ನೂ ಬೆಳಕಿಗೆ ಬಂದೊಡನೆ ಕಣ್ಣು ಪಿಳಕಿಸುವದನ್ನೂ
ಮು ಪರರಿಂದ ಕಲಿಯುವದಿಲ್ಲ. ಈ ಮಾತುಗಳನ್ನು ಅದು ಹುಟ್ಟುವಾಗಲೇ
ಶಿತು ಬಂದಿರುವದು. ಬರಬರುತ್ತ ಬುದ್ಧಿಶಕ್ತಿಯು ಬೆಳೆವಣಿಗೆಯಾದಂತೆ
ಕಾರ್ಯಕಾರಣಭಾವವನ್ನು ಇಲ್ಲವೆ ತಾನು ಮಾಡುವ ಕಾರ್ಯದ ಪರಿಣಾಮವನ್ನು
ಆಲೋಚಿಸುವ ಶಕ್ತಿಯುಂಟಾದ ಬಳಿಕ ಅದರಲ್ಲಿ ಮತ್ತೆ ಕೆಲವು ಸ್ವಭಾವಗಳು
ಬೆಳೆದೋರಬಹುದು. ಆದರೆ ಪಶುಗಳ ಹುಟ್ಟುಗುಣಕ್ಕೂ ಮನುಷ್ಯಪ್ರಾಣಿಯ
ಹುಟ್ಟುಗುಣಕ್ಕೂ ತಾರತಮ್ಯವಿರುವದು. ಮನುಷ್ಯಪ್ರಾಣಿಯು ಯೋಗ್ಯಾ
ಯೋಗ್ಯ ವಿಚಾರ ಮಾಡುವ ಶಕ್ತಿಯಿರುವ ಪ್ರಾಣಿಯಾದ್ದರಿಂದ ಅವನ ಕಾರ್ಯ
ಗಳು ಪಶುಪಕ್ಷಿಗಳಂತೆ ಕೇವಲ ಹುಟ್ಟುಗುಣಗಳನ್ನೇ ಅವಲಂಬಿಸಿಕೊಂಡಿರುವದಿಲ್ಲ.
ಅವನು ವಿಚಾರಬಲದಿಂದ ತನ್ನ ಹುಟ್ಟುಗುಣಗಳ ಪ್ರಾಬಲ್ಯವನ್ನು ತಗ್ಗಿಸಿ ಅವನ್ನು
ತನ್ನ ಅಧೀನಕ್ಕೆ ತಂದುಕೊಳ್ಳಲು ಸಮರ್ಥನಾಗುವನು. ಮನುಷ್ಯನು ತನ್ನ
ಹುಟ್ಟುಗುಣಗಳನ್ನು ಕೇವಲ ಅಂಧನಾಗಿ ಅನುಸರಿಸುವದಿಲ್ಲ, ಅವನು ಹುಟ್ಟುಗುಣ
ಗಳಮೂಲಕವಾಗಿ ತಾನು ಮಾಡುವ ಕಾರ್ಯಗಳ ಪರಿಣಾಮವು ಏನಾಗಬಹುದು?
ಅದು ತನಗೆ ಹಿತಕಾರಿಯೋ ತನ್ನ ಸಮಾಜಕ್ಕೆ ಹಿತಕಾರಿಯೋ ಎಂಬದನ್ನು ವಿಚಾರ
ಮಾಡಿ ನೋಡಿ ಕೆಲವೊಂದು ನಿರ್ಣಯಕ್ಕೆ ಮುಟ್ಟಿದ ತರುವಾಯ ಆ ತನ್ನ ಹುಟ್ಟು
ಗುಣಗಳಿಂದ ಆಗುವ ಪ್ರೇರಣೆಯನ್ನು ತನಗೆ ತಕ್ಕಂತೆ ಮಾರ್ಪಡಿಸಿಕೊಳ್ಳುವನು.
ಇದಕ್ಕೇ ನಾವು ಆತ್ಮಸಂಯಮನವೆನ್ನುವೆವು. ಈ ಗುಣವನ್ನು ನಾವು ಬಾಲಕರಲ್ಲಿ
ಹುಟ್ಟಿಸಿ ಬೆಳಿಸಬೇಕಾಗುವದು.

ಬುದ್ಧಿಶಕ್ತಿಯ ಬಲದಿಂದಲೂ ಬುದ್ಧಿಪೂರ್ವಕವಾಗಿ ಮಾಡುತ್ತಿರುವ
ಕಾರ್ಯಗಳ ಮೂಲಕವಾಗಿಯೂ ಮನುಷ್ಯನ ಹುಟ್ಟುಗುಣಗಳು ಅವನ ಶೀಲ-
ಪಟ-ಅಭ್ಯಾಸಗಳ ರೂಪವನ್ನು ಹೊಂದುವವು; ಈ ಮಾತು ಒಬ್ಬೊಬ್ಬ ವ್ಯಕ್ತಿಗೂ
ದೇಶಕ್ಕೂ ಸಮನ್ವಯಿಸುವದು; ಎಂದು ಮಾನಸಶಾಸ್ತ್ರಜ್ಞರು ವರ್ಣಿಸುವರು.
ಮನುಷ್ಯನು ಬಾಳುವ ಸಮಾಜದ ಪರಿಸ್ಥಿತಿಗೆ ಅನುಗುಣವಾಗಿ ಹುಟ್ಟುಗುಣಗಳು
ಬೆಳೆದು ಅವನ ಶೀಲ ಸ್ವಭಾವಗಳಾಗಿ ಮಾರ್ಪಡುವವು. ಸುಧಾರಿಸಿದ ಸಮಾಜ
ದಲ್ಲಿ ವಾಸಿಸುವ ಮನುಷ್ಯನು ತನ್ನ ಹುಟ್ಟುಗುಣಗಳನ್ನು ಅಂಕಿತದಲ್ಲಿಟ್ಟುಕೊಂಡು
ತನಗೂ ತನ್ನ ಸಮಾಜಕ್ಕೂ ಹಿತಕರವಾದ ರೀತಿಯಲ್ಲಿ ಮಾರ್ಪಡಿಸಿಕೊಳ್ಳುವಂತೆ
ಅಶಿಕ್ಷಿತ ಸಮಾಜದಲ್ಲಿ ಹುಟ್ಟಿ ಬೆಳೆದ ಮನುಷ್ಯನು ತನ್ನ ಹುಟ್ಟುಗುಣಗಳನ್ನು
ಅಂಕಿತದಲ್ಲಿಟ್ಟುಕೊಳ್ಳುವ ಆತ್ಮಸಂಯಮನಶಕ್ತಿಯನ್ನು ಪಡೆದಿರಲಾರನು.

(ಮುಂದೆ ಸಾಗುವದು.)

ಪ್ರಕಟನೆ

ಕೆಳಗೆ ಬರೆದ ಪುಸ್ತಕಗಳು ಧಾರವಾಡ ಕನ್ನಡ ಬುಕ್ ಕಮೀಟಿಯವರಿಂದ ಕೆಳಗೆ ಬರೆದಂತೆ ಮಂಜೂರಾಗಿವೆ

T=ಟೆಕ್ಸ್ಟ L=ಲಾಯಬ್ರರಿ ಬುಕ್ಕು ವಿ=ವಿದ್ಯಾರ್ಥಿಗಳು ಶಿ=ಶಿಕ್ಷಕರು ಟ್ರೇ. ಸಂ.=ಟ್ರೇನಿಂಗ ಸಂಸ್ಥೆಗಳು ಪ್ರಾ. ಶಾ=ಪ್ರಾಥಮಿಕ ಶಾಲೆ

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾತಕ್ಕೋಸ್ಕರ ಮಂ.	ಪ್ರಾ. ಸಾ. ರ ನಂ.	ಡಾ. ಸಾ. ರ ನಂ.
೧	ಕನ್ನಡ ಬಾಲ ಬೋಧೆ ೩ನೆ ಆ. ಗ್ರಂಥಿ	ವಿ. ಎಸ್. ಎಫ್. ಕಟ್ಟೀಮನಿ.	ಎಸ್. ಎಫ್. ಕಟ್ಟೀಮನಿ ಹೆ। ಮಾ. ಕನ್ನಡ ಬಾಯ್ಸ್ ಸ್ಕೂಲ ನಂ. ೧ ಹುಬ್ಬಳ್ಳಿ	ಸಾದಾ ೦–೧–೯ ಚಲೋ ಕಾಗದ ೦–೩–೦	ಪ್ರಾ. ಶಾ. ಗಳ ಬುಕ್ಕಾಗಿ	T 47 | P.7995 20-2-37	S-86-c 697-C. 23-1-1937
೨	ಶ್ರೀನರಸಿಂಹ ರಾಜ ಕ. ಛಂದೋ ರಾಜವ್ ಗ್ರಂಥಿ	ಪಂಡಿತ ಜೆ. ರಘು ಪತ್ಯಾಚಾರ್ಯ ಮೈಸೂರು		..	ವ್ಯ. ಟ್ರೇ. ಸಂ. ಗಳ ವಿ. ಗಳ ಮತ್ತು ಮಾ.ಶಾ. ವಿ. ಗಳL	ಸದರ 7997 ಸದರ	S-86-c 702-c 26-1-1937
೩	ಪಾಕಶಾಸ್ತ್ರ ಭಾ. ೨ ೩ನೆ ಆ. ಗ್ರಂಥಿ	ಸದರ	ವಿ. ಗುಂಡಾ ಚಾರ್ಯ ಮೈಸೂರ	೦–೧೨–೦	ಪ್ರಾ. ಶಾ. ವಿ. ಗಳ ವ್ಹ. ಟ್ರೇ ಸಂ. ಗಳ ವಿ. ಗಳ ಮಾ. ಶಾ. ಗಳ ವಿ. L	7993 ಸದರ	S-86-c-700-c ಸದರ
೪	ಬಾಲಕರ ಸಚಿತ್ರ ನೀತಿ ಕಥಾವಳಿ ಬಾ. ೩	ವಿ. ರಾಮರಾವ ಆನವಟ್ಟಿ ಕವಿ ಮೈಸೂರ	ಕೆ. ವ್ಹಿ. ರಾಮಶೆಟ್ಟಿ ಜಯ ಸ್ಟೋರ್ಸ ಮೈಸೂರ	೦ ೪–೦	ಪ್ರಾ. ಶಾ. ಗಳ ವಿ. ಗಳ ಮಾ. ಶಾ. ಗಳ ವಿ. L	7991 ಸದರ	ಸದರ 706 23-1-1937

೧೯

೫	ಶ್ರೀ. ತ್ಯಾಗರಾಜ ಸ್ವಾಮಿಯವರ ಚರಿತ್ರೆ ಗನೆ ಆ. ಗ್ರಂಥಿ	ಸದರ	ಸದರ	೦-೪-೦	ಟ್ರೇ. ಸಂ. ಗಳ ಹಾಗು ಮಾ. ಶಾ. ವಿ. ಗಳ ಹಾಗು ಪ್ರಾ. ಶಾ. ಗಳ ಶಿ. ರ L	7989 20-2-37	ಸದರ 707 23-1-37
೬	ಭ್ರಾತೃ ಭಕ್ತಾ ಗ್ರಣಿ ಲಕ್ಷ್ಮಣ ಮೂರ್ತಿ ಗ್ರಂಥಿ	ವಿ. ವಾಯ್. ಎಸ್. ಗುಂಡಪ್ಪ	ವಾಯ್. ಎಸ್. ಗುಂಡಪ್ಪ ಶ್ರೀ ಬ್ರಹ್ಮಚೈತನ್ಯ ಸ್ಟೇಶನರಿ ಮಾರ್ಟ್ ಚಿಂತಾಮಣಿ	೦-೬-೦	ಪ್ರಾ. ಶಾ. ಗಳ ಹಾಗು ಟ್ರೇ ಸಂ. ಗಳ ಮತ್ತು ಮಾ. ಶಾ. ಗಳ ವಿ. ಗಳ L	7987 20-2-37	ಸದರ 703 26-1-37
೭	ಬಾಲಕರ ಸಚಿತ್ರ ನೀತಿ ಕಥಾವಳಿ ತಿದ್ದಿ ಬೆಳಿಸಿದ ಗನೆ. ಆ. ಗ್ರಂಥಿ	ವಿ. ರಾಮರಾವ ಆನವಟ್ಟಿ ಆಸ್ಥಾನ ವಿದ್ವಾನ್ ಮೈಸೂರ	ಕೆ. ವ್ಹಿ. ರಾಮಶೆಟ್ಟಿ ಜಯಸ್ಟೋರ್ಸ ಮೈಸೂರ	೦-೩-೦	ಪ್ರಾ. ಶಾ. ಗಳ ಹಾಗು ಮಾ. ಶಾ. ವಿ. ಗಳ L	7985 20-2-37	ಸದರ 704 23-1-37
೮	ಗೃಹವೈದ್ಯ ಭಾಗ ೧ ಶಕೆ ೧೮೪೪	ವಿ. ಆರ್. ಟಿ. ಸಿದ್ದೇಶ್ವರ ಶ್ರೀ. ನಂದಿನಿ ಕಾರ್ಯಾಲಯ ಶಿರ್ಶಿ	ಎಸ್. ವಿ. ಭಡತಿ ನಂದಿನಿ ಕಾರ್ಯಾಲಯ ಗೋಕರ್ಣ	೦-೧೦-೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ ಶಿ. ರ ಮತ್ತು ವ್ಹ. ಟ್ರೇ. ಸಂ. ಗಳ ಶಿ. ರ L	7983 20-2-87	ಸದರ 698 26-1-37

ಸಂ	ಪುಸ್ತಕಗಳ ಹೆಸರು	ಗ್ರಂಥಕರ್ತರು	ಪ್ರಕಾಶಕರು	ಬೆಲೆ	ಯಾತಕ್ಕೋಸ್ಕರ ಮಂಜೂರ ಇ.	ಸಾರ ನಂ	ಡಾಯರೆಕ್ಟರ ಸಾರನಂ
೯	ಕರ್ನಾಟಕ ಕೃತಿ ರತ್ನ ಮಾಲಾ ಭಾ. ೧. ೧೯೩೩	ವಿ. ಆನವಟ್ಟಿ ರಾಮರಾವ ಆಸ್ಥಾನ ವಿದ್ವಾನ ಮೈಸೂರ	ಆನವಟ್ಟಿರಾಮರಾವ ಮೈಸೂರ	೧–೦–೦	ಪ್ರಾ. ಶಾ.ಗಳ ಶಿ. ರ ಹಾಗು ಟ್ರೇ. ಸಂ. ಗಳ ವಿ. ಗಳ ಹಾಗು ಶಿ.ರ. ಮಾ. ಶಾ.ಗಳ ಶಿ. ರ L	7981 20-2-37	,, 708 23-1-37
೧೦	'ತಾಲಿ' ೧೯೩೬	ಪಂ. ಶ್ರೀಕಂಠಶಾಸ್ತ್ರಿ ಕ. ಪಂ. ಮಹಾರಾಜಾ ಗ॥ ಹೈಸ್ಕೂಲ ಮೈಸೂರ	ಗ್ರಂಥಕರ್ತರು	೦–೮–೦	ಹೈ. ಟ್ರೇ. ಸಂ. ಗಳ ವಿ. ಗಳ ಮಾ. ಶಾ. ವಿ ಗಳ L	7979 20-2-37	,, 709 23-1-37
೧೧	ಮಾಸ ಮಾಹಾತ್ಮ್ಯ ಶಕೆ ೧೮೫೦	ವಿ. ರಾಮ ತಿರುಮಲಭಟ್ಟ ಸಿದ್ಧೇಶ್ವರ ಶರ್ಮ	ಜಿ. ಎಸ್. ಭಡತಿ ನಂದಿನಿ ಕಾರ್ಯಾಲಯ ಗೋಕರ್ಣ	೧–೦–೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ಮಾ. ಶಾ. ಗಳ ಶಿ. ರ L	7977 20-2-37	ಸದರ 710 23-1-37
೧೨	ಬಾಲಕರ ಸಚಿತ್ರ ನೀತಿಕಥಾವಳಿ ಭಾ. ೨ ತಿದ್ದಿ ಬಿ. ೩೫೫೮. ೧೯೩೬	ಆನವಟ್ಟಿರಾಮರಾವ ಆಸ್ಥಾನ ವಿದ್ವಾನ ಮೈಸೂರು	ಕೆ. ವಿ. ರಾಮಶೆಟ್ಟಿ ಜಯಸ್ಟೋರ ಮೈಸೂರ	೦–೩–೦	ಪ್ರಾ. ಶಾ. ಗಳ ಮಾ. ಶಾ. ಗಳ ವಿ. ಗಳ L	7975 20-2-37	ಸದರ 705 23-1-37

೧೫	ಅಶಾಂತಿಪರ್ವ ೧೯೩೫	ಕವಿಭೂಷಣ ಬೆಟಗೇರಿ	ಎಂ. ಟಿ. ಡಿ. ಶಿವ ಲಿಂಗಯ್ಯ ಕರ್ನಾಟಕ ಸಾಹಿತ್ಯ ಮಂ. ಧಾರವಾಡ	೧ ೮-೦ ಸಾ. ಬಾ. ೨-೮-೦ ಕ್ಯಾ. ಬಾ.	ವ್ಹ. ಟ್ರೇ. ಸಂ. ಗಳ ಹಾಗು ಪ್ರಾ. ಶಾ. ಗಳ ಮತ್ತು ಮಾ. ಶಾ. ಗಳ ವಿ. ಗಳ L	7863 20-2-37	ಸದರ 699 26-1-37
೧೪	ಕರ್ನಾಟಕ ವೇಣೀ ಸಂಹಾರ ನಾಟಕಂ	ಪಂ. ರಘು ಪತ್ಯಾಚಾರ್ಯ ಪೊಂಟಿಕೊಪ್ಪಳ ಕವಿ. ಮೈಸೂರು	ಆರ್. ಗುಂಡಾ ಚಾರ್ಯ ಮೈಸೂರು	೧-೪-೦	ಪ್ರಾ. ಶಾ. ಗಳ ಟ್ರೇ. ಸ. ಗಳ ಹಾಗು ಮಾ. ಶಾ. ಗಳ ಶಿ. ರ L	8180 4-3-37	ಸದರ 701 23-2-37

ಸೈಯದ ನೂರುಲ್ಲಾ
ಎ. ಇ. ದ. ಭಾ.

೧೯೩೭ನೆಯ ಇಸ್ವಿಯ ಏಪ್ರಿಲ ತಿಂಗಳಿನಲ್ಲಾಗುವ ಕನ್ನಡ ಗಂಡುಮಕ್ಕಳ ವ್ಹಿ. ಫಾ ಪರಿಕ್ಷೆಯ ವೇಳಾಪತ್ರಿಕೆಯು.

ದಿವಸ ಹಾಗು ತಾರೀಖು	ವೇಳೆ		ವಿಷಯಗಳು	ಗುಣಗಳು	ಸೂ
	ಇಂದ	ವರೆಗೆ			
ಸೋಮವಾರ	೧೦	೧೧	ಉಮೇದವಾರರ ಹಾಜರಿ ತಕ್ಕೊಳ್ಳುವದು		
೫-೪-೩೭					
ಸದರ	೧೧	೧	೨ನೆಯ ಸದರು (ಅ) ಹಾಗು (ಬ) ನಿಬಂಧ ಅಥವಾ ರಿಪೋರ್ಟ ಮತ್ತು ಕೈಬರಹ	(ಅ) ೫೦ (ಬ) ೨೫	
ಸದರ	೨	೫	೫ನೆಯ ಸದರು ಆರೋಗ್ಯವಿಜ್ಞಾನ (ಶರೀರಶಾಸ್ತ್ರ) ಶಾಸ್ತ್ರೀಯ ವಿಷಯ (೭ನೆಯ ಪುಸ್ತಕದಲ್ಲಿದ್ದಷ್ಟು)	೧೦೦	
ಮಂಗಳವಾರ	೧೧	೨	೩ನೆಯ ಸದರು (ಅ) ಗಣಿತ	೧೦೦	
೬-೪-೩೭					
ಸದರ	೩	೬	೪ನೆಯ ಸದರು (ಅ) ಹಾಗು (ಬ) ಇತಿಹಾಸ (ಭೂಗೋಲ)	(ಅ) ೫೦ (ಬ) ೫೦	
ಬುಧವಾರ	೧೧	೨	೩ನೆಯ ಸದರು (ಬ) ಹಾಗು (ಕ) ಭೂಮಿತಿ ಮತ್ತು ದೇಶೀಯ ಜಮಾ ಖರ್ಚು	ಬ (೫೦) (ಕ) ೫೦ (ಬ) ೪೫; (೨೫ ಗದ್ಯ ೨೦ ಪದ್ಯ) (ಕ) ೩೦	
೭-೪-೩೭					
ಸದರ	೩	೬	೧ನೆಯ ಸದರ (ಬ) ಹಾಗು (ಕ) ಭಾಷಾವಿಷಯ		
ಗುರುವಾರ	೭	೧೧	ಬಾಯಿ ಪರೀಕ್ಷೆ ೧ನೆ ಸದರು (ಅ) ಹಾಗು (ಡ) ಮೊದಲು	(ಅ) ೩೦ (ಡ) ೨೦	
೮-೪-೩೭					
ಸದರ	೨	೬	ಪರಸ್ಥಳದವರದು ಮೊದಲು, ಆ ಮೇಲೆ ಸ್ಥಳಿಕ ವಿದ್ಯಾರ್ಥಿಗಳ ಪರೀಕ್ಷೆ ತೆಗೆದುಕೊಳ್ಳುವರು		

ಸೂ. ಉಮೇದವಾರರು ಪರೀಕ್ಷೆಯ ಮೊದಲನೆ ದಿವಸ ಗೊತ್ತಾದ ವೇಳೆಗಿಂತ ೧ ತಾಸು ಮೊದಲೇ ಪರೀಕ್ಷೆಯ ಹಾಲಿನಲ್ಲಿ ಹಾಜರ ಇರಬೇಕು.

೧೯೩೭ನೆಯ ಇಸ್ವಿಯ ಏಪ್ರಿಲ ತಿಂಗಳಲ್ಲಾಗುವ ಅಲ್ವರನೇಟಿವ ಅಗ್ರಿಕಲ್ಚರಲ್ ಜಾಯಿಂಟ್
ವ. ಫಾ. ಪರೀಕ್ಷೆಯ ವೇಳಾತ್ರಿಕೆ

ದಿವಸ ಹಾಗು ತಾರೀಖು	ವೇಳೆ ಇಂದ	ವರೆಗೆ	ವಿಷಯ	ಗುಣ	ಶಕಾ
ಸೋಮವಾರ ೫–೪–೩೭	೧೦	೧೧	ಉಮೇದವಾರರ ಹಾಜರಿ ತಕ್ಕೊಳ್ಳುವದು		
ಸದರ	೧೧	೧	೨ನೆ ಸದರು (ಅ) ಹಾಗು (ಬ) ನಿಬಂಧ ಅಥವಾ ರಿಪೋರ್ಟ ಹಾಗು ಕೈ ಬರಹ	ಅ ೫೦ ಬ ೨೫	* ಬಾಯಿಪರೀಕ್ಷೆ
ಸದರ	೨	೪	೫ನೆ ಸದರು (ಅ) ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು ಹಾಗು (ಬ) ಆರೋಗ್ಯಶಾಸ್ತ್ರ	ಅ ೨೫ ಬ ೨೫	೬ ೫೦
ಮಂಗಳವಾರ ೬–೪–೩೭ ಸದರ	೧೧	೨	೩ನೆ ಸದರು (ಅ) ಗಣಿತ (ಬ) ಕ್ಷೇತ್ರಫಲ (ಕ) ದೇಶೀಯ ಜಮಾ ಖರ್ಚು	ಅ ೫೦ ಬ ೨೫ ಕ ೨೫	
	೩	೬	೪ನೆ ಸದರು (ಅ) ರಾಜ್ಯದಾಡಳಿತ (ಬ) ಸಹಕಾರ (ಕ) ಭೂಗೋಲ	ಅ ೨೫ ಬ ೨೫ ಕ ೫೦	
ಬುಧವಾರ ೭–೪–೩೭ ಸದರ	೧೧	೨	೬ನೆ ಸದರು (ಅ) ಒಕ್ಕಲತನ ಮತ್ತು (ಬ) ಪ್ರಕೃತಿವಿಮರ್ಶೆ	ಅ ೩೫ ಬ ೩೦	೬ ೫೦
	೩	೬	೧ನೆ ಸದರು (ಬ) ಹಾಗು (ಕ) ಭಾಷಾವಿಷಯ	ಬ ೪೫ ಕ ೩೦	೪ ೦೦
ಗುರುವಾರ ೮–೪–೩೭	*	*	ಪ್ರಾಯೋಗಿಕ ಪರೀಕ್ಷೆ ೭ನೆ ಸದರು	೫೦	
ಸದರ	*	*	ಸದರ ೬ನೆ ಸದರು	೩೫	

ಸೂ— ೧ನೆ ಸದರ (ಅ) ಹಾಗು (ಡ) * ಬಾಯಿಪರೀಕ್ಷೆಯು ಪ,ತಿ ದಿವಸ ಬರಹಪರೀಕ್ಷೆ ಮುಗಿದ ಮೇಲೆ ಸಾಯಂಕಾಲದಲ್ಲಿ ತೆಗೆದುಕೊಳ್ಳಲ್ಪಡುವದು.
ಪರಸ್ಥಳದವರ ಪರೀಕ್ಷೆ ಮೊದಲು ವ್ಯಾಯೋಗಿಕ ಪರೀಕ್ಷೆಯು ವೇಳೆಯನ್ನು ಪ್ರೆಸಿಡಂಟರೂ ಅಗ್ರಿಕಲ್ಚರಲ್ ಓವ್ಹರ್‌ಸಿಯರೂ ಕೂಡಿ ಗೊತ್ತುಪಡಿಸುವರು.
ಉಮೇದವಾರರು ಪರೀಕ್ಷೆಯು ಮೊದಲನೆ ದಿವಸ ಗೊತ್ತಾದ ವೇಳೆಗಿಂತ ೧ ತಾಸು ಮೊದಲೇ ಪರೀಕ್ಷೆಯ ಹಾಲಿನಲ್ಲಿ ಹಾಜರ ಇರಬೇಕು.

ದಿವಸ ಹಾಗು ತಾರೀಖು	ವೇಳೆ		ವಿಷಯ	ಗುಣಗಳು	ಸೂಚನೆ
	ಇಂದ	ವರೆಗೆ			
ಸೋಮವಾರ	೧೦	೧೧	ಉನೇದವಾರರ ಹಾಜರಿ ತಕ್ಕೊಳ್ಳುವದು		
೫-೪-೩೭					
ಸದರ	೧೧	೧	೨ನೇಯ ಸದರು (ಅ) ಹಾಗು ಬ* ನಿಬಂಧ ಅಥವಾ ರಿಪೋರ್ಟು ಹಾಗು ಕೈಬರಹ	ಅ ೫೦ ಬ ೨೫	
			ದೇ*ಶಭಾಷೆಯಲ್ಲಿ ವ್ಹರ್ನಾಕ್ಯುಲರ ಉರ್ದು ಉನೇದವಾರರಿಗೆ ಉರ್ದು ಭಾಷೆಯಲ್ಲಿ ಉರ್ದು ವ್ಹರ್ನಾಕ್ಯುಲರ ಉನೇದ ವಾರರಿಗೆ		
ಸದರ	೨	೫	೫ನೆ ಸದರು ಆರೋಗ್ಯವಿಜ್ಞಾನ ಅಥವಾ ಶಾರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಹಾಗು ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು	೧೦೦	
ಮುಂಗಳವಾರ	೧೧	೨	೩ನೆ ಸದರು (ಅ) ಗಣಿತ	೧೦೦	
೬-೪ ೩೭					
ಸದರ	೩	೬	೪ನೆ ಸದರು (ಅ) ಹಾಗು (ಬ) ಇತಿಹಾಸ ಮತ್ತು ಭೂಗೋಲ	ಅ. ೫೦ ಬ ೫೦	
ಬುಧವಾರ	೧೧	೨	೩ನೆಯ ಸದರು (ಬ) ಹಾಗು (ಕ) ಭೂಮಿತಿ ಹಾಗು ದೇಶೀ ಜಮಾಖರ್ಚು	(ಬ) ೫೦ ಕ ೫೦	
೭-೪-೩೭					
ಸದರ	೩	೬	೧ನೆಯ ಸದರ (ಬ) ಹಾಗು (ಕ) ದೇಶಭಾಷೆ ಅಥವಾ ಉರ್ದು	ಬ ೪೫ (೨೫ ಗದ್ಯ ೨೦ ಪದ್ಯ) ಕ ೩೦	

ದಿವಸ ಮಾಗು ತಾರೀಖು	ವೇಳೆ ಇಂದ	ವರೆಗೆ	ವಿಷಯ	ಗುಣಗಳು	ಟಿಪ್ಪಣಿ
ಗುರುವಾರ ೮-೪-೩೭	೭	೯	೬ನೆ ಸದರು (ಅ) ಉರ್ದು ಅಥವಾ ದೇಶಭಾಷೆ [೪೦ ಬರಹದ ಪರೀಕ್ಷೆಗೆ ೧೦ ಬಾಯಿ ಪರೀಕ್ಷೆಗೆ]	(ಅ) ೫೦	
ಸದರ	೯-೧೫	೧೦	ಬಾಯಿ ಪರೀಕ್ಷೆ ೬ನೆ ಸದರ (ಅ)		
	೧೦	೧೧	,, ,, ೬ನೆ ಸದರು (ಕ)	ಕ. ೧೫	
ಸದರ	೨	೩	೬ನೆಯ ಸದರು (ಬ) ಪತ್ರಬರಹ ಅಥವಾ ರಿಪೋರ್ಟು ಉರ್ದು ಭಾಷೆಯಲ್ಲಿ ವ್ಹರ್ನಾಕ್ಯುಲರ ಉರ್ದು ಉಮೇದವಾರರಿಗೆ ದೇಶಭಾಷೆಯಲ್ಲಿ ಉರ್ದುವ್ವರ್ನಾಕ್ಯುಲರ ಉಮೇದವಾರರಿಗೆ	ಬ. ೩೫	
ಸದರ	೩-೧೫	೬	ಬಾಯಿ ಪರೀಕ್ಷೆ ೧ನೆ ಸದರಿನ (ಅ) ಹಾಗು (ಡ) ಸ್ಥಳಿಕ ಉಮೇದವಾರರಿಗೆ ಮಾತ್ರ	ಅ. ೩೦ ಡ. ೨೦	

ಸೂ— ಪ್ರತಿದಿವಸ ಬರಹ ಪರೀಕ್ಷೆ ಮುಗಿದ ಮೇಲೆ ಸಾಯಂಕಾಲದಲ್ಲಿ ಪರಸ್ಥಳದ ಉಮೇದವಾರರ ೧ನೇ ಸದರಿನ (ಅ) ಹಾಗು (ಡ) ಬಾಯಿ ಪರೀಕ್ಷೆಯು ತೆಗೆದುಕೊಳ್ಳಲ್ಪಡುವದು. ಉಮೇದವಾರರು ಮೊದಲನೆ ದಿವಸ ಪರೀಕ್ಷೆ ನಡೆಯುವ ಹಾಲಿನಲ್ಲಿ ೧ತಾಸು ಮೊದಲು ಹಾಜರ ಇರಬೇಕು.

೧೯೩೬ನೆಯ ಇಸ್ವಿಯ ಎಪ್ರಿಲ ತಿಂಗಳಿನಲ್ಲಾದ ಧಾರವಾಡ ಟ್ರೇನಿಂಗ ಸ್ಕೂಲಿನ
ಸರ್ಟಿಫಿಕೇಟ ಪರೀಕ್ಷೆಯಲ್ಲಿ ಈ ಕೆಳಗೆ ಕಾಣಿಸಿದ ವಿದ್ಯಾರ್ಥಿಗಳು ಹೆಚ್ಚು
ಗುಣಗಳನ್ನು ಪಡೆದು ಇನಾಮು ದೊರಕಿಸಿರುವರು.

೩ನೆಯ ವರುಷ

ಚಾಟಫೀಲ್ಡ ಮೆಮೋರಿಯಲ್ ಪ್ರಾಯಿಝು

೧ ಎಲ್. ಎ. ಶಿರಹಟ್ಟಿ— ಒಟ್ಟಿನಲ್ಲಿ ಮೊದಲನೆಯ ನಂಬರು .. ..
ಪಡೆದದ್ದಕ್ಕಾಗಿ ೧೬ ರೂ.

ಜಾಯಿಲ್ಸ ಪ್ರಾಯಿಝು

೨ ಎಲ್. ಎ. ಶಿರಹಟ್ಟಿ— ಶಿಕ್ಷಣದಲ್ಲಿ ಮೊದಲನೆಯ ನಂಬರು .. ..
ಪಡೆದದ್ದಕ್ಕಾಗಿ ೧೬ ರೂ.

ಜನರಲ್ ಪ್ರಾಯಿಝು

೩ ಎಮ್. ಎಫ್. ಒಂಗಾರಿ— ಕನ್ನಡ ವಿಷಯದಲ್ಲಿ ಮೊದಲನೆಯ
ನಂಬರು ಪಡೆದದ್ದಕ್ಕಾಗಿ ೧೨ ರೂ.

೨ನೆಯ ವರ್ಷ

ಸರ ಜೇಮ್ಸ ಮೌಂಟಫ್ ಪ್ರಾಯಿಝು

೪ (ಅ) ಎಸ್. ವಾಯ್. ಕಮಡೊಳ್ಳಿ— ಒಟ್ಟಿನಲ್ಲಿ ಮೊದಲನೆಯ ..
ನಂ. ಪಡೆದದ್ದಕ್ಕಾಗಿ ೧೫ ರೂ.

(ಬ) ಜೆ. ಸಿ. ಹಿರೇಮಠ— ಶಿಕ್ಷಣದಲ್ಲಿ ಮೊದಲನೆಯ .. ..
ನಂಬರು ಪಡೆದದ್ದಕ್ಕಾಗಿ ೧೩ ರೂ.

೧ನೆಯ ವರ್ಷ

ಜನರಲ್ ಪ್ರಾಯಿಝು

೫ (ಅ) ಬಿ. ಎಸ್. ಶಿವಶಿಂಪಿಗೇರ— ಒಟ್ಟಿನಲ್ಲಿ ಮೊದಲನೆಯ .. ..
ನಂ. ಪಡೆದದ್ದಕ್ಕಾಗಿ ೧೨ ರೂ.

(ಬ ಕೆ. ವ್ಹಿ. ಬಾಗೇವಾಡಿ— ಶಿಕ್ಷಣದಲ್ಲಿ ಮೊದಲನೆಯ .. ..
ನಂ. ಪಡೆದದ್ದಕ್ಕಾಗಿ ೧೨ ರೂ.

ಟ್ರೇ. ಸ್ಕೂಲ ಧಾರವಾಡ. | ಡಿ. ವಿ. ಕಾಳೆ,
ಹೆಡ್‌ಮಾಸ್ತರ ಟ್ರೇ. ಸ್ಕೂ. ಧಾರವಾ

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನರ್ಸ್), ಸ. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬ ವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ನ ಆಪಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಶಿರ್ಶಿ, ಉ. ಕಾನಡಾ

ತ್ವರೆಮಾಡಿರಿ ! ಬೆಲೆ ಕಡಿಮೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು: ಚಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ವ್ಹೆ. ಫಾ. ಪರೀಕ್ಷೆ, ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೨ನೆಯ ೩ನೆಯ ಇಯತ್ತೆಗಳು, ಹಾಗು ಸ್ಕಾಲರಸಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಸೆದು ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ಲ್ಲ. ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಲ್ಲ ಪ್ರಸಿದ್ಧ ಬುಕ್‌ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ಸ, ಎ. ವ್ಹಿ. ಸ್ಕೂಲು,

ಮಾಳಮಡ್ಡಿ ಧಾರವಾಡ.

Reg. No. B. 3691

ಇಂತಹ ಇನ್ನೊಂದು ಪುಸ್ತಕವೇ ಇಲ್ಲ!

ಶಿಕ್ಷಕರಿಗೆ ಭಾಷಾವಿಷಯ ಕಲಿಸುವ ಅಪೂರ್ವ ಸಾಧನ!

ಕನ್ನಡ ನುಡಿಯ ಹುಟ್ಟು.

ಬರೆದವರು: **ಶಂ. ಬಾ. ಜೋಶಿ**

ಕನ್ನಡ ಶಬ್ದಗಳಲ್ಲಿ ಹುದುಗಿಕೊಂಡಿರುವ ಅರ್ಥದ ಅಳವು ಗೊತ್ತಿಲ್ಲದ್ದರಿಂದ ಥವಾ ಯೋಗ್ಯ ಶಬ್ದಗಳು ಹೊತ್ತಿಗೆ ದೊರೆಯದ್ದರಿಂದ ಆಗುತ್ತಿದ್ದ ಒಪ್ಪಾಟಕ್ಕೆ ನ್ನು ಮೇಲೆ ಅವಕಾಶವೇ ಇಲ್ಲ. ಈ ಪುಸ್ತಕದ ಅಭ್ಯಾಸದಿಂದ ಕನ್ನಡ ನುಡಿಯ ುಟ್ಟು ಗೊತ್ತಾಗಿ ಭಾಷೆಯ ಮೇಲೆ ಪ್ರಭುತ್ವವು ಬಾರದೆ ಇರಲಾರದು.

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಇದೊಂದು ಮಹೋಪಕಾರಿಯಾದ ಗ್ರಂಥ.

ಬೆಲೆ— ೧೨ ಆಣೆ ಮಾತ್ರ

ಮಾಧವ ಬಲ್ಲಾಳ ಬಂಧುಗಳು,
ಸಾಧನಕೆರೆ, ಧಾರವಾಡ

ಏಪ್ರಿಲ್–೧೯೩೨ Reg. No. B. 3691

(ಇದರಲ್ಲಿ ಕನ್ನಡ ಬಾಲಾಪತ್ರಕವೂ ಶಿಕ್ಷಿಕೆಯೂ ಪನೂನೀಕರಣಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ಸಂ.	ವಿಷಯ	ಪುಟ.
೧.	ನೂತನ ವರ್ಷಾರಂಭ	೧
೨.	ಹಳ್ಳಿಯ ಜೀವನ	೨
೩.	ಶಿಶುಕಾಲೆಗಳು	೧೨
೪.	ಭೂಗೋಲದ ಮಾದರಿಗಳು	೧೬
೫	ಭೂಗೋಲ ಶಿಕ್ಷಣದ ವಿಷಯವಾಗಿ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳಿಂದ ಮಾಡಿಸಿದ ಮಾದರಿಗಳು	೨೪
೬	ಜಪಾನ ದೇಶದಲ್ಲಿ ಬೌದ್ಧಮತ	೩೮
೭	ಕನ್ನಡ ವರ್ಣಮಾಲೆಯಿಲ್ಲಿ ಪರೀಕ್ಷೆ (೧೯೩೪)	೪೨
೮.	ಪತ್ರಗಳ ಸಾರಾಂಶ (ಕವರಪುಟ ೩)	

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು

	ರೂ. ಆ ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಕೃತ)	೦– ೮–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೮–೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೫–೦
ದೇಶೀ ಜವಾಬುದಾರಿ ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩–೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦– ೧೫–೦
ಚಿತ್ರಮಯ ಕೋಷ್ಟಕ (ಉಗ್ಗುರಕೃತ) ೩ನೇ ಇ ಗೆ	೦– ೫–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪–೦
,, ೩ನೇ ,,	೦– ೫–೦
,, ,, ೪ನೇ ,,	೦– ೬–೦
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೧೦–೦
ಧಾರವಾಡ ಜಿಲ್ಲಾ ವರ್ಣನೆ (ಅಣ್ಣಿಗೇರಿ ಕೃತ) ೩ನೇ ಇ. ಗೆ	೦– ೪–೬
ವಿಜಾಪೂರ ,, ,, (,,) ೩ನೇ ,,	೦– ೪–೬
ಧಾರವಾಡ ಜಿಲ್ಲಾ ,, (ಕುರಡೀಕೃತ)	೦– ೫–೦
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	೦– ೮–೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦– ೧೨–೦
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೦– ೫–೦
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೪–೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–೦
ಭೂಮಿತಿ (ಚಂದಾವರಕರ ಕೃತ)	೦. ೭–೦
ಸರಸ್ವತೀ ವಿಜಯ (ಬೂದೀಹಾಳಕೃತ)	೦– ೪.೦

ಪತ್ರ:— ಎ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬	ಏಪ್ರಿಲ ೧೯೬೭	ವರ್ಷ ೯ ಸಂ. ೧

ನೂತನ ವರ್ಷಾರಂಭ

ಪ್ರಾಥಮಿಕ ಶಿಕ್ಷಣದ ಚಾಲಕತ್ವವು ನಮ್ಮ ಕಡೆಗೆ ಬಂದು ೯ ತಿಂಗಳುಗಳಾದವು. ಹಿಂದಿನ ಅನುಭವಿಕರೂ ಸಮರ್ಥರೂ ಆದ ಸಂಪಾದಕರ ಧ್ಯೇಯಗಳನ್ನೇ ನಾವೂ ಮುಂದಿಟ್ಟುಕೊಂಡಿರುವೆವೆಂದು ಹೇಳಬೇಕಾಗಿಲ್ಲ. ಈ ಏಪ್ರಿಲ್ ತಿಂಗಳ ಸಂಚಿಕೆಯಿಂದ ಹೊಸ ವರ್ಷವು ಪ್ರಾರಂಭವಾಗುವದರಿಂದ ಕಳೆದ ವರ್ಷದಲ್ಲಿ ನಡೆದ ಕಾರ್ಯಗಳ ಸಿಂಹಾವಲೋಕನ ಮಾಡುವದು ಅಪ್ರಸ್ತುತವೆನಿಸಲಾರದು.

ಈ ಅವಧಿಯಲ್ಲಿ ಶಿಕ್ಷಣ ವಿಷಯಕ ತಾತ್ವಿಕ ವಿವೇಚನೆಯಿರುವ ಪ್ರಸಂಗವಿಮರ್ಶೆ, ಶಿಶುಶಾಲೆಗಳು, ನಮ್ಮದೇಶದ ಶಿಕ್ಷಣದ ಇತಿಹಾಸ, ಶಿಕ್ಷಣದಲ್ಲಿ ಅವಲೋಕನದ ಮಹತ್ವ, ಪ್ರಶ್ನೆಗಳೂ ಉತ್ತರಗಳೂ ಮುಂತಾದ ಹಲವು ಮಹತ್ವದ ಲೇಖನಗಳನ್ನು ಪ್ರಕಟಿಸಿರುವದಲ್ಲದೆ ಶಿಕ್ಷಕರ ನಿತ್ಯದ ವ್ಯವಹಾರಕ್ಕೆ ಪ್ರತ್ಯಕ್ಷ ಸಂಬಂಧಿಸಿದ ಪಾಠದ ಟಿಪ್ಪಣಿಗಳು, ವಾಚನ ಶಿಕ್ಷಣ ಮುಂತಾದ ಲೇಖನಗಳನ್ನೂ ಪ್ರಸಿದ್ಧಿಸಲಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಎಲ್ಲೆಲ್ಲಿ ಏನು ನಡೆದಿದೆ ಎಂಬದು ಶಿಕ್ಷಕ ವರ್ಗಕ್ಕೆ ತಿಳಿದಿರುವದು ಅವಶ್ಯಕವೆಂಬ ವಿಚಾರದಿಂದ ಇಂಥ ಪತ್ರಸ್ವರೂಪ

ಗಳಿಗೆ ಪ್ರತಿ ಸಂಚಿಕೆಯಲ್ಲಿಯೂ ತಕ್ಕಷ್ಟು ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ. ಶಿಕ್ಷಕ ವರ್ಗದ ತಿಳಿವಳಿಕೆಗೆ ಬರುವದು ಅವಶ್ಯವಾಗಿರುವಂಥ ಸರಕಾರದ ಪ್ರಕಟಣೆಗಳನ್ನಂತೂ ನಾವು ದುರ್ಲಕ್ಷಿಸುವ ಸಂಭವವೇ ಇಲ್ಲ.

ಶಿಕ್ಷಕರ ನಿತ್ಯದ ವ್ಯವಸಾಯಕ್ಕೆ ನೆರವಾಗುವದೇ ನಮ್ಮ ಮುಖ್ಯ ಧ್ಯೇಯವಾಗಿರುವದರಿಂದ ಪ್ರಾಥಮಿಕ ಶಾಲೆಗಳಲ್ಲಿ ನಡೆದಿರುವ ವಿಶಿಷ್ಟ ಕಾರ್ಯಕ್ರಮ, ಶಿಕ್ಷಕ ವರ್ಗಕ್ಕೆ ತಮ್ಮ ನಿತ್ಯ ಕ್ರಮದಲ್ಲಿ ಕಂಡುಬರುವ ಅನುಭವಗಳು, ತೊಂದರೆಗಳು, ಮುಂತಾದವುಗಳನ್ನು ಕುರಿತು ಹೆಚ್ಚು ಲೇಖಗಳು ಪ್ರಕಟವಾಗಬೇಕೆಂದು ನಮ್ಮ ಹಂಬಲವಿರುವದಾದರೂ ಈ ಕಾರ್ಯವು ಶಿಕ್ಷಕವರ್ಗವನ್ನೇ ಅವಲಂಬಿಸಿರುವದೆಂಬದನ್ನು ನಾವು ಹೇಳಬೇಕಾಗಿಲ್ಲ. ನಮ್ಮ ವಾಚಕರಲ್ಲಿ ಬಹುಸಂಖ್ಯಾಕವಾದ ಪ್ರಾಥಮಿಕ ಶಿಕ್ಷಕ ವರ್ಗವು ಮುಂದಿನ ವರ್ಷದಲ್ಲಿ ಈ ಮಾತಿನ ಕಡೆಗೆ ಲಕ್ಷ್ಯವಿಟ್ಟು ಹೆಚ್ಚು ಯೋಗ್ಯವಾದ ಲೇಖನಗಳನ್ನು ಕಳುಹಿಸುವದರಮೂಲಕ ತಮ್ಮ ಮೇಲಿರುವ ಈ ಹೊಣೆಗಾರಿಕೆಗೆ ತಕ್ಕ ಸಮಾಧಾನವನ್ನು ವ್ಯಕ್ತಪಡಿಸುವರೆಂದು ನಂಬಿರುವೆವು.

ಹಳ್ಳಿಯ ಜೀವನ

ಕಳೆದ ತಿಂಗಳಲ್ಲಿ ಒಕ್ಕಲತನದ ಖಾತೆಯಲ್ಲಿ ಅಭಿಜ್ಞರಾದ ಕಾರ್ಯಕರ್ತರನ್ನಿಸಿಕೊಂಡಿದ್ದ ಶ್ರೀ. ವಿ. ಸೀ. ಪಾವಟಿಯವರು ಟ್ರೇನಿಂಗಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಈ ವಿಷಯದಮೇಲೆ ಬಹು ಸರಸವಾಗಿ ಉಪನ್ಯಾಸಮಾಡಿದರು. ಹಳ್ಳಿಯ ಸುಧಾರಣೆಯ ಮಹತ್ವವನ್ನು ತಿಳಿದು ಕೆಲಸ ಮಾಡಬೇಕಾಗಿರುವ ಈ ಕಾಲದಲ್ಲಿ ಇಂತಹ ವಿಚಾರಪರಿಪ್ಲುತವಾದ ವಿಷಯವನ್ನು ನಮ್ಮ ವಾಚಕರು ತಿಳಿದಿರಲೆಂಬ ವಿಚಾರದಿಂದ ಇಲ್ಲಿ ಪ್ರಕಟಿಸಿರುವೆವು.

ಶ್ರೀ. ಪಾವಟಿಯವರು ಒಕ್ಕಲತನದ ಶಾಲೆಯ ಹೆಡ್‌ಮಾಸ್ತರರಾಗಿಯೂ ಒಕ್ಕಲತನದ ಶಾಲೆಗಳ ಇನ್‌ಸ್ಪೆಕ್ಟರರಾಗಿಯೂ ಕೆಲಸಮಾಡಿದ ಬಹುಕಾಲದ ಅನುಭವದಿಂದಲೂ ಸದ್ಯಕ್ಕೆ ನಮ್ಮ ಭಾಗದ ಕಾಟನ್ ಸುಪರಿಂಟೆಂಡೆಂಟರಾಗಿ ಕೆಲಸ ಮಾಡುತ್ತಿದ್ದು ಹಳ್ಳಿಯ ಅನುಭವವನ್ನೂ ರೈತರ ಜೀವನವನ್ನೂ ಬಹು ಸೂಕ್ಷ್ಮವಾಗಿ ನಿರೀಕ್ಷಿಸಿದ ಜ್ಞಾನದಿಂದಲೂ ಅವರ ಉನ್ನತಿಯ ದಾರಿಯನ್ನು

ಪರಿಶೀಲಿಸಿ ತುಂಬಾ ಕಳಕಳಿಯಿಂದ ಮಾತಾಡಿದರು. ಅವರ ಭಾಷಣವು ಶಾಸ್ತ್ರ ಮತ್ತು ಅನುಭವಗಳ ಸಮಾವೇಶದಿಂದ ಜಹು ಸರಸವಾಗಿರುವಷ್ಟೇ ವಿಚಾರಣೀಯವಾ ಆಗಿದ್ದಿತು. ಅವರ ಅವ್ಯಾಹತವಾದ ಅರ್ಥಪೂರ್ಣವಾದ ವಾಗ್ಪ್ರವಾಹವನ್ನು ಕೇಳಿ ನೆರೆದವರೆಲ್ಲರಿಗೂ ತುಂಬಾ ಸಂತೋಷವಾಯಿತು.

೧. **ನಮ್ಮ ದೇಶವು ಹಳ್ಳಿಗಳ ದೇಶವು:**— ಮುಂಬಯಿ ಇಲಾಖೆಯಲ್ಲಿ ೫೦೦ ಕ್ಕಿಂತ ಕಡಿಮೆ ಜನ ವಸತಿ ಇರುವ ಹಳ್ಳಿಗಳು ೧೭ ಸಾವಿರ ಇರುವವು. ಮತ್ತು ಐದುನೂರರಿಂದ ಐದು ಸಾವಿರದ ವರೆಗಿನ ಜನಸಂಖ್ಯೆಯುಳ್ಳ ಊರುಗಳು ಹತ್ತು ಸಾವಿರ, ಐದು ಸಾವಿರದಿಂದ ಐವತ್ತು ಸಾವಿರದವರೆಗೆ ಜನರಿರುವ ಶಹರಗಳು ಸುಮಾರು ೨೧೦ ಇದ್ದರೆ ಐವತ್ತು ಸಾವಿರಕ್ಕಿಂತ ಹೆಚ್ಚು ಪ್ರಜಾ ಸಂಖ್ಯೆಯಿರುವ ಪಟ್ಟಣಗಳು ಹೆಚ್ಚು ಕಡಿಮೆ ೨೦ ಮಾತ್ರ ಇರುವವು. ಆದುದರಿಂದ ಐದು ಸಾವಿರಕ್ಕಿಂತ ಕಡಿಮೆ ಜನ ವಸತಿಯಿರುವ ಎಲ್ಲ ಊರುಗಳ ಜನಸಂಖ್ಯೆಯು ಒಟ್ಟಿನ ಸಂಖ್ಯೆಯಲ್ಲಿ ೧೦೦ಕ್ಕೆ ೭೯ ರಷ್ಟು ಆಗುವದೆಂದು ಗೊತ್ತಾಗಿದೆ. ಮಿಕ್ಕುಳಿದ ೨೧ ಜನರು ಮಾತ್ರ ಶಹರವಾಸಿಗಳೆನಿಸಿಕೊಂಡಿರುವರು. ಮಿಕ್ಕ ಇಲಾಖೆಗಳಲ್ಲಿಯ ಸ್ಥಿತಿಯೂ ಇದೇರೀತಿಯಾಗಿರುವದು. ಪೋಸ್ಟಆಫೀಸು, ಉಗೆಬಂಡಿಯ ದಾರಿ, ದೊಡ್ಡ ರಾಜಮಾರ್ಗಗಳು ಇವುಗಳ ಸಂಪರ್ಕವನ್ನರಿಯದ ಹಳ್ಳಿಗಳು ಹಿಂದುಸ್ತಾನದಲ್ಲಿ ಐದುಲಕ್ಷ ದಷ್ಟಿರುವವೆಂದು ಒಕ್ಕಲತನದ ಸುಧಾರಣೆಯ ಮಾರ್ಗಗಳನ್ನು ಕಂಡುಕೊಳ್ಳಲು ಬಂದ ರಾಯಲ್ ಕಮೀಶನ್ನಿನವರು ಪ್ರಕಟಿಸಿರುವರು. ಅವರ ಅಭಿಪ್ರಾಯದಂತೆ ನಿಜವಾಗಿ ಶಹರವಾಸಿಗಳೆನಿಸಿಕೊಂಡವರು ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಕೇವಲ ೧೦೦ಕ್ಕೆ ೧೧ ರಷ್ಟು ಮಾತ್ರ ಇರುತ್ತಾರೆಂದು ಗೊತ್ತಾಗಿದೆ. ಆದುದರಿಂದಲೇ ಹಿಂದುಸ್ತಾನವು ಹಳ್ಳಿಗಳ ದೇಶವೆನಿಸಿಕೊಂಡಿರುವದು.

೨. **ನಮ್ಮ ದೇಶದಲ್ಲಿ ಹಳ್ಳಿಗಳು ಹೆಚ್ಚಾಗಲು ನಮ್ಮವರ ಉದ್ಯೋಗವೇ ಮುಖ್ಯ ಕಾರಣವು:**— ನಮ್ಮ ಮುಖ್ಯ ಉದ್ಯೋಗವು ಒಕ್ಕಲತನವು. ಹಳ್ಳಿಗಳಲ್ಲಿ ವಾಸಿಸುವ ಜನರಲ್ಲಿ ೧೦೦ಕ್ಕೆ ೯೫ ರಷ್ಟು ಜನರು ಒಕ್ಕಲತನದಿಂದ ಜೀವಿಸುವರು. ಈ ಸಂಖ್ಯೆಯಲ್ಲಿ ಶಹರ ವಾಸಿಗಳಾದ ವೈತರನ್ನು ಕೂಡಿಸಿಕೊಂಡರೆ ಒಟ್ಟು ಜನಸಂಖ್ಯೆಯಲ್ಲಿ ೧೦೦ಕ್ಕೆ ಸುಮಾರು ೬೫ ರಷ್ಟು ಜನರು ಒಕ್ಕಲಿಗರೆನಿಸಿಕೊಳ್ಳುವರು. ಒಕ್ಕಲತನದ ಸಂಪರ್ಕವೇ ಇಲ್ಲದ ಶಹರಗಳು ನಮ್ಮ ದೇಶದಲ್ಲಿಲ್ಲ. ನಮ್ಮ ದೇಶದ ಜನಸಂಖ್ಯೆಗೂ ಸಾಗಾದ ಭೂಮಿಗೂ ತುಲನೆಮಾಡಿ ನೋಡಿದರೆ

ಗಳಿಗೆ ಪ್ರತಿ ಸಂಚಿಕೆಯಲ್ಲಿಯೂ ತಕ್ಕಷ್ಟು ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ. ಶಿಕ್ಷಕ ವರ್ಗದ ತಿಳಿವಳಿಕೆಗೆ ಬರುವದು ಅವಶ್ಯವಾಗಿರುವಂಥ ಸರಕಾರದ ಪ್ರಕಟನೆಗಳನ್ನೆಂತೂ ನಾವು ದುರ್ಲಕ್ಷಿಸುವ ಸಂಭವವೇ ಇಲ್ಲ.

ಶಿಕ್ಷಕರ ನಿತ್ಯದ ವ್ಯವಸಾಯಕ್ಕೆ ನೆರವಾಗುವದೇ ನಮ್ಮ ಮುಖ್ಯ ಧ್ಯೇಯವಾಗಿರುವದರಿಂದ ಪ್ರಾಥಮಿಕ ಶಾಲೆಗಳಲ್ಲಿ ನಡೆದಿರುವ ವಿಶಿಷ್ಟ ಕಾರ್ಯಕ್ರಮ, ಶಿಕ್ಷಕ ವರ್ಗಕ್ಕೆ ತಮ್ಮ ನಿತ್ಯ ಕ್ರಮದಲ್ಲಿ ಕಂಡುಬರುವ ಅನುಭವಗಳು, ತೊಂದರೆಗಳು, ಮುಂತಾದವುಗಳನ್ನು ಕುರಿತು ಹೆಚ್ಚು ಲೇಖಗಳು ಪ್ರಕಟವಾಗಬೇಕೆಂದು ನಮ್ಮ ಹಂಬಲವಿರುವದಾದರೂ ಈ ಕಾರ್ಯವು ಶಿಕ್ಷಕವರ್ಗವನ್ನೇ ಅವಲಂಬಿಸಿರುವದೆಂಬದನ್ನು ನಾವು ಹೇಳಬೇಕಾಗಿಲ್ಲ. ನಮ್ಮ ವಾಚಕರಲ್ಲಿ ಬಹುಸಂಖ್ಯಾಕವಾದ ಪ್ರಾಥಮಿಕ ಶಿಕ್ಷಕ ವರ್ಗವು ಮುಂದಿನ ವರ್ಷದಲ್ಲಿ ಈ ಮಾತಿನ ಕಡೆಗೆ ಲಕ್ಷ್ಯವೊರೈಸಿ ಹೆಚ್ಚು ಯೋಗ್ಯವಾದ ಲೇಖನಗಳನ್ನು ಕಳುಹಿಸುವದರಮೂಲಕ ತಮ್ಮ ಮೇಲಿರುವ ಈ ಹೊಣೆಗಾರಿಕೆಗೆ ತಕ್ಕ ಸಮಾಧಾನವನ್ನು ವ್ಯಕ್ತಪಡಿಸುವರೆಂದು ನಂಬಿರುವೆವು.

ಹಳ್ಳಿಯ ಜೀವನ

ಕಳೆದ ತಿಂಗಳಲ್ಲಿ ಒಕ್ಕಲತನದ ಖಾತೆಯಲ್ಲಿ ಅಭಿಜ್ಞರಾದ ಕಾರ್ಯಕರ್ತರನ್ನಿಟ್ಟುಕೊಂಡಿದ್ದ ಶ್ರೀ. ವ್ಹಿ. ಸೀ. ಪಾವಟಿಯವರು ಟ್ರೇನಿಂಗಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಈ ವಿಷಯದಮೇಲೆ ಬಹು ಸರಸವಾಗಿ ಉಪನ್ಯಾಸಮಾಡಿದರು. ಹಳ್ಳಿಯ ಸುಧಾರಣೆಯ ಮಹತ್ವವನ್ನು ತಿಳಿದು ಕೆಲಸ ಮಾಡಬೇಕಾಗಿರುವ ಈ ಕಾಲದಲ್ಲಿ ಇಂತಹ ವಿಚಾರಪರಿಪ್ಲುತವಾದ ವಿಷಯವನ್ನು ನಮ್ಮ ವಾಚಕರು ತಿಳಿದಿರಬೇಕೆಂಬ ವಿಚಾರದಿಂದ ಇಲ್ಲಿ ಪ್ರಕಟಿಸಿರುವೆವು.

ಶ್ರೀ. ಪಾವಟಿಯವರು ಒಕ್ಕಲತನದ ಶಾಲೆಯ ಹೆಡ್‌ಮಾಸ್ತರರಾಗಿಯೂ ಒಕ್ಕಲತನದ ಶಾಲೆಗಳ ಇನ್‌ಸ್ಪೆಕ್ಟರರಾಗಿಯೂ ಕೆಲಸಮಾಡಿದ ಬಹುಕಾಲದ ಅನುಭವದಿಂದಲೂ ಸದ್ಯಕ್ಕೆ ನಮ್ಮ ಭಾಗದ ಕಾಟನ್ ಸುಪರಿಂಟೆಂಡೆಂಟರಾಗಿ ಕೆಲಸ ಮಾಡುತ್ತಿದ್ದು ಹಳ್ಳಿಯ ಅನುಭವವನ್ನೂ ರೈತರ ಜೀವನವನ್ನೂ ಸೂಕ್ಷ್ಮವಾಗಿ ನಿರೀಕ್ಷಿಸಿದ ಜ್ಞಾನದಿಂದಲೂ ಅವರ ಉನ್ನತಿಯ ದಾರಿಯನ್ನೆ

ಪರಿಚಯಿಸಿ ತುಂಬಾ ಕಳಕಳಿಯಿಂದ ಮಾತಾಡಿದರು. ಅವರ ಭಾಷಣವು ಶಾಸ್ತ್ರ ಮತ್ತು ಅನುಭವಗಳ ಸಮಾವೇಶದಿಂದ ಜಹು ಸರಸವಾಗಿರುವಷ್ಟೇ ವಿಚಾರಣೀಯ ವಾಗಿತ್ತು. ಅವರ ಅವ್ಯಾಹತವಾದ ಅರ್ಥಪೂರ್ಣವಾದ ವಾಗ್ಝರಿಯನ್ನು ಕೇಳಿ ನೆರೆದವರೆಲ್ಲರಿಗೂ ತುಂಬಾ ಸಂತೋಷವಾಯಿತು.

೧. **ನಮ್ಮ ದೇಶವು ಹಳ್ಳಿಗಳ ದೇಶವು:**— ಮುಂಬಯಿ ಇಲಾಖೆಯಲ್ಲಿ ೫೦೦೦ಕ್ಕಿಂತ ಕಡಿಮೆ ಜನ ವಸತಿ ಇರುವ ಹಳ್ಳಿಗಳು ೧೭ ಸಾವಿರ ಇರುವವು. ಮತ್ತು ಐದುನೂರರಿಂದ ಐದು ಸಾವಿರದ ವರೆಗಿನ ಜನಸಂಖ್ಯೆಯುಳ್ಳ ಊರುಗಳು ಹತ್ತು ಸಾವಿರ, ಐದು ಸಾವಿರದಿಂದ ಐವತ್ತು ಸಾವಿರದವರೆಗೆ ಜನರಿರುವ ಶಹರಗಳು ಸುಮಾರು ೨೧೦ ಇದ್ದರೆ ಐವತ್ತು ಸಾವಿರಕ್ಕಿಂತ ಹೆಚ್ಚು ಪ್ರಜಾ ಸಂಖ್ಯೆಯಿರುವ ಪಟ್ಟಣಗಳು ಹೆಚ್ಚು ಕಡಿಮೆ ೨೨ ಮಾತ್ರ ಇರುವವು. ಆದುದರಿಂದ ಐದುಸಾವಿರಕ್ಕಿಂತ ಕಡಿಮೆ ಜನ ವಸತಿಯಿರುವ ಎಲ್ಲ ಊರುಗಳ ಜನಸಂಖ್ಯೆಯು ಒಟ್ಟಿನ ಸಂಖ್ಯೆಯಲ್ಲಿ ೧೦೦ಕ್ಕೆ ೭೯ ರಷ್ಟು ಆಗುವದೆಂದು ಗೊತ್ತಾಗಿದೆ. ಉಳಿಕ್ಕಿದ ೨೧ ಜನರು ಮಾತ್ರ ಶಹರವಾಸಿಗಳೆನಿಸಿಕೊಂಡಿರುವರು. ಉಳಿಕ್ಕ ಇಲಾಖೆಗಳ ಗಳ ಸ್ಥಿತಿಯೂ ಇದೇರೀತಿಯಾಗಿರುವದು. ಪೋಸ್ಟಆಫೀಸು, ಉಗೆಬಂಡಿಯ ದಾರಿ, ದೊಡ್ಡರಾಜಮಾರ್ಗಗಳು ಇವುಗಳ ಸಂಪರ್ಕವನ್ನರಿಯದ ಹಳ್ಳಿಗಳು ಹಿಂದುಸ್ತಾನದಲ್ಲಿ ಐದುಲಕ್ಷದಷ್ಟಿರುವವೆಂದು ಒಕ್ಕಲತನದ ಸುಧಾರಣೆಯ ಮಾರ್ಗಗಳನ್ನು ಕಂಡುಕೊಳ್ಳಲು ಬಂದ ರಾಯಲ್ ಕಮೀಶನ್ನಿನವರು ಪ್ರಕಟಿಸಿರುವರು. ಅವರ ಅಭಿಪ್ರಾಯದಂತೆ ನಿಜವಾಗಿ ಶಹರವಾಸಿಗಳೆನಿಸಿಕೊಂಡವರು ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಕೇವಲ ೧೦೦ಕ್ಕೆ ೧೧ ರಷ್ಟು ಮಾತ್ರ ಇರುತ್ತಾರೆಂದು ಗೊತ್ತಾಗಿದೆ. ಆದುದರಿಂದಲೇ ಹಿಂದುಸ್ತಾನವು ಹಳ್ಳಿಗಳ ದೇಶವೆನಿಸಿಕೊಂಡಿರುವದು.

೨. **ನಮ್ಮ ದೇಶದಲ್ಲಿ ಹಳ್ಳಿಗಳು ಹೆಚ್ಚಾಗಲು ನಮ್ಮವರ ಉದ್ಯೋಗವೇ ಮುಖ್ಯ ಕಾರಣವು:**— ನಮ್ಮ ಮುಖ್ಯ ಉದ್ಯೋಗವು ಒಕ್ಕಲತನವು. ಹಳ್ಳಿಗಳಲ್ಲಿ ವಾಸಿಸುವ ಜನರಲ್ಲಿ ೧೦೦ಕ್ಕೆ ೭೫ ರಷ್ಟು ಜನರು ಒಕ್ಕಲತನದಿಂದ ಜೀವಿಸುವರು. ಈ ಸಂಖ್ಯೆಯಲ್ಲಿ ಶಹರ ವಾಸಿಗಳಾದ ರೈತರನ್ನು ಕೂಡಿಸಿಕೊಂಡರೆ ಒಟ್ಟು ಜನಸಂಖ್ಯೆಯಲ್ಲಿ ೧೦೦ಕ್ಕೆ ಸುಮಾರು ೬೫ ರಷ್ಟು ಜನರು ಒಕ್ಕಲಿಗರೆನಿಸಿಕೊಳ್ಳುವರು. ಒಕ್ಕಲತನದ ಸಂಪರ್ಕವೇ ಇಲ್ಲದ ಶಹರಗಳು ನಮ್ಮ ದೇಶದಲ್ಲಿಲ್ಲ. ನಮ್ಮ ದೇಶದ ಜನಸಂಖ್ಯೆಗೂ ಸಾಗಾದ ಭೂಮಿಗೂ ತುಲನೆಮಾಡಿ ನೋಡಿದರೆ

ಪ್ರತಿ ವ್ಯಕ್ತಿಗೆ ಒಂದು ಎಕರೆಯಂತೆ ಲೆಕ್ಕವು ಹೊರಡುವದು. ಈ ಮಾನವು ಮುಂಬಯಿ ಇಲಾಖೆಯ ಮಟ್ಟಿಗೆ ಒಂದುವರೆ ಎಕರೆಯಾದರೆ ಕರ್ನಾಟಕಕ್ಕೆ ಎರಡು ಎಕರೆಯಾಗುವದು. ಜಿಲ್ಲೆಯ ಮಾನದಿಂದ ನೋಡಿದರೆ ವಿಜಾಪುರದಲ್ಲಿ ೪ ಎಕರೆ, ಧಾರವಾಡ ೨ ಎಕರೆ, ಬೆಳಗಾವ ೧½ ಎಕರೆ ಮತ್ತು ಕಾರವಾರ ಜಿಲ್ಲೆಗೆ ಅರ್ಧ ಎಕರೆ ಎಂದು ಲೆಕ್ಕದಿಂದ ಗೊತ್ತಾಗುವದು. ಅಮೇರಿಕೆಯ ಹೊರತಾಗಿ ಜಗತ್ತಿನ ಯಾವ ದೇಶದಲ್ಲಿಯೂ ಇಷ್ಟು ಭೂಮಿಯು ಹೊರಡುವದಿಲ್ಲ. ಒಳ್ಳಿದೆ ನಮ್ಮಲ್ಲಿ ಫಲವತ್ತಾದ ಭೂಮಿ ಬಹಳ. ಹವೆಯೂ ತುಂಬ ಅನುಕೂಲವಾಗಿರುವದು. ಇಂಗ್ಲಂಡ ಮೊದಲಾದ ಶೀತ ದೇಶಗಳಲ್ಲಿ ಕೃತ್ರಿಮ ರೀತಿಯಿಂದ ಉಷ್ಣತೆಯನ್ನು ಒದಗಿಸಿಕೊಟ್ಟರೂ ೭–೮ ತಿಂಗಳುಗಳಲ್ಲಿ ಬೆಳೆಬರುವ ಗೋದಿಯು ನಮ್ಮಲ್ಲಿ ಮೂರು ಮೂರೂವರೆ ತಿಂಗಳಲ್ಲಿಯೇ ಪಕ್ವವಾಗಿಬಿಡುವದು. ನಮ್ಮಲ್ಲಿ ದೊಡ್ಡ ದೊಡ್ಡ ಕಾರಖಾನೆ ಗಿರಣಿ ಮೊದಲಾದವುಗಳ ಸಂಖ್ಯೆಯು ಕಡಿಮೆಯಿರುವದರಿಂದ ಶಹರಗಳ ಸಂಖ್ಯೆಯೂ ಕಡಿಮೆಯಾಗಿ ಒಕ್ಕಲತನವೇ ಹೆಚ್ಚಾಗಿರುವದು.

೩. ಈ ಇಪ್ಪತ್ತನೆಯ ಶತಮಾನವು ಸುಧಾರಣೆಯ ಸುಗ್ಗಿಯ ಕಾಲವೆನಿಸಿಕೊಂಡಿದೆ. ಈ ಕಾಲದಲ್ಲಿ ಪ್ರಾಣಿಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ ಮೊದಲಾದ ಶಾಸ್ತ್ರಗಳಲ್ಲಿ ಅಗಾಧ ಶೋಧಗಳು ನಡೆದಿವೆ. ವಿಮಾನ, ಆಕಾಶವಾಣಿ ಮೊದಲಾದವುಗಳ ಸಹಾಯದಿಂದ ಜಗತ್ತಿನ ಅಂತರವು ತೀರ ಕಡಿಮೆಯಾಗುತ್ತ ನಡೆದಿರುವದು. ಈ ರೀತಿಯಾದ ನಾನಾಬಗೆಯ ಸುಧಾರಣೆಗಳಿಂದ ಜಗತ್ತು ಮುಂದೆ ಸಾಗಿದ್ದರೂ ನಮ್ಮ ದೇಶವು ಮಾತ್ರ ಇನ್ನೂ ಸಾಕಾದಷ್ಟು ಮುಂದೆ ಬಂದಿಲ್ಲ. ಹಳ್ಳಿಗಳ ದೇಶವಾದ ನಮ್ಮ ದೇಶದ ಒಳಭಾಗದಲ್ಲಿ ಈ ಸುಧಾರಣೆಗಳ ಗಾಳಿಯು ಇನ್ನೂ ಸೋಂಕಿಲ್ಲವೆಂದೇ ಹೇಳಬೇಕಾಗುವದು. ನಮ್ಮ ಜನರಲ್ಲಿ ಭಾವಿಕರು ಹೆಚ್ಚು; ದೈವದ ಮೇಲೆ ಭಾರ ಹಾಕಿ ನಡೆಯುವವರೇ ಒಪ್ಪಳ. ದುಡಿತದ ಬೆಲೆಯನ್ನು ತಿಳಿದವರು ಕಡಿಮೆ. ನಮ್ಮವರಲ್ಲಿ ಉತ್ಪನ್ನಕ್ಕಿಂತ ಖರ್ಚವ ಹೆಚ್ಚಾಗಿರುವವರೂ ಸಾಲಗುಳಿಗಳೂ ಬಹುಜನರು. ಹಳ್ಳಿಗಳಲ್ಲಿ ಒಣ ಹೆಮ್ಮೆ, ಈರ್ಷೆ, ಅಸೂಯೆ, ದುರಾಲೋಚನೆ ಮುಂತಾದವು ತುಂಬಿವೆ. ಜಗತ್ತಿನಲ್ಲಿ ದಿನದಿನಕ್ಕೆ ಹೆಚ್ಚು ಹೆಚ್ಚು ಸುಧಾರಣೆಯು ಹಬ್ಬುತ್ತ ನಡೆದಿದ್ದರೂ ನಾವು ಮಾತ್ರ ಸಿಂತಲ್ಲೆಯೇ ಇರುವೆವೆಂದು ಹೇಳಲು ಬಹು ದುಃಖವೆನಿಸುವದು. ಸುಶಿಕ್ಷಿತರಾದವರು ಹಳ್ಳಿಗಳ ಈ ಬಗೆಯ ಕರುಣಾಜನಕ ಸ್ಥಿತಿಯನ್ನು ಹೋಗಲಾಡಿಸಲು ಯತ್ನಿಸಬೇಕಾಗಿರುವದು.

೪ ಗ್ರಾಮಸುಧಾರಣೆಯೆಂದರೇನು? ಗ್ರಾಮವಾಸಿಗಳ ಸುಧಾರಣೆಯೇ ಗ್ರಾಮಸುಧಾರಣೆ, ಅಥವಾ ಗ್ರಾಮನಿವಾಸಿಗಳ ಉದ್ಯೋಗ ವ್ಯವಸಾಯಗಳ ಸುಧಾರಣೆಯೇ ಗ್ರಾಮಸುಧಾರಣೆ, ಎಂದು ಹೇಳಲು ಅಡ್ಡಿಯಿಲ್ಲ. ಇಲ್ಲಿ ನಾವು ಗ್ರಾಮವಾಸಿಗಳು ಎಂದರೆ ಒಕ್ಕಲಿಗರೆಂದೂ ಅವರ ವ್ಯವಸಾಯವೆಂದರೆ ಒಕ್ಕಲತನವೆಂದೂ ಹೇಳಬೇಕಾಗುವದು. ಅರ್ಥಾತ್ ಗ್ರಾಮಸುಧಾರಣೆಯೆಂದರೆ ಒಕ್ಕಲಿಗರ ಹಾಗು ಒಕ್ಕಲತನದ ಸುಧಾರಣೆಯೆಂದು ಒಪ್ಪಿಕೊಳ್ಳಬೇಕಾಗುವದು. ಒಕ್ಕಲಿಗರಿಗೆ ಸಾಂಪತ್ತಿಕ ಸ್ಥಿತಿ, ವಿದ್ಯೆ, ಆರೋಗ್ಯ ಇವುಗಳಲ್ಲಿ ಸುಧಾರಣೆ ಬೇಕಾಗಿದೆ.

೫. ನಮ್ಮ ಹಳ್ಳಿಗಳು ಸಾಲದಲ್ಲಿ ಮುಳುಗಿಹೋಗಿವೆ. ಪ್ರತಿ ವ್ಯಕ್ತಿಗೆ ಸರಾಸರಿ ೧೪೦ ರೂ. ಸಾಲ ಬೀಳುವದೆಂದು ಬ್ಯಾಂಕಿಂಗ ಕಮೀಟಿಯವರ ವರದಿಯಿಂದ ಗೊತ್ತಾಗಿರುವದು. ಒಕ್ಕಲಿಗನಿಗೆ ಸರಕಾರದ ಹಪ್ತಿ, ಒಡೆಯನ ಲಾವಣಿ, ಕುಟುಂಬಪೋಷಣೆ ಇವುಗಳನ್ನು ದಾಟುವದೇ ಬಹು ಗಂಡಾಂತರವಾಗಿರುವಾಗ ತನ್ನ ಸಾಲವನ್ನು ತೀರಿಸುವದು ಎಂದೂ ನೀಗದ ಹೊರೆಯೆನಿಸುವದು. ಹೀಗಾಗಿ ರೈತರ ಹೊಲಗಳು ಕ್ರಮವಾಗಿ ಅವರ ಕೈ ಬಿಡಹತ್ತಿವೆ. ಹೋದ ವರ್ಷದ ರೆಜಿಸ್ಟ್ರೇಶನ್ ಕಮೀಟಿಯ ವರದಿಯ ಮೇರೆಗೆ ಒಂದೊಂದು ಜಿಲ್ಲೆಗೆ ಸರಾಸರಿ ಒಂದು ಕೋಟಿ ರೂಪಾಯಿ ಬೆಲೆಬಾಳುವ ಆಸ್ತಿಯು ಈ ಒಂದು ವರ್ಷದಲ್ಲಿ ರೈತರ ಕೈಬಿಟ್ಟು, ಕ್ರಯವಾಗಿ ಇಲ್ಲವೆ ತಾರಣವಾಗಿ, ಎರಡನೆಯವರನ್ನು ಸೇರಿರುವದೆಂದು ಗೊತ್ತಾಗಿರುವದು. ಇಷ್ಟಾದರೂ ರೈತರ ಸಾಲವು ತೀರಲಿಲ್ಲ. ಈ ಸಾಲವು ತೀರುವ ಬಗೆ ಹೇಗೆ? ಇದನ್ನು ಸರಕಾರದವರು ತೀರಿಸುವ ಸಂಭವವಂತೂ ಇಲ್ಲವೇ ಇಲ್ಲ. ಸಾಲ ಕೊಟ್ಟ ಶ್ರೀಮಂತರೂ ತಮ್ಮ ಗಂಟು ಕಳೆದುಕೊಳ್ಳಲಾರರು. ಅರ್ಥಾತ್ ರೈತರು ತಮ್ಮ ಕಾಲಮೇಲೆಯೇ ನಿಲ್ಲದೆ ಬೇರೆ ಗತಿಯಿಲ್ಲ. ಅದಕ್ಕಾಗಿ ರೈತರು ತಮ್ಮ ಉತ್ಪನ್ನವನ್ನು ಹೆಚ್ಚಿಸಬೇಕು. ಒಕ್ಕಲಿಗರ ಸಾಂಪತ್ತಿಕ ಸ್ಥಿತಿಯು ಸುಧಾರಿಸದೆ ಅವರ ಸುಧಾರಣೆಯಾಗಲಾರದು.

೬ ಒಕ್ಕಲತನವು ನಮ್ಮ ಜೀವನದ ಮುಖ್ಯ ಉದ್ಯೋಗವಾಗಿದ್ದರೂ ಅದಕ್ಕೆ ತಕ್ಕ ಮನ್ನಣೆಯಿಲ್ಲ. ಯಾವ ಕೆಲಸಕ್ಕೂ ಬಾರದ ಮನುಷ್ಯನು ಒಕ್ಕಲತನ ಮಾಡಬೇಕೆಂದು ನಮ್ಮವರ ಭಾವನೆಯಾಗಿದೆ. ಆದ್ದರಿಂದ ವ್ಯವಸಾಯವು ಶಕ್ತಿಯುಕ್ತಿಗಳಿಲ್ಲದ ಹೀನ ಜನರ ಕೈಸೇರಿ ದಿನದಿನಕ್ಕೆ ಹೀನಾವಸ್ಥೆಯನ್ನು ಹೊಂದಹತ್ತಿರುವದು. ಇತ್ತ ದೇಶದ ಜನಸಂಖ್ಯೆಯು ಬೆಳೆಯುತ್ತ ನಡೆದಿರುವದು. ಸದ್ಯಕ್ಕೆ ಸಾಗಾದ ಭೂಮಿಯಲ್ಲಿ ಹೊರಡುವ

ಅನ್ನಸಾಮಗ್ರಿಯು ನಮ್ಮ ದೇಶದ ಜನರಿಗೆ ೮ ತಿಂಗಳ ವರೆಗೆ ಮಾತ್ರ ಸಾಲುವಷ್ಟಿರುವದು. ಮಿಕ್ಕ ನಾಲ್ಕು ತಿಂಗಳುಗಳ ಗತಿಯೇನು? ಅಥವಾ ಒಟ್ಟು ಜನಸಂಖ್ಯೆಯ ೫/೬ ಜನರಿಗೆ ಮಾತ್ರ ಆ ಸಾಮಗ್ರಿಯು ಸಾಲುವದೆಂದು ತಿಳಿದರೆ ಮಿಕ್ಕ ೧/೬ ಜನರ (೧೨ ಕೋಟಿ ಜನರ) ಗತಿಯೇನಾಗಬೇಕು? ನಮ್ಮ ದೇಶದಲ್ಲಿ ೩೦೦ ವರ್ಷಗಳ ಹಿಂದೆ ನಡೆಯುತ್ತಿದ್ದ ಒಕ್ಕಲತನದ ಕ್ರಮಕ್ಕೂ ಈಗಿನ ಒಕ್ಕಲತನದ ರೀತಿಗೂ ಯಾವ ವಿಶೇಷ ಅಂತರವೂ ಇಲ್ಲ. ಅಂದರೆ ನಾವು ಈ ವಿಷಯದಲ್ಲಿ ಪ್ರಗತಿಪರರಾಗಿಲ್ಲ. ಹೊಲಗಳ ಸ್ಥಿತಿಯು ಸಮಾಧಾನಕರವಾಗಿಲ್ಲ. ಮಳೆಯ ಮಾನವು ಕಡಿಮೆಯಾಗುತ್ತ ನಡೆದಿರುವದು. ಬತ್ತವು ನಮ್ಮ ದೇಶದಲ್ಲಿ ಮೊದಲನೆಯ ಪೈರಿನಿಸಿಕೊಂಡಿದೆ. ಸುಮಾರು ೮ ಕೋಟಿ ಎಕರೆ ಭೂಮಿಯಲ್ಲಿ ಇದನ್ನು ಬೆಳಿಸುವರು. ಮುಂಬಯಿ ಇಲಾಖೆಯಲ್ಲಿ ೨೦ ಲಕ್ಷ, ಕರ್ನಾಟಕದಲ್ಲಿ ೪ ಲಕ್ಷ ಎಕರೆ ಭೂಮಿಯಲ್ಲಿ ಬತ್ತದ ಬೆಳೆಯಾಗುವದು, ನಮ್ಮ ದೇಶದಲ್ಲಿ ೧ ಎಕರೆಗೆ ಸರಾಸರಿ ೮೯೦ ಪೌಂಡು ಬತ್ತವು ಬೆಳೆಯುವದೆಂದು ಲೆಕ್ಕ ಹೊರಟರೆ ಅಮೇರಿಕೆಯಲ್ಲಿ ೧ ಎಕರೆಗೆ ೧೪೦೦ ಪೌಂಡು, ಜಪಾನದಲ್ಲಿ ೨ ಸಾವಿರ ಪೌಂಡು ಬತ್ತದ ಪೈರು ಬರುವದು. ಗೋದಿಯು ನಮ್ಮ ದೇಶದ ಎರಡನೆಯ ಪೈರು. ಕೇವಲ ಮಳೆಯ ಮೇಲೆಯೇ ಅವಲಂಬಿಸಿದ ಭೂಮಿಯಲ್ಲಿ ೧ ಎಕರೆಗೆ ಸರಾಸರಿ ೩೦೦ ಪೌಂಡು ಬೆಳೆಯಾದರೆ ನೀರು ಉಣ್ಣಿಸುವ ಭೂಮಿಯಲ್ಲಿ ೧ ಎಕರೆಯ ಉತ್ಪನ್ನವು ೮೦೦ ಪೌಂಡು ಆಗುವದು. ಅದೇ ಫ್ರಾನ್ಸ್ ದೇಶದಲ್ಲಿ ೧ ಎಕರೆಗೆ ಸರಾಸರಿ ೧೫೧೦ ಪೌಂಡು, ಇಂಗ್ಲಂಡದಲ್ಲಿ ಎರಡು ಸಾವಿರ ಪೌಂಡು ಉತ್ಪನ್ನ ಬರುವದು. ಇನ್ನು ರೊಕ್ಕದ ಪೈರಾದ ಹತ್ತಿಯನ್ನು ತೆಗೆದುಕೊಳ್ಳೋಣ: ನಮ್ಮ ದೇಶದಲ್ಲಿ ೧ ಎಕರೆಗೆ ಸರಾಸರಿ ೩೨೦ ಪೌಂಡು ಹತ್ತಿಯ ಬೆಳೆಯಾದರೆ ಅಮೇರಿಕಾ ಇಜಿಪ್ತ ದೇಶಗಳಲ್ಲಿ ೫೦೦ ಪೌಂಡು ಬೆಳೆಯುವದು. ನಾವು ೧ ಎಕರೆಗೆ ೫ ಟನ್ನ ಬಟಾಟೆಯು ಬೆಳೆದರೆ ೮ ವರ್ಷ ಉತ್ಪನ್ನ ಬೆಳೆ ಬಂದಿತೆನ್ನುವೆವು. ಫ್ರಾನ್ಸ್ ಇಟಾಲಿಗಳಲ್ಲಿ ೧ ಎಕರೆಗೆ ೨೫ ರಿಂದ ೩೦ ಟನ್ನು ಗಳ ವರೆಗೆ ಈ ಬೆಳೆ ಬರುವದುಂಟು. ಈ ರೀತಿ ಉತ್ಪನ್ನವು ಕಡಿಮೆ ಬರಲಿಕ್ಕೆ ನಮ್ಮ ದೇಶದ ರೈತರಂತೆಯೇ ಭೂಮಿಯೂ ದಣಿದಿಕ್ಕೆ ಬಡವಾಗುತ್ತ ನಡೆದಿರುವದೇ ಮುಖ್ಯ ಕಾರಣವು.

೬. ನಮ್ಮ ರೈತರಿಗೆ ಪೈರಿಗೆ ಬೀಳುವ ರೋಗದ ಕಲ್ಪನೆಯೇ ಇಲ್ಲ. ನಮ್ಮ ದೇಶದಲ್ಲಿ ಜೋಳ ಬೆಳೆಯುವ ಕ್ಷೇತ್ರವು ಸುಮಾರು ೮೦ ಲಕ್ಷ ಎಕರೆ ಇರುವದು. ಜೋಳದ ಬೆಳೆಗೆ ಕಾಡಿಗೆ ರೋಗವು ಹಾಯುವದು. ಈ ರೋಗದಿಂದ

ಕನಿಷ್ಠ ಒಂದು ಎಕರೆಗೆ ೨ ರೂ. ಹಾನಿಯಾಗುವದೆಂದು ತಿಳಿದರೂ ವರ್ಷಕ್ಕೆ ಎಷ್ಟು ರೂ. ಹಾನಿಯಾದಂತಾಯಿತು? ಇದರಂತೆ ಗೋದಿಗೆ ಭಂಡಾರಿ ರೋಗವು ಬರುವದು. ಭಂಡಾರಿ ರೋಗವು ಬಿದ್ದ ವರ್ಷ ಗೋದಿಯ ಬೆಳೆಯು ಬರುವದೇ ಇಲ್ಲ. ಒಂದು ಎಕರೆಗೆ ೫ ರೂ. ಲೆಕ್ಕ ಹಿಡಿದರೂ ೨೦-೨೫ ಲಕ್ಷ ಎಕರೆ ಭೂಮಿಯಲ್ಲಿ ಗೋದಿಯನ್ನು ಬಿತ್ತುವ ನಮ್ಮ ಮುಂಬಯಿ ಇಲಾಖೆಯೊಂದಕ್ಕೇ ಎಷ್ಟು ಹಾನಿಯಾಗುವದು ನೋಡಿರಿ. ಇದೇ ಮೇರೆಗೆ ಜವಾರಿ ಹತ್ತಿಗೆ ಸಿಡಿರೋಗವೂ ವಿಲಾಯತಿ ಹತ್ತಿಗೆ ಕೆಂಪು ಎಲೆಯ ರೋಗವೂ ತಗಲುವವು. ಅಡಕೆಯ ಮರಕ್ಕೆ ತಗಲುವ ಕೊಳೆರೋಗವೂ ದ್ರಾಕ್ಷೆಯ ಬಳ್ಳಿಯ ಬೂಳಸ ರೋಗವೂ ರೈತರನ್ನು ಹಣ್ಣು ಮಾಡುತ್ತಿವೆ. ನಮ್ಮ ರೈತರಿಗೆ ಈ ರೋಗನಿವಾರಣೆಗೆ ತಕ್ಕ ದಾರಿ ಗೊತ್ತಿಲ್ಲ. ಸರಕಾರದವರು ಪ್ರಯೋಗ ಮಾಡಿ ನೋಡಿ ಕಂಡು ಹಿಡಿದ ರೋಗನಿವಾರಣೋಪಾಯಗಳನ್ನು ಎಷ್ಟು ಹೇಳಿದರೂ ಮೂಢಭಕ್ತಿಯ ನಮ್ಮವರಿಗೆ ಅದು ತಿಳಿಯುವದೇ ಇಲ್ಲ. ಒಕ್ಕಲತನದ ಖಾತೆಯವರು ಕಂಡು ಹಿಡಿದ ಒಕ್ಕಲತನದ ಸುಧಾರಣೆಯ ಉಪಾಯಗಳು ಕೇವಲ ಪುಸ್ತಕದಲ್ಲಿಯೇ ಉಳಿದಿವೆ. ಒಕ್ಕಲತನಕ್ಕೆ ಸಂಬಂಧಿಸಿದ ದನಕರುಗಳ ಸ್ಥಿತಿಯೂ ಉಪ ಉದ್ಯೋಗಗಳೂ ಅಷ್ಟೇ ಕಂಗಾಲ ಸ್ಥಿತಿಯಲ್ಲಿರುವವು.

ನಮ್ಮ ದೇಶದ ಒಕ್ಕಲಿಗರ ಸಾಂಪತ್ತಿಕ ಸ್ಥಿತಿಯಂತೆಯೇ ವಿದ್ಯಾಬುದ್ಧಿಗಳ ಸ್ಥಿತಿಯೂ ಅವರ ಆರೋಗ್ಯವಿಷಯಕ ಜ್ಞಾನವೂ ತೀರ ಕರುಣಾಜನಕವಾಗಿವೆ.

೮. ಸುಧಾರಿಸಿದ ದೇಶಗಳಲ್ಲಿ ಒಕ್ಕಲಿಗರು ಸುಶಿಕ್ಷಿತರಾಗಿರುವರು. ಅವನು ಒಕ್ಕಲತನಕ್ಕೆ ಸಂಬಂಧಿಸಿದ ಎಲ್ಲ ಶಾಸ್ತ್ರಗಳ ಜ್ಞಾನಮಾಡಿಕೊಂಡು ಒಕ್ಕಲಿಗರಾಗಿರುವರು. ಒಕ್ಕಲತನದ ಹೋರೆಯ ಬಗ್ಗೆ ಆ ದೇಶಗಳಲ್ಲಿ ತುಂಬ ಆದರ ವಿರುವದು. ಅವರು ಒಕ್ಕಲತನಕ್ಕೆ ಹೊಂದಿ ದನಕರುಗಳನ್ನು ಸಾಕುವ ಡೇರಿಗಳನ್ನು ಇಟ್ಟಿರುವರು. ಅವರ ಡೇರಿಗಳಲ್ಲಿ ದಿನವೊಂದಕ್ಕೆ ೧೦೦ ಪೌಂಡು ಹಾಲು ಹಿಂಡುವ ದನಗಳನ್ನು ನೋಡಬಹುದು. ಹಿಂಡುವ ಆಕಳುಗಳ ಆಹಾರ ಆರೋಗ್ಯ ಇತ್ಯಾದಿಗಳ ಬಗ್ಗೆ ತುಂಬ ಎಚ್ಚರಪಡುವರು; ಸಂತತಿಯ ಸುಧಾರಣೆಯ ಬಗ್ಗೆ ವಿಶೇಷ ಪ್ರಯತ್ನ ಪಡುವರು. ದನಗಳ ಬಣ್ಣ ಆಕಾರ ಗುಣ ಧರ್ಮಗಳಲ್ಲಿ ಅನೇಕ ಸುಧಾರಣೆ ಮಾಡಿರುವರು. ಹಿಂಡುವ ದನಗಳ ಹಿಂಡುವ ಗುಣವನ್ನೂ ಹೂಡುವ ದನಗಳ ಶಕ್ತಿಯನ್ನೂ ಬೆಳೆಸುವದಕ್ಕಾಗಿ ಹಲವು ಪ್ರಯೋಗಾನುಭವಗಳನ್ನು ಮಾಡಿ ಸಾಗಾಗ ಜನತೆಯ ಮುಂದಿಡುವರು. ಕೇವಲ ಆಹಾರಕ್ಕಾಗಿಯೇ ಬೆಳೆಸುವ

ಪ್ರಾಣಿಗಳ ಮೈಯ ಕೊಬ್ಬನ್ನು ಹೆಚ್ಚಿಸುವದೇ ಮೊದಲಾದ ಕಾರ್ಯಗಳನ್ನು ಇವರು ಬಹು ದಕ್ಷತೆಯಿಂದ ನಡೆಸುತ್ತಿರುವರು. ಒಕ್ಕಲತನದ ಉಪಕರಣಗಳಲ್ಲಿ ಯಂತೂ ಹೇಳಕೂಡದಷ್ಟು ಸುಧಾರಣೆ ಮಾಡಿಕೊಂಡಿರುವರು. ರೆಂಟೆ ಹೂಡಿ ಯುವದು, ಹರಗುವದು, ಬಿತ್ತುವದು, ಎಡೆ ಹೊಡೆಯುವದು, ಕೊಯ್ಯುವದು, ತುಳಿಸುವದು, ತೂರುವದು, ಚೀಲಗಳನ್ನು ತುಂಬುವದು ಮೊದಲಾದ ಯಾ ತ್ರೊ ಕಾರ್ಯಗಳನ್ನು ಯಂತ್ರಗಳಿಂದಲೇ ಮಾಡಿಸಿಕೊಳ್ಳುವರು. ದನಗಳನ್ನು ಹಿಂಡುವ ದಕ್ಕೂ ಹತ್ತಿಯನ್ನು ಬಿಡಿಸುವದಕ್ಕೂ ಶೇಂಗಾ ಒಡೆಯುವದಕ್ಕೂ ತರಾರಿ ಯಂತ್ರಗಳನ್ನು ರಚಿಸಿಕೊಂಡಿರುವರು. ಒಟ್ಟಿನಮೇಲೆ ಆ ದೇಶಗಳಲ್ಲಿ ಶಕ್ತಿ ಯುಕ್ತಿ ವಿದ್ಯೆಗಳನ್ನು ಉಪಯೋಗಿಸಿಕೊಂಡು ಒಕ್ಕಲತನದಲ್ಲಿ ಸಂಪೂರ್ಣ ಸಿದ್ಧಿ ಯನ್ನು ತಾಳಿ ಹೆಂಗಸರೂ ಗಂಡಸರೂ ಸಮ ಸಮ ಸಾಹಸಿಗಳಾಗಿ ಕೆಲಸ ಮಾಡುವದರಿಂದ ಆ ದೇಶಗಳು ದಿನದಿನಕ್ಕೆ ಮುಂದೆ ಸಾಗುತ್ತಲಿವೆ. ಮಾದರಿ ಗಾಗಿ ಡೆನ್ಮಾರ್ಕದೇಶವನ್ನು ತೆಗೆದುಕೊಳ್ಳೋಣ.

ಡೆನ್ಮಾರ್ಕವು ನಮ್ಮ ಮೂರು ಜಿಲ್ಲೆಗಳ ಕ್ಷೇತ್ರಕ್ಕೆ ಮಿಕ್ಕಲಾರಷ್ಟು ದೊಡ್ಡದಾಗಿರುವ, ಯುರೋಪಖಂಡದಲ್ಲಿರುವ ಒಂದು ಸಣ್ಣ ದೇಶವು. ಅವರು ಹ್ಯಾಗೆ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಂಡು ಜಗತ್ತಿಗೆ ಮಾದರಿಯಾಗಿದ್ದಾರೆ. ನೋಡೋಣ– ಅವರ ಒಕ್ಕಲತನ, ಅವರ ಹೈನದ ಶ್ರೇಷ್ಠತ್ವ, ಅವರ ಸಾಂಪತ್ತಿಕ ಸ್ಥಿತಿ ಸುಧಾರಣೆ ಇವೆಲ್ಲ ನೋಡುವ ಹಾಗೆ, ಕೇಳುವಹಾಗೆ ಮತ್ತು ಅನುಕರಣ ಮಾಡುವ ಹಾಗೆ ಅವೆ.

೧೮೫೦ನೇ ಇಸ್ವಿಯ ಸುಮಾರಕ್ಕೆ ಡೆನ್ಮಾರ್ಕದ ಒಕ್ಕಲತನವು ಪ್ರಗತಿಪರ ವಾಗಿದ್ದಿಲ್ಲ. ಒಕ್ಕಲಿಗರು ಬಹಳ ಹಿಂದುಳಿದವರೂ, ಆಲಸ್ಯಗಾರರೂ ಸಂಶಯಯುಕ್ತರೂ ಸಂಘಶಕ್ತಿಯಿಂದ ಕೆಲಸ ಮಾಡಲು ಮನಸ್ಸಿಲ್ಲದವರು ಆಗಿದ್ದರು. ಅದೇ ಒಕ್ಕಲಿಗರು ೧೯೨೦ನೇ ಇಸ್ವಿಯ ಸುಮಾರಕ್ಕೆ ಅಷ್ಟು ಬದಲಾವಣೆ ಹೊಂದಿದವರಾಗಿದ್ದಾರೆ. ಅವರ ಒಕ್ಕಲತನವು ಬಹಳ ಪ್ರಗತಿಪರ ವಾಗಿದೆ. ಎಲ್ಲ ತರದ ಸುಧಾರಣೆಗಳನ್ನು ಅಮಲಿನಲ್ಲಿ ತಂದಿದ್ದಾರೆ. ತಮ್ಮ ಉತ್ಪನ್ನ ವನ್ನು ಹೆಚ್ಚಿಸಿಕೊಂಡು ಹೆಚ್ಚು ಸೌಖ್ಯದಿಂದ ಇರಹತ್ತಿದ್ದಾರೆ. ಯಾವಾಗಲು ಶಾಸ್ತ್ರೀಯ ಶೋಧನೆಗಳಲ್ಲಿ ತೊಡಗಿ ಅದರ ಉಪಯೋಗವನ್ನು ಮಾಡಿಕೊಳ್ಳು ತ್ತಿರುವರು. ಉದ್ಯೋಗಶೀಲರಾಗಿರುವದಲ್ಲದೆ, ಉತ್ಪನ್ನ ಹೆಚ್ಚಿಸಲು ಚಿಂತಾ ಪರಾಯತ್ತರಾಗಿರುವರು. ಸಂಘಶಕ್ತಿಯಿಂದ ಕೆಲಸ ಮಾಡುವದರಲ್ಲಿ ಪ್ರವೀಣರಾಗಿದ್ದಾರೆ

ಸಹಕಾರದ ಉಪಯೋಗವನ್ನು ಪರಮಾವಧಿ ಮಾಡಿಕೊಂಡಿರುವರು. ಆ ದೇಶದಲ್ಲಿ ೧೮೬೦ರಲ್ಲಿ ೨೧ ಕೋ-ಆಪರೇಟಿವ್ ಸ್ಟೋರುಗಳಿದ್ದವು. ಆದರೆ ೧೯೧೯ಕ್ಕೆ ೧೭೦೦ ಕೊ. ಸ್ಟೋರಗಳಾಗಿವೆ. ೧೯೨೩ನೇ ಇಸ್ವಿಯಲ್ಲಿ ೧೦೦ಕ್ಕೆ ೯೦ ರಂತೆ ಒಕ್ಕಲಿಗರು ಕೋ-ಆಪರೇಟಿವ್ ಡೇರಿಗಳ ಮೆಂಬರರಾಗಿದ್ದರು. ಡೆನ್ಮಾರ್ಕ್ ದೇಶದಲ್ಲಿ ಹಿಂಡುವ ಒಟ್ಟು ಹಾಲಿನಲ್ಲಿ ೧೦೦ಕ್ಕೆ ೬೬ ರಷ್ಟು ಹಾಲು ಈ ತರದ ಸಹಕಾರಿ ಡೇರಿಗಳ ಮುಖಾಂತರವೇ ಪೂರಲ್ಪಡುವದು. ಈಗ ಅಲ್ಲಿಯ ಪ್ರತಿ ಒಬ್ಬ ಒಕ್ಕಲಿಗನು ತನಗೆ ಬೇಕಾಗುವ ಎಲ್ಲ ಸಾಮಾನಗಳನ್ನು ಕೋ-ಆಪರೇಟಿವ್ ಸ್ಟೋರುಗಳಲ್ಲಿಯೇ ಕೊಂಡುಕೊಳ್ಳುವನು; ಸಹಕಾರಿ ಪತ್ತಿನ ಸಂಘಗಳಲ್ಲಿ ಸಾಲ ತೆಗೆದುಕೊಳ್ಳುವನು; ತನಗೆ ಬೇಕಾದ ಬೀಜಗಳನ್ನು ಬೀಜದ ಸಂಘಗಳಲ್ಲಿಯೇ ಕೊಳ್ಳುವನು; ಕೃತ್ರಿಮ ಗೊಬ್ಬರವನ್ನು ಗೊಬ್ಬರ ಪೂರೈಸುವ ಸಂಘಗಳಲ್ಲಿಯೇ ಕ್ರಯಕ್ಕೆ ಪಡೆಯುವನು; ಸಿಮೆಂಟ ಮೊದಲಾದ ಮನೆಕಟ್ಟುವ ಸಾಮಾನಗಳನ್ನು ಕ್ರಯದ ಸಂಘಗಳಲ್ಲಿಯೇ ತೆಗೆದುಕೊಳ್ಳುವನು. ತನ್ನ ಹಾಲು, ತತ್ತಿ ಮತ್ತು ಹಂದಿಯ ಮಾಂಸ ಇವುಗಳನ್ನು ಹಾಲಿನ, ತತ್ತಿಯ ಮತ್ತು ಮಾಂಸದ ಸಂಘಗಳ ಮೂಲಕವಾಗಿಯೇ ಮಾರುವನು. ಅವನು ದನಕರುಗಳನ್ನು ಕೊಳ್ಳುವ ದಾಗಲೀ ಮಾರುವದಾಗಲೀ ಸಂಘದ ಮುಖಾಂತರವಾಗಿಯೇ. ತನ್ನಲ್ಲಿ ಉಳಿದ ದುಡ್ಡನ್ನು ಕೊ. ಸೆ. ಬ್ಯಾಂಕಿನಲ್ಲಿಯೇ ಇಡುವನು. ಸಹಕಾರದ ಹೊಸ ಹೊಸ ತತ್ವಗಳನ್ನು ಸಹಕಾರಿ ಸಂಘಗಳ ಚಾಲಕರಿಂದ ಕಲಿತುಕೊಳ್ಳುವನು. ಒಕ್ಕಲತನದ ಸುಧಾರಣೆಯ ಬಗ್ಗೆ ಯಾವಾಗಲೂ ಒಕ್ಕಲತನದ ತಜ್ಞರ ಕೂಡ ವಿಚಾರವಿನಿಮಯ ಮಾಡುತ್ತಲಿರುವನು. ಇವರಲ್ಲವೇ ನಮಗೆ ಅನುಕರಣೀಯರು. ಇವರ್ಯಾವೇ ಮಾದರಿಯ ಹಳ್ಳಿಗರು !

ಈ ತರದ ಪ್ರಗತಿಗೆ **ಅಲ್ಲಿಯ ಶಿಕ್ಷಣದ ಸುಧಾರಣೆಯೇ ಮೂಲ ಕಾರಣವು.** ಗ್ರಂಟವ್ಹಿಗನೆಂಬ ಸುಧಾರಕನು ೧೭೮೩ರಿಂದ ೧೮೭೨ರ ವರೆಗೆ ಅವರಲ್ಲಿ ಒಳ್ಳೇ ಕಳಕಳಿಯಿಂದ ಜಾಗ್ರತೆ ಮಾಡಿದನು. ಫೋಕ್ ಹಾಯಸ್ಕೂಲಗಳನ್ನು (Foll High Schools) ಸ್ಥಾಪಿಸಿ ಹೆಂಗಸರಿಗೆ, ಗಂಡಸರಿಗೆ, ಸಣ್ಣವರಿಗೆ, ದೊಡ್ಡವರಿಗೆ, ಒಕ್ಕಲಿಗರಿಗೆ ಜಮೀನುದಾರರಿಗೆ ಒಟ್ಟಿನ ಮೇಲೆ ಎಲ್ಲರಿಗೂ ಪರಿಸ್ಥಿತಿಗನುಸರಿಸಿ ಶಿಕ್ಷಣ ಕೊಡುವ ಯೋಜನೆ ಮಾಡಿದನು. ಆತನ ಶಿಷ್ಯರು ಆತನ ಈ ಯೋಜನೆಯನ್ನು ಭರದಿಂದ ಎಲ್ಲಕಡೆಗೂ ಹಬ್ಬಿಸಿದರು. ಅಲ್ಪಕಾಲದಲ್ಲಿಯೇ ಎಲ್ಲಿ ನೋಡುವಲ್ಲಿ ಈ ತರದ ಸ್ಕೂಲುಗಳೇ ಆಗಿಹೋದವು. ಹೀಗಾಗಿ ಸುಮಾರು ೧೮೭೦ರ ಸುಮಾರಕ್ಕೆ ಹಳ್ಳಿಗಳಲ್ಲಿ ಬಹಳ ಬದಲಾವಣೆಯಾಯಿತು. "ಲುಜಿವ್ಹಿಗ್ ಶ್ರಾಡರ" ಸೆ ಗ್ರಂಟವ್ಹಿಗ್ನನ ಶಿಷ್ಯರಲ್ಲಿ ಒಬ್ಬನು. ಇವನು ೧೮೩೮ರಿಂದ ೧೯೦೮ ರ ವರೆಗೆ

ಪ್ರಾಣಿಗಳ ಮೈಯ ಕೊಬ್ಬನ್ನು ಹೆಚ್ಚಿಸುವದೇ ಮೊದಲಾದ ಕಾರ್ಯಗಳನ್ನು ಇವರು ಬಹು ದಕ್ಷತೆಯಿಂದ ನಡೆಸುತ್ತಿರುವರು. ಒಕ್ಕಲತನದ ಉಪಕರಣಗಳಲ್ಲಿ ಯಂತೂ ಹೇಳಕೂಡದಷ್ಟು ಸುಧಾರಣೆ ಮಾಡಿಕೊಂಡಿರುವರು. ರೆಂಟೆ ಹೊಡೆಯುವದು, ಹರಗುವದು, ಬಿತ್ತುವದು, ಎಡೆ ಹೊಡೆಯುವದು, ಕೊಯ್ಯುವದು, ತುಳಿಸುವದು, ತೂರುವದು, ಚೀಲಗಳನ್ನು ತುಂಬುವದು ಮೊದಲಾದ ಯಾವ ಕೃಷಿ ಕಾರ್ಯಗಳನ್ನು ಯಂತ್ರಗಳಿಂದಲೇ ಮಾಡಿಸಿಕೊಳ್ಳುವರು. ದನಗಳನ್ನು ಹಿಂಡುವ ದಕ್ಕೂ ಹತ್ತಿಯನ್ನು ಬಿಡಿಸುವದಕ್ಕೂ ಶೇಂಗಾ ಒಡೆಯುವದಕ್ಕೂ ತರತರದ ಯಂತ್ರಗಳನ್ನು ರಚಿಸಿಕೊಂಡಿರುವರು. ಒಟ್ಟಿನಮೇಲೆ ಆ ದೇಶಗಳಲ್ಲಿ ಶಕ್ತಿ ಯುಕ್ತಿ ವಿದ್ಯೆಗಳನ್ನು ಉಪಯೋಗಿಸಿಕೊಂಡು ಒಕ್ಕಲತನದಲ್ಲಿ ಸಂಪೂರ್ಣ ಪ್ರಸಿದ್ಧಿ ಯನ್ನು ತಾಳಿ ಹೆಂಗಸರೂ ಗಂಡಸರೂ ಸಮ ಸಮ ಸಾಹಸಿಗಳಾಗಿ ಕೆಲಸ ಮಾಡುವದರಿಂದ ಆ ದೇಶಗಳು ದಿನದಿನಕ್ಕೆ ಮುಂದೆ ಸಾಗುತ್ತಲವೆ. ಮಾದರಿ ಗಾಗಿ ಡೆನ್ಮಾರ್ಕದೇಶವನ್ನು ತೆಗೆದುಕೊಳ್ಳೋಣ.

ಡೆನ್ಮಾರ್ಕವು ನಮ್ಮ ಮೂರು ಜಿಲ್ಲೆಗಳ ಕ್ಷೇತ್ರಕ್ಕೆ ಮಿಕ್ಕಲಾರದಷ್ಟು ದೊಡ್ಡದಾಗಿರುವ, ಯುರೋಪಖಂಡದಲ್ಲಿರುವ ಒಂದು ಸಣ್ಣ ದೇಶವು. ಅವರು ಹ್ಯಾಗೆ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಂಡು ಜಗತ್ತಿಗೆ ಮಾದರಿಯಾಗಿದ್ದಾರೆ. ನೋಡೋಣ– ಅವರ ಒಕ್ಕಲತನ, ಅವರ ಹೈನದ ಶ್ರೇಷ್ಠತ್ವ, ಅವರ ಸಾಂಪತ್ತಿಕ ಸ್ಥಿತಿ ಸುಧಾರಣೆ ಇವೆಲ್ಲ ನೋಡುವ ಹಾಗೆ, ಕೇಳುವಹಾಗೆ ಮತ್ತು ಅನುಕರಣ ಮಾಡುವ ಹಾಗೆ ಅವೆ.

ಗಲಿಲಿಯೋ ಇಸ್ವಿಯ ಸುಮಾರಕ್ಕೆ ಡೆನ್ಮಾರ್ಕದ ಒಕ್ಕಲತನವು ಪ್ರಗತಿಪರ ವಾಗಿದ್ದಿಲ್ಲ. ಒಕ್ಕಲಿಗರು ಬಹಳ ಹಿಂದುಳಿದವರೂ, ಆಲಸ್ಯಗಾರರೂ ಸಂಶಯಯುಕ್ತರೂ ಸಂಘಶಕ್ತಿಯಿಂದ ಕೆಲಸ ಮಾಡಲು ಮನಸ್ಸಿಲ್ಲದವರೂ ಆಗಿದ್ದರು. ಅದೇ ಒಕ್ಕಲಿಗರು ಗಲಿಲಿಯೋ ಇಸ್ವಿಯ ಸುಮಾರಕ್ಕೆ ಅಸ್ಖಲಿತ ಬದಲಾವಣೆ ಹೊಂದಿದವರಾಗಿದ್ದಾರೆ. ಅವರ ಒಕ್ಕಲತನವು ಬಹಳ ಪ್ರಗತಿಪರ ವಾಗಿದೆ. ಎಲ್ಲ ತರದ ಸುಧಾರಣೆಗಳನ್ನು ಅಮಲಿನಲ್ಲಿ ತಂದಿದ್ದಾರೆ. ತಮ್ಮ ಉತ್ಪನ್ನ ವನ್ನು ಹೆಚ್ಚಿಸಿಕೊಂಡು ಹೆಚ್ಚು ಸೌಖ್ಯದಿಂದ ಇರಹತ್ತಿದ್ದಾರೆ. ಯಾವಾಗಲೂ ಶಾಸ್ತ್ರೀಯ ಶೋಧನೆಗಳಲ್ಲಿ ತೊಡಗಿ ಅದರ ಉಪಯೋಗವನ್ನು ಮಾಡಿಕೊಳ್ಳುತ್ತಿರುವರು. ಉದ್ಯೋಗಶೀಲರಾಗಿರುವದಲ್ಲದೆ, ಉತ್ಪನ್ನ ಹೆಚ್ಚಿಸಲು ಜಿಜ್ಞಾಸೆ ಪಡುತ್ತಲಿರುವರು. ಸಂಘಶಕ್ತಿಯಿಂದ ಕೆಲಸ ಮಾಡುವದರಲ್ಲಿ ನಿಸ್ಸೀಮರಾಗಿದ್ದಾರೆ

ಸಹಕಾರದ ಉಪಯೋಗವನ್ನು ಪರಮಾವಧಿ ಮಾಡಿಕೊಂಡಿರುವರು. ಆ ದೇಶದಲ್ಲಿ ೧೮೭೦ರಲ್ಲಿ ೨೧ ಕೋ-ಆಪರೇಟಿವ್ ಸ್ಟೋರುಗಳಿದ್ದವು. ಆದರೆ ೧೯೧೯ಕ್ಕೆ ೧೭೦೦ ಕೊ. ಸ್ಟೋರಗಳಾಗಿವೆ. ೧೯೨೩ನೇ ಇಸ್ವಿಯಲ್ಲಿ ೧೦೦ಕ್ಕೆ ೯೦ ರಂತೆ ಒಕ್ಕಲಿಗರು ಕೋ-ಆಪರೇಟಿವ್ ಡೇರಿಗಳ ಮೆಂಬರರಾಗಿದ್ದರು. ಡೆನಾರ್ಕ ದೇಶದಲ್ಲಿ ಹಿಂಡುವ ಒಟ್ಟು ಹಾಲಿನಲ್ಲಿ ೧೦೦ಕ್ಕೆ ೮೬ ರಷ್ಟು ಹಾಲು ಈ ತರದ ಸಹಕಾರಿ ಡೇರಿಗಳ ಮುಖಾಂತರವೇ ಮಾರಲ್ಪಡುವದು. ಈಗ ಅಲ್ಲಿಯ ಪ್ರತಿ ಒಬ್ಬ ಒಕ್ಕಲಿಗನು ತನಗೆ ಬೇಕಾಗುವ ಎಲ್ಲ ಸಾಮಾನಗಳನ್ನು ಕೋ-ಆಪರೇಟಿವ್ ಸ್ಟೋರುಗಳಲ್ಲಿಯೇ ಕೊಂಡುಕೊಳ್ಳುವನು; ಸಹಕಾರಿ ಪತ್ತಿನ ಸಂಘಗಳಲ್ಲಿ ಸಾಲ ತೆಗೆದುಕೊಳ್ಳುವನು; ತನಗೆ ಬೇಕಾದ ಬೀಜಗಳನ್ನು ಬೀಜದ ಸಂಘಗಳಲ್ಲಿಯೇ ಕೊಳ್ಳುವನು; ಕೃತ್ರಿಮ ಗೊಬ್ಬರವನ್ನು ಗೊಬ್ಬರ ಪೂರೈಸುವ ಸಂಘಗಳಲ್ಲಿಯೇ ಕ್ರಯಕ್ಕೆ ಪಡೆಯುವನು; ಸಿಮೆಂಟ ಮೊದಲಾದ ಮನೆಕಟ್ಟುವ ಸಾಮಾನಗಳನ್ನು ಆಯಾ ಸಂಘಗಳಲ್ಲಿಯೇ ತೆಗೆದುಕೊಳ್ಳುವನು. ತನ್ನ ಹಾಲು, ತತ್ತಿ ಮತ್ತು ಹಂದಿಯ ಮಾಂಸ ಇವುಗಳನ್ನು ಹಾಲಿನ, ತತ್ತಿಯ ಮತ್ತು ಮಾಂಸದ ಸಂಘಗಳ ಮೂಲಕವಾಗಿಯೇ ಮಾರುವನು. ಅವನು ದನಕರುಗಳನ್ನು ಕೊಳ್ಳುವ ದಾಗಲೀ ಮಾರುವದಾಗಲೀ ಸಂಘದ ಮುಖಾಂತರವಾಗಿಯೇ. ತನ್ನಲ್ಲಿ ಉಳಿದ ದುಡ್ಡನ್ನು ಕೊ. ಸೆ. ಬ್ಯಾಂಕಿನಲ್ಲಿಯೇ ಇಡುವನು. ಸಹಕಾರದ ಹೊಸ ಹೊಸ ತತ್ವಗಳನ್ನು ಸಹಕಾರಿ ಸಂಘಗಳ ಚಾಲಕರಿಂದ ಕಲಿತುಕೊಳ್ಳುವನು. ಒಕ್ಕಲತನದ ಸುಧಾರಣೆಯ ಬಗ್ಗೆ ಯಾವಾಗಲೂ ಒಕ್ಕಲತನದ ತಜ್ಞರ ಕೂಡ ವಿಚಾರವಿನಿಮಯ ಮಾಡುತ್ತಲಿರುವನು. ಇವರಲ್ಲವೇ ನಮಗೆ ಅನುಕರಣೀಯರು. ಇವರ್ಯಾವೇ ಮಾದರಿಯ ಹಳ್ಳಿಗರು !

ಈ ತರದ ಪ್ರಗತಿಗೆ **ಅಲ್ಲಿಯ ಶಿಕ್ಷಣದ ಸುಧಾರಣೆಯೇ ಮೂಲ ಕಾರಣವು.** ಗ್ರುಂಟವ್ವಿಗನೆಂಬ ಸುಧಾರಕನು ೧೭೮೩ರಿಂದ ೧೮೭೨ರ ವರೆಗೆ ಅವರಲ್ಲಿ ಒಳ್ಳೇ ಕಳಕಳಿಯಿಂದ ಜಾಗ್ರತೆ ಮಾಡಿದನು. ಫೋಕ್ ಹಾಯಸ್ಕೂಲಗಳನ್ನು (Folk High Schools) ಸ್ಥಾಪಿಸಿ ಹೆಂಗಸರಿಗೆ, ಗಂಡಸರಿಗೆ, ಸಣ್ಣವರಿಗೆ, ದೊಡ್ಡವರಿಗೆ, ಒಕ್ಕಲಿಗರಿಗೆ ಜಮೀನುದಾರರಿಗೆ ಒಟ್ಟಿನ ಮೇಲೆ ಎಲ್ಲರಿಗೂ ಪರಿಸ್ಥಿತಿಗನುಸರಿಸಿ ಶಿಕ್ಷಣ ಕೊಡುವ ಯೋಜನೆ ಮಾಡಿದನು. ಆತನ ಶಿಷ್ಯರು ಆತನ ಈ ಯೋಜನೆಯನ್ನು ಭರದಿಂದ ಎಲ್ಲಕಡೆಗೂ ಹಬ್ಬಿಸಿದರು. ಅಲ್ಪಕಾಲದಲ್ಲಿಯೇ ಎಲ್ಲಿ ನೋಡುವಲ್ಲಿ ಈ ತರದ ಸ್ಕೂಲುಗಳೇ ಆಗಿಹೋದವು. ಹೀಗಾಗಿ ಸುಮಾರು ೧೮೭೦ರ ಸುಮಾರಕ್ಕೆ ಹಳ್ಳಿಗಳಲ್ಲಿ ಬಹಳ ಬದಲಾವಣೆಯಾಯಿತು. "ಲುಜಿವ್ವಿಗ್ ಶ್ರಾಡರ" ಗ್ರುಂಟವ್ವಿಗ್ಗನ ಶಿಷ್ಯರಲ್ಲಿ ಒಬ್ಬನು. ಇವನು ೧೮೩೧ರಿಂದ ೧೯೦೬ ರ ವರೆಗೆ

ಇದ್ದನು. ಇವನು ಫೋಕ್ ಹಾಯ್‌ಸ್ಕೂಲಗಳನ್ನಷ್ಟೇ ಅಲ್ಲದೆ ಒಕ್ಕಲತನದ ಮತ್ತು ಡೇರಿಗಳ ಸ್ಕೂಲುಗಳನ್ನು ಪ್ರಾರಂಭಿಸಿದನು. ಒಕ್ಕಲಿಗರೂ, ಸಣ್ಣ ಸಣ್ಣ ಜಮೀನುದಾರರೂ, ಪ್ರಾಥಮಿಕ ಶಾಲೆಗಳ ಮಾಸ್ತರರೂ ಈತನ ತತ್ವಗಳನ್ನು ಶಿರಸಾವಹಿಸಿ ಪ್ರಸಾರಮಾಡಹತ್ತಿದರು. ದೇಶದಲ್ಲಿ ದುಡಿತದ ಮೇಲಣ ಪ್ರೇಮವು ಬೆಳೆಯಿತು. ಒಕ್ಕಲತನದ ಮಹತ್ವವು ಜನತೆಗೆ ತಿಳಿಯಿತು. ಒಕ್ಕಲತನದ ಪ್ರಗತಿಯಾಗಹತ್ತಿತು. ಒಮ್ಮೆ ಅವರು ಬೆಳೆದ ಗೋದಿ ಗೋವಿನ ಜೋಳ ಮೊದಲಾದ ಮಾಲಿಗೆ ಯುರೋಪದಲ್ಲಿ ಯೋಗ್ಯ ಕಿಮ್ಮತ್ತು ಬಾರದ ಹಾಗಾಯಿತು. ಆಗ ಯುರೋಪಖಂಡದಲ್ಲಿ ಇವುಗಳ ಬಗ್ಗೆ ಬಹಳ ಏರಾಟ ನಡೆಯಿತು. ಇದನ್ನು ನೋಡಿ ಆ ದೇಶದ ಒಕ್ಕಲಿಗರು ತಾವು ಬೆಳೆಯುವ ಯಾವ ಮಾಲನ್ನೂ ಪರದೇಶಕ್ಕೆ ಕೊಡತಕ್ಕದ್ದಲ್ಲವೆಂದು ತಮ್ಮತಮ್ಮೊಳಗೆ ಗೊತ್ತುಮಾಡಿಕೊಂಡರು. ಮತ್ತು ಆ ದೇಶದ ಪ್ರಜಾಸತ್ತಾತ್ಮಕ ಸರಕಾರವು ಒಕ್ಕಲಿಗರ ಈ ಧ್ಯೇಯವನ್ನು ಎತ್ತಿಹಿಡಿಯಿತು. ಜಮೀನುದಾರರ ಬದಲಾಗಿ ಸಾಗಾದ ಭೂಮಿಯು ಒಕ್ಕಲಿಗರಲ್ಲಿ ಹರಿದು ಹಂಚಲ್ಪಟ್ಟಿತು. ಆಗ ಯಾವ ರೈತನಿಗೂ ೪೦ ಎಕರೆಗಿಂತ ಕಡಿಮೆ ತುಂಡುಗಳಿರ ಕೂಡದೆಂದು ನಿಯಮ ಮಾಡಿದರು. ಪ್ರತಿಯೊಬ್ಬ ರೈತನು ಏಳೇಳು ಆಕಳು ಗಳನ್ನು ಸಾಕತಕ್ಕದ್ದೆಂದು ಕಟ್ಟುಮಾಡಿದರು. ತನುಗೂ ತಮ್ಮ ದನಕರುಗಳಿಗೂ ಸಾಕಾಗುವ ಬೆಳೆಯನ್ನೇ ಬೆಳೆಯತಕ್ಕದ್ದೆಂದೂ ಗೊತ್ತುಮಾಡಿದರು. ತಮಗೆ ಹೆಚ್ಚಾಗಿ ಉಳಿದ ಕಾಳುಕಡಿ ಮೊದಲಾದವುಗಳನ್ನು ತಮ್ಮತಮ್ಮ ದನಕರುಗಳಿಗೆ ಹಾಕಹತ್ತಿದರು. ಇದರಿಂದ ಗೊಬ್ಬರವು ಹೆಚ್ಚಾಯಿತು. ಎಲ್ಲ ಗೊಬ್ಬರವನ್ನು ಭೂಮಿಗೆ ಹಾಕಿದರು. ಬೆಳೆಗಳು ಸೊಗಸಾಗಿ ಬೆಳೆಯಹತ್ತಿದವು. ಆಮೇಲೆ ಏಳು ಆಕಳ ಬದಲಾಗಿ ಏಳು ಜಲೋ ಆಕಳುಗಳನ್ನು ಸಾಕತಕ್ಕದ್ದೆಂದು ನಿಯಮಮಾಡಿದರು. ಹಾಲು, ಬೆಣ್ಣೆ ಮಾರಹತ್ತಿದರು. ಬೆಣ್ಣೆತೆಗೆದ ಹಾಲಿನ ಉಪಯೋಗಕ್ಕಾಗಿ ಪ್ರತಿಯೊಬ್ಬ ರೈತನು ೧೫೦ ಹಂದಿಗಳನ್ನು ಸಾಕಹತ್ತಿದನು. ಈ ಪ್ರಕಾರ "**ಬಟರ**" ಮತ್ತು "**ಬೇಕನ್ನ**" ಇವು ಯುರೋಪಖಂಡದ ಎಲ್ಲ ದೇಶಗಳಿಗೆ ಮುಖ್ಯವಾಗಿ ಇಂಗ್ಲಂಡಕ್ಕೆ ಕಳಿಸಲ್ಪಡಹತ್ತಿತು. ಶಹರಗಳಲ್ಲಿ ಮುಖ್ಯ ನಳಗಳು, ಉಪನಳಗಳು, ಉಪೋಪನಳಗಳು ಇರುವಂತೆ ಡೆನ್ಮಾರ್ಕದ ಹಳ್ಳಿಗಳಲ್ಲಿ ಅನೇಕ ತರದ ಸಣ್ಣದೊಡ್ಡ ಸಹಕಾರಿ ಸಂಘಗಳಿರುತ್ತವೆ. ಅವರು ಒಬ್ಬರಿಗೊಬ್ಬರು ನೆರವಾಗಿ ತಮಗೆ ಬೇಕಾಗಿ ಉಳಿದ ಹಾಲು, ಬೆಣ್ಣೆ, ಮಾಂಸ ಮೊದಲಾದ ಮಾಲನ್ನು ಸಹಕಾರಿಸಂಘಗಳ ಮುಖಾಂತರ ಮಾರುತ್ತಿರುವರು. ಹೀಗಾಗಿ ಅವರು ಜಗತ್ತಿನಲ್ಲಿಯೇ ಮಾದರಿಯ ಒಕ್ಕಲಿಗರಾಗಿದ್ದಾರೆ; ಒಕ್ಕಲತನದ ಲಾಭಪಡೆದು ಕೊಂಡಿದ್ದಾರೆ; ಮತ್ತು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ.

೯. ಇದರಂತೆಯೇ ಈಗ ನಮ್ಮಲ್ಲಿಯೂ ಹಳ್ಳಿಗಳ ಸುಧಾರಣೆಯ ಕಾರ್ಯವು ಪ್ರಾರಂಭವಾಗಿರುವದು. ಹಿಂದಿನ ಗವ್ಹರ್ನರ ಸಾಹೇಬರಾದ ಫ್ರೆಡರಿಕ್ ಸಾಯಿಕ್ಸರು ಈ ಬೀಜವನ್ನು ಊರಿದವರು. ಈಗಿನ ಗವ್ಹರ್ನರ ಜನರಲ್ಲ ಸಾಹೇಬರು ಗ್ರಾಮಸುಧಾರಣೆಯ ಕಾರ್ಯದಲ್ಲಿ ಮತ್ತಿಷ್ಟು ಹೆಚ್ಚಿನ ಪ್ರಗತಿಯ ಕೆಲಸವನ್ನು ನಡೆಯಿಸಿರುವರು. ಬೀಜದ ಹೋರಿಯು ಅವರ ಮುಖ್ಯ ಮಂತ್ರವು. ಬೀಜದ ಹೋರಿಗಳಿಂದಲೇ ನಮ್ಮ ಹಿಂಡುವ ಹಾಗು ಹೂಡುವ ದನಗಳ ಸುಧಾರಣೆಯಾಗುವದು. ಹಿಂಡುವ ಮತ್ತು ಹೂಡುವ ದನಗಳ ಸುಧಾರಣೆ ಯಾಗುತ್ತ ಹೋದಂತೆ ನಮ್ಮ ಮತ್ತು ನಮ್ಮ ಒಕ್ಕಲತನದ ಸುಧಾರಣೆಯಾಗು ವದು. ಒಕ್ಕಲಿಗರೂ ಸಶಕ್ತರಾಗುವರು. ದನಗಳು ಸಶಕ್ತವಾದಂತೆ ಕಡಿವೆ ಬರ್ಜಿನಿಂದ ಹೊಲದ ಕೆಲಸವಾಗುವದು. ಇನ್ನು ಶಿಕ್ಷಕರಾದ ನಿಮಗೆ ಸಂಬಂಧಿ ಸಿದ ಕೆಲವು ಮಾತುಗಳನ್ನು ಹೇಳಿ ವಿಷಯವನ್ನು ಮುಗಿಸುವೆನು

೧೦. ವಿದ್ಯಾಪ್ರಸಾರವು ಸುಧಾರಣೆಯ ಒಂದು ಬಲವಾದ ಸಾಧನವು. ಯಾವ ವಿದ್ಯೆಯಿಂದ ವಿದ್ಯಾರ್ಥಿಗಳು ಪ್ರಕೃತಿಯಿಂದ ಬಲಿಷ್ಠರಾಗು ವರೋ ಯಾವ ವಿದ್ಯೆಯಿಂದ ಅವರು ತಮ್ಮ ಉದರನಿರ್ವಾಹದ ಬಗ್ಗೆ ತಮ್ಮ ಕಾಲ ಮೇಲೆ ನಿಲ್ಲುವರೋ ಮತ್ತು ಯಾವ ವಿದ್ಯೆಯಿಂದ ತಮ್ಮ ಮತ್ತು ತಮ್ಮ ದೇಶದ ಸಾಂಪತ್ತಿಕ ಸ್ಥಿತಿಯ ಸುಧಾರಣೆಗೆ ಅನುಕೂಲವಾಗುವದೋ ಆ ವಿದ್ಯೆಯೇ ನಿಜವಾದ ವಿದ್ಯೆಯು. ಅಂಥ ವಿದ್ಯೆಯನ್ನು ಪೂರೈಸಿಕೊಡುವದು ನಿಮ್ಮ ಕರ್ತವ್ಯವು. ಬರಿಯ ಓದುಬರೆಹ ಗಣಿತ, ಪರೀಕ್ಷೆ ಇವು ನಮ್ಮ ಈ ಯುಗದ ಗುರಿಗಳಲ್ಲ. ಪರಿ ಸ್ಥಿತಿಗೆ ಅನುಗುಣವಾದ ಶಿಕ್ಷಣಕೊಡಿರಿ. ಶಿಕ್ಷಕನ ಮೇಲೆಯೇ ಶಿಕ್ಷಣದ ಭಾರವು ವಿಶೇಷವಾಗಿ ಅವಲಂಬಿಸಿದೆ. ಶಿಕ್ಷಣದ ಸದುಪಯೋಗವು ಸಹ ಶಿಕ್ಷಕರ ಮೇಲೆಯೇ ಬಹಳವಾಗಿ ಹೊರುವದು. ಶಿಕ್ಷಕರ ಕೆಲಸವು ಬಹಳ ಪವಿತ್ರವಾದ ಕೆಲಸವು. ಒಳ್ಳೇ ಶಿಕ್ಷಣವು ನಿಮ್ಮ ಗುರಿಯಾಗಿರಬಕ್ಕದ್ದು. ಗಣಿತ ಭೂಗೋಲ ಗಳನ್ನೂ ಪರಿಸ್ಥಿತಿಗನುಸರಿಸಿ ಕಲಿಸಲು ಪ್ರಯತ್ನವಾಡಿರಿ. ರಾಜ್ಯಶಾಸನ ಪದ್ಧತಿಯ ಮರ್ಮವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಿರಿ. ಕೈ ಮುಟ್ಟಿ ಕೆಲಸ ಮಾಡಲು ಉತ್ಸುಕತೆ ಬೆಳಿಸಿರಿ. ಒಕ್ಕಲತನ ಮಾಡಲು ಶಿಕ್ಷಣದ ಅವಶ್ಯಕತೆ ಇರುವದೆಂಬದನ್ನು ಗೊತ್ತುಮಾಡಿಕೊಡಿರಿ. ಒಕ್ಕಲತನದ ಪುಸ್ತಕಗಳನ್ನು ಓದಿ, ಓದಲು ಹಚ್ಚಿರಿ. ಬೇರೆ ಬೇರೆ ಜಾತಿಗಳ ಸೂತ್ರವು ಹ್ಯಾಗೆ ಸಾಗಿದೆಯೆಂಬ ದನ್ನು ತಿಳಿಸಿಕೊಡಿರಿ. ವಿದ್ಯಾರ್ಥಿಗಳ ನಿರೀಕ್ಷಣಶಕ್ತಿ ಬೆಳಿಸಿರಿ. ಅಂತೂ ಶಿಕ್ಷಣ ವನ್ನು ಸವಿಕಟ್ಟಾಗಿ ಮಾಡಿ ಎಲ್ಲರೂ ಶಿಕ್ಷಣ ಹೊಂದುವಂತೆ ಮಾಡಿರಿ. ಇತ್ತಿತ್ತ

ಲಾಗಿ ಶಿಕ್ಷಕರ ಮತ್ತು ಶಿಕ್ಷಣಕ್ರಮದ ಮೇಲೆ ಅನೇಕ ಆರೋಪಗಳು ಬರುತ್ತಿವೆ. ನೌಕರಿಯು ಶಿಕ್ಷಣದ ಗುರಿಯಲ್ಲ. ಒಟ್ಟು ಪ್ರಜಾಸಂಖ್ಯೆಯಲ್ಲಿ ನೌಕರಿಯು ಯಾವಾಗಲೂ ೧೦೦ ಕ್ಕೆ ೨ ಷ್ಟು ಮಾತ್ರ ಇರುವರು. ಸುಶಿಕ್ಷಿತರ ಸಂಖ್ಯೆಯು ಹೆಚ್ಚಾದಂತೆ, ನೌಕರಿಯು ದುರ್ಲಭವಾಗುವದು. ನೌಕರಿಯು ಸಿಗದಿದ್ದರೂ, ಶಿಕ್ಷಣವು ಬೇಕು. ಒಕ್ಕಲತನದ ಶಿಕ್ಷಣದ ಅವಶ್ಯಕತೆಯು ನಮಗೆ ಬಹು ಇದೆ. ಪ್ರತಿಯೊಂದು ಊರಿನಲ್ಲಿ ಒಕ್ಕಲತನದ ಒಲವಿನ ವರ್ಗವು ಇರಬೇಕು. ಅಂತೇ ನಿಮ್ಮ ಅಭ್ಯಾಸಪತ್ರಿಕೆಯಲ್ಲಿ ಕೆಲಮಟ್ಟಿಗೆ ಒಕ್ಕಲತನದ ವಿಷಯಗಳನ್ನು ಇರಿಸಿದ್ದಾರೆ. ಪ್ರತಿಯೊಂದು ತಾಲೂಕಿಗೆ ದೇವೀಹೊಸೂರ ನಮೂನೆಯ ಒಕ್ಕಲತನದ ಶಾಲೆಯ ಅವಶ್ಯಕತೆಯಿದೆ. ಹೀಗಾದ ಹೊರತು ಒಕ್ಕಲಿಗರ ಮತ್ತು ಒಕ್ಕಲತನದ ಏಳ್ಗೆಯಾಗಲಾರದು. ಇದು ಒಂದೆರಡು ವರ್ಷಗಳಲ್ಲಿ ಆಗತಕ್ಕ ಸುಧಾರಣೆಯಲ್ಲ. ಈಗಲೇ ಎಲ್ಲರೂ ಒಮ್ಮನಸ್ಸಿನಿಂದ ಕಾರ್ಯವನ್ನು ಪ್ರಾರಂಭ ಮಾಡಿದರೆ ಇದರ ಪ್ರತಿಫಲವು ಸಿಗಲು ೧೦೦ ವರ್ಷಗಳು ಬೇಕಾಗಬಹುದು. ಆದರೂ ಅಡ್ಡಿಯಿಲ್ಲ. ನಮ್ಮ ಒಕ್ಕಲಿಗರು ಮತ್ತು ಒಕ್ಕಲತನವು ಸುಧಾರಿಸಿದರೆ ಇನ್ನೂ ೧೦ ಪಟ್ಟು ಉತ್ಪನ್ನವನ್ನು ಹೆಚ್ಚಿಗೆ ಮಾಡಲು ಶಕ್ಯವದೆ. ಉತ್ಪನ್ನವು ಹೆಚ್ಚಿದಂತೆ ಉಳಿದ ಎಲ್ಲ ಸುಧಾರಣೆಗಳು ತಮ್ಮಿಂದ ತಾವೇ ಆಗುವವೆಂಬುದರಲ್ಲಿ ಸಂಶಯವಿಲ್ಲ.

ಶಿಶುಶಾಲೆಗಳು

(ಮುಂದೆ ಸಾಗಿದುದು.)

ಬಾಲಕರ ಹುಟ್ಟುಗುಣಗಳೂ ಮಾನಸಿಕ ಒಲವುಗಳೂ ಅವರ ಶಿಕ್ಷಣಕ್ಕೆ ತುಂಬ ಮಹತ್ವವುಳ್ಳವಾಗಿವೆ. ಇವು ಬಾಲಕರ ಮುಂದಿನ ಶೀಲ ಸ್ವಭಾವಗಳಿಗೆ ಅಸ್ಥಿವಾರದಂತೆ ಉಪಯೋಗವಾಗುವವು. ಮತ್ತು ಮುಂದಿನ ಆಯುಷ್ಯದೊಳಗಿನ ಅವರ ವಿಚಾರದ ಬೆಳೆವಣಿಗೆಗೂ ಚಟಗಳ ಉತ್ಪತ್ತಿಗೂ ಕಾರಣವಾಗುವವು. ಬಾಲಕರ ಶೀಲ ಸ್ವಭಾವಗಳಿಗೆ ಈ ಹುಟ್ಟುಗುಣ ಹಾಗು ಮಾನಸಿಕ ಒಲವುಗಳೇ ಬಲವಾದ ಆಧಾರಗಳೆನಿಸಿಕೊಳ್ಳುವವು.

ಅವುಗಳ ಮುಖ್ಯ ಲಕ್ಷಣಗಳು ಈ ರೀತಿಯಾಗಿರುವವು:—

೧. ಬಾಲಕರ ಮನಸ್ಸಿನ ಒಲವುಗಳು ಬಹು ಚಂಚಲವಾಗಿರುವವು. ಈ ಒಲವು ಬೇರೆ ಬೇರೆ ಬಾಲಕರಲ್ಲಿ ಬೇರೆ ಬೇರೆ ಪ್ರಮಾಣದಿಂದ ಕಂಡುಬರುವದು. ಮತ್ತು ಇವಕ್ಕೆ ಯೋಗ್ಯ ಉತ್ತೇಜನವು ದೊರೆಯದೆ ಇದ್ದರೆ ಮೊಳಕೆಯಲ್ಲಿಯೇ ಕಮರಿಹೋಗುವವು. ಉದಾಹರಣೆಗಾಗಿ ಒಂದು ಮಗುವು ಕೈಗೆ ಕ್ಷಣ್ಣನ್ನೆಲ್ಲ ಹರಿದುಮುರಿದು ಕೆಡಿಸಿಬಿಡುವ ಒಲವುಳ್ಳದ್ದಿರುವದೆಂದು ತಿಳಿಯೋಣ. ಮತ್ತು ಅದಕ್ಕಾಗಿ ಆ ಮಗುವಿನ ಪಾಲಕರು ಅದಕ್ಕೆ ಆಡುವ ಉಪಕರಣಗಳನ್ನು ಗೊಂಬೆಮೊದಲಾದವುಗಳನ್ನೂ ಕೊಡುವದನ್ನು ಬಿಟ್ಟುಬಿಟ್ಟರೆಂದು ಕಲ್ಪಿಸೋಣ. ಇದರಿಂದ ಆ ಮಗುವಿನಲ್ಲಿದ್ದ ಹೊಸ ಹೊಸ ಮಾದರಿಗಳನ್ನು ಮಾಡಬೇಕೆಂಬ ಮನಸ್ಸಿನ ಹವಣಿಕೆಯನ್ನೂ ರಚನಾಪರವಾದ ಅದರ ಮಾನಸಿಕ ಪ್ರವೃತ್ತಿಯನ್ನೂ ಹತ್ತಿಕ್ಕಿದಂತಾಗುವದು. ಇದ್ದದ್ದನ್ನು ಕೆಡಿಸಿ ತಾನು ಹೊಸದನ್ನು ಮಾಡಬೇಕೆಂಬ ಹವಣಿಕೆಯಿಂದ ಅಥವಾ ಅದರ ಒಳಗೆ ಏನಿರುವದೆಂಬುದನ್ನು ತಿಳಿದುಕೊಳ್ಳುವ ಆತುರತೆಯಿಂದ ಆ ಮಗುವು ತನಗೆ ಸಿಕ್ಕಿದ್ದನ್ನೆಲ್ಲ ಹರಿದು ಮುರಿದು ಕೆಡಿಸುತ್ತಿರುವದು. ಈ ಬಗೆಯ ಪ್ರವೃತ್ತಿಗೆ ಪಾಲಕರಿಂದ ಉತ್ತೇಜನ ದೊರೆಯುವದರ ಬದಲು ಅವರು ಅದಕ್ಕೆ ಒಡವೆಗಳೇ ದೊರೆಯುದಂತೆ ಮಾಡಿಬಿಟ್ಟರೆ ಆ ಮಗುವಿನಲ್ಲಿದ್ದ ಈ ಪ್ರವೃತ್ತಿಯು ಕಂದಿಕುಂದಿ ಕೊನೆಗೆ ಸಂಪೂರ್ಣವಾಗಿ ಸಾಯುವಾಗಿ ಬಿಡುವದು.

ಇದೇ ರೀತಿಯಾಗಿ ತಂದೆತಾಯಿಗಳು ತಮ್ಮ ಮಕ್ಕಳು ಮಣ್ಣಿನಲ್ಲಿ ಆಡಿದರೆ ಮೈಕೈಗಳನ್ನೂ ಬಟ್ಟೆಗಳನ್ನೂ ಹೊಲಸುಮಾಡಿಕೊಳ್ಳುವರೆಂಬ ವಿಚಾರದಿಂದಲೂ ಕಾಕು ಕತ್ತರಿ ಮೊದಲಾದ ಉಪಕರಣಗಳನ್ನು ಕೊಟ್ಟರೆ ಕೆತ್ತಿ, ಕತ್ತರಿಸಿ ವಸ್ತುಗಳನ್ನು ಕೆಡಿಸುವರು, ಹಾಗು ಮೈ ಕೈಗಳಿಗೆ ಗಾಯಮಾಡಿಕೊಳ್ಳುವರು ಎಂಬ ಕಾರಣದಿಂದಲೂ ಅವರನ್ನು ಪ್ರತಿಬಂಧಿಸಿದರೆ ಅವರಲ್ಲಿರುವ ರಚನಾತ್ಮಕ ಗುಣವನ್ನೂ ಕೈಗಾರಿಕೆಯ ಮೇಲಿನ ಪ್ರೀತಿಯನ್ನೂ ವ್ಯಕ್ತಪಡಿಸುವ ಮನಃಪ್ರವೃತ್ತಿಯನ್ನು ಹತ್ತಿಕ್ಕಿದಂತಾಗುವದು.

೨. ಬಾಲಕರ ಮನಃಪ್ರವೃತ್ತಿಗಳು ಕ್ಷಣಿಕವಾಗಿರುವವು. ನಾವು ಕೇವಲ ಸಣ್ಣ ಮನಃಪ್ರವೃತ್ತಿಗಳನ್ನೇ ಅವಲಂಬಿಸಲು ಸಾಧ್ಯವಿಲ್ಲ. ನಾವು ಅವುಗಳ ಸಹಾಯದಿಂದ ಬಾಲಕರಲ್ಲಿ ಒಳ್ಳೆಯ ಶೀಲ ಸ್ವಭಾವಗಳನ್ನು ಹುಟ್ಟಿಸಲಿಕ್ಕೆ ಪ್ರಯತ್ನ ಮಾಡಬೇಕಾಗುವದು. ಕೆಲವೊಂದು ಒಳ್ಳೆಯ ಕಾರ್ಯಗಳನ್ನು ಪುನಃಪುನಃ ಮಾಡಿಸಲಿಕ್ಕೂ ಅವುಗಳ ಮೂಲಕ ಬಾಲಕರು ಒಳ್ಳೆಯ ದಾರಿಯಲ್ಲಿ ಸಾಗಿ ಯೋಗ್ಯ

ಕಾರ್ಯಗಳಲ್ಲಿ ಪ್ರವೃತ್ತಿಯನ್ನು ತೋರಿಸಲಿಕ್ಕೂ ನಾವು ಮೇಲೆಮೇಲೆ ಸಂಘರ್ಷಗಳನ್ನು ತಂದುಕೊಡಬೇಕಾಗುವದು.

೩. ಬಾಲಕರ ಮನಃಪ್ರವೃತ್ತಿಗಳಿಗೆ ನೀತಿ–ಅನೀತಿಗಳ ಒರೆಗಲ್ಲು ಸರಿ ಹೊಂದಲಾರದು. ಬಾಲಕರು ಕೇವಲ ಮನಸ್ಸಿನ ಉತ್ತೇಜನದ ಮೂಲಕವಾಗಿಯೇ ಮಾಡುತ್ತಿರುವ ಕಾರ್ಯಗಳಲ್ಲಿ ನಿಯಮಗಳನ್ನು ಪಾಲಿಸುವ ನೀತಿಯು ಇಲ್ಲವೆ ಅನೀತಿಯ ಪರಿಮಾಣವನ್ನು ಕಂಡುಕೊಳ್ಳಲು ಸಾಧ್ಯವಾಗದು. ಬಾಲಕರ ಶಿಕ್ಷಣವನ್ನು ಕೈಕೊಂಡವರು ಈ ಮಾತನ್ನು ನೆನಪಿನಲ್ಲಿಟ್ಟಿರಬೇಕು. ಮತ್ತು ಅವರು ಕೇವಲ ಅಂತಃಪ್ರೇರಣೆಯಿಂದಲೇ ಮಾಡುತ್ತಿರುವ ಕಾರ್ಯಗಳಿಗಾಗಿ ಅವರನ್ನು ದಂಡಿಸಲು ಹೋಗಬಾರದು. ಬಾಲಕರು ಇಂಥ ಕಾರ್ಯವನ್ನು ಯಾಕೆ ಮಾಡುವರೆಂಬದರ ಕಾರಣವನ್ನು ಮೊದಲು ಕಂಡುಕೊಳ್ಳಬೇಕು; ಮತ್ತು ಅವರ ಮನಸ್ಸನ್ನು ಆ ಕಾರಣದಿಂದ ತಿರುಗಿಸಿ ಯೋಗ್ಯ ಕಾರ್ಯದ ಕಡೆಗೆ ಅವರನ್ನು ಒಲಿಸಿ ಅವರು ಒಳ್ಳೆಯ ಕಾರ್ಯದಲ್ಲಿ ತೊಡಗುವಂತೆ ಮಾಡಬೇಕು.

೪. ಬಾಲಕರ ಮನಃಪ್ರವೃತ್ತಿಗಳಿಗೆ ಯೋಗ್ಯ ಶಿಕ್ಷಣವನ್ನು ಕೊಡಬೇಕಾಗುವದು. ಅವುಗಳನ್ನು ನಾವು ನಮಗೆ ಬೇಕಾದಂತೆ ತಿದ್ದಿಕೊಳ್ಳಬಹುದು. ಮತ್ತು ಅವುಗಳಿಗೆ ಯೋಗ್ಯ ಮಾರ್ಗವನ್ನು ತೋರಿಸುವದು ನಮ್ಮ ಕರ್ತವ್ಯವೇ ಆಗಿದೆ.

ಮನಃ ಪ್ರವೃತ್ತಿಗಳಿಗೂ ಹುಟ್ಟುಗುಣಗಳಿಗೂ ತುಸು ಅಂತರವಿರುವದು. ಕೆಲವು ಮನಃಪ್ರವೃತ್ತಿಗಳಿಗೆ ಸುಖದುಃಖದ ಭಾವನೆಗಳು ಕಾರಣವಾಗಿರುವವು. ಅನುಕರಣಶೀಲತೆ ಸಹಾನುಭೂತಿ ಮೊದಲಾದ ಹುಟ್ಟುಗುಣಗಳಿಗೆ ಮಾನಸಿಕ ಭಾವನೆಗಳು ಅಷ್ಟು ಪ್ರಬಲಕಾರಣಗಳಾಗಿರುವದಿಲ್ಲ. ಮತ್ತು ಈ ಗುಣಗಳು ಇಂಥದೇ ಒಂದು ನಿಶ್ಚಿತವಾದ ಕಾರ್ಯವನ್ನು ಮಾಡಲು ಪ್ರೇರಿಸುವವೆಂದು ಹೇಳಲಾಗುವದಿಲ್ಲ. ಈ ಮಾನಸಿಕ ವಿಕಾರವನ್ನು ವಿಭಜನೆಮಾಡಿ ನೋಡಿದರೆ ಅದರಲ್ಲಿ (೧) ಕೆಲವೊಂದು ಪದಾರ್ಥದ ಇಲ್ಲವೆ ಪದಾರ್ಥಗಳ ಇಲ್ಲವೆ ಪರಿಸ್ಥಿತಿಯ ಕಲ್ಪನೆಯನ್ನು ಮನಸ್ಸಿನಲ್ಲಿ ತಂದುಕೊಳ್ಳುವದು. (೨) ಆ ಕಲ್ಪನೆಯು ಮನಸ್ಸಿನಲ್ಲಿ ಹುಟ್ಟಿಸುವ ಸುಖದುಃಖಗಳ ಭಾವನೆಗಳನ್ನೂ ಮನೋವಿಕಾರವನ್ನೂ ಹೊಂದುವದು. (೩) ಆ ಮನೋವಿಕಾರಗಳಿಗೆ ಅನುಗುಣವಾಗಿ ಆ ಪದಾರ್ಥದ ಇಲ್ಲವೆ ಪರಿಸ್ಥಿತಿಯ ವಿಷಯದಲ್ಲಿ ಕೆಲವೊಂದು ಕಾರ್ಯವನ್ನು ಮಾಡುವದು ಎಂಬ ಮೂರು ಮೆಟ್ಟುಗಳನ್ನು ಕಲ್ಪಿಸಬೇಕಾಗುವದು. ಈ ಮೂರು ಮೆಟ್ಟುಗಳಲ್ಲಿ ಮೊದಲನೆಯದೂ ಮೂರನೆಯದೂ ನಮಗೆ ಅಂಕಿತವಾಗಿರಬಹುದು. ಎರಡನೆಯದು (ಭಾವನೆ

ಇಲ್ಲವೆ ಮನೋವಿಕಾರ) ಮಾತ್ರ ನಮ್ಮ ಕೈಯಲ್ಲಿ ಉಳಿಯಲಾರದು. ಉದಾ:— ಭಯವು ಸ್ಥಳದಿಂದ ಓಡಿ ಹೋಗಬೇಕೆಂಬ ವಿಚಾರವು ಮಗುವಿನ ಮನಸ್ಸಿನಲ್ಲಿ ಸ್ವಯಂವುಂಟಾದ ಕೂಡಲೆ ತಾನಾಗಿಯೇ ಬಂದುಬಿಡುವದು. ಆದರೆ ಆ ಭಯವನ್ನು ಹುಟ್ಟಿಸುವ ಪದಾರ್ಥವು ಅಥವಾ ಪರಿಸ್ಥಿತಿಯು ಮಾತ್ರ ಬೇರೆ ಬೇರೆ ಇರಬಹುದು. ಮಗುವು ಚಿಕ್ಕದಾಗಿರುವಾಗ ಅದು ಅನೇಕ ಸಂಗತಿಗಳನ್ನು, ಬಹುಶಃ ತನಗೆ ಹೊಸದಾಗಿರುವ ಎಲ್ಲ ಪದಾರ್ಥಗಳನ್ನೂ ಸನ್ನಿವೇಶಗಳನ್ನೂ, ನೋಡಿ ಅಂಜುತ್ತಿರುವದು. ಬರಬರುತ್ತ ಇಂಥ ಎಲ್ಲ ಸಂಗತಿಗಳಿಗೆ ಅಥವಾ ಸನ್ನಿವೇಶಗಳಿಗೆ ಅಂಜುವ ಕಾರಣವಿಲ್ಲವೆಂಬ ವಿಚಾರವನ್ನು ಅದು ಅನುಭವದಿಂದ ಕಂಡುಕೊಳ್ಳುವದು. ಮತ್ತು ಮೊದಲು ಭಯವನ್ನು ಹುಟ್ಟಿಸದಿರುವ ಪದಾರ್ಥಗಳು ಕೂಡ ಅದಕ್ಕೆ ಹೆದರಿಕೆ ಹುಟ್ಟಿಸುವಂಥವುಮಾಡಬಹುದು. ಎರಡು ವರುಷದ ಮಗುವನ್ನು ಒಂದು ನಾಯಿಯ ಹತ್ತಿರ ಬಿಟ್ಟರೆ ಅದು ಹೋಗಿ ಆ ನಾಯಿಯ ಬಾಲವನ್ನು ಎಳೆಯಬಹುದು; ಅದರ ಮೇಲೆ ಕೂತು ಸವಾರಿ ಮಾಡುತ್ತೇನೆನ್ನಬಹುದು. ಮುಂದೆ ಕೆಲವು ದಿನಗಳ ತರುವಾಯ, ಅದೇ ನಾಯಿಯು ಬೇರೊಂದು ಪ್ರಾಣಿಯನ್ನು ಇಲ್ಲವೆ ಮನುಷ್ಯನನ್ನು ಕಡಿದದ್ದನ್ನು ನೋಡಿದ ಬಳಿಕ, ಆ ಮಗುವಿಗೆ ಆ ನಾಯಿಯನ್ನು ನೋಡಿದರೆ ಹೆದರಿಕೆ ಬರಬಹುದು. ಇದರಿಂದ ಮಗುವಿಗೆ ಭಯವನ್ನು ಹುಟ್ಟಿಸುವ ಕಾರಣವು ನಿಶ್ಚಿತವಿರುವದಿಲ್ಲವೆಂದಹಾಗಾಯಿತು. ಇದೇ ಮೇರೆಗೆ ಭಯವು ಹುಟ್ಟಿದ ತರುವಾಯ ಅದು ಮಾಡುವ ಕಾರ್ಯವೂ ನಿಶ್ಚಿತವಿರುವದಿಲ್ಲ. ನಾಯಿಯನ್ನು ನೋಡಿ ಅಂಜಿದ ಮಗುವು ಮೊದಮೊದಲು ಚೀರಿ ಅತ್ತು ಹಿರಿಯರ ಸಹಾಯವನ್ನು ಅಪೇಕ್ಷಿಸಬಹುದು; ಅಡಗಿಕೊಳ್ಳಬಹುದು; ದೂರ ಓಡಿ ಹೋಗಬಹುದು; ಹೆಚ್ಚೆಂದರೆ ಧೈರ್ಯಮಾಡಿ ನಿಂತಿರಬಹುದು. ತನ್ನ ಸಂಗಡಿಗರಿಗೆ ತನ್ನ ಧೈರ್ಯವನ್ನು ತೋರಿಸಬೇಕೆಂಬ ಲವಲವಿಕೆಯಿಂದ ಅದು ತನ್ನ ಸ್ಥಳದಲ್ಲಿಯೇ ಕದಲದೆ ಇರಬಹುದು. ಆದರೆ ಈ ಕಾರ್ಯಗಳಲ್ಲಿ ಯಾವದನ್ನು ಅದು ಮಾಡಿದರೂ ಮೊದಲು ನಾಯಿಯಿಂದ ಹೆದರಿದಾಗ ಅದರ ಶರೀರದಲ್ಲಾಗುವ ವ್ಯಾಪಾರಗಳು ಅಂದರೆ ಮೋರೆಯು ನಿಸ್ತೇಜವಾಗುವದು, ಎದೆಯು ದಡ ದಡ ಹಾರುವದು, ಕೈಕಾಲು ನಡುಗುವದು ಮೊದಲಾದ ಭಯವ್ಯಂಜಕ ಲಕ್ಷಣಗಳು ಮಾತ್ರ ಆ ಮಗುವಿನಲ್ಲಿ ಕಂಡು ಬಂದೇ ಬರುವವು.

ಬಾಲಕರ ಮನಸ್ಸಿನ ಮೂಲ ಭೂತ ಪ್ರವೃತ್ತಿಗಳಲ್ಲಿ ಪ್ರಾಮುಖ್ಯವಾದವುಗಳನ್ನು ಈರೀತಿಯಾಗಿ ವರ್ಗೀಕರಿಸುವರು:—

(೧) ಭಯದಿಂದ ಓಡಿಹೋಗುವ ಅಥವಾ ಅಡಗಿಕೊಳ್ಳುವ ಪ್ರವೃತ್ತಿ.

ಶಿಕ್ಷಣ ಶಾಸ್ತ್ರಜ್ಞರು ಬಾಲಕರ ಮನಸ್ಸಿನೊಳಗಿನ ಅಕಾರಣವಾದ ಭಯದ ಪ್ರವೃತ್ತಿಯನ್ನು ಸಾಧ್ಯವಿದ್ದಮಟ್ಟಿಗೂ ತೆಗೆದುಹಾಕಲಿಕ್ಕೆ ಪ್ರಯತ್ನಮಾಡಬೇಕೆನ್ನುತ್ತಾರು. ಮಗುವು ಯಾವದಾದರೊಂದು ಪದಾರ್ಥವನ್ನು ನೋಡಿ ಇಲ್ಲವೆ ಯಾವದೊಂದು ಪರಿಸ್ಥಿತಿಯಲ್ಲಿ ಅಂಜಿಕೆಯನ್ನು ತೋರಿಸತೊಡಗಿದೊಡನೆ ತಾನು ಅದಕ್ಕೆ ಅಂಜುವ ಕಾರಣವಿಲ್ಲವೆಂಬ ಕಲ್ಪನೆಯು ಮನಸ್ಸಿನಲ್ಲಿ ಬರುವಂತೆ ಅದಕ್ಕೆ ಆ ವಸ್ತುವಿನ ಅಥವಾ ಪರಿಸ್ಥಿತಿಯ ಪರಿಚಯಮಾಡಿಕೊಡಬೇಕಾಗುವದು. ಮತ್ತು ಮಗುವಿನ ಮನಸ್ಸಿನಲ್ಲಿ ಭಯದ ಕಲ್ಪನೆಯೇ ಸೇರದಂತೆ ನೋಡಿಕೊಳ್ಳಬೇಕಾಗುವದು.

ತಪ್ಪುಗಳನ್ನು ಮಾಡಲಿಕ್ಕೆ ಮಗುವು ಹೆದರಬಾರದು: ಮಗುವು ಅಪಾಯಕರವಾದ ಸ್ಥಳದಲ್ಲಿ, ಗೋಡೆ ಗಿಡ ಮುಂತಾದವುಗಳನ್ನು, ಏರಿರುವದನ್ನು ಅಥವಾ ಚಾಕು ಕತ್ತರಿಗಳನ್ನು ಹಿಡಿದುಕೊಂಡಿರುವದನ್ನು ನೋಡಿ ಬಾಲಕರಾಗಲಿ ಬಾಲಕರಾಗಲಿ ಅಂಜಿದರೆ ಇಲ್ಲವೆ ಗಾಬರಿಯಾದರೆ ಅಥವಾ ಚಿಂತೆಮಾಡಹತ್ತಿದರೆ ಮಗುವಿನ ಮನಸ್ಸಿನಲ್ಲಿಯೂ ಆ ಭಾವನೆಯು ಬಂದುಬಿಡುವದು. ಮಗುವಿನ ಕೈಗೆ ಕತ್ತರಿಯನ್ನು ಕೊಡುವದಕ್ಕಿಂತ ಮುಂಚೆ ಅದನ್ನು ಹೇಗೆ ಉಪಯೋಗಿಸಬೇಕೆಂಬದನ್ನು ಅದಕ್ಕೆ ಚೆನ್ನಾಗಿ ತಿಳಿಸಿ ಹೇಳಿಕೊಡಬೇಕು. ಆದರೆ ಕೈ ಕತ್ತರಿಸೀತು ಮುಂತಾದ ಮಾತುಗಳನ್ನು ಹೇಳಿ ಅದನ್ನು ಅಂಜಿಸಬಾರದು. ಕೆಲ ಕೆಲವು ಬಾಲಕರು ಅಕಾರಣವಾದ ಭಯದಿಂದ ಮನಸ್ಸಿನಲ್ಲಿ ಕಂಗಾಲರಾಗುವರು. ಯಾರಾದರೂ ಏನಾದರೂ ಅಂದುಬಿಡುವರೆನೋ ಎಂಬ, ಇಲ್ಲವೆ ತಮಗೇನಾದರೂ ಅಪಾಯವು ಸಂಭವಿಸಬಹುದೇನೋ ಎಂಬ, ವಿಚಾರದಿಂದ ಅವರು ಅಡಿಗಡಿಗೆ ಹೆದರುತ್ತಿರುವರು. ಇಂಥ ಹುಡುಗರ ಸಂಗಡ ನಡೆಯುವಾಗ ಶಿಕ್ಷಕರು ತುಂಬ ಎಚ್ಚರಿಕೆಯಿಂದಿರಬೇಕಾಗುವದು.

ಭಯವು ಶಕ್ತಿಯನ್ನು ಕುಂದಿಸುವದು. ಮತ್ತು ಇದರಿಂದ ಮನುಷ್ಯನ ಕರ್ತೃತ್ವಶಕ್ತಿಯು ಕಡಿಮೆಯಾಗಿ ಅವನು ಕಾರ್ಯಶೂನ್ಯನಾಗುವ ಸಂಭವವುಂಟು. ಮತ್ತು ಇಂದು ಅಂಜುಳಿಯಾದ ಮಗುವು ಮುಂದೆ ಅರೆಮರುಳೂ ಹೇಡಿಯೂ ಆದ ಮನುಷ್ಯನೆನಿಸಿಕೊಂಡು ನಿರುಪಯೋಗಿಯಾದ ಪ್ರಾಣಿಯಾಗಬಹುದು. ನಿರ್ಭಯದ ಸ್ವಭಾವವುಳ್ಳ ಮಗುವಿನಲ್ಲಿ ಆತ್ಮವಿಶ್ವಾಸವುಂಟಾಗುವದು. ಅದರಲ್ಲಿ ಹೊಸ ಹೊಸ ಸಂಗತಿಗಳನ್ನು ನೆರವೇರಿಸುವ ಉತ್ಸುಕತೆಯುಂಟಾಗುವದು. ಮತ್ತು ಅದರ ಮನಃಶಕ್ತಿಗಳು ಚೆನ್ನಾಗಿ ಬೆಳೆವಣಿಗೆಹೊಂದುವವು. ಬೆದರಿಕೆಯೂ ಶಿಕ್ಷೆಯೂ ಮಕ್ಕಳಲ್ಲಿ ಭಯವನ್ನು ಹುಟ್ಟಿಸುವವು. ತಾನು ಮಾಡಿದ ತಪ್ಪಿನಿಂದ ತನಗೆ ಶಿಕ್ಷೆಯಾಗುವದೆಂಬ ಹೆದರಿಕೆಯಿಂದ ಮಗುವು ಪುನಃ ಆ ತಪ್ಪು

ಅದೇ ತರದ ತಪ್ಪು ಮಾಡಲಾರರೆಂಬದೇನೋ ನಿಜ. ಅದಕ್ಕಾಗಿಯೇ ಶಿಕ್ಷಕರು ಚಿಕ್ಕ ಮಕ್ಕಳ ಶಿಕ್ಷಣ ಕಾರ್ಯದಲ್ಲಿ ತೊಡಗಿದಾಗ ತೀರ ಕೊನೆಯ ಉಪಾಯ ವೆಂದು ಶಿಕ್ಷೆಯನ್ನು ಕೈಕೊಳ್ಳುತ್ತಿರುವರು. ಆದರೆ ಈ ಎಲ್ಲ ಪ್ರಸಂಗಗಳಲ್ಲಿ ತುಂಬ ಎಚ್ಚರಿಕೆಯಿಂದಲೂ ವಿಚಾರದಿಂದಲೂ ಕೆಲಸಮಾಡಬೇಕಾಗುವದು. ಕೆಲವೊಂದು ಕೆಟ್ಟ ನಡತೆಯ ಪರಿಣಾಮವೆಂದೇ ಶಿಕ್ಷೆಯು ಮುಂದೆ ಬರಬೇಕಾಗುವದು. ಬೇರೆಬೇರೆ ತರದ ಬಾಲಕರೊಡನೆ ನಡೆದು ಅನುಭವಪಡೆಯುವದರಿಂದಲೇ ಶಿಕ್ಷಕರು ಬಾಲಕರೊಡನೆ ಹೇಗೆ ನಡೆಯಬೇಕೆಂಬದನ್ನು ಕಲಿಯುವರು.

ಸಮಾಜದ ನಡೆವಳಿಕೆಯಲ್ಲಿಯು ಎಲ್ಲ ಸಾಮಾಜಿಕ ನಿಯಮಗಳು "ಪರಿಣಾಮದಲ್ಲಿ ಏನಾಗುವದೆ"ಂಬ ತಾತ್ವಿಕ ವಿಚಾರವನ್ನು ಪರಿಶೀಲಿಸಿ ಅದನ್ನೇ ಆಧಾರವಾಗಿಟ್ಟುಕೊಂಡು ರಚಿತವಾದವಿರುವವು. ಆದರೆ ಬಾಲಕರ ಮನಸ್ಸಿನಲ್ಲಿ ಮಾತ್ರ ಈ ತರದ ಪರಿಣಾಮವಿವೇಚನೆಗೆ ಸಂಬಂಧಿಸಿದ ತತ್ವವು ಎಂದರೆ ಭಯವು ಎಂದೂ ಬೇರೂರದಂತೆ ನೋಡಿಕೊಳ್ಳಬೇಕಾಗುವದು.

ಭೂಗೋಲ ಶಿಕ್ಷಣ

ಭೂಗೋಲವನ್ನು ಯಾಕೆ ಕಲಿಯಬೇಕು?:—ಶಾಲೆಗಳಲ್ಲಿ ಭೂಗೋಲವನ್ನು ಕಲಿಸತೊಡಗಿ ಇನ್ನೂ ಬಹುಕಾಲವಾಗಿಲ್ಲ. ಓದು ಬರೆಹ ಗಣಿತ ಇವೇ ವ್ಯವಹಾರಕ್ಕೆ ಆವಶ್ಯಕ ವಿಷಯಗಳೆಂದು ಮೊದಲು ತಿಳಿಯಲ್ಪಡುತ್ತಿದ್ದವು. ಸಂಕುಚಿತ ದೃಷ್ಟಿಯಿಂದ ವಿಚಾರಮಾಡುವವರಿಗೆ ಇದೂ ನಿಜವೇ. ಆದರೆ ಹೆಚ್ಚು ವಿಶಾಲದೃಷ್ಟಿಯನ್ನಿಟ್ಟುಕೊಂಡು ನಿಜವಾದ ನಾಗರಿಕನ ಕರ್ತವ್ಯವನ್ನೂ ಮನುಷ್ಯ ಪ್ರಾಣಿಯ ಉನ್ನತಿಯನ್ನೂ ಆತನ ಉನ್ನತ ಜೀವನವನ್ನೂ ಲಕ್ಷ್ಯಕ್ಕೆ ತಂದುಕೊಂಡರೆ ಭೂಗೋಲವನ್ನು ಯಾಕೆ ಕಲಿಯಬೇಕೆಂಬದು ಗೊತ್ತಾಗಬಹುದು. ಪದಾರ್ಥವಿಜ್ಞಾನ ಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಖನಿಜಶಾಸ್ತ್ರ, ಮೊದಲಾದವುಗಳಂತೆ ಭೂಗೋಲವೂ ಒಂದು ಶಾಸ್ತ್ರವೆನಿಸಿಕೊಂಡಿರುವದು. ಇದುವರಿಂದ ಯಿಕ್ಕ ಶಾಸ್ತ್ರಗಳ ಅಭ್ಯಾಸದಿಂದ ಆಗಬಹುದಾದ ಪ್ರಯೋಜನಗಳೇ ಈ ಶಾಸ್ತ್ರದ ಅಭ್ಯಾಸದಿಂದಲೂ ಆಗಬಹುದೆಂದು ಬಲ್ಲವರು ಅಭಿಪ್ರಾಯ ಪಡುವರು.

ಮೊದಮೊದಲು ಮನುಷ್ಯಪ್ರಾಣಿಯ ಭೂಗೋಲ ಜ್ಞಾನವು ತೀರ ಸ್ವಲ್ಪವೇ ಇದ್ದಿತು. ನಮ್ಮ ಪುರಾಣಗಳನ್ನು ಓದಿದರೆ ನಮ್ಮವರ ಭೂಗೋಲ ಜ್ಞಾನದ ಪರಿಮಿತಿಯು ಗೊತ್ತಾಗುವದು. ಹಾಗೆಯೇ ಇತಿಹಾಸ ಕಾಲದಲ್ಲಿಯೂ ನಾವು ವಿಚಾರಮಾಡಬಹುದು. . ಅಮೇರಿಕಾ ಆಸ್ಟ್ರೇಲಿಯಾ ಖಂಡಗಳ ಶೋಧದ ವಿಚಾರವನ್ನೂ ಅವು ಜನರಿಗೆ ಗೊತ್ತಾದ ಕಾಲವನ್ನೂ, ನಾವು ಓದಿ ತಿಳಿದು ಕೊಂಡಿದ್ದೇವೆ. ಧ್ರುವ ಸ್ಥಳಗಳ ಶೋಧ, ಆಫ್ರಿಕಾದ ಮಧ್ಯಪ್ರದೇಶದ ಪ್ರವಾಸ, ಹಿಮಾಲಯದ ಮೇಲೆ ಏರುವದು ಮುಂತಾದ ಭೂಗೋಲ ವಿಷಯಕ ಶೋಧಗಳು ಇಂದಿಗೂ ನಡೆದೇ ಇವೆ. ಬೇರೆ ಬೇರೆ ಜನಾಂಗಗಳ ವ್ಯಾಪಾರದ ಮೇಲಿನ ಪ್ರೀತಿಯೂ ಕಡಲಪಯಣದ ಪರಿಣಾಮವೂ ದಿಗ್ವಿಜಯಿಗಳೆನ್ನಿಸಿಕೊಳ್ಳಬೇಕೆಂಬ ಜೂಲಿಯಸ್ ಸೀಝರ ನೆಪೋಲಿಯನ್ ಮೊದಲಾದ ವೀರರ ಸಂಗ್ರಾಮದ ಫಲವೂ ಭೂಗೋಲದ ಜ್ಞಾನವನ್ನು ಹೆಚ್ಚಿಸಲಿಕ್ಕೆ ಕಾರಣವಾದವು. ಮತ್ತು ಈಗಿನ ಸುಧಾರಿಸಿದ ಯುಗದಲ್ಲಿ ಪ್ರವಾಸದ ಸಾಮಗ್ರಿಗಳೂ ಮನುಷ್ಯನ ಕುತೂಹಲ ಬುದ್ಧಿಯೂ ಹೆಚ್ಚುತ್ತ ಬಂದಂತೆ ಈ ವಿಷಯದಲ್ಲಿಯೂ ಸಾಹಸ ಲಾಲಸೆಗಳು ಹುಟ್ಟಿ ಈ ಬಗೆಯ ಶೋಧನ ಕಾರ್ಯಗಳು ಹೆಚ್ಚು ಹೆಚ್ಚು ಪ್ರಮಾಣದಿಂದ ನಡೆಯತೊಡಗಿವೆ. ಪರದೇಶದೊಡನೆ ವ್ಯಾಪಾರದಲ್ಲಿ ತೊಡಗಿದವರಿಗೆ ಭೂಗೋಲ ಜ್ಞಾನವು ಆವಶ್ಯಕವೆನಿಸಿದ್ದರಿಂದ ಇಂಗ್ಲಂಡ ಮೊದಲಾದ ದೇಶಗಳ ಸಾಲೆಗಳಲ್ಲಿ ಹೊತ್ತ ಮೊದಲು ಭೂಗೋಲವನ್ನು ಕಲಿಸುವ ಪರಿಪಾಠವುಂಟಾಯಿತು. ನಾವಿಕರಾಗು ವವರಿಗೂ ಈ ವಿಷಯದ ಅಭ್ಯಾಸವು ಆವಶ್ಯಕವೆನಿಸಿತು. ಬರಬರುತ್ತ ನಾವು ವಾಸಿಸುವ ಪ್ರಪಂಚದ ಜ್ಞಾನವನ್ನು ಪಡೆದಿರುವದು ಸುಶಿಕ್ಷಿತನ ಒಂದು ಮಹತ್ವದ ಲಕ್ಷಣವೆಂಬ ವಿಚಾರವನ್ನೂ ಭೂವಿವರಣೆಯ ಅಭ್ಯಾಸದಿಂದ ಮನುಷ್ಯನ ಮನಸ್ಸಿನಲ್ಲಾಗುವ ಸಂಸ್ಕಾರಗಳನ್ನೂ, ಅನುಲಕ್ಷಿಸಿ ಈ ವಿಷಯವು ಸಾರ್ವಜನಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ಸೇರ್ಪಡೆಯಾಯಿತು.

ಶಾಲೆಗಳಲ್ಲಿ ಈ ವಿಷಯವನ್ನು ಕಲಿಸಬೇಕೆಂಬ ನಿರ್ಬಂಧವುಂಟಾದರೂ ಅದರ ಶಿಕ್ಷಣಕ್ರಮದಲ್ಲಿ ಮೊನ್ನೆ ಮೊನ್ನಿನ ವರೆಗೂ ಯೋಗ್ಯ ಸುಧಾರಣೆಯಾಗಿರಲಿಲ್ಲ. ನಮ್ಮಲ್ಲಿಯಂತೂ ಹತ್ತೆಂಟು ವರ್ಷಗಳ ಹಿಂದೆ ಉಪಯೋಗದಲ್ಲಿದ್ದ ಭೂಗೋಲದ ಪಾಠ ಪುಸ್ತಕಗಳನ್ನು ನೋಡಿದರೆ ಈ ಮಾತು ತಾನೇ ಸಿದ್ಧವಾಗುವದು. ನಮ್ಮ ಪ್ರಾಥಮಿಕ ಶಾಲೆಗಳ ಪಾಠಪುಸ್ತಕವಾಗಿದ್ದ ಕಿನೆಯ ಭಾಗ ಭೂಗೋಲದಲ್ಲಿ ದೇಶದ ಹೆಸರು, ಮೇರೆ, ಪರ್ವತಗಳು, ನದಿಗಳು, ಸರೋವರಗಳು, ದೊಡ್ಡ ಊರುಗಳು, ವ್ಯಾಪಾರದ ಜೀನಸುಗಳು ಎಂದು ಮೊದಲಾಗಿ ಹೆದ್ದಿಂಗ್ಲ

ಗಳನ್ನು ಹಾಕಿ ನೂರಾರು ಹೆಸರುಗಳ ಯಾದಿಯನ್ನು ಕೊಟ್ಟಿದ್ದು ಅದನ್ನು ಶಿಕ್ಷಕರು ವಿದ್ಯಾರ್ಥಿಗಳಿಂದ ಪಾಠಮಾಡಿಸಿಕೊಳ್ಳುವದೇ, ನಾವು ತಿಳಿದಮಟ್ಟಿಗೆ, ಆಗಿನ ಕಾಲದ ಭೂಗೋಲ ಶಿಕ್ಷಣವಾಗಿದ್ದಿತು. ನಕಾಶಗಳಲ್ಲಿ ಅವನ್ನು ತೋರಿಸಲಿಕ್ಕೆ ಕಲಿಸಿದ ಶಿಕ್ಷಕರು ಉತ್ತಮ ತರಗತಿಯವರೆಂದು ತಿಳಿಯಲ್ಪಡುತ್ತಿದ್ದರು. ಆದರೆ ಈಗ ಆ ಯುಗವು ಉಳಿದಿಲ್ಲ.

ಬಾಲಕರ ಮನಸ್ಸಿನ ಮೇಲೆ ಈ ವಿಷಯದಲ್ಲಿಯೂ ನಿಜವಾದ ಸಂಸ್ಕಾರವಾಗಬೇಕೆಂಬದು ಆಧುನಿಕರ ವಿಚಾರಸರಣಿ. ಅದಕ್ಕನುಸರಿಸಿ ಬಾಲಕರ ಅನುಭವಕ್ಕೆ ಬರುವಂತೆ ಈ ವಿಷಯವನ್ನು ಕಲಿಸಬೇಕಾಗುವದು. ಶಾಲೆಯ ಕೋಣೆಯ ಭೂಗೋಲದಿಂದ ಪ್ರಾರಂಭವಾದ ವಿಷಯವು "ಭೂಗೋಲ" ಗ್ಲೋಬಿನ ವರೆಗೆ ಸಾಗಬೇಕಾಗುವದು. ಪ್ರಪಂಚದೊಳಗಿನ ಬೇರೆ ಬೇರೆ ಜನಾಂಗಗಳ ಜೀವನದ ಅಭ್ಯಾಸದಲ್ಲಿ ಇದು ಕೊನೆಮುಟ್ಟುವದು. ಅಮೇರಿಕೆಯಲ್ಲಿ ಹರಿಯುವ ಹೊಳೆಗಳ ಹೆಸರಿನಿಂದ ನಮಗೆ ಪ್ರಯೋಜನವಿಲ್ಲ. ಆದರೆ ಹಿಂದಣ ಲೇಖನವೊಂದರಲ್ಲಿ ಹೇಳಿರುವಂಥ ಡೆನ್ಮಾರ್ಕಿನ ಒಕ್ಕಲಿಗರ ಜೀವನಕ್ರಮವನ್ನು ಅಭ್ಯಾಸಿಸಿದ ನಮ್ಮ ದೇಶದ ಒಕ್ಕಲಿಗರು ತಮ್ಮ ಜೀವನದಲ್ಲಿ ಹೆಚ್ಚಿಲ್ಲದಿದ್ದರೆ ಸ್ವಲ್ಪಮಟ್ಟಿಗಾದರೂ ಬದಲಾವಣೆಹೊಂದಬಹುದೆಂದು ಆಶಿಸಿದರೆ ತಪ್ಪಾಗದು. ಅಮೇರಿಕೆ ಮೊದಲಾದ ದೇಶಗಳಲ್ಲಿ ಜನರ ಜೀವನವು ಹೇಗೆ ಸಾಗಿದೆಯೆಂಬದನ್ನೂ, ಆ ದೇಶದ ದೊಡ್ಡ ದೊಡ್ಡ ನಗರಗಳಲ್ಲಿ ವಾಸಿಸುವ ಜನರು ಎಷ್ಟು ಸುಸಂಸ್ಕೃತರಾಗಿ ಹೇಗೆ ನಡೆದುಕೊಳ್ಳುವರೆಂಬದನ್ನೂ, ತಿಳಿದ ಸುಶಿಕ್ಷಿತನ ಮನಸ್ಸಿನ ಮೇಲಾದ ಪರಿಣಾಮವು ಅವನ ವ್ಯವಹಾರದಲ್ಲಿ ಗೋಚರವಾಗದಿರದು. ಉತ್ತಮ ತರಗತಿಯ ನಾಗರಿಕನಾಗಿ ತನ್ನ ಊರಿನ, ತನ್ನ ಪ್ರಾಂತದ, ತನ್ನ ದೇಶದ, ಕೊನೆಗೆ ಪ್ರಪಂಚದ ವಿಷಯದಲ್ಲಿ ತಕ್ಕ ಜ್ಞಾನವನ್ನು ಪಡೆದು ದೇಶಾಭಿಮಾನಿಯಾಗಿ ಕೊನೆಗೆ ಈ ಪ್ರಪಂಚದ ಕೋಟ್ಯನುಕೋಟಿ ಪ್ರಜೆಗಳಲ್ಲಿ ತಾನೂ ಒಬ್ಬನೆಂಬ ಭಾವನೆಯನ್ನು ತಳೆದು ಆ ಪ್ರಪಂಚದ ಜನರ ಹಿತದ ವಿಷಯದಲ್ಲಿ ಮನಸ್ಸನ್ನು ತೊಡಗಿಸಿದ ಧೀರೋದಾತ್ತಮಾನವನಾಗಲು ಭೂಗೋಲ ಜ್ಞಾನವು ಆವಶ್ಯಕವೆನಿಸುವದು. ಇದೀಗ ಭೂಗೋಲ ಶಿಕ್ಷಣದ ಗುರಿ.

೨. **ಭೂಗೋಲ ಶಿಕ್ಷಣದ ಸಾಧನಗಳು:**—ಇತರ ವಿಷಯಗಳಂತೆಯೇ ಭೂಗೋಲದಲ್ಲಿಯೂ ಕಲಿಯತಕ್ಕ ವಿಷಯಗಳೆಲ್ಲವೂ ವಿದ್ಯಾರ್ಥಿಗಳಿಗೆ ಸಂಪೂರ್ಣ ಅವಗತವಾಗಿರಬೇಕೆಂಬದು ಒಂದು ಸಾಮಾನ್ಯ ತತ್ವ. ಪಾಠ ಶಕ್ತಿಯ ಬಲದಿಂದ ಕ್ಲಾಸ್ಸಿನಲ್ಲಿ ಓದಿದ ಮಾತನ್ನೇ ಪರೀಕ್ಷಕರ ಮುಂದೆ ಗಿಳಿಪಾಠದಿಂದ ನುಡಿಯು

ವದು ಅಥವಾ ಕಾಗದದ ಮೇಲೆ ಬರೆದುಕೊಡುವದು ಇವೇ ಭೂಗೋಲಜ್ಞಾನದ ಕುರುಹಲ್ಲವೆಂಬದು ಈಗ ಸಿದ್ಧವಾಗಿ ಹೋಗಿದೆ. ಆದುದರಿಂದ ನಾವು ನಮ್ಮ ವಿದ್ಯಾರ್ಥಿಗಳಿಗೆ ಕಲಿಸಬೇಕಾದುದನ್ನೆಲ್ಲ ಪ್ರತ್ಯಕ್ಷವಾಗಿ ಕಲಿಸಬೇಕೆಂದಹಾಗಾಗುವದು. ಈ ಮಾತು ಶತಶಃ ನಿಜವು. ಮುಂಬಯಿ ನಗರದ ವರ್ಣನೆಯನ್ನು ಎಷ್ಟು ಕಾಲ ಎಷ್ಟು ಗ್ರಂಥಗಳಲ್ಲಿ ಓದಿ ಅದರ ನಿಜವಾದ ಕಲ್ಪನೆಯನ್ನು ತಂದು ಕೊಳ್ಳಬಹುದು? ತಾಜಮಹಾಲಿನ ಯಾವ ಬಗೆಯ ವರ್ಣನೆಯಿಂದ ಅದರ ನಿಜವಾದ ಕಲ್ಪನೆಯನ್ನು ನಾವು ಭಾವಿಸಬಹುದು? ಕೇವಲ ವರ್ಣನೆಯನ್ನು ಓದುವದರಿಂದ ನಿಜವಾದ ಜ್ಞಾನವಾಗದಿದ್ದರೂ ಅದರ ಚಿತ್ರವನ್ನು ನೋಡಿ ಅದರ ಪ್ರತಿರೂಪವನ್ನು ನಿರೀಕ್ಷಿಸಿ ಅಭ್ಯಾಸದಿಂದ ಜಾಗ್ರತವಾಗಿರುವ ಕಲ್ಪನಾಶಕ್ತಿ ತುಲನಾಶಕ್ತಿಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ನಾವು ಪ್ರತ್ಯಕ್ಷ ನೋಡಿದವರಷ್ಟಲ್ಲದಿದ್ದರೂ ಓದಿಕೊಂಡವರಿಗಿಂತ ಹೆಚ್ಚು ನಿಶ್ಚಿತ ಹಾಗು ಸ್ಪಷ್ಟವಾದ ಜ್ಞಾನವನ್ನು ಪಡೆಯಬಹುದು. ಸಿನೆಮಾದ ಪಟದ ಮೇಲೆ ಮುಂಬಯಿ ನಗರದ ಒಂದು ಓಣಿಯ ಚಲನೆಯನ್ನು ಕೆಲಹೊತ್ತು ನಿರೀಕ್ಷಣೆ ಮಾಡುವದರಿಂದ ಸುಶಿಕ್ಷಿತರಾದ ವಿದ್ಯಾರ್ಥಿಗಳು, ತನ್ನ ಆಯುಷ್ಯದಲ್ಲಿ ಎಂದೋ ಒಂದೆರಡು ದಿನ ಮುಂಬಯಿ ನಗರವನ್ನು ನೋಡಿ ಬಂದ ಸಾಮಾನ್ಯ ಮನುಷ್ಯನಿಗಿಂತ, ಹೆಚ್ಚು ಜ್ಞಾನವನ್ನು ಪಡೆಯಬಹುದೆಂದರೆ ತಪ್ಪಾಗದು. ಈ ವಿವರಣೆಯಿಂದ ನಾವು ನಮ್ಮ ವಿದ್ಯಾರ್ಥಿಗಳಿಗೆ ಭೂಗೋಲವನ್ನು ಯಾವ ಕ್ರಮದಿಂದ ಕಲಿಸಬೇಕೆಂಬ ವಿಚಾರವನ್ನು ಸಂಕ್ಷೇಪವಾಗಿ ಹೇಳಿದಂತಾಯಿತು. ಸಾರಾಂಶ— ಸಾಧ್ಯವಿದ್ದ ಮಟ್ಟಿಗೂ ನಾವು ಕಲಿಸಬೇಕಾದ ವಿಷಯವನ್ನು ಪ್ರತ್ಯಕ್ಷ ತೋರಿಸಿ ಕಲಿಸಬೇಕು. ಪ್ರತ್ಯಕ್ಷ ತೋರಿಸುವದಾಗದಿದ್ದರೆ ಅದರ ಪ್ರತಿರೂಪವನ್ನು, ಚಿತ್ರವನ್ನು, ಅಥವಾ ನಕ್ಷೆಯನ್ನು, ಬಾಲಕರ ಮುಂದಿಟ್ಟು ವಿವರಿಸಿ, ಅವರ ಕಲ್ಪನಾಶಕ್ತಿ ತುಲನಾಶಕ್ತಿಗಳನ್ನು ಜಾಗ್ರತಗೊಳಿಸಿ, ಪ್ರತ್ಯಕ್ಷ ಜ್ಞಾನಕ್ಕೆ ಸರಿಯೆನಿಸುವ ಜ್ಞಾನವನ್ನು ಮಾಡಿಕೊಡಲು ಯತ್ನಿಸಬೇಕು. ಈ ಸೂತ್ರವನ್ನೇ ಇನ್ನು ಮುಂದೆ ತಕ್ಕ ಉದಾಹರಣೆ— ವಿವರಣೆಗಳಿಂದ ವಿವರಿಸೋಣ.

ಪ್ರತ್ಯಕ್ಷದಿಂದ ಅಪ್ರತ್ಯಕ್ಷಕ್ಕೆ ಸಾಗು; ತಿಳಿದದ್ದರ ಸಹಾಯದಿಂದ ತಿಳಿಯದೆ ಇದ್ದದ್ದನ್ನು ತಿಳಿಸು, ಎಂಬವು ಶಿಕ್ಷಣದ ಸಾಮಾನ್ಯ ತತ್ವಗಳಲ್ಲಿ ತುಂಬ ಮಹತ್ವದವು. ಈ ತತ್ವಗಳನ್ನು ಅನುಸರಿಸಿದರೆ ಭೂಗೋಲ ಶಿಕ್ಷಣವನ್ನು ವಿದ್ಯಾರ್ಥಿಗಳು ವಾಸಿಸುವ ಹಳ್ಳಿಯಿಂದ ಪ್ರಾರಂಭಿಸಿ ಜಗತ್ತಿನ ವರೆಗೆ ಸಾಗಬೇಕಾಗುವದು. ನಕಾಶೆ ಸ್ಕೇಲು ದಿಕ್ಕು ಮುಂತಾದವುಗಳ ಕಲ್ಪನೆಗಾಗಿ ಸಾಲೆಯ ಕೋಣೆ, ಸಾಲೆಯ

ಕಂಪೌಂಡು ಅಲ್ಲಿರುವ ಉಪಕರಣಗಳು ವಿದ್ಯಾರ್ಥಿಗಳು ಇವುಗಳನ್ನು ಉಪಯೋಗಿಸಿಕೊಳ್ಳಬೇಕಾಗುವದು.

ಭೂಗೋಲದ ಶಿಕ್ಷಕನು ಮೊದಲು ತನ್ನ ಬಾಲಕರಲ್ಲಿ ಚೆನ್ನಾಗಿ ನಿರೀಕ್ಷಣೆ ಮಾಡುವ ಚಟವನ್ನು ಹುಟ್ಟಿಸಬೇಕಾಗುವದು. ನೋಡಿದ ಸಂಗತಿಗಳಿಂದ ತದನು ಗುಣವಾದ ಸಂಗತಿಗಳನ್ನು ಕಲ್ಪಿಸಿಕೊಳ್ಳುವದಕ್ಕೂ ಆ ಸಂಗತಿಗೆ ಹೋಲಿಕೆ ಯಿರುವ ಸಂಗತಿಗಳನ್ನು ತುಲನೆ ಮಾಡಿ ನೋಡುವದಕ್ಕೂ ರೂಢಿ ಮಾಡಿಸ ಬೇಕಾಗುವದು. ಈ ಕ್ರಮದಲ್ಲಿ ಶಿಕ್ಷಕನು ಕೆಲವು ಸಾಮಗ್ರಿಗಳನ್ನು ಉಪಯೋಗಿಸಿ ಕೊಳ್ಳಬೇಕಾಗುವದು. ಅವನ್ನು ನಾವು ಕ್ರಮದಿಂದ ವಿವರಿಸುತ್ತ ಸಾಗೋಣ.

೧. **ಕರಿಯ ಹಲಗೆ:**— ತಾತ್ಕಾಲಿಕವಾದ ಪ್ಲ್ಯಾನು ನಕಾಶಗಳನ್ನು ತೆಗೆಯುವದಕ್ಕಾಗಿಯೂ ಪಾಠದ ಸಾರಾಂಶವನ್ನು ಬರೆಯುವದಕ್ಕೂ ಕರಿಯ ಹಲಗೆ ಯನ್ನು ಉಪಯೋಗಿಸಬೇಕಾಗುವದು. ಕರಿಯ ಹಲಗೆಯ ಮೇಲೆ ತೆಗೆದ ನಕಾಶೆ ಯನ್ನು ವಿದ್ಯಾರ್ಥಿಗಳು ಅನೇಕ ಸಾರೆ ನಕಲು ಮಾಡಿಕೊಳ್ಳಬೇಕಾಗಬಹುದು. ಮತ್ತು ಶಿಕ್ಷಕನು ತೆಗೆದ ಬಾಹ್ಯ ರೇಖಾನಕಾಶೆಯಲ್ಲಿ ತಾನು ಕಲಿಸುತ್ತ ಹೋಗುವ ವಿಷಯಗಳನ್ನು ಕ್ರಮವಾಗಿ ತುಂಬುತ್ತ ಸಾಗಬೇಕಾಗುವದು. ಇತರ ಪಾಠ ಗಳಿಗಿಂತಲೂ ಭೂಗೋಲದ ಪಾಠದಲ್ಲಿ ಕರಿಯ ಹಲಗೆಯ ಉಪಯೋಗವು ಹೆಚ್ಚಾಗಿ ಆಗಬೇಕಾಗುವದು. ಕೆಲಕೆಲವು ನಕಾಶೆ ಪ್ಲ್ಯಾನು ಮೊದಲಾದವುಗಳನ್ನು ಶಿಕ್ಷಕನು ಮೊದಲೇ ತಯಾರಿಸಿಟ್ಟುಕೊಳ್ಳಬೇಕಾಗುವದೂ ಉಂಟು. ಕರಿಯ ಹಲಗೆಯ ಮೇಲಿನ ಕೆಲಸವು ತೀರ ಸರಿಯಾವದ್ದಿರುವ ಸಂಭವವು ಕಡಿಮೆಯೆಂಬ ದೇನೋ ನಿಜ. ಆದರೆ ಅದು ತಪ್ಪು ಕಲ್ಪನೆ ಹುಟ್ಟಿಸುವಷ್ಟು ಅಪೂರ್ಣವಾಗಲಿ ಅಕಾರಣವಾವದ್ದಾಗಲಿ ಅಳತೆ ತಪ್ಪಿದ್ದಾಗಲಿ ಇರಕೂಡದು.

೨. **ಪಾಠ ಪುಸ್ತಕಗಳು:**— ನಮ್ಮ ಶಾಲೆಗಳಲ್ಲಿ ಭೂಗೋಲದ ಪಾಠವು ಬಹುಮಟ್ಟಿಗೆ ಪಾಠಪುಸ್ತಕಗಳ ಆಧಾರದ ಮೇಲೆಯೇ ಸಾಗಿವೆಯೆಂದರೆ ತಪ್ಪಾಗದು. ಆದುದರಿಂದ ಶಿಕ್ಷಕರೂ ವಿದ್ಯಾರ್ಥಿಗಳೂ ಪಾಠಪುಸ್ತಕಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಮತ್ತು ಅವನ್ನು ಎಷ್ಟು ಮಟ್ಟಿಗೆ ಅವಲಂಬಿಸಬೇಕು ಎಂಬುದನ್ನು ತಿಳಿದಿರುವದು ಆವಶ್ಯಕವೆನಿಸುವದು. ವ್ಯವಸ್ಥಿತವಾಗಿ ರಚಿಸಲ್ಪಟ್ಟಿರುವ ಪಾಠಪುಸ್ತಕಗಳು ಶಿಕ್ಷಕರಿಗೆ ತಮ್ಮ ಪಾಠಗಳನ್ನು ಕ್ರಮಗೊಳಿಸಿಕೊಳ್ಳಲಿಕ್ಕೂ ಪಾಠದ ವಿಷಯವನ್ನು ಇಷ್ಟೇ ಎಂದು ನಿಯಮನ ಮಾಡಿಕೊಳ್ಳಲಿಕ್ಕೂ ಉಪ ಯೋಗವಾಗುವವು. ಮತ್ತು ಕಲಿಸಿದ ಎಲ್ಲ ವಿಷಯಗಳ ಕ್ರಮವಾದ ಸಂಗ್ರಹವು ಒಳ್ಳೆ ಪಾಠ ಪುಸ್ತಕಗಳಲ್ಲಿರುವದರಿಂದ ಉಜಳಣಿಗೆ ಇವು ತುಂಬ ಉಪಯೋಗ

ವಾಗುವವು. ವಿದ್ಯಾರ್ಥಿಗಳಿಗೆ ಮನೆಯಲ್ಲಿ ಮಾಡಿಕೊಂಡು ಬರುವದಕ್ಕಾಗಿ ಕೆಲಸ ಕೊಡಲಿಕ್ಕೂ ಪಾಠಪುಸ್ತಕಗಳ ಉಪಯೋಗವಾಗುವದು. ವಿದ್ಯಾರ್ಥಿಗಳು ಸ್ಮರಣ ಶಕ್ತಿಯ ಬಲದಿಂದಲೇ ನೆನಪಿನಲ್ಲಿಡಬೇಕಾಗುವ ವಿಷಯಗಳಿಗೂ ಪಾಠಪುಸ್ತಕಗಳು ಬೇಕಾಗುವವು.

ಭೂಗೋಲದ ಪಾಠಪುಸ್ತಕಗಳಲ್ಲಿ ಚಿತ್ರಗಳೂ ನಕಾಶೆಗಳೂ ಸಾಕಷ್ಟು ಇರಲೇಬೇಕು. ಶಿಕ್ಷಕರು ಕಲಿಸುವ ವಿಷಯಗಳನ್ನು ಬಾಲಕರು ಇಂಥ ಪುಸ್ತಕಗಳಲ್ಲಿ ಪುನಃ ತಾವೇ ಓದಿಕೊಂಡು ಶಿಕ್ಷಕರು ತಮಗೆ ಕೊಟ್ಟಿರುವ ಅಭ್ಯಾಸಗಳನ್ನು ಬಿಡಿಸಲು ಯತ್ನಮಾಡಲು ಅನುಕೂಲವಾಗುವದು. ಇಂಥ ಪುಸ್ತಕಗಳಲ್ಲಿಯ ಚಿತ್ರ ನಕಾಶೆಗಳು ಕ್ರಮಬದ್ಧವಾಗಿರಬೇಕಲ್ಲದೆ ಯೋಗ್ಯ ಸಂಗತಿಗಳನ್ನು ನಿರೂಪಿಸುತ್ತಿರಬೇಕು. ಕೇವಲ ಓದುಗರ ಮನಸ್ಸನ್ನು ಆಕರ್ಷಿಸುವ ಉದ್ದೇಶದಿಂದಲೇ ಚಿತ್ರಗಳನ್ನು ಸೇರಿಸಕೂಡದು. ಭೂಗೋಲದ ಪುಸ್ತಕಗಳಲ್ಲಿ ಕೊಟ್ಟಿರುವ ಮಾಹಿತಿಯು ಸತ್ಯವಾಗಿರಬೇಕೆಂದು ಹೇಳಲೇಬೇಡ. ಈ ವಿಷಯದಲ್ಲಿ ಇಂದು ನಿಜವಾಗಿರುವ ಸಂಗತಿಯು ನಾಳೆ ಸುಳ್ಳಾಗುವ ಸಂಭವವಿರುವದು. ಕಪ್ಪತ ಗುಡ್ಡದಲ್ಲಿ ಬಂಗಾರ ತೆಗೆಯುವರೆಂಬ ಶತಮಾನದ ಹಿಂದಿನ ಮಾತು ಇಂದು ನಿಜವಾಗಲಾರದು. ಮಹಾಯುದ್ಧದ ತರುವಾಯ ಬದಲಾವಣೆಯುರೋಪದ ರಾಜಕೀಯ ನಕಾಶೆಯು ನಮ್ಮಲ್ಲಿ ಇನ್ನೂ ಪ್ರಚಾರದಲ್ಲಿ ಬಂದಿಲ್ಲ. ಇಂದಿನ ವಿವಿಧ ಮಾರ್ಗಗಳು, ಚಿತ್ರಪಟ, ನಕಾಶೆಗಳು, ಕನ್ನಡ ಪುಸ್ತಕಗಳಲ್ಲಿ ಬರುವ ಹೊತ್ತಿಗೆ ಅವುಗಳಲ್ಲಿ ರೂಪಾಂತರ ಹೊಂದುವವೋ ಹೇಳಲಾಗುವದಿಲ್ಲ. ಈ ರೀತಿಯಾಗಿ ಒಂದು ಕಾಲದಲ್ಲಿ ನಿಜವಾಗಿದ್ದರೂ ದಿನದಿನಕ್ಕೆ ಬದಲಾಗುತ್ತಿರುವ ಭೂಗೋಲದ ವಿಷಯವನ್ನು ಅನುಲಕ್ಷಿಸಿ ಅವನ್ನು ಬದಲಿಸುತ್ತ ಹೋಗದಿದ್ದರೆ ಭೂಗೋಲದ ಪುಸ್ತಕಗಳು ನಿರುಪಯೋಗಿಯಾಗುವವು.

೩ ಅಟ್ಲಾಸುಗಳು: ಬೇರೆ ಬೇರೆ ದೇಶಗಳ ಅಥವಾ ಖಂಡದ ಬೇರೆ ಬೇರೆ ವಿಷಯಗಳನ್ನು ವಿವೇಚಿಸುವ ನಕಾಶೆಗಳ ಸಂಗ್ರಹವೆ ಅಟ್ಲಾಸು ಎಂದು ಹೇಳಲ್ಪಡುವದು. ಭೂಗೋಲದ ಅಭ್ಯಾಸದಲ್ಲಿ ನಕಾಶೆಗಳಿಗಿರುವ ಮಹತ್ವವನ್ನು ಮನೆಮನ ಹೇಳಬೇಕಾದ ಕಾರಣವಿಲ್ಲ. ಪಾಠ ಪುಸ್ತಕಗಳಿಗಿಂತಲೂ ಅವುಗಳ ಮಹತ್ವವು ಹೆಚ್ಚು. ನಕಾಶೆಯ ಪುಸ್ತಕಗಳು ಯೋಗ್ಯತರದವಿರಬೇಕೆಂದು ಹೇಳಬೇಕಾಗಿಲ್ಲ. ಅವುಗಳಲ್ಲಿ ವಿದ್ಯಾರ್ಥಿಗಳು ತಿಳಿಯಬೇಕಾದ ಎಲ್ಲ ವಿಷಯಗಳು ನಿಖರವಾಗಿರಬೇಕು. ಮತ್ತು ಆಯಾ ಪಾಠಗಳು ಮುಗಿದ ಒಳಿಕ ವಿದ್ಯಾರ್ಥಿಗಳು ತಮ್ಮಲ್ಲಿರುವ ಬಾಹ್ಯ ರೇಖಾ ನಕಾಶೆಗಳಲ್ಲಿ ಆಯಾ ಪಾಠಾಂಶಗಳನ್ನು ಕ್ರಮವಾಗಿ

ಕ್ರಮಬದ್ಧ ಸಾಗಬೇಕು. ಪರ್ವತಗಳಲ್ಲಿ ಬಾಲಕರಲ್ಲಿರುವ ನಕಾಶೆಯು ಪುಸ್ತಕವು ಬಂದು ಅಟ್ಲಾಸ ಆಗಬೇಕೆಂದರೆ ಅತಿಶಯೋಕ್ತಿಯಾಗದು. ಭೂಗೋಲದ ಪಾಠವು ನಡೆದುವಾಗ ವಿದ್ಯಾರ್ಥಿಗಳು ತಮ್ಮ ಅಟ್ಲಾಸನ್ನು ತೆಗೆದು ಶಿಕ್ಷಕರು ಹೇಳುವ ಸಂಗತಿಗಳನ್ನು ಅವುಗಳಲ್ಲಿ ನಿರೀಕ್ಷಿಸುತ್ತಿರಬೇಕು. ಪ್ರಾಕೃತಿಕಸ್ವರೂಪ, ಹವೆ ಗುಡಿಗಳು, ಪ್ರಾಣಿ ವನಸ್ಪತಿಗಳು, ರಾಜಕೀಯ ಔದ್ಯೋಗಿಕ ವಿಚಾರಗಳು ಮುಂತಾದವುಗಳನ್ನು ವಿವರಿಸುವಾಗ ಅಯಾ ವಿಷಯಗಳನ್ನು ನಿರೂಪಿಸುವ ನಕಾಶೆಗಳು ವಿದ್ಯಾರ್ಥಿಗಳ ಕಣ್ಣಮುಂದೆ ಇರಬೇಬೇಕು. ಆದುದರಿಂದ ಪಾಠ ಪುಸ್ತಕಗಳಿಗೆ ಅನುರೂಪವಾದ ಅಟ್ಲಾಸುಗಳಿರಬೇಕಾಗುವದು. ಮುತ್ತು ಅವು ಪ್ರಚಲಿತಕಾಲದ ಸ್ಥಿತಿಯನ್ನು ನಿರೂಪಿಸಬೇಕಲ್ಲದೆ ಹಳೆಯ ವಿಚಾರಗಳನ್ನು ತೋರಿಸುವಂಥವಿರಬಾರದು.

೪. **ದೊಡ್ಡ ನಕಾಶೆಗಳು:**— ಅಟ್ಲಾಸುಗಳಷ್ಟೇ ಏಕೆ, ಅದಕ್ಕಿಂತ ಹೆಚ್ಚು ಮಹತ್ವವು ಸಾಲೆಯ ಗೋಡೆಯಲ್ಲಿ ತೂಗಿಡುವ ದೊಡ್ಡ ನಕಾಶೆಗಳಿಗಿರುವದು. ಭೂಗೋಲದ ಪಾಠವು ನಡೆದಿರುವಾಗ ಅವನ್ನು ವರ್ಗದ ಮುಂದೆ ಇಡುವದರಿಂದ ಎಲ್ಲ ವಿದ್ಯಾರ್ಥಿಗಳು ಏಕಕಾಲಕ್ಕೆ ಶಿಕ್ಷಕರು ಹೇಳಿ ತೋರಿಸುವ ಪ್ರಾತಿನ ಕಡೆಗೆ ಲಕ್ಷ್ಯ ಪೂರೈಸಲು ಅನುಕೂಲವಾಗುವದು. ಇಂಥ ದೊಡ್ಡ ನಕಾಶೆಗಳು ಕೇವಲ ರಾಜಕೀಯ ಭೂಗೋಲವನ್ನು ವಿವರಿಸುವದೇ ಹೆಚ್ಚು. ಆದರೆ ಪ್ರಾಕೃತಿಕ ಭೂಗೋಲವನ್ನೂ ಮಿಕ್ಕ ವಿಚಾರಗಳನ್ನೂ ನಿರೂಪಿಸುವಂಥ ನಕಾಶೆಗಳಿದ್ದರೆ ಪಾಠದ ಉತ್ತಮರೀತಿಯಿಂದ ಸಾಗಲು ಅನುಕೂಲವಾಗುವದು. ಇದೇ ಪದ್ಧತಿಯು ಒಂದೇ ಸ್ಕೂಲಿನ ಪ್ರೊಜೆಕ್ಟಿನ್ ನಕಾಶೆಯಿದ್ದರೆ ಅದರಿಂದ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ತುಂಬಾ ಸ್ಯಯೋಜನವಾಗುವದು. ಪ್ರತಿಯೊಂದು ದೇಶದ, ಖಂಡದ, ಜಿಲ್ಲೆಯ ಇಂಥ ನಕಾಶೆಗಳು ದುರ್ಬಿಳವಾಗಿದ್ದರೂ ಶಿಕ್ಷಕರಾದರೂ ಅವನ್ನು ತಯಾರಿಸಿ ಇಟ್ಟುಕೊಂಡಿರುವದು ಒಳ್ಳೆಯದು. ಇಂಥ ನಕಾಶೆಗಳನ್ನು ಉಪಯೋಗಿಸುವಾಗ ಅವು ವರ್ಗದ ಎಲ್ಲ ವಿದ್ಯಾರ್ಥಿಗಳಿಗೆ ಸರಿಯಾಗಿ ಕಾಣಿಸುವ ಸ್ಥಳದಲ್ಲಿ ಇರುವಹಾಗೆ ಹೇಗೆ, ಇದರಿಂದ ಕರಿಯ ಹಲಿಗೆಯು ಕೆಲಸಕ್ಕೆ ತೊಂದರೆ ಬರಬಾರದೋ ಹೇಗೆ ಎಂಬುದನ್ನು ಶಿಕ್ಷಕರು ನೋಡಿಕೊಳ್ಳಬೇಕು.

೫. **ಗ್ಲೋಬುಗಳು:**—ಪೃಥ್ವಿಯ ಆಕಾರವು ಕಿತ್ತಳೆ ಹಣ್ಣಿನಂತಿರುವದೆಂದು ಭೂಗೋಲದ ಪಾಠವನ್ನು ಪ್ರಾರಂಭಿಸುವದುಂಟು. ಆದರೆ ಪೃಥ್ವಿಯ ಆಕಾರ, ಪ್ರಾಮಾಣ ರೇಖಾಂಶಗಳು, ಕಟಿಬಂಧಗಳು, ಹಗಲು ರಾತ್ರಿಗಳು, ಋತುಗಳು

ವಾಗುವವು. ವಿದ್ಯಾರ್ಥಿಗಳಿಗೆ ಮನೆಯಲ್ಲಿ ಮಾಡಿಕೊಂಡು ಬರುವದಕ್ಕಾಗಿ ಕೆಲಸ ಕೊಡಲಿಕ್ಕೂ ಪಾಠಪುಸ್ತಕಗಳ ಉಪಯೋಗವಾಗುವದು. ವಿದ್ಯಾರ್ಥಿಗಳು ಸ್ಮರಣ ಶಕ್ತಿಯ ಬಲದಿಂದಲೇ ನೆನಪಿನಲ್ಲಿಡಬೇಕಾಗುವ ವಿಷಯಗಳಿಗೂ ಪಾಠಪುಸ್ತಕಗಳು ಬೇಕಾಗುವವು.

ಭೂಗೋಲದ ಪಾಠಪುಸ್ತಕಗಳಲ್ಲಿ ಚಿತ್ರಗಳೂ ನಕಾಶೆಗಳೂ ಸಾಕಷ್ಟು ಇರಲೇಬೇಕು. ಶಿಕ್ಷಕರು ಕಲಿಸುವ ವಿಷಯಗಳನ್ನು ಬಾಲಕರು ಇಂಥ ಪುಸ್ತಕಗಳಲ್ಲಿ ಪುನಃ ತಾವೇ ಓದಿಕೊಂಡು ಶಿಕ್ಷಕರು ತಮಗೆ ಕೊಟ್ಟಿರುವ ಅಭ್ಯಾಸನಗಳನ್ನು ಬಿಡಿಸಲು ಯತ್ನ ಮಾಡಲು ಅನುಕೂಲವಾಗುವದು. ಇಂಥ ಪುಸ್ತಕಗಳಲ್ಲಿಯ ಚಿತ್ರ ನಕಾಶಗಳು ಕ್ರಮಬದ್ಧವಾಗಿರಬೇಕಲ್ಲದೆ ಯೋಗ್ಯ ಸಂಗತಿಗಳನ್ನು ನಿರೂಪಿಸುತ್ತಿರಬೇಕು. ಕೇವಲ ಓದುಗರ ಮನಸ್ಸನ್ನು ಆಕರ್ಷಿಸುವ ಉದ್ದೇಶದಿಂದಲೇ ಚಿತ್ರಗಳನ್ನು ಸೇರಿಸಿರಕೂಡದು. ಭೂಗೋಲದ ಪುಸ್ತಕಗಳಲ್ಲಿ ಕೊಟ್ಟಿರುವ ಮಾಹಿತಿಯು ಸತ್ಯವಾಗಿರಬೇಕೆಂದು ಹೇಳಲೇಬೇಡ. ಈ ವಿಷಯದಲ್ಲಿ ಇಂದು ನಿಜವಾಗಿರುವ ಸಂಗತಿಯು ನಾಳೆ ಸುಳ್ಳಾಗುವ ಸಂಭವವಿರುವದು. ಕಪ್ಪತ ಗುಡ್ಡದಲ್ಲಿ ಬಂಗಾರ ತೆಗೆಯುವರೆಂಬ ಶತಮಾನದ ಹಿಂದಿನ ಮಾತು ಇಂದು ನಿಜವಾಗಲಾರದು. ಮಹಾಯುದ್ಧದ ತರುವಾಯ ಬದಲಾದ ಯುರೋಪದ ರಾಜಕೀಯ ನಕಾಶೆಯು ನಮ್ಮಲ್ಲಿ ಇನ್ನು ಪ್ರಚಾರದಲ್ಲಿ ಬಂದಿಲ್ಲ. ಇಂದಿನ ವಿಮಾನ ಮಾರ್ಗಗಳು, ಚಿತ್ರಪಟ, ನಕಾಶೆಗಳು, ಕನ್ನಡ ಪುಸ್ತಕಗಳಲ್ಲಿ ಬರುವ ಹೊತ್ತಿಗೆ ಅವು ಎಷ್ಟು ರೂಪಾಂತರ ಹೊಂದುವವೋ ಹೇಳಲಾಗದಿಲ್ಲ. ಈ ರೀತಿಯಾಗಿ ಒಂದು ಕಾಲದಲ್ಲಿ ನಿಜವಾಗಿದ್ದರೂ ದಿನದಿನಕ್ಕೆ ಬದಲಾಗುತ್ತಿರುವ ಭೂಗೋಲದ ವಿಷಯವನ್ನು ಅನುಲಕ್ಷಿಸಿ ಅವನ್ನು ಬದಲಿಸುತ್ತ ಹೋಗದಿದ್ದರೆ ಭೂಗೋಲದ ಪುಸ್ತಕಗಳು ನಿರುಪಯೋಗಿಯಾಗುವವು.

೩. **ಅಟ್ಲಾಸುಗಳು:** ಬೇರೆ ಬೇರೆ ದೇಶಗಳ ಅಥವಾ ಒಂದೇ ದೇಶದ ಬೇರೆ ಬೇರೆ ವಿಷಯಗಳನ್ನು ವಿವೇಚಿಸುವ ನಕಾಶೆಗಳ ಸಂಗ್ರಹವು ಅಟ್ಲಾಸು ಎಂದು ಹೇಳಲ್ಪಡುವದು. ಭೂಗೋಲದ ಅಭ್ಯಾಸದಲ್ಲಿ ನಕಾಶೆಗಳಿಗಿರುವ ಮಹತ್ವವನ್ನು ಒಡೆದು ಹೇಳಬೇಕಾದ ಕಾರಣವಿಲ್ಲ. ಪಾಠ ಪುಸ್ತಕಗಳಿಗಿಂತಲೂ ಇವುಗಳ ಮಹತ್ವವು ಹೆಚ್ಚು. ನಕಾಶೆಯ ಪುಸ್ತಕಗಳು ಯೋಗ್ಯತರದವಿರಬೇಕೆಂದು ಹೇಳಬೇಕಾಗಿಲ್ಲ. ಅವುಗಳಲ್ಲಿ ವಿದ್ಯಾರ್ಥಿಗಳು ತಿಳಿಯಬೇಕಾದ ಎಲ್ಲ ವಿಷಯಗಳು ನಿರೂಪಿತವಾಗಿರಬೇಕು. ಮತ್ತು ಆಯಾ ಪಾಠಗಳು ಮುಗಿದ ಬಳಿಕ ವಿದ್ಯಾರ್ಥಿಗಳು ತಮ್ಮಲ್ಲಿರುವ ಬಾಹ್ಯ ರೇಖಾ ನಕಾಶೆಗಳಲ್ಲಿ ಆಯಾ ಮಾಹಿತಿಗಳನ್ನು ಕ್ರಮವಾಗಿ

ತುಂಬುತ್ತ ಸಾಗಬೇಕು. ವರ್ಷಾಂತ್ಯದಲ್ಲಿ ಬಾಲಕರಲ್ಲಿರುವ ನಕಾಶೆಯ ಪುಸ್ತಕವು ಒಂದು ಅಟ್ಲಾಸ ಆಗಬೇಕೆಂದರೆ ಅತಿಶಯೋಕ್ತಿಯಾಗದು. ಭೂಗೋಲದ ಪಾಠವು ನಡೆದಿರುವಾಗ ವಿದ್ಯಾರ್ಥಿಗಳು ತಮ್ಮ ಅಟ್ಲಾಸನ್ನು ತೆಗೆದು ಶಿಕ್ಷಕರು ಹೇಳುವ ಸಂಗತಿಗಳನ್ನು ಅವುಗಳಲ್ಲಿ ನಿರೀಕ್ಷಿಸುತ್ತಿರಬೇಕು. ಪ್ರಾಕೃತಿಕಸ್ವರೂಪ, ಹವೆ ಸುಳಿಗಳು, ಪ್ರಾಣಿ ವನಸ್ಪತಿಗಳು, ರಾಜಕೀಯ ಔದ್ಯೋಗಿಕ ವಿಚಾರಗಳು ಮುಂತಾದವುಗಳನ್ನು ವಿವರಿಸುವಾಗ ಆಯಾ ವಿಷಯಗಳನ್ನು ನಿರೂಪಿಸುವ ನಕಾಶೆಗಳು ವಿದ್ಯಾರ್ಥಿಗಳ ಕಣ್ಣಮುಂದೆ ಇರಲೇಬೇಕು. ಆದುದರಿಂದ ಪಾಠ ಪುಸ್ತಕಗಳಿಗೆ ಅನುರೂಪವಾದ ಅಟ್ಲಾಸುಗಳಿರಬೇಕಾಗುವದು. ಮತ್ತು ಅವು ಪ್ರಚಲಿತಕಾಲದ ಸ್ಥಿತಿಯನ್ನು ನಿರೂಪಿಸಬೇಕಲ್ಲದೆ ಹಳೆಯ ವಿಚಾರಗಳನ್ನು ತೋರಿಸುವಂಥವಿರಬಾರದು.

೪. **ದೊಡ್ಡ ನಕಾಶೆಗಳು:**— ಅಟ್ಲಾಸುಗಳಷ್ಟೇ ಏಕೆ, ಅದಕ್ಕು ಹೆಚ್ಚು ಮಹತ್ವವು ಶಾಲೆಯ ಗೋಡೆಯಲ್ಲಿ ತೂಗಿಡುವ ದೊಡ್ಡ ನಕಾಶೆಗಳಿಗಿರುವದು. ಭೂಗೋಲದ ಪಾಠವು ನಡೆದಿರುವಾಗ ಅವನ್ನು ವರ್ಗದ ಮುಂದೆ ಇಡುವದರಿಂದ ಎಲ್ಲ ವಿದ್ಯಾರ್ಥಿಗಳು ಏಕಕಾಲಕ್ಕೆ ಶಿಕ್ಷಕರು ಹೇಳಿ ತೋರಿಸುವ ಮಾತಿನ ಕಡೆಗೆ ಲಕ್ಷ್ಯ ಪೂರೈಸಲು ಅನುಕೂಲವಾಗುವದು. ಇಂಥ ದೊಡ್ಡ ನಕಾಶೆಗಳು ಕೇವಲ ರಾಜಕೀಯ ಭೂಗೋಲವನ್ನು ವಿವರಿಸುವದೇ ಹೆಚ್ಚು. ಆದರೆ ಪ್ರಾಕೃತಿಕ ಭೂಗೋಲವನ್ನೂ ಏಕ್ಕ ವಿಚಾರಗಳನ್ನೂ ನಿರೂಪಿಸುವಂಥ ನಕಾಶೆಗಳಿದ್ದರೆ ಪಾಠವು ಉತ್ತಮರೀತಿಯಿಂದ ಸಾಗಲು ಅನುಕೂಲವಾಗುವದು. ಇಡೀ ಪೃಥ್ವಿಯ ಒಂದೇ ಸ್ಕೇಲಿನ ಪ್ರೊಜೆಕ್ಶನ್ ನಕಾಶೆಯಿದ್ದರೆ ಅದರಿಂದ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ತುಂಬಾ ಪ್ರಯೋಜನವಾಗುವದು. ಪ್ರತಿಯೊಂದು ದೇಶದ, ಪ್ರಾಂತದ, ಜಿಲ್ಲೆಯ ಇಂಥ ನಕಾಶೆಗಳು ದುರ್ಮಿಳವಾಗಿದ್ದರೂ ಶಿಕ್ಷಕರಾದರೂ ಇವನ್ನು ತಯಾರಿಸಿ ಇಟ್ಟುಕೊಂಡಿರುವದು ಒಳ್ಳೆಯದು. ಇಂಥ ನಕಾಶೆಗಳನ್ನು ಉಪಯೋಗಿಸುವಾಗ ಅವು ವರ್ಗದ ಎಲ್ಲ ವಿದ್ಯಾರ್ಥಿಗಳಿಗೆ ಸರಿಯಾಗಿ ಕಾಣಿಸುವ ಸ್ಥಳದಲ್ಲಿ ಇರುವವೋ ಹೇಗೆ, ಇದರಿಂದ ಕರಿಯ ಹಲಿಗೆಯ ಕೆಲಸಕ್ಕೆ ತೊಂದರೆಯಾಗುವದೋ ಹೇಗೆ ಎಂಬದನ್ನು ಶಿಕ್ಷಕರು ನೋಡಿಕೊಳ್ಳಬೇಕು.

೫. **ಗ್ಲೋಬುಗಳು:**—ಪೃಥ್ವಿಯ ಆಕಾರವು ಕಿತ್ತಳೆ ಹಣ್ಣಿನಂತಿರುವದೆಂದು ಭೂಗೋಲದ ಪಾಠವನ್ನು ಪ್ರಾರಂಭಿಸುವದುಂಟು. ಆದರೆ ಪೃಥ್ವಿಯ ಆಕಾರ, ಕ್ಷಾಂಶ ರೇಖಾಂಶಗಳು, ಕಟಿಬಂಧಗಳು, ಹಗಲು ರಾತ್ರಿಗಳು, ಋತುಗಳು

೧. **ಮಣ್ಣಿನ ಮಾದರಿಗಳು**:— ಹಿಂದುಸ್ತಾನದ ಪ್ರಾಕೃತಿಕ ಸ್ವರೂಪ ಮಳೆ ಬೆಳೆಗಳು, ಪ್ರಾಣಿಗಳು, ರಾಜಕೀಯ ವಿಭಾಗಗಳು, ಸಂಸ್ಥಾನಗಳು, ಪ್ರವಾಸದ ಮಾರ್ಗಗಳು ಮುಂತಾದವುಗಳನ್ನು ತೋರಿಸುವ ಬೇರೆ ಬೇರೆ ನಕಾಶಗಳು ನೆಲದಮೇಲೆ ರಚಿಸಲ್ಪಟ್ಟಿದ್ದವು. ಪ್ರಾಕೃತಿಕ ಸ್ವರೂಪ, ಭೂಮಿ ಇವನ್ನು ತೋರಿಸುವದಕ್ಕಾಗಿ ಬೇರೆ ಬೇರೆ ಬಣ್ಣದ ಮಣ್ಣು ಮಟ್ಟಿ ಇದ್ದಲಿಗಳನ್ನು ಪುಡಿಮಾಡಿ ಉಪಯೋಗಿಸಿದ್ದರು. ಸಂಸ್ಥಾನಗಳನ್ನು ತೋರಿಸುವ ಸ್ಥಳಗಳಲ್ಲಿ ಆಯಾ ಸಂಸ್ಥಾನಗಳ ಸದ್ಯದ ರಾಜರ ಚಿತ್ರಗಳನ್ನು ವರ್ತಮಾನಪತ್ರಗಳಿಂದ ಕತ್ತರಿಸಿ ನಿಲ್ಲಿಸಿದ್ದರು. ಪ್ರಾಣಿಗಳನ್ನು ತೋರಿಸುವದಕ್ಕಾಗಿ ಆಯಾ ಪ್ರಾಣಿಗಳ ಚಿತ್ರಗಳನ್ನು, ಅಲ್ಲಲ್ಲಿ ಬೆಳೆಯುವ ಧಾನ್ಯಗಳನ್ನೂ ಖನಿಜಗಳನ್ನೂ ತೋರಿಸುವದಕ್ಕಾಗಿ ಆಯಾ ಪದಾರ್ಥಗಳನ್ನೂ ನೆಲದಮೇಲಿನ ನಕಾಶೆಯಲ್ಲಿ ಇಟ್ಟಿದ್ದರು. ರೈಲುದಾರಿ ಹಡಗುಗಳ ಮಾರ್ಗಗಳನ್ನು ದಾರದಿಂದ ಗುರ್ತಿಸಿದ್ದರು. ಇದರಂತೆಯೇ ಏಶಿಯಾ ಆಫ್ರಿಕಾ ಆಸ್ಟ್ರೇಲಿಯಾ ಖಂಡಗಳ ಮಾದರಿಗಳನ್ನೂ ರಚಿಸಿದ್ದರು. ಬೇರೆ ಬೇರೆ ಜನಾಂಗಗಳ ಜೀವನವನ್ನು ನಿರೂಪಿಸುವದಕ್ಕಾಗಿ ಆಯಾ ಜನರ ಚಿತ್ರಗಳನ್ನು ಪುಸ್ತಕ ಪತ್ರಿಕೆಗಳಿಂದ ಕತ್ತರಿಸಿ ಇಲ್ಲವೆ ಚಿತ್ರ ತೆಗೆದು ಇಟ್ಟಿದ್ದರು. ಹಡಗುಗಳ ಮಾರ್ಗ ವಿಮಾನ ಮಾರ್ಗಗಳನ್ನು ತೋರಿಸಿದ್ದರು. ಆಫ್ರಿಕೆಯೊಳಗಿನ ಕುರಿಗಳ ದಡ್ಡಿ ಆಸ್ಟ್ರೇಲಿಯಾದೊಳಗಿನ ಶಹಾಮೃಗಗಳ ಹಿಂಡಿನ ರಚನೆ ಇವನ್ನೂ ಎಸ್ಕಿಮೊ ಜನರ ಗುಡಿಸಲುಗಳನ್ನೂ ಅರಬರ ಡೇರೆಗಳನ್ನೂ ಬಹು ಅಂದವಾಗಿ ರಚಿಸಿ ಅಲ್ಲಲ್ಲಿ ಇಟ್ಟಿದ್ದರು. ಇಡಿಯ ಜಗತ್ತಿನ ಪ್ರೊಜೆಕ್ಶನ್ ನಕಾಶೆಯೊಂದನ್ನು ಮಾಡಿ ಅದರಲ್ಲಿ ವಿಮಾನಗಳ ಮಾರ್ಗಗಳನ್ನೂ ಒಂದುಸ್ಟೇಶನ್ನಿನಿಂದ ಇನ್ನೊಂದು ಸ್ಟೇಶನ್ನಿಗೆ ಹೋಗಲು ಬೇಕಾಗುವ ಕಾಲವನ್ನೂ ಅವುಗಳ ಅಂತರವನ್ನೂ ಬರೆದಿಟ್ಟಿದ್ದರಿಂದ ಆಧುನಿಕ ಶಾಸ್ತ್ರೀಯ ಯುಗದಲ್ಲಿ ಜಗತ್ತಿನ ಅಂತರವು ಎಷ್ಟು ಕಡಿಮೆಯಾಗಿದೆ ಎಂಬದನ್ನು ಕಣ್ಣಾರೆ ಕಾಣಲು ಸಾಧ್ಯವಾಯಿತು. ಇಡಿಯ ಜಗತ್ತಿಗೂ ನಮಗೂ ಇರುವ ಸಂಬಂಧವು ಇದರಲ್ಲಿ ಬಡೆದು ಕಾಣಿಸುತ್ತಿತ್ತು. ಇಡಿಯ ಜಗತ್ತಿನ ವಿಸ್ತಾರ ಅದರ ಭೂಗೋಲಕ್ಕೆ ಸಂಬಂಧಿಸಿದ ಕಲ್ಪನೆಗಳು ಇವು ಏಕಕಾಲಕ್ಕೆ ಲಕ್ಷ್ಯಕ್ಕೆ ಬರುವದರಿಂದ ಈ ನಕಾಶೆಯು ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುತ್ತಿತ್ತು. ಬಳಿಯಲ್ಲಿಯೇ ಹಿಂದುಸ್ತಾನದ ಜನಸಂಖ್ಯೆ ಕ್ಷೇತ್ರಗಳನ್ನು ಜರ್ಮನಿ ಇಂಗ್ಲಂಡ ಫ್ರಾನ್ಸ ಜಪಾನ ಮೊದಲಾವ ದೇಶಗಳ ಜನಸಂಖ್ಯೆ ಕ್ಷೇತ್ರಗಳ ಸಂಗಡ ತುಲನೆಮಾಡಲಿಕ್ಕೆ ಅನುಕೂಲವಾಗುವಂತೆ ಸಮಾನ ಸ್ಕೇಲಿನ ವರ್ತುಳ ಚೌರಸಗಳನ್ನು ರಚಿಸಿ ಇಟ್ಟಿದ್ದರು. ಇದೇ ರೀತಿಯಾಗಿ ನಮ್ಮ ಕರ್ನಾಟಕ ಪ್ರಾಂತ

ಧಾರವಾಡ ನಗರ, ಟ್ರೇನಿಂಗ ಕಾಲೇಜದ ಕಂಪೌಂಡು ಇವುಗಳ ಮಾದರಿಗಳೂ ತುಂಬ ಆಕರ್ಷಕವಾಗಿದ್ದವು.

೨. **ಗ್ಲೋಬುಗಳು:**— ಅಕ್ಷಾಂಶ ರೇಖಾಂಶ, ಪೃಥ್ವಿಯ ಆಕಾರ, ಋತುಗಳು, ಹಗಲು ರಾತ್ರಿಗಳು ಇವುಗಳನ್ನು ಕಲ್ಪಿಸಿಕೊಳ್ಳಲು ಅನುಕೂಲವಾಗುವಂತೆ ಗ್ಲೋಬುಗಳನ್ನು ಶಾಸ್ತ್ರೀಯವಾಗಿ ಹೊಂದಿಸಿಟ್ಟಿದ್ದರು.

೩. **ಇತರ ವಿಷಯಗಳು:**— ದಿಕ್ಕುಗಳನ್ನೂ ಸೂರ್ಯನ ಅಯನಗತಿಯನ್ನೂ ವೇಳೆಯನ್ನೂ ತೋರಿಸುವ ಛಾಯಾಯಂತ್ರಗಳನ್ನು ವಿದ್ಯಾರ್ಥಿಗಳು ತಯಾರಿಸಿ ಇಟ್ಟಿದ್ದರು. ಇವು ಶಾಸ್ತ್ರೀಯವಾಗಿರುವಂತೆಯೇ ಚಿತ್ತಾಕರ್ಷಕವೂ ಆಗಿದ್ದವು. ಗಾಳಿಯು ಬೀಸುವ ದಿಕ್ಕನ್ನು ಕಂಡುಹಿಡಿಯುವದಕ್ಕಾಗಿ ತಯಾರಿಸಿದ ಯಂತ್ರವು ಸೂಕ್ಷ್ಮವಾಗಿ ಕೆಲಸಮಾಡುತ್ತಿದ್ದುದರಿಂದ ಎಲ್ಲರಿಗೂ ಆಶ್ಚರ್ಯಕರವಾಗಿತ್ತು. ಮೇಲಿನಿಂದ ಬೀಳುವ ನೀರಿನ ಶಕ್ತಿಯನ್ನು ಉಪಯೋಗಿಸಿಕೊಂಡು ಗೋಕಾಕದ ಧಬಧಬೆ ಮೊದಲಾದ ಕಡೆಗಳಲ್ಲಿ ಹೇಗೆ ಯಂತ್ರಗಳನ್ನು ನಡಿಸುತ್ತಿರುವರೆಂಬ ಕಲ್ಪನೆ ಬರುವದಕ್ಕಾಗಿ ತಯಾರಿಸಿಟ್ಟ ಟರ್ಬಾಯಿನದ ರಚನೆಯು ಬಹು ಮನೋರಂಜಕವಾಗಿರುವಂತೆಯೇ ಶಾಸ್ತ್ರೀಯ ಜ್ಞಾನಸಾಧನವೂ ಆಗಿದ್ದಿತು.

ಈ ಎಲ್ಲ ಮಾದರಿಗಳು ಪರಿಪೂರ್ಣವಾಗಿರುವವೆಂದಾಗಲಿ ಇದಕ್ಕೂ ಹೆಚ್ಚಿಗೆ ಮಾಡಲು ಸಾಧ್ಯವಿಲ್ಲವೆಂದಾಗಲಿ ಯಾರೂ ಹೇಳುವಂತಿಲ್ಲದಿದ್ದರೂ ಭೂಗೋಲ ಶಿಕ್ಷಣದಲ್ಲಿ ಶಿಕ್ಷಕರು ಯಾವ ಕ್ರಮದಲ್ಲಿ ಪರಿಶ್ರಮಮಾಡಿದರೆ ಅದು ಪ್ರಯೋಜನಕಾರಿಯಾಗಿ ವಿದ್ಯಾರ್ಥಿಗಳಿಗೆ ವಿಷಯವು ಸುಗಮವಾಗಿ ಮನೋರಂಜಕವಾಗಬಹುದೆಂಬದನ್ನು ತೋರಿಸುವ ಉದ್ದೇಶದಿಂದ ರಚಿತವಾಗಿದ್ದುದರಿಂದ ಇವು ಎಲ್ಲರ ಆದರಕ್ಕೆ ಪಾತ್ರವಾದವು. ಧಾರವಾಡ ನಗರದೊಳಗಿನ ಎಲ್ಲ ಹೈಸ್ಕೂಲುಗಳ ಹಾಗು ಪ್ರಾಥಮಿಕ ಶಾಲೆಗಳ ಶಿಕ್ಷಕರೂ ವಿದ್ಯಾರ್ಥಿಗಳೂ ಬಂದು ಪ್ರೀತಿಯಿಂದ ಇವನ್ನು ನೋಡಿ ಆನಂದಪಟ್ಟರು. ವಿದ್ಯಾರ್ಥಿಗಳ ಪಾಲಕರಲ್ಲಿಯೂ ತಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಮನಸ್ಸನ್ನು ಹಾಕುವಂಥ ಮಹನೀಯರನೇಕರು ಇಲ್ಲಿಗೆ ಬಂದು ಈ ಮಾದರಿಗಳನ್ನೆಲ್ಲ ನೋಡಿ ಸಂತುಷ್ಟರಾದರು. ಆದುದರಿಂದ ಇದೊಂದು ಭೂಗೋಲ ಶಿಕ್ಷಣಕ್ಕೆ ಸಂಬಂಧಿಸಿದ ಚಿಕ್ಕ ಪ್ರದರ್ಶನವೇ ಎಂದು ಹೇಳುವಂತಾಯಿತು. ಕಾಕತಾಲೀಯ ನ್ಯಾಯದಿಂದ ಇದೇ ಕಾಲಕ್ಕೆ ಟ್ರೇನಿಂಗ ಸ್ಕೂಲಿನ ವಾರ್ಷಿಕ ಇನ್‌ಸ್ಪೆಕ್ಶನಕ್ಕೆ ಬಂದಿದ್ದ ಮೆ॥ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಫಿಷೇಬರವರೂ ಅಕಸ್ಮಾತ್ ಈ ಊರಿಗೆ ದಯಮಾಡಿಸಿದ ನಮ್ಮ ದಕ್ಷಿಣಭಾಗದ

ಹತ್ತಿದರು. ಬೌದ್ಧಧರ್ಮದ ಸಮಾನತ್ವದ ತತ್ವಗಳೂ ವಿಗ್ರಹಗಳೂ ಸಾಮಾನ್ಯರ ಮನಸ್ಸನ್ನು ಆಕರ್ಷಿಸಿದರೂ ಹಳೆಯಮತದ ವಿಷಯವಾಗಿ ಮನಸ್ಸಿನಲ್ಲಿ ನೆಟ್ಟಿದ್ದ ಅಭಿಮಾನದ ಬೇರುಗಳನ್ನು ತೀರಾ ಕಿತ್ತಿ ಬಿಸುಟಲು ಜಪಾನಿಗಳು ಚಡಪಡಿಸಲಾರಂಭಿಸಿದರು; ಈ ಸಂಗತಿಯು ಬೌದ್ಧ ಭಿಕ್ಷುಗಳಿಗೆ ತಿಳಿಯಿತು. ಆದುದರಿಂದ ಭಾರತ ವರ್ಷದಿಂದ ಅಲ್ಲಿಗೆ ಬಂದಿದ್ದ ಬೋಧಿಸೇನನೆಂಬ ಸನ್ಯಾಸಿಯೂ ಕೋರಿಯಾ ದೇಶದ ರಾಜಮನೆತನಕ್ಕೆ ಹೊಂದಿದ ಗ್ಯೋಗಿ ಎಂಬ ಸನ್ಯಾಸಿಯೂ ತಮ್ಮ ತಮ್ಮ ಪ್ರವಾಸದ ಅನುಭವಗಳಿಂದ ಪ್ರೇರಿತರಾಗಿ ಹಳೆಯಮತದೊಂದಿಗೆ ಸ್ನೇಹ ಬೆಸೆದು ವಿನಾ ಗತ್ಯಂತರವಿಲ್ಲೆಂದು ಬಗೆದರು. ಷಿಂಟೋಮತದ ದೇವತೆಗಳಿಗೂ ಮಹಾಯಾನ ದೇವತೆಗಳಿಗೂ ಹತ್ತಿರದ ಸಂಬಂಧವನ್ನು ಕಲ್ಪಿಸಿ ರಾಜಧಾನಿಯಾದ ನಾರಾ ಎಂಬಲ್ಲಿ ಉಭಯ ಪಂಗಡದವರೂ ಸೇರಿ ಕ್ರಿ. ಶ. ೭೨೦ರಲ್ಲಿ ವೈರೋಚನ ದೇವನ ವಿಗ್ರಹವನ್ನು ಪ್ರತಿಷ್ಠಿಸಿದರು. ಈ ಉಭಯ ಪಂಗಡದವರು ಒಟ್ಟಾಗಿ ಸಾಹಸ ಸಹನೆಗಳಿಂದ ಬುದ್ಧನ ವಚನಗಳನ್ನೂ ತತ್ವಗಳನ್ನೂ ಸಹಕಾರದಿಂದ ಮನನ ಮಾಡಲಾರಂಭಿಸಿದರು. ಬಳಿಕ ಜಪಾನದೇಶದ ಡೆಂಗ್ಯೋಡೈಯಿಷಿ, ಕೋಬೋಡೈಷಿ ಎಂಬ ಸನ್ಯಾಸಿಗಳು ಚೀನಾದೇಶದ ಭಿಕ್ಷುಗಳ ಪರಿಚಯ ಮಾಡಿಕೊಂಡರು ಹಾಗು ಚೀನದೇಶದ 'ಹೀಯಾಸಾನ್' ಎಂಬಲ್ಲಿ ಮಾದರಿ ವಿಹಾರವನ್ನು ಸ್ಥಾಪಿಸಿದರು. ಕೋಬೋಡೈಯಿಷಿಯವರು ಚೀನಾದೇಶಕ್ಕೆ ಹಿಂದುಸ್ತಾನದಿಂದ ಬಂದಿದ್ದ ಅಮೋಘವಜ್ರನೆಂಬ ಭಾರತೀಯ ಭಿಕ್ಷುವಿನ ಶಿಷ್ಯನಾಗಿ ಮಂತ್ರಯಾನದಲ್ಲಿ ಪ್ರಾವೀಣ್ಯ ಸಂಪಾದಿಸಿದನು. ಮುಂದೆ ಇವನೇ ಜಪಾನಿಗೆ ಹೋಗಿ ಕಮಲ ವಜ್ರ ಮುಂತಾದ ಬೌದ್ಧಮತದ ಪ್ರಯೋಗಗಳನ್ನು ಜಪಾನಿನಲ್ಲಿ ಪ್ರಚುರಪಡಿಸಿದನು. ಹಾಗೂ 'ಕೊಯಾಸಾನ್' ಎಂಬಲ್ಲಿ ವಿಹಾರವನ್ನು ಸ್ಥಾಪಿಸಿದನು.

ಕ್ರಿ. ಶ. ೮೮೦ ರಿಂದ ೧೩೦೦ ವರೆಗೆ ಬೌದ್ಧರ ವಿಹಾರಗಳು ರಾಜರ ಸಹಾಯದಿಂದಲೂ ಭಕ್ತಾದಿಗಳ ದಾನಧರ್ಮಗಳಿಂದಲೂ ಸಂಪತ್ತಿನಿಂದಲೂ ಅಭಿವೃದ್ಧಿಯಾದವು. ಹಿಂದುಸ್ತಾನದಲ್ಲಿ ಬೌದ್ಧ ಭಿಕ್ಷುಗಳು ನಡತೆ, ಆಚಾರವಿಚಾರಗಳಲ್ಲಿ ಕೀಳರಾದಂತೆ ಅಲ್ಲಿಯೂ ಆದರು. ಆಗ ಧರ್ಮದ ಅವನತಿಯಾಗುವ ಪ್ರಸಂಗವು ಒದಗಿತು. ಈ ಕಠಿಣ ಪ್ರಸಂಗದಲ್ಲಿ ಅನೇಕರು ಮಹನೀಯರು ಉದಯಿಸಿ ೧೭೦೦ರ ಸುಮಾರಕ್ಕೆ ಬೌದ್ಧ ಧರ್ಮದಲ್ಲಿ ಮತ್ತೆ ಮಾಪಾಡು ಮಾಡಿಕೊಂಡು ಜನಸೇವೆಯಿಂದಲೇ ಅಂತಃಕರಣವು ಶುದ್ಧವಾಗಿ ಜ್ಯೋತಿರ್ದರ್ಶನವಾಗುವದೆಂದು ಬಗೆದರು. ಇನ್ನು ಮುಂದೆ ಪಾಂಡಿತ್ಯ ಜಾತಿಗಳಿಗೆ ಬೆಲೆಗೊಡದೆ ಇಂದ್ರಿಯ ನಿಗ್ರಹ, ಶಾಂತಿ, ಕ್ಷಮೆ, ಧೈರ್ಯ ಇವುಗಳ ಬೆಳವಣಿಗೆ

ಯೋಗತಕ್ಕದ್ದೆಂದು ಧ್ಯಾನಮಾರ್ಗದವರು ಬೋಧಿಸಿದರು. ಇಷ್ಟರಲ್ಲಿ ಪಾಶ್ಚಾತ್ಯರು ಅಲ್ಲಿಗೆ ಬಡತೊಡಗಿದರು. ಆವೊತ್ತಿಗೆ ಬೌದ್ಧಧರ್ಮವು ಸುಧಾರಿಸಿ ಉತ್ತಮ ಸ್ಥಿತಿಯನ್ನು ಹೊಂದಿತ್ತು.

ಪಾಶ್ಚಾತ್ಯರು ತಮ್ಮ ದೇಶಕ್ಕೆ ಆಗಮಿಸಿದರೆ ತಮ್ಮ ನೈಜವಾದ ಸಂಸ್ಕೃತಿಯು ನಾಶವಾದೀತೆಂದು ಜಪಾನಿಗಳು ಹೆದರಿ ಇತರ ದೇಶಗಳೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳಕೂಡದೆಂದು ಬಗೆದು ೩೦೦ ವರ್ಷಗಳ ವರೆಗೆ ಕೂಪಮಂಡೂಕವೃತ್ತಿಯನ್ನು ಕೈಕೊಂಡರು.

ಇಷ್ಟರಲ್ಲಿ ಷಿಂಟೋ ಮತವು ತಲೆಯೆತ್ತಹತ್ತಿತು. ಆಗ ಬೌದ್ಧರಿಗೆ ಭಯ ಹುಟ್ಟಿ ತಮ್ಮಲ್ಲಿ ಸೇರಿದ್ದ ಕಲ್ಮಷಗಳನ್ನೆಲ್ಲ ತೆಗೆದುಹಾಕಿದರು. ತ್ರಿಪಿಟಕವನ್ನು ಅಭ್ಯಸಿಸಹಾಕಿ ಮೂಲಗ್ರಂಥಗಳಲ್ಲಿ ಪ್ರತಿಪಾದಿತವಾದ ತತ್ವಗಳನ್ನೇ ಅವಲಂಬಿಸಿದರು. ಹೀಗೆ ಮಾಡಿದ್ದರಿಂದ ಇಲ್ಲಿ ರಲ್ಲಿ ಜಪಾನಿನ ಪ್ರಜೆಗಳಿಗೆ ಧರ್ಮಸ್ವಾತಂತ್ರ್ಯವು ದೊರೆಯಿತು. ಷಿಂಟೋಮತ ಬೌದ್ಧಮತ, ಇತರ ಮತಗಳು ಇವೆಲ್ಲವಗಳಿಗೂ ಪ್ರಚಾರಕಾರ್ಯದಲ್ಲಿ ಸಮಾನ ಹಕ್ಕುಗಳು ಬಂದವು.

ಇತ್ತಲಾಗಿ ಬೌದ್ಧಮತವು ಅಲ್ಲಿ ಬಲಗೊಳ್ಳುತ್ತಿದೆ ಎಂದೂ ಬುದ್ಧನ ವಚನಗಳಿಗೆ ಹೆಚ್ಚು ಮಹತ್ವವು ಪ್ರಾಪ್ತವಾಗಹತ್ತಿದೆ ಎಂದೂ ಎಲಿಯೆಟ್ ಇವರು ಅಭಿಪ್ರಾಯಪಟ್ಟಿದ್ದಾರೆ.

ಎಲಿಯೆಟ್ ಅವರು ೧೯೩೪ರಲ್ಲಿ ಕಾಲವಾದರು. ಇತ್ತಿತ್ತಲಾಗಿ ಅವರು ಬರೆದ "ಜಪಾನ ದೇಶದಲ್ಲಿ ಬೌದ್ಧಮತದ ಚರಿತ್ರೆ" ಎಂಬ ಪುಸ್ತಕವು ಪ್ರಕಟವಾಗತೊಡಗಿದೆ.

ಸರ ಚಾರಲ್ಸ್ ಎಲಿಯೆಟ್ ಎಂಬವರು ಬೌದ್ಧಧರ್ಮದ ವಿಷಯವಾಗಿ ಜಪಾನದೇಶದಲ್ಲಿ ಶೋಧಮಾಡಿ ಗೊತ್ತಾದ ವಿಷಯವನ್ನು ಆಸ್ಥೆಪೂರ್ವಕವಾಗಿ ಗ್ರಂಥರೂಪವಾಗಿ ಬರೆದಿರುವರು. ಈ ಸಂಗತಿಯಿಂದ ಯುರೋಪೀಯರಲ್ಲಿದ್ದ ಶೋಧಕಬುದ್ಧಿಯು ಪ್ರಕಟವಾಗುವಂತೆ ಅದೆ.

ಕಮಿಶನರ್ ಸಾಹೇಬರಪರೂ ಈ ಎಲ್ಲ ಕೆಲಸಗಳನ್ನು ನೋಡಿ ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು. ಮತ್ತು ಹೆಚ್ಚು ವೆಚ್ಚವಿಲ್ಲದೆ ಹಳ್ಳಿಗಳಲ್ಲಿ ದೊರೆಯಬಹುದಾದ ಮಣ್ಣು, ಮಟ್ಟಿ, ಇದ್ದಲಿ, ಬೂದಿ ಮೊದಲಾದ ಸಾಮಾನ್ಯ ಉಪಕರಣಗಳು, ವರ್ತಮಾನಪತ್ರಿಕೆ-ಮಾಸಿಕ ಪುಸ್ತಕಗಳಲ್ಲಿ ದೊರೆಯಬಹುದಾದ ಚಿತ್ರಗಳು ಹಲಕೆಲವು ಅಲ್ಪ ಬೆಲೆಯ ಒಡವೆಗಳು ಮುಂತಾದವುಗಳ ಸಹಾಯದಿಂದಲೇ ಈ ಎಲ್ಲ ಮಾದರಿಗಳನ್ನು ರಚಿಸಿಟ್ಟಿದ್ದರಿಂದ ಹಳ್ಳಿಯ ಶಾಲೆಗಳ ಶಿಕ್ಷಕರಿಗೆ ಇವು ಮೇಲ್ಪಂಕ್ತಿಯಾಗಿರುವವೆಂದು ಅಭಿಪ್ರಾಯಪಟ್ಟರು.

ಜಪಾನದೇಶದಲ್ಲಿ ಬೌದ್ಧಮತವು

ಜಪಾನದೇಶಕ್ಕೆ ಇಂಗ್ಲಂಡ ಸರಕಾರದಿಂದ ರಾಯಭಾರಿಗಳಾಗಿ ಹೋಗಿದ್ದ ಸರ ಚಾರ್ಲ್ಸ ಎಲಿಯಟ್ ಎಂಬವರು "ಹಿಂದೂಮತ, ಬೌದ್ಧಮತ" ಎಂಬ ಗ್ರಂಥವನ್ನು ಬರೆದಿದ್ದಾರೆ. ನಮ್ಮ ದೇಶದ ಸಂನ್ಯಾಸಿಗಳು ಸಾಹಸದಿಂದ ಹಿಂದೂದೇಶದಿಂದ ಹೊರಬಿದ್ದು ಹಿಂದೂ ಸಂಸ್ಕೃತಿಯನ್ನು ದೇಶವಿದೇಶಗಳಲ್ಲಿ ಹರಡಿದ ಸಂಗತಿಯು ಈ ಗ್ರಂಥದಿಂದ ಸರಸವಾಗಿ ತಿಳಿಯುವಂತೆ ಅದೆ. ಇದರ ತೀರ ಮುಖ್ಯ ಭಾಗವು ವಾಚಕರಿಗೆ ತಿಳಿಯಬೇಕೆಂದು ಒಂದು ಕನ್ನಡ ಪುಸ್ತಕದ ಆಧಾರದಿಂದ ಸಾರಾಂಶ ರೂಪದಲ್ಲಿ ಬರೆಯಲ್ಪಟ್ಟಿದೆ.

ಕ್ರಿ. ಶ. ೫೫೨ ರಲ್ಲಿ ಕೋರಿಯಾದೇಶದಿಂದ ಬೌದ್ಧ ಭಿಕ್ಷುಗಳು ಮೊದಲು ರಾಜನ ಅಪ್ಪಣೆಪಡೆದುಕೊಂಡು ಜಪಾನದೇಶದ ಅರಸನಿಗೆ ಅವನಿಂದ ಪತ್ರ ತೆಗೆದುಕೊಂಡು, ಧರ್ಮಪ್ರಚಾರದ ಸಹಾಯಕ್ಕಾಗಿ ಜಪಾನದ ರಾಜಧಾನಿಗೆ ಬಂದರು. ಕೋರಿಯಾ ದೇಶದ ಅರಸರು ಹೊಸ ಮತದ ವಿಷಯವಾಗಿ ಪರಿಪೂರ್ಣ ಪ್ರಾಯವುಂಟಾಗುವಂತೆ ತಕ್ಕಂತೆ ವರ್ಣಿಸಿ ಬರೆದಿದ್ದರು. ಜಪಾನರಿಗೆ ಹೊಸ ಮತದ ವಿಷಯವಾಗಿ ಆದರಬುದ್ಧಿ ತೋರಿದರೂ ಹಳೆಯ ಮತವನ್ನು ಬಿಟ್ಟು ತ್ಯಜಿಸಲಿಕ್ಕೆ ತೊಂದರೆ ಎನಿಸಿತು. ಇದೇಕಾಲಕ್ಕೆ ಹಳೆಯ ಮತವನ್ನು ಬಿಟ್ಟು ಹೊಸ ಮತ ಕೈಕೊಳ್ಳುವ ಧೈರ್ಯಶಾಲಿ ಸ್ವದೇಶದ ಜನಗಳಿಗೆ ದೈವವಕೃತವಾದ ಆದಿದೈವಿಕತಾಪಗಳು ಸಂಭವಿಸಿದವು. ಇದನ್ನು ನೋಡಿದ ಬಳಿಕಂತೂ ಹಳೆಯದನ್ನು ಬಿಟ್ಟು ಹೊಸ ಮತವನ್ನು ಕೈಕೊಳ್ಳುವ ಸಾಹಸದ ಕೆಲಸಕ್ಕೆ ಯಾರೂ ಮುಂದುವರಿಯಲಿಲ್ಲ.

ಇಷ್ಟಾದರೂ ಸಂನ್ಯಾಸಿಗಳ ಯತ್ನವು ಅವ್ಯಾಹತನಾಗಿ ನಡೆಯಿತು. ಚಕ್ರಾತ್ಯಾಗಿ ಒದಗಿದ ತಾಪಗಳಿಗೆ ಹೊಸಮತವು ಕಾರಣವಲ್ಲೆಂದು ಅವರು ಹೇಳತೊಡಗಿದರು. ಕಡೆಗೆ ಷೊಟೋಕು ಎಂಬ ರಾಜನ ಕಾಲಕ್ಕೆ (೫೯೩-೬೨೨) ಬೌದ್ಧಮತವು ರಾಜಾಶ್ರಯವನ್ನು ಪಡೆಯಿತು. ಈ ರೀತಿಯಿಂದ ಹಿಂದೀ ಚೀನಾ ಸಂಸ್ಕೃತಿಗಳು ಜಪಾನಿನಲ್ಲಿ ಸೇರತೊಡಗಿದವು. ಒಳ ಜಗಳಗಳಿಂದ ಛಿನ್ನಭಿನ್ನವಾಗಿ ತಂಡವುಳ್ಳವರಾಗಿದ್ದ ಜಪಾನಿಗಳು ಒಂದುಗೂಡಲಿಕ್ಕೆ ಬೌದ್ಧಮತವು ಸಹಾಯಮಾಡಲೆಂದು ' ಷೊಟೋಕು ' ಅವರ ಅಭಿಪ್ರಾಯವಾಗಿದ್ದಿತು. ಷೊಟೋಕು ಅವರು ನೂರಾರು ವಿಹಾರಗಳನ್ನು ಕಟ್ಟಿಸಿ ಚೀನಾದಿಂದ ಬೌದ್ಧ ಭಿಕ್ಷುಗಳನ್ನು ಕರೆಯಿಸಿ ಬೌದ್ಧಮತ ಸ್ಥಾಪನಾಕಾರ್ಯವನ್ನು ಕೈಕೊಂಡರು. ಬೌದ್ಧಮತವು ಸತ್ಯದ ಮಾರ್ಗದಿಂದ ಜನರನ್ನು ಉನ್ನತಸ್ಥಿತಿಗೆ ಒಯ್ದು ಮುಟ್ಟಿಸುವದೆಂಬ ಸಾಮಾನ್ಯರ ಗ್ರಹಿಕೆಯಾಯಿತು. ವಿಹಾರಗಳ ಸುತ್ತಲು ವಿದ್ಯಾಲಯಗಳೂ ಚಿಕಿತ್ಸಾಗೃಹಗಳೂ ಜನಸೇವಾಕಾರ್ಯವನ್ನು ಕೈಕೊಂಡು ಜನರ ಮನಸ್ಸನ್ನು ಆಕರ್ಷಿಸಲಾರಂಭಿಸಿದವು. ಹೋಯ್ರ್ಯುಜಿ ಎಂಬಲ್ಲಿ ಕಟ್ಟಿಸಿದ ವಿಹಾರಗಳಲ್ಲಿ ಕಟಿದು ತೋರಿಸಿದ ಚಿತ್ರ ಕಲಾವಿಶೇಷಗಳು ಹಿಂದುಸ್ತಾನದ ಅಜಂತಾ ಗುಹಾಲಯದ ಕಲೆಗಳಿಗೆ ತೀರಾ ಹೋಲುವ ಹಾಗೆ ಅವೆ. ಪ್ರವಾಸಿಗಳು, ಧಾರ್ಮಿಕ ಮತ ಸಂಬಂಧದಿಂದ ಜಪಾನಿಗಳಿಗೂ ಹಿಂದುಗಳಿಗೂ ಉಂಟಾದ ನಂಟತನವು ಕಲೆಗಳ ರೀತಿಯಿಂದ ಪ್ರಕಟವಾಯಿತೆಂದು ವರ್ಣಿಸಿದ್ದಾರೆ. ಷೊಟೋಕು ಅವರು ಹಿಂದುಸ್ತಾನದಲ್ಲಿ ಅಶೋಕನಂತೆ ಜಪಾನಿನಲ್ಲಿ ಮನ್ನಣೆಹೊಂದಿದರು. ಇವರಾದರೂ ಧರ್ಮ ಗ್ರಂಥಗಳನ್ನು ಭಾಷಾಂತರಿಸಿ ಪೀಠಿಕಾತ್ರಯಗಳಿಗೆ ಟೀಕೆ ಬರೆಯಿಸಿದರು. ಹೊಸ ಧರ್ಮವು ಬಡವನನ್ನೂ ಸಿರಿವಂತನನ್ನೂ, ಹೀನನನ್ನೂ ಉಚ್ಚನನ್ನೂ ಸಮಸ್ಥಿತಿ ಒಯ್ದು ಮುಟ್ಟಿಸುತ್ತದೆಂಬ ಜನರ ಭಾವನೆಯಾಯಿತು; ಆಚರಣೆಯಿಂದ ಮಾನವನು ಶುದ್ಧನಾಗಿ ಧನ್ಯನಾಗುತ್ತಾನೆಂದು ಬಗೆದರು; ಸೇವೆಯು ಹೊಸ ಧರ್ಮದ ತತ್ವವೆಂದು ಜನಸೇವಾ ಕಾರ್ಯದಲ್ಲಿ ಜನರು ಸೇವಾತತ್ಪರರಾದರು; ಜನರ ಸೇವೆಗೆ ದೊಡ್ಡವರು ಆತುರರಾದರು. ಹೀಗಾಗಿ ಹೊಸ ತತ್ವಗಳ ಪ್ರೇರಣೆಯಿಂದ ಪ್ರೇರಿತರಾಗಿ ಮನುಷ್ಯರೆಲ್ಲರೂ ಒಬ್ಬರಿಗೊಬ್ಬರು ಬಾಂಧವರೂ ಸಮರೂ ಆಗಿರುವರೆಂದು ಪ್ರೀತಿಯಿಂದ ನಡೆಯತೊಡಗಿದರು. ಪರಸ್ಪರರ ಸೇವೆಯಲ್ಲಿ ಜನತೆಯು ಮಗ್ನವಾಯಿತು.

ಈ ರೀತಿಯಾವ ಹೊಸಮತದ ಹಬ್ಬುಗೆಯು ಷಿಂಟೋಗಳಿಗೆ ಸರಿಗಾಣಲಿಲ್ಲ. ಪಾತನಿಗಳು ಹೊಸ ಮತದ ನಿರ್ಬಂಧಕ್ಕಾಗಿ ಅಡಚಣಿಗಳನ್ನು ತಂದೊಡ್ಡ

ಹತ್ತಿದರು. ಬೌದ್ಧಧರ್ಮದ ಸಮಾನತ್ವದ ತತ್ವಗಳೂ ವಿಗ್ರಹಗಳೂ ಸಾಮಾನ್ಯರ ಮನಸ್ಸನ್ನು ಆಕರ್ಷಿಸಿದರೂ ಹಳೆಯಮತದ ವಿಷಯವಾಗಿ ಮನಸ್ಸಿನಲ್ಲಿ ನೆಟ್ಟಿದ್ದ ಅಭಿಮಾನದ ಬೇರುಗಳನ್ನು ತೀರಾ ಕಿತ್ತಿ ಬಿಸುಟಲು ಜಪಾನಿಗಳು ಚಡಪಡಿಸಲಾರಂಭಿಸಿದರು; ಈ ಸಂಗತಿಯು ಬೌದ್ಧ ಭಿಕ್ಷುಗಳಿಗೆ ತಿಳಿಯಿತು. ಆದುದರಿಂದ ಭಾರತ ವರ್ಷದಿಂದ ಅಲ್ಲಿಗೆ ಬಂದಿದ್ದ ಬೋಧಿಸೇನನೆಂಬ ಸನ್ಯಾಸಿಯೂ ಕೋರಿಯಾ ದೇಶದ ರಾಜಮನೆತನಕ್ಕೆ ಹೊಂದಿದ ಗ್ಯೋಗಿ ಎಂಬ ಸನ್ಯಾಸಿಯೂ ತಮ್ಮ ತಮ್ಮ ಪ್ರವಾಸದ ಅನುಭವಗಳಿಂದ ಪ್ರೇರಿತರಾಗಿ ಹಳೆಯಮತದೊಂದಿಗೆ ಸ್ನೇಹ ಬೆಳೆಸಿದರೆ ವಿನಾ ಗತ್ಯಂತರವಿಲ್ಲೆಂದು ಬಗೆದರು. ಷಿಂಟೋಮತದ ದೇವತೆಗಳಿಗೂ ಮಹಾಯಾನ ದೇವತೆಗಳಿಗೂ ಹತ್ತಿರದ ಸಂಬಂಧವನ್ನು ಕಲ್ಪಿಸಿ ರಾಜಧಾನಿಯಾಗಿದ್ದ ನಾರಾ ಎಂಬಲ್ಲಿ ಉಭಯ ಪಂಗಡದವರೂ ಸೇರಿ ಕ್ರಿ. ಶ. ೭೨೦ರಲ್ಲಿ ವೈರೋಚನ ದೇವನ ವಿಗ್ರಹವನ್ನು ಪ್ರತಿಷ್ಠಿಸಿದರು. ಈ ಉಭಯ ಪಂಗಡದವರು ಒಟ್ಟಾಗಿ ಸಾಹಸ ಸಹನೆಗಳಿಂದ ಬುದ್ಧನ ವಚನಗಳನ್ನೂ ತತ್ವಗಳನ್ನೂ ಸಹಕಾರದಿಂದ ಮನ್ನಿಸಲಾರಂಭಿಸಿದರು. ಬಳಿಕ ಜಪಾನದೇಶದ ಡೆಂಗ್ಯೋಡೆಯಿಷಿ, ಕೋಬೋಡೆಯಿಷಿ ಎಂಬ ಸನ್ಯಾಸಿಗಳು ಚೀನಾದೇಶದ ಭಿಕ್ಷುಗಳ ಪರಿಚಯ ಮಾಡಿಕೊಂಡರು. ಹಾಗು ಚೀನದೇಶದ 'ಹೀಯಾಸಾನ್' ಎಂಬಲ್ಲಿ ಮಾದರಿ ವಿಹಾರವನ್ನು ಸ್ಥಾಪಿಸಿದರು. ಕೋಬೋಡೆಯಿಷಿಯವರು ಚೀನಾದೇಶಕ್ಕೆ ಹಿಂದುಸ್ತಾನದಿಂದ ಬಂದಿದ್ದ ಅಮೋಘವಜ್ರನೆಂಬ ಭಾರತೀಯ ಭಿಕ್ಷುವಿನ ಶಿಷ್ಯನಾಗಿ ಮಂತ್ರಯಾನದಲ್ಲಿ ಪ್ರಾವೀಣ್ಯ ಸಂಪಾದಿಸಿದನು. ಮುಂದೆ ಇವನೇ ಜಪಾನಿಗೆ ಹೋಗಿ ಕವಚ, ವಜ್ರ ಮುಂತಾದ ಬೌದ್ಧಮತದ ಪ್ರಯೋಗಗಳನ್ನು ಜಪಾನಿನಲ್ಲಿ ಪ್ರಚುರಪಡಿಸಿದನು. ಹಾಗೂ 'ಕೊಯಾಸಾನ್' ಎಂಬಲ್ಲಿ ವಿಹಾರವನ್ನು ಸ್ಥಾಪಿಸಿದನು.

ಕ್ರಿ. ಶ. ದ ೬೫೦ ರಿಂದ ೧೧೦೦ ರವರೆಗೆ ಬೌದ್ಧರ ವಿಹಾರಗಳು ರಾಜರ ಸಹಾಯದಿಂದಲೂ ಭಕ್ತಾದಿಗಳ ದಾನಧರ್ಮಗಳಿಂದಲೂ ಸಂಪತ್ತಿನಿಂದಲೂ ಅಭಿವೃದ್ಧಿಯಾದವು. ಹಿಂದುಸ್ತಾನದಲ್ಲಿ ಬೌದ್ಧ ಭಿಕ್ಷುಗಳು ನಡತೆ, ಆಚಾರವಿಚಾರಗಳಲ್ಲಿ ಕೀಳಾದಂತೆ ಅಲ್ಲಿಯೂ ಆದರು. ಆಗ ಧರ್ಮದ ಅವನತಿಯಾಗುವ ಪ್ರಸಂಗವು ಒದಗಿತು. ಈ ಕಠಿಣ ಪ್ರಸಂಗದಲ್ಲಿ ಅನೇಕರು ಮಹನೀಯರು ಉದಯಿಸಿ ೧೨೦೦ ರ ಸುಮಾರಕ್ಕೆ ಬೌದ್ಧ ಧರ್ಮದಲ್ಲಿ ಮತ್ತೆ ಮಾಪಾಡು ಮಾಡಿಕೊಂಡು ಜನಸೇವೆಯಿಂದಲೇ ಅಂತಃಕರಣವು ಶುದ್ಧವಾಗಿ ಜ್ಯೋತಿರ್ದರ್ಶನವಾಗುವದೆಂದು ಬಗೆದರು. ಇನ್ನು ಮುಂದೆ ಪಾಂಡಿತ್ಯ ಜಾತಿಗಳಿಗೆ ಬೆಲೆಗೊಡದೆ ಇಂದ್ರಿಯ ನಿಗ್ರಹ, ಶಾಂತಿ, ಕ್ಷಮೆ, ಧೈರ್ಯ ಇವುಗಳ ಬೆಳವಣಿಗೆ

ಪೂಗತಕ್ಕದ್ದೆಂದು ಧ್ಯಾನಮಾರ್ಗದವರು ಬೋಧಿಸಿದರು. ಇಷ್ಟರಲ್ಲಿ ಪಾಶ್ಚಾತ್ಯರು ಅಲ್ಲಿಗೆ ಬರತೊಡಗಿದರು. ಆವೊತ್ತಿಗೆ ಬೌದ್ಧಧರ್ಮವು ಸುಧಾರಿಸಿ ಉತ್ತಮ ಸ್ಥಿತಿಯನ್ನು ಹೊಂದಿತ್ತು.

ಪಾಶ್ಚಾತ್ಯರು ತಮ್ಮ ದೇಶಕ್ಕೆ ಆಗಮಿಸಿದರೆ ತಮ್ಮ ನೈಜವಾದ ಸಂಸ್ಕೃತಿಯು ನಾಶವಾದೀತೆಂದು ಜಪಾನಿಗಳು ಹೆದರಿ ಇತರ ದೇಶಗಳೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳಕೂಡದೆಂದು ಬಗೆದು ೩೦೦ ವರ್ಷಗಳ ವರೆಗೆ ಕೂಪಮಂಡೂಕವೃತ್ತಿಯನ್ನು ಕೈಕೊಂಡರು.

ಇಷ್ಟರಲ್ಲಿ ಷಿಂಟೋ ಮತವು ತಲೆಯೆತ್ತಹತ್ತಿತು. ಆಗ ಬೌದ್ಧರಿಗೆ ಭಯ ಹುಟ್ಟಿ ತಮ್ಮಲ್ಲಿ ಸೇರಿದ್ದ ಕಲ್ಮಷಗಳನ್ನೆಲ್ಲ ತೆಗೆದುಹಾಕಿದರು. ತ್ರಿಪಿಟಕವನ್ನು ಅಜ್ಞಾತವಾಕಿ ಮೂಲಗ್ರಂಥಗಳಲ್ಲಿ ಪ್ರತಿಪಾದಿತವಾದ ತತ್ವಗಳನ್ನೇ ಅವಲಂಬಿಸಿದರು. ಹೀಗೆ ಮಾಡಿದ್ದರಿಂದ ೧೮೮೯ ರಲ್ಲಿ ಜಪಾನಿನ ಪ್ರಜೆಗಳಿಗೆ ಧರ್ಮಸ್ವಾತಂತ್ರ್ಯವು ದೊರೆಯಿತು. ಷಿಂಟೋಮತ ಬೌದ್ಧಮತ, ಇತರ ಮತಗಳು ಇವೆಲ್ಲವುಗಳಿಗೂ ಪ್ರಚಾರಕಾರ್ಯದಲ್ಲಿ ಸಮಾನ ಹಕ್ಕುಗಳು ಬಂದವು.

ಇತ್ತಲಾಗಿ ಬೌದ್ಧಮತವು ಅಲ್ಲಿ ಬಲಗೊಳ್ಳುತ್ತಿದೆ ಎಂದೂ ಬುದ್ಧನ ವಚನಗಳಿಗೇ ಹೆಚ್ಚು ಮಹತ್ವವು ಪ್ರಾಪ್ತವಾಗಹತ್ತಿದೆ ಎಂದೂ ಎಲಿಯೆಟ್ ಇವರು ಅಭಿಪ್ರಾಯಪಟ್ಟಿದ್ದಾರೆ.

ಎಲಿಯೆಟ್ ಅವರು ೧೯೩೪ರಲ್ಲಿ ಕಾಲವಾದರು. ಇತ್ತೀತ್ತಲಾಗಿ ಅವರು ಬರೆದ "ಜಪಾನ ದೇಶದಲ್ಲಿ ಬೌದ್ಧಮತದ ಚರಿತ್ರೆ" ಎಂಬ ಪುಸ್ತಕವು ಪ್ರಕಟವಾಗತೊಡಗಿದೆ.

ಸರ ಚಾರಲ್ಸ್ ಎಲಿಯೆಟ್ ಎಂಬವರು ಬೌದ್ಧಧರ್ಮದ ವಿಷಯವಾಗಿ ಜಪಾನದೇಶದಲ್ಲಿ ಶೋಧಮಾಡಿ ಗೊತ್ತಾದ ವಿಷಯವನ್ನು ಆಸ್ಥೆಪೂರ್ವಕವಾಗಿ ಗ್ರಂಥರೂಪವಾಗಿ ಬರೆದಿರುವರು. ಈ ಸಂಗತಿಯಿಂದ ಯುರೋಪೀಯರಲ್ಲಿದ್ದ ಶೋಧಕಬುದ್ಧಿಯು ಪ್ರಕಟವಾಗುವಂತೆ ಅದೆ.

ಕನ್ನಡ "ವರ್ಧಪ್ರಾಯೋಜ" ಪರೀಕ್ಷೆ ೧೯೩೮

ಪರೀಕ್ಷೆಯ ತಾರೀಖು ಮತ್ತು ಸ್ಥಳ:—

೧೯೩೮ನೆಯ ಇಸವಿಯ ಜುಲಾಯಿ ತಿಂಗಳ **೭ನೆಯ ತಾರೀಖು** (**ಗುರುವಾರ**) ಮತ್ತು ಮುಂದಿನ ಎರಡು ದಿವಸಗಳಲ್ಲಿ ೧೨ ಗಂಟೆಯಿಂದ ಧಾರವಾಡ ಟ್ರೇನಿಂಗಸ್ಕೂಲಿನಲ್ಲಿ ಪರೀಕ್ಷೆಯು ನಡೆಯುವದು.

ಪರೀಕ್ಷೆಯ ವಿಷಯ ಮೊದಲಾದವು: —

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯಭಾಗಗಳ ಅರ್ಥವನ್ನು ಹೇಳಲಿಕ್ಕೂ ಅವುಗಳಿಗೆ ಟೀಕೆಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಅಥವಾ ಹೊಸಗನ್ನಡದಲ್ಲಿ ನಿಬಂಧಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಧಸಾಹೇಬರು ರಚಿಸಿರುವ ಪ್ರಾಕ್ಟ್ಯಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು. ಉಮೇದವಾರರು ಪರೀಕ್ಷೆಗಿರುವ ಒಟ್ಟು ವಿಷಯಗಳಲ್ಲಿ ೧೦೦ಕ್ಕೆ ೭೫ಕ್ಕಿಂತ ಕಡಿಮೆಯಿಲ್ಲದಷ್ಟು ಗುಣಗಳನ್ನು ಪಡೆದಿರಬೇಕು ಮತ್ತು ಯಾವದೊಂದು ವಿಷಯವನ್ನು ತೀರ ಅಸಮಾಧಾನಕರವಾಗಿ ಬರೆಯಲು ನಾಪಾಸಾಗಿರಕೂಡದು.

ಪರೀಕ್ಷೆಯ ಇನಾಮು ಮೊದಲಾದವು:—

ಮೇಲೆ ಹೇಳಿದ ವಿಷಯಗಳಲ್ಲಿ ಪರೀಕ್ಷೆಕೊಟ್ಟು ಆ ನಿಯಮಗಳಿಗನುಸಾರವಾಗಿ ಪಾಸಾಗಿ ಮೊದಲನೆಯ ನಂಬರು ಪಡೆದ ದಕ್ಷಿಣಭಾಗದೊಳಗಿನ ಉಮೇದವಾರರಿಗೆ ೬೦ ರೂ. ಇನಾಮು ದೊರೆಯುವದು.

ಅರ್ಜಿಮಾಡತಕ್ಕ ಅವಧಿ:—

ಪರೀಕ್ಷೆಗೆ ಕೂಡಲಪೇಕ್ಷಿಸುವವರು ೧೯೩೮ನೆಯ ಇಸವಿಯ ಜೂನ ತಿಂಗಳ **೩೦ನೆಯ** ತಾರೀಖಿನೊಳಗಾಗಿ ಮೈ ಎಜ್ಯುಕೇಶನಲ್ ಇನ್ಸಪೆಕ್ಟರ ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅರ್ಜಿಯನ್ನು ಪಾಡತಕ್ಕದ್ದು.

ಪತ್ರಗಳ ಸಾರಾಂಶ

೧. **ನರೇಂದ್ರ (ಜಿಲ್ಲಾ ಧಾರವಾಡ)** ಶಾಳಾ ಹೆಡ್‌ಮಾಸ್ತರರಾದ ಎಂ. ಎ. ಬಾ. ಹಾವಳಿ ಅವರಿಂದ ಬರೆಯಲ್ಪಟ್ಟದ್ದು:—"ಈ ಶಾಲೆಯ ವಾರ್ಷಿಕ ರೀಕ್ಷೆಯ ಇನಾಮಿನ ಸಮಾರಂಭವು ೨೭–೨-೧೯೩೭ನೆಯ ದಿವಸ ಜರುಗಿತು. ಸಮಾರಂಭದ ಸಭೆಗೆ ಅಲ್ಲಿಯ ಶ್ರೀ. ಪಟ್ಟದಸ್ವಾಮಿಗಳೂ ದೇಸಾಯಿ ದೇಶ ಂಯವರು ಆಗಮಿಸಿದ್ದರು. ಒನೆಯ ಸುಪರ್ವಾಯಿಝರ ಸಾ. ರು ಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪದ್ಧತಿಗೆ ಸರಿಯಾಗಿ ಭಾಷಣಗಳಾದ ಬಳಿಕ ನ್ನಾಗಿ ಪಾಸಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪುಸ್ತಕ, ಪಾಟಿ, ಖಣ ಂತಾದವುಗಳು ಅಧ್ಯಕ್ಷರ ಹಸ್ತದಿಂದ ಇನಾಮಾಗಿ ಕೊಡಲ್ಪಟ್ಟವು. ಂಬತ್ತಾಸಗಳು ಹಂಚಲ್ಪಟ್ಟವು.

ಈ ಕಾಲಕ್ಕೆ ಶ್ರೀ. ರಂಗರಾವ ದೇಶಪಾಂಡೆ ಅವರು ೧೦ ರೂ. ಗಳನ್ನು ಲೆಯು ಇನಾಮಿನ ಸಮಾರಂಭದ ಸಲುವಾಗಿ ಕೊಟ್ಟರು. ಈ ಸಂಗತಿಯು ಸ್ತುತ್ಯವು.

೨. **ಗರ್ಲ್ ಶಾಳಾ ಕರ್ಜಿಗಿ (ಜಿ. ಧಾರವಾಡ)** ಇಲ್ಲಿಯ ಅಸಿ. ಾಸ್ಟರ ಕೃ. ವೆ. ವಡವಿ ಅವರು ಬರೆದದ್ದು: —" ಇಲ್ಲಿಯ ಸ್ಕೂಲಕಮೀಟಿಯ ಂಬರರಾದ ಶ್ರೀ ರಾಮಚಂದ್ರರಾವ ಹನುಮಂತರಾವ ಜೋಗಳೇಕರ ಅವರು ಮ್ಮ ಸಾಲೆಗೆ ತಾ. ೨೦-೨-೧೯೩೭ನೆಯ ದಿವಸ ಆಗಮಿಸಿ ಇಯತ್ತೈಗಳ ಅಭ್ಯಾಸ ನ್ನು ನೋಡಿ ಸಂತೋಷಪಟ್ಟು ಈ ಶಾಲೆಯಲ್ಲಿ ವೇಳಾಪತ್ರಿಕೆಯಂತೆ ಅಭ್ಯಾಸ ಮಾಡಿಸಲಿಕ್ಕೆ ಗಡಿಯಾಳವು ಸಹಕಾರಿಯಾಗಲೆಂದು ಹೊಸ ಗಡಿಯಾರವನ್ನು ಕೊಟ್ಟರು. ಸ್ತುತ್ಯವು.

ಪತ್ರಗಳ ಸಾರಾಂಶ

೧. **ನರೇಂದ್ರ (ಜಿಲ್ಲಾ ಧಾರವಾಡ)** ಶಾಳಾ ಹೆಡ್‌ಮಾಸ್ತರರಾದ ವಿ. ಕೃ. ನಾ. ಹಾವಳಿ ಅವರಿಂದ ಬರೆಯಲ್ಪಟ್ಟದ್ದು:—"ಈ ಶಾಲೆಯ ವಾರ್ಷಿಕ ಪರೀಕ್ಷೆಯ ಇನಾಮಿನ ಸಮಾರಂಭವು ೨೭-೨-೧೯೩೭ನೆಯ ದಿವಸ ಜರುಗಿತು. ಈ ಸಮಾರಂಭದ ಸಭೆಗೆ ಅಲ್ಲಿಯ ಶ್ರೀ. ಪಟ್ಟದಸ್ವಾಮಿಗಳೂ ದೇಸಾಯಿ ದೇಶ ಶಾಲೆಯವರು ಆಗಮಿಸಿದ್ದರು. ಒನೆಯ ಸುಪರ್ವಾಯಿಝರ ಸಾ. ರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪದ್ಧತಿಗೆ ಸರಿಯಾಗಿ ಭಾಷಣಗಳಾದ ಬಳಿಕ ಸನ್ಮಾನಕ್ಕೆ ಪಾತ್ರವಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪುಸ್ತಕ, ಪಾಟಿ, ಖಣ ಮುಂತಾದವುಗಳು ಅಧ್ಯಕ್ಷರ ಹಸ್ತದಿಂದ ಇನಾಮವಾಗಿ ಕೊಡಲ್ಪಟ್ಟವು. ಸಿಹಿಪದಾರ್ಥಗಳು ಹಂಚಲ್ಪಟ್ಟವು.

ಈ ಕಾಲಕ್ಕೆ ಶ್ರೀ. ರಂಗರಾವ ದೇಶಪಾಂಡೆ ಅವರು ೧೦ ರೂ. ಗಳನ್ನು ಶಾಲೆಯ ಇನಾಮಿನ ಸಮಾರಂಭದ ಸಲುವಾಗಿ ಕೊಟ್ಟರು. ಈ ಸಂಗತಿಯು ಸ್ತುತ್ಯವು.

೨. **ಗರ್ಲ್ ಶಾಳಾ ಕರ್ಜಗಿ (ಜಿ. ಧಾರವಾಡ)** ಇಲ್ಲಿಯ ಅಸಿ. ಮಾಸ್ತರ ಕೃ. ವೆ. ವಡವಿ ಅವರು ಬರೆದದ್ದು:—"ಇಲ್ಲಿಯ ಸ್ಕೂಲಕಮೀಟಿಯ ಮೆಂಬರರಾದ ಶ್ರೀ ರಾಮಚಂದ್ರರಾವ ಹನುಮಂತರಾವ ಜೋಗಳೇಕರ ಅವರು ನಮ್ಮ ಸಾಲೆಗೆ ತಾ. ೨೦-೨-೧೯೩೭ನೆಯ ದಿವಸ ಆಗಮಿಸಿ ಇಯತ್ತೆಗಳ ಅಭ್ಯಾಸವನ್ನು ನೋಡಿ ಸಂತೋಷಪಟ್ಟು ಈ ಶಾಲೆಯಲ್ಲಿ ಮೇಳಾಪತ್ರಿಕೆಯಂತೆ ಅಭ್ಯಾಸ ನಡೆಸಲಿಕ್ಕೆ ಗಡಿಯಾಳವು ಸಹಕಾರಿಯಾಗಲೆಂದು ಹೊಸ ಗಡಿಯಾರವನ್ನು ಕೊಟ್ಟರು. ಸ್ತುತ್ಯವು.

Reg. No. B. 369

ಇಂತಹ ಇನ್ನೊಂದು ಪುಸ್ತಕವೇ ಇಲ್ಲ!
ಶಿಕ್ಷಕರಿಗೆ ಭಾಷಾವಿಷಯ ಕಲಿಸುವ ಅಪೂರ್ವ ಸಾಧನ :

ಕನ್ನಡ ನುಡಿಯು ಹುಟ್ಟು.

ಬರೆದವರು : ಶಂ. ಬಾ. ಜೋಶಿ

ಕನ್ನಡ ಶಬ್ದಗಳಲ್ಲಿ ಹುದುಗಿಕೊಂಡಿರುವ ಅರ್ಥದ ಆಳವು ಗೊತ್ತಿಲ್ಲ ದಿಂ
ಅಥವಾ ಯೋಗ್ಯ ಶಬ್ದಗಳು ಹೊತ್ತಿಗೆ ದೊರೆಯದ್ದರಿಂದ ಆಗುತ್ತಿದ್ದ ಒ[illegible]ಟ
ಇನ್ನು ಮೇಲೆ ಅವಕಾಶವೇ ಇಲ್ಲ. ಈ ಪುಸ್ತಕದ ಅಭ್ಯಾಸದಿಂದ ಕನ್ನಡ [illegible]ಯ
ಗುಟ್ಟು ಗೊತ್ತಾಗಿ ಭಾಷೆಯ ಮೇಲೆ ಪ್ರಭುತ್ವವು ಬಾರದೆ ಇರಲಾರದು.

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಇದೊಂದು ಮಹೋಪಕಾರಿಯಾದ [illegible]ಥ

ಬೆಲೆ— ೧೨ ಆಣೆ ಮಾತ್ರ

ಮಾಧವ ಬಲ್ಲಾಳ ಬಂಧುಗಳು,
ಸಾಧನಕೇರಿ, ಧಾರವಾಡ

ಮೇ-ಜೂನ-೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ಸಂ.	ವಿಷಯ	ಪುಟ.
ಮೇ—		
೧	ಮುಂಬಯಿ ಇಲಾಖೆಯಲ್ಲಿ ವಿದ್ಯಾಪ್ರಸಾರವು	೧
೨	ಭೂಗೋಲ ಶಿಕ್ಷಣ	೪
೩.	ಶಾಲೆಗಳಲ್ಲಿ ಡ್ರಿಲ್-ಶಿಕ್ಷಣದ ಮಹತ್ವ	೯
೪.	ಕನ್ನಡ ನಾಡಿನ ಇತಿಹಾಸ	೧೪
೫.	೧೯೩೬ನೆಯ ಇಸ್ವಿಯ ಏಪ್ರಿಲ್ ತಿಂಗಳಲ್ಲಾದ ಗಂಡು ಮಕ್ಕಳ ಟ್ರೇ. ಸ್ಕೂಲಿನ ವಾರ್ಷಿಕ ಪರೀಕ್ಷೆಯ ಪರಿಣಾಮವು	೨೧
೬.	೧೯೩೬ನೆಯ ಇಸ್ವಿಯ ಮಾರ್ಚ ತಿಂಗಳಲ್ಲಾದ ಪೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮವು	೨೫
ಜೂನ—		
೧.	ಸಮ್ಮಿಚಕ್ರವರ್ತಿಗಳಾದ ೬ನೆ ಜಾರ್ಜ ಬಾದಶಹರವರ ರಾಜ್ಯಾರೋಹಣ ಸಮಾರಂಭವು	೧
೨	ಆರನೆಯ ಜಾರ್ಜ ಸಾರ್ವಭೌಮರ ಚರಿತ್ರೆ	೧೦
೩	ಪಳ್ಳಿಗಳೂ ಶಿಲ್ಪಕರ ಯತ್ನಗಳೂ	೧೧
೪	ಇಂಗ್ಲಂಡ ದೇಶದ ಒಂದು ಪಳ್ಳಿಯ ಶಾಲೆಯು	೧೩
೫.	೧೯೩೬ನೆಯ ಇಸ್ವಿಯಲ್ಲಾದ ಕನ್ನಡ ಗಂಡುಮಕ್ಕಳ ವ್ಹ ಫಾ ಪರೀಕ್ಷೆಯ ಪರಿಣಾಮವು	೧೭

Printed by K R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar at his Office.

ವಾಣಿವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು

	ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಿಕೃತ)	೦– ೮–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪–೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೨–೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩–೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೨–೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦– ೨–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ.	೦– ೪–೦
,, ೩ನೇ ,,	೦– ೫–೦
,, ೪ನೇ ,,	೦– ೮–೦
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೫–೦
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦– ೬–೦
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	೦– ೨–೦
ಧಾರವಾಡ ಜಿಲ್ಲಾ ,, (ಕುರಡೀಕೃತ)	೦– ೫–೦
ಹಿಂದುಸ್ತಾನ ಭೂಗೋಲು (ಮಗದಾಲಕೃತ)	೦– ೮–೦
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧– ೦–೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦– ೫–೦
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೪–೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–೦
ಭೂಮಿತಿ (ಚಂದಾವರಕರ ಕೃತ)	೦– ೨–೦
ಸರಸ್ವತೀ ವಿಜಯ (ಬೂದೀಹಾಳಕೃತ)	೦– ೪–೦

ಪತ್ರೆ:— ವಿ. ಆರ್. ಶಿವನಾಗಪ್ಪಾ,
ಬುಕ್‌ಸೆಲರ, ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಜಿ. ಎ.,

ಸಂಪುಟ ೭೬	ಮೇ ೧೯೩೭	ವರ್ಷ ೯ ಸಂ. ೨

ಮುಂಬಯಿ ಇಲಾಖೆಯಲ್ಲಿ ವಿದ್ಯಾಪ್ರಸಾರವು

೧೯೩೫-೧೯೩೬

೧೯೩೬ನೇ ಇಸ್ವಿಯ ಎಪ್ರಿಲ್ ತಿಂಗಳ ಮೊದಲನೆಯ ತಾರೀಖಿನಿಂದ ಸಿಂಧ ಪ್ರಾಂತವು ಮುಂಬಯಿ ಇಲಾಖೆಯಿಂದ ಬೇರೆಯಾಗಿ ಸ್ವತಂತ್ರ ಪ್ರಾಂತವೆಂದು ಗಣಿಸಲ್ಪಡುವದರಿಂದ ಸಿಂಧಪ್ರಾಂತವನ್ನೊಳಕೊಂಡ ಮುಂಬಯಿ ಇಲಾಖೆಯ ವರದಿಯಲ್ಲಿ ಇದೇ ಕೊನೆಯದಾಗುವದು.

ಶಿಕ್ಷಣ ಸಂಸ್ಥೆಗಳು:— ಈ ವರ್ಷದ ಅಂತ್ಯಕ್ಕೆ ನಮ್ಮ ಇಲಾಖೆಯಲ್ಲಿ ಒಟ್ಟಿಗೆ ೧೭೩೧೪ ಶಿಕ್ಷಣ ಸಂಸ್ಥೆಗಳಿದ್ದು – ಕಳೆದ ವರ್ಷಕ್ಕಿಂತ ೩೮೭ ಸಂಸ್ಥೆಗಳು ಜಾಸ್ತಿಗಿರುವವು. ಇವುಗಳಲ್ಲಿ ೧೬೦೯೭ ಸಂಸ್ಥೆಗಳು ಸರಕಾರದಿಂದ ಮಾನ್ಯವಾದವು ಗಳಿದ್ದು ಅವುಗಳ ವರ್ಗೀಕರಣವು ಈ ರೀತಿಯಾಗಿರುವದು.

೧೭ ಆರ್ಟ್ಸ್ ಹಾಗು ಸಾಯಿನ್ಸ ಕಾಲೇಜಗಳು.
೧೩ ಔದ್ಯೋಗಿಕ ಕಾಲೇಜಗಳು
೭೮೩ ಮಾಧ್ಯಮಿಕ ಶಾಲೆಗಳು.
೧೫೬೮೪ ಪ್ರಾಥಮಿಕ ಶಾಲೆಗಳು.

ನಮ್ಮ ಮುಂಬಯಿ ಇಲಾಖೆಯಲ್ಲಿ ಹಳ್ಳಿಗಳೂ ಪಟ್ಟಣಗಳೂ ಸೇರಿ ೫೬೪೯ ಇದ್ದು ಅವುಗಳಲ್ಲಿ ೧೦೭೫ ಊರುಗಳಲ್ಲಿ ಮಾತ್ರ ಶಾಲೆಗಳಿರುವವೆಂದು ಗೊತ್ತಾಗಿದೆ ಮತ್ತು ೧೧.೫ ಚೌರಸ ಮೈಲುಗಳಿಗೆ ಒಂದು ಸಾಲೆಯಂತೆ ಲೆಕ್ಕ ಹೊರಟಿದೆ.

ವಿದ್ಯಾರ್ಥಿಗಳು— ಈ ವರ್ಷದ ಅಂತ್ಯಕ್ಕೆ ೧೪೭೬೪೪೦ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿದ್ದರು. ಕಳೆದ ವರ್ಷಕ್ಕಿಂತ ಈ ವರ್ಷ ೫೪೨೫ ವಿದ್ಯಾರ್ಥಿಗಳು ಹೆಚ್ಚಾಗಿರುವರು. ಇವರಲ್ಲಿ ೧೪೩೦೪೬ ವಿದ್ಯಾರ್ಥಿಗಳು (೧೦೯೦೦೫ ಗಂಡು, ೩೯೦೪೦ ಹೆಣ್ಣು, ಸರಕಾರದಿಂದ ಮಾನ್ಯವಾದ ಶಾಲೆಗಳಲ್ಲಿ ಓದುತ್ತಿದ್ದರು.

ಈ ವರ್ಷದಲ್ಲಿ ೪೨೧೬೫೯೦ ರೂ. ಗಳು ಶಿಕ್ಷಣಕಾರ್ಯಕ್ಕಾಗಿ ವೆಚ್ಚವಾದವು. ಅವುಗಳಲ್ಲಿ ೧೭೭೪೧೬೩ ರೂ. ಗಳು ಸರಕಾರೀ ಟ್ರೆಝರಿಯಿಂದ ಕೊಡಲ್ಪಟ್ಟವು. ಮಿಕ್ಕವು ಬೇರೆ ಬೇರೆ ಬೋರ್ಡುಗಳು, ಫೀ ಮತ್ತು ಇತರ ಉತ್ಪನ್ನಗಳಿಂದ ದೊರೆದವು. ಈ ಒಟ್ಟು ರಕಮಿನಲ್ಲಿ ಕೇವಲ ಪ್ರಾಥಮಿಕ ಶಿಕ್ಷಣಕ್ಕಾಗಿಯೇ ೧೧೦೧೬೩೫ ರೂಪಾಯಿಗಳು ವೆಚ್ಚವಾಗಿವೆ.

ಈ ವರ್ಷಗಳಲ್ಲಿ ಅನೇಕ ಮಹತ್ವದ ಯೋಜನೆಗಳನ್ನು ಸರಕಾರದವರು ಕೈಕೊಂಡಿದ್ದರು. ಅವುಗಳಲ್ಲಿ, ದೇಶಭಾಷೆಯ ಟ್ರೇನಿಂಗ ಕಾಲೇಜಗಳ ಅಭ್ಯಾಸ ಪತ್ರಿಕೆಯನ್ನು ಸುಧಾರಿಸಿ ಬದಲಿಸಿದ್ದು ಮತ್ತು ಟ್ರೇನಿಂಗ ಕಾಲೇಜಗಳನ್ನು ಬೆಳಿಸಿದ್ದು ಇವೇ ಪ್ರಮುಖ್ಯವಾದವು. ಇದರಿಂದ ಹೆಚ್ಚು ಜನ ಟ್ರೇಂಡ ಪ್ರಾಥಮಿಕ ಶಿಕ್ಷಕರು ತಯಾರಾಗಲು ಅನುಕೂಲವಾಯಿತಲ್ಲದೆ ಈ ಹೊಸ ಶಿಕ್ಷಕರ ಯೋಗ್ಯತೆಯೂ ಕಾಲಮಾನಕ್ಕನುಗುಣವಾಗಿ ಬೆಳಿಸಲ್ಪಟ್ಟಿಂತಾಗಿದೆ. ಮತ್ತು ಈ ಹೊಸ ಅಭ್ಯಾಸ ಪತ್ರಿಕೆಯು ಸಮಾಧಾನಕರವಾಗಿದೆಯೆಂದು ಅನುಭವದಿಂದ ಸಿದ್ಧವಾದಂತಾಗಿದೆ. ಶಾರೀರಿಕ ಶಿಕ್ಷಣವನ್ನು ಕುರಿತು ಹೊಸದೊಂದು ಯೋಜನೆಯು ದೇಶ ಭಾಷೆಗಳಲ್ಲಿ ಸಿದ್ಧವಾಗುತ್ತಲಿದ್ದು ಅದು ಶಿಕ್ಷಕರಿಗೆ ತುಂಬಾ ಪ್ರಯೋಜನಕಾರಿಯಾಗಬಹುದೆಂದು ತಿಳಿಯಲಾಗಿದೆ.

ಪ್ರಾಥಮಿಕ ಶಿಕ್ಷಕರ ಪಗಾರದ ಹೊಸ ಯೋಜನೆಯು ಅಮಲಿನಲ್ಲಿ ಬಂದಿದ್ದು ಅದರಿಂದ ಶಿಕ್ಷಕರ ಕೆಲಸಕ್ಕೆ ಬೇಕಾಗುವ ಉಮೇದವಾರರನ್ನು ದೊರಕಿಸಲಿಕ್ಕೆ ತೊಂದರೆಯೇನೂ ಕಂಡು ಬರಲಿಲ್ಲ. ಎಂದರೆ ಹೊಸ ಸ್ಕೇಲಿನಂತೆ ಪಗಾರು ತೆಗೆದುಕೊಂಡು ಕೆಲಸ ಮಾಡಲಿಕ್ಕೆ ಬೇಕಾದಷ್ಟು ಉಮೇದವಾರರು ಸಿದ್ಧರಿರುವರೆಂದು ಕಂಡುಬಂತು.

ಒತ್ತಾಯದ ಪ್ರಾಥಮಿಕ ಶಿಕ್ಷಣವು ಇನ್ನೂ ಹೆಚ್ಚಾಗಿ ಪ್ರಸಾರವಾಗಿಲ್ಲವೆಂದೇ ಹೇಳಬೇಕಾಗಿದೆ. ಇದಕ್ಕೆ ಹಣದ ಕೊರತೆಯೇ ಪ್ರಬಲವಾದ ತೊಂದರೆಯಾಗಿದೆ. ಅಲ್ಲದೆ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಿದ ಪ್ರದೇಶಗಳಲ್ಲಿಯೂ ಕೂಡ ವಿದ್ಯಾರ್ಥಿಗಳ ಸಂಖ್ಯೆಯು ಹೇಳಿಕೊಳ್ಳುವಷ್ಟು ಹೆಚ್ಚಾದಂತೆ ಕಂಡುಬರಲಿಲ್ಲ.

ಒಟ್ಟಿಗೆ ಶಿಕ್ಷಣ ಪ್ರಸಾರದ ದೃಷ್ಟಿಯಿಂದ ನೋಡಿದರೆ ಅದು ಸಮಾಧಾನಕರವಾಗಿದ್ದಂತೆ ಕಂಡುಬಂದರೂ ಸಾಮಾನ್ಯ ಜನತೆಯ ಶಿಕ್ಷಣಕಾರ್ಯವನ್ನು ಒಪ್ಪಿಕೊಂಡಿರುವ ಸ್ಥಾನಿಕ ಸಂಸ್ಥೆಗಳು ವಿಚಾರಮಾಡತಕ್ಕ ಮಾತುಗಳು ಇನ್ನೂ ಹಲಕೆಲವು ಇದ್ದೇ ಇರುವವು.

ನಮ್ಮ ಇಲಾಖೆಯಲ್ಲಿ ಹತ್ತುಸಾವಿರಕ್ಕಿಂತ ಹೆಚ್ಚು ಜನವಸತಿಯಿರುವ ೨೫೯ ಹಳ್ಳಿಗಳಲ್ಲಿ ಇನ್ನೂ ಪ್ರಾಥಮಿಕ ಶಾಲೆಗಳಾಗಿಲ್ಲ. ಆದರೆ ಎಷ್ಟೋ ಶಾಲೆಗಳಲ್ಲಿ ಶಾಲೆಯು ನಡೆಯಲಿಕ್ಕೆ ಬೇಕಾಗುವಷ್ಟು ವಿದ್ಯಾರ್ಥಿಗಳೇ ಇಲ್ಲದ್ದರಿಂದ ಆ ಶಾಲೆಯ ಸಲುವಾಗಿ ಮಾಡುವ ವೆಚ್ಚವು ವ್ಯರ್ಥವಾಗುತ್ತಿದೆ. ಮತ್ತು ಎಷ್ಟೋ ಊರುಗಳಿಗೆ ಶಾಲೆಯ ಆವಶ್ಯಕತೆಯೇ ಇಲ್ಲವೆಂದು ಕಂಡುಬಂದಿರುವದು. ಸ್ಥಾನಿಕ ಸಂಸ್ಥೆಗಳು ಇಂಥ ಶಾಲೆಗಳನ್ನು ಮೇಲೆ ಹೇಳಿದಂಥ ದೊಡ್ಡ ಊರುಗಳಿಗೆ ನರ್ಗಾಯಿಸಿದರೆ ಒಳ್ಳೇ ಅನುಕೂಲವಾಗುತ್ತಿತ್ತು.

ಪ್ರಾಥಮಿಕ ಶಾಲೆಗಳಿಗಾಗಿ ವೆಚ್ಚವಾಗುವ ಹಣದಲ್ಲಿ ಬಹುಭಾಗವು ವ್ಯರ್ಥವಾಗುತ್ತಿದೆಯೆಂದು ಕಂಡುಬಂದಿದೆ. ಒಟ್ಟು ೧೦೦ರಲ್ಲಿ ೩೧ ರಷ್ಟು ವಿದ್ಯಾರ್ಥಿಗಳು ಬಿನ್ ಇಯತ್ತೆಯಲ್ಲಿ ಇರುವರು, ಮತ್ತು ಬಿನ್ ಇಯತ್ತೆಗೆ ಬಂದ ಈ ವಿದ್ಯಾರ್ಥಿಗಳಲ್ಲಿ ೧೦೦ರಲ್ಲಿ ೧೧ರಷ್ಟು ಮಾತ್ರ ಳನೆಯ ಇಯತ್ತೆಗೆ ಮುಟ್ಟುವರು; ಅರ್ಧದಷ್ಟು ಮೊವಲನೆಯ ಇಯತ್ತೆಗೆ ಹೋಗುವರು. ೧೯೩೪–೩೫ ರಲ್ಲಿ ಬಿನ್ ಇಯತ್ತೆಯಲ್ಲಿದ್ದ ೪೧೦೦೦೦ ವಿದ್ಯಾರ್ಥಿಗಳಲ್ಲಿ ೨೨೧೦೦೦ ವಿದ್ಯಾರ್ಥಿಗಳು ಮಾತ್ರ ೧೯೩೫–೩೬ ರಲ್ಲಿ ೧ನೆಯ ಇಯತ್ತೆಗೆ ಹೋಗಿದ್ದರು. ಇದಕ್ಕೆ ವಿದ್ಯಾರ್ಥಿಗಳು ವರ್ಷಾನುವರ್ಷ ಕ್ರಮವಾಗಿ ಶಾಲೆಗೆ ಬಾರದಿರುವದೂ ವರ್ಷದಲ್ಲಿ ಬೇಕಾದಾಗ ಶಾಲೆಗೆ ಬಂದರೂ ಬಿನ್ ಇಯತ್ತೆಗೆ ಹೆಸರು ಹಚ್ಚಿಕೊಳ್ಳುವ ರೂಢಿಯಿರುವದೂ ಕಾರಣವೆನಿಸುತ್ತಿದ್ದರೂ ಶಿಕ್ಷಕರು ಇದಕ್ಕೆ ಬಹ್ವಂಶದಿಂದ ಕಾರಣರಾಗಿರುವರು. ಟ್ರೇಂಡರಾದ ಯೋಗ್ಯ ಅನುಭವಿಕ ಶಿಕ್ಷಕರೇ ಬಿನ್ ಇಯತ್ತೆಯನ್ನು ಕಲಿಸಬೇಕೆಂದು ಒತ್ತಾಯ ಮಾಡುತ್ತಿದ್ದರೂ ಇನ್ನೂ ಬಹುಕಡೆಗೆ ಅಯೋಗ್ಯ ಅಂಟ್ರೇಂಡ ಶಿಕ್ಷಕರೇ ಈ ವರ್ಗ

ವನ್ನು ಕಲಿಸುತ್ತಿರುವರು. ಅಲ್ಲದೆ ಬಿನ್ ಇಯತ್ತೆಯ ಅಭ್ಯಾಸಕ್ರಮದ ತಿದ್ದು ಪಡಿ ಮಾಡುವದು, ಪಾಠಪುಸ್ತಕವನ್ನು ಬದಲಾಯಿಸುವದು ಮುಂತಾದ ಉಪಾಯ ಗಳಿಂದ ಈ ತರದ ನಿರರ್ಥಕ ವೆಚ್ಚವನ್ನು (Wastage) ಕಡಿಮೆ ಮಾಡಲು ಯತ್ನಿಸಲಾಗುವದು.

ಶಾಲೆಗಳ ಕಟ್ಟಡಗಳ ವಿಷಯದಲ್ಲಿಯೂ ಸ್ಥಾನಿಕ ಸಂಸ್ಥೆಗಳು ಸಾಕಷ್ಟು ಲಕ್ಷ ಪೂರೈಸದಿರುವದು ತೀರ ಅಯೋಗ್ಯವಾಗಿದೆಯೆನ್ನಬೇಕು. ಸಾಕಾಷಷ್ಟು ಹವೆ ಬೆಳಕುಗಳಿಲ್ಲದ, ಅಪಾಯಕರವಾದ ಗಾಳಿ ಬಿಸಿಲು ಮಳೆಯ ನೀರುಗಳಿಗೆ ಪ್ರತಿಬಂಧ ವಿಲ್ಲದ, ಅನಾರೋಗ್ಯಕರವಾದ, ಪ್ರಾಥಮಿಕ ಶಾಲಾಗೃಹಗಳು ಇಲಾಖೆಯತುಂಬ ಹೇರಳವಾಗಿವೆ. ದಕ್ಷಿಣಭಾಗದಲ್ಲಿಯಂತೂ ಈ ತರದ ಕಟ್ಟಡಗಳೇ ಹೆಚ್ಚು. ಇದ ರಿಂದ ಬಾಲಕರ ವಿದ್ಯಾಭ್ಯಾಸವು ಒತ್ತಟ್ಟಿಗಿರಲಿ ಅವರ ಆರೋಗ್ಯವೇ ಕೆಟ್ಟುಹೋಗುವ ಸಂಭವವು ಹೆಚ್ಚಾಗಿರುವದು. ಸ್ಥಾನಿಕ ಸಂಸ್ಥೆಗಳ ಚಾಲಕರು ಭವಿಷ್ಯದ ಜನತೆಯ ಆರೋಗ್ಯಕ್ಕೆ ಸಂಬಂಧಿಸಿದ ಈ ವಿಚಾರವನ್ನು ಆದಷ್ಟು ಬೇಗನೆ ಸಮಾಧಾನಕರ ವಾಗುವಂತೆ ಮಾಡಿ ನಿರ್ಣಯಿಸುವರೆಂದು ಆಶಿಸಲಾಗಿದೆ.

ಭೂಗೋಲ ಶಿಕ್ಷಣ

ಹಿಂದಿನ ಸಂಚಿಕೆಯಲ್ಲಿ ಭೂಗೋಲ ಶಿಕ್ಷಣವನ್ನು ಕುರಿತು ಬರೆದ ಲೇಖನದಲ್ಲಿ ಸಾಮಾನ್ಯವಾಗಿ ನಾವು ಶಾಲೆಗಳಲ್ಲಿ ಉಪಯೋಗಿಸುವ ಉಪಕರಣಗಳನ್ನೂ ಅವುಗಳ ಸರ್ವಸಾಧಾರಣ ಉಪಯೋಗವನ್ನೂ ವಿವರಿಸಿ ಭೂಗೋಲ ಶಿಕ್ಷಣದ ಧ್ಯೇಯ ವೇನಿರಬೇಕೆಂಬದನ್ನೂ ಹೇಳಿದೆವು. ಶಾಲೆಗಳಲ್ಲಿ ಕಲಿಸುವ ಭೂಗೋಲದ ಪಾಠಗಳಲ್ಲಿ ಯಾವ ವಿಷಯಗಳ ಸಮಾವೇಶವಾಗುವದು ಅವನ್ನು ಕಲಿಸುವದರಿಂದ ಬಾಲಕರ ಯಾವ ಮನಃಶಕ್ತಿಗಳು ಹೇಗೆ ವಿಕಾಸಗೊಳ್ಳುವವು ಮುಂತಾದುವನ್ನು ಈ ಲೇಖನ ದಲ್ಲಿ ಪರ್ಯಾಲೋಚಿಸಿದೆ.

ಹಳೆಯ ಪದ್ಧತಿಯಿಂದ ಭೂಗೋಲವನ್ನು ಕಲಿಸುವಾಗ ಬಾಲಕರ ಪಾಠ ಶಕ್ತಿಗೇ ಹೆಚ್ಚು ಚಾಲನೆ ದೊರೆಯುತ್ತಿರುವದೊಂದು ಗುರುತರವಾದ ದೋಷವೆಂದು ಹೇಳುವರು. ಭೂಗೋಲದ ವಿಷಯದಲ್ಲಿ ಕೆಲಕೆಲವು ಸಂಗತಿಗಳನ್ನು ಬಾಲಕರು ಪಾಠಮಾಡಿದ ಹೊರತು ಗತ್ಯಂತರವೇ ಇಲ್ಲ. ಕಾಲನಿರೂಪಣೆಯ ಇಸ್ಯೆಗಳು

ಇತಿಹಾಸವುಂದಿರದ ರಚನೆಗೆ ಬೇಕಾಗುವ ಇಟ್ಟಿಗೆಗಳಿಂದು ತಿಳಿಯಲ್ಪಡುವವು. ಅವನ್ನು ಬಾಲಕರು ಪಾಠಮಾಡದೆ ನೆನಪಿನಲ್ಲಿ ಹೇಗೆ ಇಟ್ಟುಕೊಳ್ಳುವರು? ಹಾಗೆಯೇ ಭಾಷಾಪಾಠ ಗಣಿತಪಾಠಗಳಲ್ಲಿಯೂ ಕೆಲಕೆಲವು ಮಾತುಗಳನ್ನು ಬಾಲಕರಿಂದ ಪಾಠಮಾಡಿಸಲೇಬೇಕಾಗುವದು. ಮಿಕ್ಕ ಪಾಠಗಳಲ್ಲಿಯಂತೆಯೇ ಭೂಗೋಲ ವಿಷಯದಲ್ಲಿಯೂ ಬಾಲಕರು ಪಾಠಮಾಡಬೇಕಾಗಿರುವ ಸಂಗತಿಗಳನ್ನು ಮೊದಲು ಚೆನ್ನಾಗಿ ತಿಳಿದುಕೊಂಡ ತರುವಾಯವೇ ಪಾಠಮಾಡಿದರೆ ಒಳಿತೆಂಬದನ್ನು ಶಿಕ್ಷಕರು ಮರೆಯಲಾಗದು.

ಆದರೂ ಕೇವಲ ಪಾಠಕ್ಕೇ ಪ್ರಾಧಾನ್ಯವಿರಕೂಡದೆಂಬ ವಿಚಾರವು ಆಧುನಿಕ ಶಿಕ್ಷಣಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಈ ಸಾರಿಯ ಪ್ರೌ. ಪರೀಕ್ಷೆಯ ಇತಿಹಾಸ ಭೂಗೋಲಗಳ ಪ್ರಶ್ನಿಕಾಗವಗಳನ್ನು ನೋಡಿದರೆ ಈ ಮಾತು ತಿಳಿಯ ಬಹುದು. ಅವುಗಳಲ್ಲಿ ಒಂದೆರಡು ಪ್ರಶ್ನೆಗಳಿಗೆ ಉತ್ತರಗಳನ್ನೂ ಅಲ್ಲಿಯೇ ಕೊಟ್ಟಿದ್ದು ಅವನ್ನು ಸಮನ್ವಯ ಮಾಡುವ ಕೆಲಸವನ್ನು ವಿದ್ಯಾರ್ಥಿಗಳಿಗೆ ಒಪ್ಪಿಸಿದ್ದರು. ವಿಚಾರಶೀಲನಾದವಿದ್ಯಾರ್ಥಿಯು ತಾನು ಹಿಂದೆ ಓದಿದ್ದನ್ನು ಸ್ಮರಣೆಯಲ್ಲಿ ತಂದುಕೊಂಡರೆ ಆ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಹೇಳಬಹುದಾಗಿದ್ದಿತು. ವಿದ್ಯಾರ್ಥಿಗಳ ಸ್ಮರಣೆಗೆ ತಂದುಕೊಳ್ಳಲಿಕ್ಕೆ ಅನುಕೂಲತೆಗಳೂ ಅದರಲ್ಲಿದ್ದುವು.

ಭೂಗೋಲದ ಪಾಠದಲ್ಲಿ ಕೆಲಕೆಲವು ಸಂಗತಿಗಳ ಬಗ್ಗೆ ಶಿಕ್ಷಕರೂ ವಿದ್ಯಾರ್ಥಿಗಳೂ ವಿಶೇಷ ಲಕ್ಷಪೂರೈಸಿ ಪಾಠ ಮಾಡಿಕೊಳ್ಳಬೇಕಾಗುವದು. ಉದಾ:—

ಕರ್ಕವೃತ್ತವು, ಹವಾನಾ ಅಸ್ವಾನ ಕಲಕತ್ತಾ ಕಂತಾನಗಳ ಮೇಲೆಯೂ, ಮಕರ ವೃತ್ತವು—ರಿಯೂ ವಾಪ್ಪಿಸ್ ಆಖಾತ ರೋಖಾಮ್ಟನ್‌ಗಳ ಮೇಲೆಯೂ, ವಿಷುವ ವೃತ್ತವು—ಕಿಯೋಟೊ, ವಿಕ್ಟೋರಿಯಾ ಸರೋವರ, ಸಿಂಗಾಪೂರಗಳ ಮೇಲೆಯೂ, ೦° ರೇಖಾಂಶವು ಗ್ರೀನಿಚ್ ಗೋಲ್ಡಕೋಸ್ಟಗಳಲ್ಲಿಯೂ, ೯೦°ನೆಯ ಪೂರ್ವ ರೇಖಾಂಶವು ಕಲಕತ್ತೆಯ ಮೇಲೆಯೂ, ೯೦°ನೆಯ ಪಶ್ಚಿಮ ರೇಖಾಂಶವು ಸೆಂಟ ಲುಯಿಸ ನ್ಯೂಆರ್ಲಿಯನ್ಸಗಳಲ್ಲಿಯೂ ಹಾಯ್ದಿರುವವೆಂಬ ಒಂದು ಸಾಮಾನ್ಯ ವಿಚಾರವನ್ನು ವಿದ್ಯಾರ್ಥಿಗಳು ಪಾಠಮಾಡಿ ನೆನಪಿನಲ್ಲಿಟ್ಟುಕೊಂಡರೆ ಅವರಿಗೆ ಪೃಥ್ವಿಯ ನಕಾಶೆಯ (ಗ್ಲೋಬಿನ) ಸಾಮಾನ್ಯ ಸ್ಥಾನ ನಿರ್ದೇಶಕ್ಕೆ ಸಹಾಯವಾಗುವದರಲ್ಲಿ ಸಂಶಯವಿಲ್ಲ.

ಭೂಗೋಲದಲ್ಲಿಯ ಸಂಗತಿಗಳನ್ನು ನೆನಪಿನಲ್ಲಿಡಲಿಕ್ಕೆ ನಕಾಶೆಗಳು ತುಂಬ ಸಹಾಯಕಾರಿಯಾಗಿರುವವು. ನಕಾಶೆಗಳನ್ನು ನೋಡುವದಕ್ಕಿಂತಲೂ ಸ್ವತಃ

ನಕಾಶೆಗಳನ್ನು ತೆಗೆಯುವದರಿಂದಲೂ ಅದರಲ್ಲಿ ಮಹತ್ವ ಸಂಗತಿಗಳನ್ನು ತುಂಬುವದರಿಂದಲೂ ಹೆಚ್ಚು ಪ್ರಯೋಜನವಾಗುವದು. ಇವು ವಿಷಯವು ನೆನಪಿನಲ್ಲಿ ಉಳಿಯಲಿಕ್ಕೆ ಹೆಚ್ಚು ಸಹಾಯ ಮಾಡುವವು. ಭೂಗೋಲದ ಪಾಠಗಳಲ್ಲಿ ಬಾಲಕರು ತೆಗೆಯುವ ನಕಾಶಗಳು ಎಷ್ಟುಮಟ್ಟಿಗೆ ಪರಿಪೂರ್ಣವಾದವೂ ಆಕಾರ ಸ್ಥಾನನಿರ್ದೇಶಗಳಲ್ಲಿ ತಪ್ಪಲ್ಲದವೂ ಆಗಿರಬೇಕೆಂಬದು ವಿಚಾರಣೀಯವಾದ ಮಾತಾಗಿದೆ. ನಕಾಶೆಗಳಿಗೂ ನಿಜವಾದ ಭೂವಿವರಣೆಗೂ ಇರುವ ಸಂಬಂಧವು ಅತ್ಯಂತ ದೂರದ್ದಾಗಿರುವದು. ನೂರಾರು ಮೈಲಿಗೆ ೧ ಇಂಚಿನಷ್ಟು ಅವಕಾಶವನ್ನು ಕಲ್ಪಿಸಿಕೊಂಡರೂ ಸಾಲದಷ್ಟು ಚಿಕ್ಕ ಪ್ರಮಾಣವು ನಕಾಶೆಯದು. ಅದರಲ್ಲಿ ಎಷ್ಟು ಮಟ್ಟಿಗೆ ಭೂಮಿಯ ಸರಿಯಾದ ಆಕಾರವನ್ನೂ, ಸ್ಥಾನನಿರ್ದೇಶವನ್ನೂ ಮಾಡಬಹುದೆಂಬದು ಕೇವಲ ಕಲ್ಪನೆಗೇ ಸಾಧ್ಯವಾದ ಮಾತು. ದಿಕ್ಕು, ಸರಾಸರಿ ಅಂತರ, ಸಾಮಾನ್ಯ ಆಕಾರ, ಇವು ಬಪ ಲಾಗದಿದ್ದರೆ ಸಾಕೆಂದೂ ನಕಾಶೆಗಳು ಫೋಟೋದ ಸಹಾಯದಿಂದ ಮನುಷ್ಯನನ್ನು ಗುರ್ತಿಸುವಷ್ಟು ಪರಿಪೂರ್ಣವಾಗಿರುವದು ಸಾಧ್ಯವಲ್ಲವೆಂದೂ ತಜ್ಞರ ಅಭಿಪ್ರಾಯ ವಿರುವದು. ಬಾಲಕರಿಂದ ಮಾಡಿಸುವ ನಕಾಶೆಗಳು ಅದರಲ್ಲಿ ಬಂದಿರುವ ಸಂಗತಿಗ ಳನ್ನು ಸ್ಮರಣೆಯಲ್ಲಿಟ್ಟುಕೊಳ್ಳಲಿಕ್ಕೆ ನೆರವಾದರೆ ಸಾಕೆಂಬದೇ ಈ ಮಾತಿನ ರಹಸ್ಯ ವಾಗಿದೆ.

ನಕಾಶೆಗಳಂತೆಯೇ ಗ್ರಾಫ ಮೊದಲಾದವುಗಳ ಸಹಾಯದಿಂದ ತೆಗೆದ ಆಕೃತಿ ಯನ್ನೂ ಚಿತ್ರಸಾದೃಶ್ಯದ ನಕಾಶೆಗಳನ್ನೂ ಉಪಯೋಗಿಸಿಕೊಂಡು ಭೂಗೋಲದೊಳ ಗಿನ ಸಂಗತಿಗಳನ್ನು ಬಾಲಕರಿಗೆ ಮನವರಿಕೆಮಾಡಿಕೊಡಲಿಕ್ಕೂ ಅವನ್ನು ನೆನಪಿ ನಲ್ಲಿಟ್ಟುಕೊಳ್ಳಲಿಕ್ಕೆ ತಕ್ಕ ಸಹಾಯವನ್ನು ಕಲ್ಪಿಸಿಕೊಡಲಿಕ್ಕೂ ಬರುವದು.

ಭೂಗೋಲವನ್ನು ಶಾಸ್ತ್ರೀಯವಾಗಿ ಕಲಿಸುವಾಗ ಹಿಂದೆ ಹೇಳಿದಂತೆ ಕೇವಲ ಸ್ಮರಣಶಕ್ತಿಗೇ ಪ್ರಾಧಾನ್ಯ ಕೊಟ್ಟರೆ ನಡೆಯುದು. ಬಾಲಕರ ಕಾರ್ಯಕಾರಣ ವಿವೇಚನಾಶಕ್ತಿಗೂ ಸಾಕಷ್ಟು ಚಾಲನೆ ಕೊಡಬೇಕಾಗುವದು. ಇದು ಬಹಳ ಮಹತ್ವದ ಮಾತು. ಶೈಕ್ಷಣಿಕ ಸೃಷ್ಟಿಯಿಂದಂತೂ ಇದರ ಮಹತ್ವವು ಇಮ್ಮಡಿಯಾ ಗ್ಯುವದು. ಕೇವಲ ಹಲಕೆಲವು ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂಡರೆ ನಿಜವಾದ ಜ್ಞಾನವಾದಂತಾಗುವದಿಲ್ಲ. ಕಾರ್ಯಕಾರಣವಿವೇಚನೆಯೊಂದಿಗೆ ನೆನಪಿನೆ ತಂದುಕೊಂಡ ವಿಷಯಜ್ಞಾನವು ಬಾಲಕರ ಸ್ವಂತದ್ದಾಗುವದು ಇಷ್ಟೇ ಅಲ್ಲ, ಅದು ಅವರಲ್ಲಿ ಸ್ಥಿರವಾಗಿ ಉಳಿಯುವದು. ಬುದ್ಧಿವಿಕಾಸದ ದೃಷ್ಟಿಯಿಂದಲೂ ಈ ಮಾತಿಗೆ ತುಂಬ ಮಹತ್ವವಿದೆ. ಆದರೆ ಸಾಕಷ್ಟು ಆಧಾರಗಳನ್ನು ಕಣ್ಣಮುಂದಿಟ್ಟು

ಕೊಳ್ಳದೆ ತರ್ಕದಿಂದ ಮುಂದೆ ಸಾಗುವ ರೂಢಿಯು ಮಾತ್ರ ಎಷ್ಟು ಪವಿತ್ರವೂ ಒಳ್ಳೆಯದಲ್ಲ. ಈ ಮಾತಿನ ಬಗ್ಗೆ ಶಿಕ್ಷಕರು ತುಂಬ ಎಚ್ಚರಪಡಬೇಕಾಗುವದು.

ಭೂಗೋಲವನ್ನು ಕಲಿಸುವಾಗ ರಾಜಕೀಯ ಭೂಗೋಲಕ್ಕೆ ಪ್ರಾಧಾನ್ಯತೆ ಯಿರುವದು ಸುಳ್ಳಲ್ಲ. ಇದು ಬಹುಕಾಲದಿಂದ ರೂಢಿಯಲ್ಲಿ ಬಂದು ಹೋಗಿದೆ. ಫ್ರಾನ್ಸು ಇಂಗ್ಲಂಡ ಹಿಂದುಸ್ತಾನ ಈ ಹೆಸರುಗಳಿಂದ ನಮಗೆ ಸೂಚಿತವಾಗುವದೇನು? ಅಂತೆಯೇ ಬ್ರಿಟಿಷ ಸಾಮ್ರಾಜ್ಯವೆಂದರೆ ನಮಗೆ ಏತರ ಕಲ್ಪನೆಯಾಗುವದು, ಒಂದು ರಾಜ್ಯದಾಡಳಿತಕ್ಕೆ ಸೇರಿದ ಭೂಭಾಗವು ಒಂದು ದೇಶವೆಂದು ಹೇಳಲ್ಪಡುವ ರೂಢಿಯು ಸಾಮಾನ್ಯವಾಗಿದೆ. "ರಶಿಯಾದ ಸಾಮ್ರಾಜ್ಯ" ವೆಂದರೂ ಇಂಥದೇ ಏನೋ ಒಂದು ಕಲ್ಪನೆಯು ನಮ್ಮ ದೃಷ್ಟಿಯ ಮುಂದೆ ಬರುವದು. ಸದ್ಯಕ್ಕೆ ಪ್ರಚಾರದ ಲ್ಲಿರುವ ಭೂಗೋಲದ ಪುಸ್ತಕಗಳಲ್ಲಿ ಈ ವಿಚಾರವನ್ನು ತೆಗೆದು ಹಾಕಲು ಸಾಧ್ಯ ವಾಗಲಿಲ್ಲ. ನಿಜವಾಗಿ ನೋಡಿದರೆ ಭೂಗೋಲವನ್ನು ಅಭ್ಯಾಸಿಸಲಿಕ್ಕೆ ಈಬಗೆಯ ರಾಜಕೀಯ ವಿಭಾಗದ ಆವಶ್ಯಕತೆಯೇನೂ ಇಲ್ಲ. ಆದರೂ (ಅದೇನೋ ಒಂದು ವಿಧ ವಾದ ಪೂರ್ವಪರಂಪರೆಯೋ ಏನೋ) ನಮ್ಮ ಮನಃಪ್ರವೃತ್ತಿಯು ಭೂಗೋಲವೆಂದ ಕೂಡಲೇ ಈ ಬಗೆಯ ರಾಜಕೀಯ ವಿಭಾಗದ ಕಲ್ಪನೆಯನ್ನು ನಮ್ಮ ಕಣ್ಣಮುಂದೆ ತಂದು ಒಡ್ಡುತ್ತಿರುವದು. ಆದ್ದರಿಂದ ನಾವು ಮೊದಲು ಈ ಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಸ್ಥಾನನಿರ್ದೇಶ ಮಾಡಿಕೊಂಡು ಮುಂದೆ ನಿಜವಾದ ಭೂಗೋಲದ ಅಭ್ಯಾಸವನ್ನು ಪ್ರಾರಂಭಿಸುವೆವು.

ಭೂಗೋಲದ ಅಭ್ಯಾಸದಲ್ಲಿ ಸ್ಥಾನನಿರ್ದೇಶ ಮಾಡಿಕೊಳ್ಳಲಿಕ್ಕೆ ಹವಾಮಾನ, ಕಟಿಬಂಧಗಳು ಇವುಗಳನ್ನು ಆಧಾರವಾಗಿಟ್ಟುಕೊಳ್ಳುವದು ಆಧುನಿಕ ಪದ್ಧತಿ ಯಾಗಿದೆ. ಇದೇ ನಿಜವಾದ ವಿಭಾಗವೆಂದು ಹೇಳುವದೂ ಉಂಟು. ಭೂಮಿಯ ಎತ್ತರವನ್ನು ತೋರಿಸುವ ಪ್ರಾಕೃತಿಕ ನಕಾಶೆಯನ್ನು (Relief Map) ಅನು ಸರಿಸಿ ಈ ವಿಭಾಗ ಮಾಡಿಕೊಂಡರೆ ಅದರಲ್ಲಿ ಆಯಾ ಸ್ಥಾನಗಳ ಹವೆಯ ಒತ್ತು ವಿಕೆ, ಹವೆಯಲ್ಲಿಯ ನೀರಿನ ಉಗಿಯ ಪ್ರಮಾಣ, ಕಟಿಬಂಧಗಳಿಗೆ ಅನುಗುಣ ವಾದ ಉಷ್ಣತಾಮಾನ ಮೊದಲಾದವುಗಳನ್ನು ವಿವೇಚಿಸಲು ಪ್ರಾರಂಭಿಸಬಹುದು. ಆಗಲೇ ಆ ಪ್ರದೇಶದಲ್ಲಿ ಬೀಳುವ ಮಳೆಯ ಮಾನವೂ ಗೊತ್ತಾಗಬಹುದು. ಭೂಗೋಲದಲ್ಲಿ ಹವೆ ಮಳೆಗಳ ತರುವಾಯ ವಿವೇಚಿಸತಕ್ಕ ಮಾತೆಂದರೆ ಪ್ರಾಣಿ ವನಸ್ಪತಿಗಳು. ಈ ವಿಭಾಗದಲ್ಲಿ ಹುಲ್ಲಿನ ಅಡವಿಗಳಲ್ಲಿಯೂ ಅರಣ್ಯಗಳಲ್ಲಿಯೂ ಮಿಕ್ಕ ಕಡೆಗಳಲ್ಲಿಯೂ ಸ್ವಾಭಾವಿಕವಾಗಿ ಬೆಳೆಯುವ ವನಸ್ಪತಿಗಳೂ ಮನುಷ್ಯನು ತನ್ನ ಉಪಯೋಗ ತನ್ನ ಪರಿವಾರವಾದ ಪಸು ಕುಮರೆ ಕುರಿ ಮುಂತಾದ ಪ್ರಾಣಿಗಳ ಜೀವನಕ್ಕಾಗಿ

ಬೆಳೆಯಿಸುವ ಪೈರು ಹುಲ್ಲು ಮುಂತಾದವುಗಳೂ ಸಮೂಹೇಶವಾಗುವವು. ಮತ್ತು ವನ್ಯ ಹಾಗು ಗ್ರಾಮ್ಯ ಪಶುಪಕ್ಷಿಗಳು ಈ ವಿಭಾಗದಲ್ಲಿಯೇ ಬರುವವು. ಈ ವನಸ್ಪತಿಗಳ ಬೆಳೆವಣಿಗೆಗೂ ಹಿಂದಿನ ಪ್ಯಾರಾದಲ್ಲಿ ಹೇಳಿದ ಹವಾಮಾನಕ್ಕೂ ಸಂಬಂಧವಿರುವದೆಂಬದನ್ನು ಮರೆಯಲಾಗದು. ಭೂಗುಣವೂ ಇದಕ್ಕೆ ಅಂಶತಃ ಕಾರಣವಾಗಬಹುದು. ತರುವಾಯ ಖನಿಜಗಳು ಮನುಷ್ಯನ ವಸತಿ ಸ್ಥಾನಗಳು ಆ ಸ್ಥಳಗಳ ಮಾನವ ಜೀವನದ ಭೂಗೋಲ ಇವುಗಳ ಅಭ್ಯಾಸವು ಕ್ರಮ ಪ್ರಾಪ್ತವಾಗಿ ಬರುವವು.

ಹವೆ ಮಳೆ ಪ್ರಾಣಿ ವನಸ್ಪತಿಗಳು ಇವುಗಳನ್ನೂ ಖನಿಜಗಳು ದೊರೆಯುವ ಮಾನವನ್ನೂ ಅನುಸರಿಸಿ ಕೆಲವೊಂದು ಭೂಭಾಗದಲ್ಲಿ ಜನವಸತಿಯುಂಟಾಗುವದೆಂಬದನ್ನು ಭೂಗೋಲದ ಅಭ್ಯಾಸದಿಂದ ನಿರ್ಣಯಿಸಿಕೊಳ್ಳಲು ಬರುವದು. ಚೆನ್ನಾಗಿ ಬೆಳೆಬರುವ, ಸುಖದಿಂದ ಜೀವಿಸಲಿಕ್ಕೆ ಅನುಕೂಲವಾದ ಹವಾಮಾನವಿರುವ, ಪ್ರದೇಶದಲ್ಲಿಯೇ ಹೆಚ್ಚು ದಟ್ಟಾದ ಜನವಸತಿಯಿರುವದೆಂಬದನ್ನು ಒಡೆದು ಹೇಳಬೇಕಾಗಿಲ್ಲ. ಕೈಗಾರಿಕೆಗಳಿಗೆ ಬೇಕಾಗುವ ಖನಿಜಗಳು ದೊರೆಯುವಲ್ಲಿ ಒಂದು ವೇಳೆ ಈ ಅನುಕೂಲತೆಯಿಲ್ಲದಿದ್ದರೂ ಕಾರಖಾನೆಗಳು ಪ್ರಾರಂಭವಾಗಿ ಅಲ್ಲಿಯೂ ಜನವಸತಿಯು ಹೆಚ್ಚುವದು. ಹೀಗೆ ಕಾರ್ಯಕಾರಣ ಭಾವವನ್ನು ಪರ್ಯಾಲೋಚಿಸಿ ಭೂಗೋಲದ ಪಾಠವನ್ನು ಯೋಗಿಸುವದರಿಂದ ಬಾಲಕರ ಬುದ್ಧಿವಿಕಾಸಕ್ಕೆ ತುಂಬ ಅನುಕೂಲವಾಗುವದು.

ಭೂಗೋಲದ ಅಭ್ಯಾಸದಲ್ಲಿ ಬಾಲಕರಲ್ಲಿ ಹುಟ್ಟಿಸಿ ಬೆಳಿಸಬೇಕಾದ ಇನ್ನೊಂದು ಮನಃಶಕ್ತಿಯೆಂದರೆ ಕಲ್ಪನಾಶಕ್ತಿ. ಕೆಲವೊಂದು ಸಂಗತಿಗಳನ್ನು ಪಾಠಶಕ್ತಿಯ ಬಲದಿಂದ ನೆನಪಿನಲ್ಲಿಟ್ಟುಕೊಂಡರೆ ಅಥವಾ ಕಾರ್ಯಕಾರಣ ವಿವೇಚನೆಯೊಂದಿಗೆ ಕೆಲಕೆಲವು ವಿಷಯಗಳನ್ನು ಪರ್ಯಾಲೋಚಿಸಿ ತಿಳಿದುಕೊಂಡರೆ ಭೂಗೋಲದ ಅಭ್ಯಾಸವು ಪೂರ್ಣವಾಗಲಾರದು. ಭೂಗೋಲದ ಬಹ್ವಂಶವನ್ನು ಕಲ್ಪನಾಶಕ್ತಿಯ ಸಹಾಯದಿಂದ ಅವಗತಮಾಡಿಕೊಳ್ಳಬೇಕಾಗುವದು. ಕಲ್ಪನಾಶಕ್ತಿಯ ಬೆಳವಣಿಗೆಗೆ ಶಾಲೆಗಳಲ್ಲಿ ಕಲಿಸುವ ಮಿಕ್ಕ ಎಲ್ಲ ವಿಷಯಗಳಿಗಿಂತಲೂ ಈ ವಿಷಯವು ಹೆಚ್ಚು ಸಹಾಯಕಾರಿಯಾಗಿದೆ. ಭೂಗೋಲದಲ್ಲಿ ಕಲಿಸಲ್ಪಡುವ ವಿಷಯಗಳೆಲ್ಲವೂ ನಿಜವಾಗಿಯೇ ಭೂಮಿಯ ಆಯಾ ಭಾಗಗಳಲ್ಲಿ ಇಂದಿಗೆ ಅಸ್ತಿತ್ವದಲ್ಲಿರುವವೆಂದೂ ಅವು ಕಲ್ಪಿತವಾದವುಗಳಲ್ಲವೆಂದೂ ಬಾಲಕರು ಮನಗಾಣಬೇಕು. ಹಾಗು ತಾವು ನೋಡಿ ತಿಳಿದ ಸಂಗತಿಗಳೊಡನೆ ಅವನ್ನು ಹೋಲಿಸಿ ನೋಡಿ ಅವುಗಳ ಸ್ಥಿತಿಗತಿಗಳನ್ನು ಕಲ್ಪಿಸಿಕೊಳ್ಳಬೇಕಾಗುವದು. ಹೀಗೆ ಕಲ್ಪನಾಶಕ್ತಿಯು ವಿಕಾಸಕ್ಕೂ ಆ

ಕಲ್ಪನೆಯನ್ನು ಸತ್ಯವೆಂದೆಣಿಸಿಕೊಂಡು ಅವುಗಳ ನಿಜಸ್ವರೂಪದ ಜ್ಞಾನ ಮಾಡಿ ಕೊಳ್ಳಲಿಕ್ಕೂ ಕೆಲವು ಸಾಧನಗಳು ಬೇಕಾಗುವವು. ಅವುಗಳಲ್ಲಿ ಸಚಿತ್ರ ಸ್ಥಳ ವರ್ಣನೆಗಳು, ಮಾಯಾದೀಪದ ಸಹಾಯದಿಂದ ತೋರಿಸುವ ಚಿತ್ರಗಳು, ಸ್ಟೀರಿ ಯೋಗ್ರಾಫ ಚಿತ್ರಗಳು, ಸಿನೇಮಾಗಳು ಮೊದಲಾದವುಗಳ ಸಮಾವೇಶವಾಗುವದು. ಸಚಿತ್ರ ಸ್ಥಳವರ್ಣನೆಯ ಗ್ರಂಥಗಳಲ್ಲಿರುವ ಚಿತ್ರಗಳಿಂದ ಬಾಲಕರ ಕಲ್ಪನೆಗೆ ಸತ್ಯಸ್ವರೂಪವುಂಟಾಗಲು ತುಂಬಾ ಪ್ರಯೋಜನವಾಗುವದು. ಮತ್ತು ಮಾಯಾ ದೀಪದ ಸಹಾಯದಿಂದ ತೋರಿಸುವ ಚಿತ್ರಗಳನ್ನು ಕುರಿತು ಇನ್ನೊಂದೆಡೆಗೆ ಸ್ವತಂತ್ರ ಲೇಖನವೊಂದು ಪ್ರಕಟಿಸಲ್ಪಟ್ಟಿರುವದು. ಇಂಥ ಚಿತ್ರಗಳಿಗಿಂತಲೂ ಸಿನೇಮಾಗಳಿಂದಲೂ ಆಯಾ ಸಂಗತಿಗಳು ಬಾಲಕರ ಕಣ್ಣುಮುಂದೆ ಕಟ್ಟಿದಂತಾಗಿ ಅವುಗಳಲ್ಲಿ ಜೀವಿತ ಸ್ವರೂಪವು ವ್ಯಕ್ತವಾಗುವದರಿಂದ ಆಯಾ ಸಂಗತಿಗಳನ್ನು ಪ್ರತ್ಯಕ್ಷ ನೋಡಿದಾಗ ಆಗುವ ಕಲ್ಪನೆಯೇ ಈಗಲೂ ಆಗುವ ಸಂಭವವಿರುವದು. ಇದ್ದರಿಂದ ಭೂಗೋಲದ ಪಾಠಗಳಲ್ಲಿ ಸಿನೇಮಾಗಳಿಂದಾಗುವ ಪ್ರಯೋಜನವು ಅಷ್ಟಿಷ್ಟೆಂದು ಹೇಳಲು ಸಾಧ್ಯವೇ ಇಲ್ಲ. ಸುಧಾರಿಸಿದ ದೇಶಗಳಲ್ಲಿ ಇವುಗಳನ್ನು ಉಪಯೋಗಿಸಿಕೊಂಡು ಬಾಲಕರಿಗೆ ಈ ವಿಷಯವನ್ನು ಅತಿಶಯ ಆನಂದದಾಯಕ ವಾಗಿ ಕಲಿಸುವರು. ಭೂಗೋಲದ ಪಾಠಗಳಿಗಾಗಿಯೇ ತಯಾರಿಸಿದ ವಿಶೇಷ ತರದ ಫಿಲ್ಮುಗಳು ವಿದ್ಯಾಖಾತೆಯವರಿಂದ ಸಾಲೆಗಳಿಗೆ ಪೂರೈಸಲ್ಪಡುವವು. ನಮಗೂ ಅಂಥ ಸುದಿನವು ಬೇಗನೆ ಬರಲೆಂದು ನಾವು ಹಾರೈಸಬೇಕಾಗಿದೆ.

ಶಾಲೆಗಳಲ್ಲಿ ದೃಕ್–ಶಿಕ್ಷಣದ ಮಹತ್ವ

ಲೇಖಕ:— ಶ್ರೀ. ಎನ್. ಎಸ್. ಉಲ್ಲಾಳ ಬಿ. ಎ.

ಇತ್ತಲಾಗಿ ಶಾಲೆಗಳಲ್ಲಿ ದೃಕ್ ಶಿಕ್ಷಣದ ಉಪಯೋಗವೂ ಅದರಬಗ್ಗೆ ಸಂವೇಜನೆಯೂ ಬಹಳವಾಗತೊಡಗಿವೆ. ಪ್ರಾಥಮಿಕ ಶಿಕ್ಷಕರು ಇಡೀ ಶಿಕ್ಷಕ ವರ್ಗದ ಕಳಹದಿ ಇದ್ದಂತೆ ಇದ್ದಾರೆ. ಆದ್ದರಿಂದ ಅವರು ಈ ಶಿಕ್ಷಣವು ಎಂಥದಿದೆ, ಮತ್ತು ಕಿಶ್ಮಮಕ್ಕಳ ಶಿಕ್ಷಣದಲ್ಲಿ ಇದರ ಉಪಯೋಗವು ಎಷ್ಟರಮಟ್ಟಿಗೆ ಆಗಬಹುದು ಎಂಬದನ್ನು ತಿಳಿದುಕೊಳ್ಳುವದು ಅವಶ್ಯವು.

ರಕಮು ದೃಷ್ಟಿಯಿಂದ ಈ ಶಾಲೆಗಳು ನಿರುಪಯೋಗಿಯಾಗುವವು. ಮುಂಕಂಡಂತೆ ಇಲ್ಲಿ ಓದುವ ವಿದ್ಯಾರ್ಥಿಗಳು ಸಾಕ್ಷರರಿಗಳಾಗುವದಕ್ಕೆ ಎಷ್ಟು ಇಯತ್ತೆಗಳ ಅಭ್ಯಾಸವು ತೀರ ಆವಶ್ಯಕವಾಗಿರುವದೋ ಅಷ್ಟು ಇಯತ್ತೆಗಳು ಈ ಶಾಲೆಗಳಲ್ಲಿರುವದಿಲ್ಲ. ಆದ್ದರಿಂದ ಇವು ಅಪೂರ್ಣ ಶಾಲೆಗಳೆನಿಸಿಕೊಂಡಿವೆ. ಸಾಕ್ಷರತೆಯ ದೃಷ್ಟಿಯಿಂದಲೇ ವಿಚಾರಮಾಡಿದರೆ ಈ ಶಾಲೆಗಳು ನಿರುಪಯೋಗಿಯಾಗಿವೆ ಇಷ್ಟೇ ಅಲ್ಲ ಸಾಕ್ಷರತೆಯ ಪ್ರಸಾರಕ್ಕೆ ಇವು ಪ್ರತಿಬಂಧಕಾರಿಯೂ ಆಗಿವೆ, ಯಾಕಂದರೆ– ಈ ಶಾಲೆಗಳಿಗಾಗಿ ವೆಚ್ಚವಾಗುವ ಧನವು ನಿಷ್ಪ್ರಯೋಜಕವಾಗುವದು; ಅಲ್ಲದೆ ಸಾಕ್ಷರತೆಯ ಪ್ರಸಾರಕಾರ್ಯಕ್ಕಾಗಿ ಉಪಯೋಗಿಸಬಹುದಾದ ಇಷ್ಟು ದೊಡ್ಡ ರಕಮನ್ನು ಇಂತಹ ಅಪ್ರಯೋಜಕವಾಗಿ, (ವ್ಯರ್ಥವಾಗಿ,) ವೆಚ್ಚಮಾಡುವುದರಿಂದ ದೇಶಕ್ಕೆ ಅಷ್ಟು ಹಾನಿಯಾಯಿತೆಂದೇ ಹೇಳಬೇಕಾಗುವದು. ಇಂಥ ಅಪೂರ್ಣ ಶಾಲೆಗಳನ್ನು ನಿಲ್ಲಿಸಿ ಬಿಟ್ಟು, ಇಲ್ಲವೆ ಬೇಸಿ ಸಾಕ್ಷರತೆಯ ಮಟ್ಟಿಗಾದರೂ ಆವಶ್ಯಕ ವಿರುವಷ್ಟು ಅಭ್ಯಾಸವಾಗಿಸುವಂಥ ದೊಡ್ಡ ಶಾಲೆಗಳನ್ನಾಗಿ ಪೂರ್ಣಗೊಳಿಸಿ, ಅವುಗಳಿಗಾಗಿ ವೆಚ್ಚವಾಗುವ ಹಣದಿಂದ ತಕ್ಕಷ್ಟು ಪ್ರತಿಫಲವು ಬೊರೆಯುವಂತೆ ಮಾಡಿದ ಹೊರತು ಸಾಕ್ಷರತೆಯ ಪ್ರಸಾರಕ್ಕೆ ತಕ್ಕ ರಾಗುವೇ ಇಲ್ಲವೆಂದು ಬಹು ವ್ಯಸನದಿಂದ ಹೇಳಬೇಕಾಗುವದು. ಈ ಕಾರ್ಯವು ನಡೆಯಬೇಕಾದರೆ ಸ್ಥಾನಿಕ ಸಂಸ್ಥೆಗಳ (Local authorities) ಪಾಲಕರು ಈ ವಿಷಯವನ್ನು ತಿಳಿದುಕೊಂಡು ಅದರಲ್ಲಿ ಮನಸ್ಸು ಹಾಕುವದು ತೀರ ಅವಶ್ಯವಾಗಿದೆ. ಶಿಕ್ಷಣ ಪ್ರಸಾರದ ಇತರ ದಾರಿಗಳನ್ನು ಅನುಸರಿಸಿ ಹೋಗಿ ಸಾಕ್ಷರತೆಯನ್ನು ಬೆಳೆಯಿಸಿ ದೇಶ ಕಲ್ಯಾಣ ಮಾರ್ಗವನ್ನು ಕಂಡುಕೊಳ್ಳುವದಕ್ಕಿಂತ ಮೊದಲು ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚವಾಗುವ ಆರೇಳುಕೋಟಿ ರೂಪಾಯಿಗಳಿಂದ ಸಾಕಷ್ಟು ಪ್ರತಿಫಲವು ಬೊರೆಯುವಂತೆ ನೋಡಿಕೊಳ್ಳುವದು ಅತಿಶಯ ಮಹತ್ವದ ಪೂರ್ಣವಾಗಿರುವದು. ಬೆಲಕೆಲವು ಇಲಾಖೆ (ಪ್ರಾಂತ) ಗಳಲ್ಲಿ ಇಂಥ ಅಪೂರ್ಣ ಶಾಲೆಗಳಿಂದಾಗುವ ನಿಷ್ಫಲ ವೆಚ್ಚವನ್ನು ಕದಿಮೆಮಾಡುವ ಕಾರ್ಯವು ಪ್ರಾರಂಭವಾಗಿರುವದಾದರೂ ಅದು ತೀರ ಮಂದಗತಿಯಿಂದ ಸಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಶಿಕ್ಷಣಾಧಿ ಕಾರಿಗಳಿಗೆ ಇಂಥ ದುಬಾರಿಯ ವಿಷಯವನ್ನು ಬೇರೆಯಿಂದಿಲ್ಲ, ಇತ್ಯಾದಿ ಇದೀಗ ಹಿಂದು ಸ್ಥಾನಿಕ ಸರಕಾರಗಳ ಎಜ್ಯುಕೇಶನಲ್ ಕಮಿಶನರ್ ಸಾಹೇಬರ ವರದಿಯಲ್ಲಿ ಪ್ರಕಟವಾದ ಪ್ರಾಥಮಿಕಶಿಕ್ಷಣದ ವಿಷಯದ ಅಭಿಪ್ರಾಯವು.

ನುಡಿಲೆ ಬೇರೆಯ ವರದಿಯು ಮೋರಗ, ಗಣಿಳ–ಶಿಜನೆಯ ಸಾಲಿನಲ್ಲಿ ಬ್ರಿಟಿಷ ಹಿಂದು ವಿದ್ಯಾಪದಲ್ಲಿ ಶಿಬ್ಬಿಗೆ ಇಟಿಣಿಯಿಂ ನೆಡಿಯುವುದಕ್ಕೆ ಬಾಗಿಲುಗಳೂ ಇಲ್ಲವೆಂಬುದು.

ಪ್ರಬಂಧ : ವಿದ್ಯಾರ್ಥಿಗಳಿಗೆ ಪ್ರಾಮುಖ್ಯತೆ ಕೊಡಬೇಕು ಎಂಬ ವಿಷಯದ ಬಗ್ಗೆ

ಇಂದಿನ ಈ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಏಕೆಂದರೆ ಇಂದಿನ ಕಾಲಕ್ಕೆ ತಕ್ಕಂತೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯಬೇಕಾಗಿದೆ. ಇಂದಿನ ಕಾಲದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯಲು ಅನುಕೂಲವಾಗುವಂತೆ ಹಲವಾರು ಕಾಲೇಜುಗಳು (ಸಾಲೆಗಳು) ಪ್ರಾರಂಭವಾಗಿವೆ. ಇಂಥ ಕಾಲೇಜುಗಳು (ಸಾಲೆಗಳು) ಪ್ರಾರಂಭವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ ಎಂಬುದನ್ನು ತಿಳಿಯಬೇಕಾಗಿದೆ.

ಹಿಂದಿನ ಕಾಲದಲ್ಲಿ ಜನರು ತಮ್ಮ ಮಕ್ಕಳಿಗೆ ಶಾಲೆಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸಲು ಬಹಳ ಆಸಕ್ತಿ ತೋರಿಸುತ್ತಿರಲಿಲ್ಲ. ಅವ

ಯಿಂದ ಎರಡನೆಯ ತರಗತಿಗೆ ಹೋಗುವ ವಿದ್ಯಾರ್ಥಿಗಳ ಪ್ರಮಾಣವು ೮೨% ಕಡಿಮೆಯಾಗುವಂತೆಯೇ ಎರಡನೆಯ ತರಗತಿಯಿಂದ ಮೂರನೆಯ ತರಗತಿಗೂ ಮುಂದೆ ನಾಲ್ಕನೆಯ ತರಗತಿಗೂ ಸಾಗುವ ವಿದ್ಯಾರ್ಥಿಗಳ ಪ್ರಮಾಣವು ಇದಕ್ಕಿಂತ ಹೆಚ್ಚು ಹೆಚ್ಚಾಗಿ ಕುಂದುತ್ತಾ ಹೋಗುವದು.

ಇಡಿಯ ಬ್ರಿಟಿಷ ಹಿಂದುಸ್ಥಾನದ ಲೆಕ್ಕವನ್ನು ನೋಡಿದರೆ ಮೊದಲನೆಯ ತರಗತಿಗೆ ಸೇರಿದ ೧೦೦ ವಿದ್ಯಾರ್ಥಿಗಳಲ್ಲಿ ನಾಲ್ಕನೆಯ ತರಗತಿಗೆ ಮುಟ್ಟುವಷ್ಟರಲ್ಲಿ ಮೊದಲೇ ೭೬ ವಿದ್ಯಾರ್ಥಿಗಳು ಸಾಲೆಯನ್ನು ಬಿಟ್ಟು ಹೋಗಿಬಿಡುವರು. ಉಳಿದ ಇಷ್ಟು ವಿದ್ಯಾರ್ಥಿಗಳು ಸಾಲೆಗೆ ಹೋಗಿದ್ದರೂ ಸಾಕ್ಷರರಿಗಳಾಗುವಷ್ಟರಲ್ಲಿ ಮೊದಲೇ ಸಾಲೆಯನ್ನು ಬಿಟ್ಟುಬಿಡುವರು ಎಂದಂತಾಯಿತು. ಅಥವಾ ೧೦೦ ವಿದ್ಯಾರ್ಥಿಗಳಿಗಾಗಿ ವೆಚ್ಚ ಮಾಡಿದ ಹಣವು–ಒಟ್ಟು ವೆಚ್ಚದ ಮೂರು ನಾಲ್ಕನೆಯ ಅಂಶಗಳಷ್ಟು ಹಣವು– ನಿರರ್ಥಕವಾಯಿತೆಂದು ಹೇಳಿದ ಹಾಗಾಯಿತು. ಈ ತರದ ಬಹು ದೊಡ್ಡ ಪ್ರಮಾಣದ ನಿರರ್ಥಕ ವೆಚ್ಚ (wastage) ಕ್ಕೆ ಕಾರಣವೆಂಬದನ್ನು ಪರ್ಯಾಲೋಚಿಸಿದರೆ (೧) ಬಾಲಕರ ವರ್ಗದಲ್ಲಿ ಅಭ್ಯಾಸವು ಸರಿಯಾಗಿ ಸಾಗದಿರುವದು (೨) ಪ್ರತಿವರ್ಷ ಪರೀಕ್ಷೆಯಲ್ಲಿ ಪಾಸಾಗಿ ಕ್ರಮವಾಗಿ ಮೇಲಿನ ತರಗತಿಗೆ ಹೋಗದೆ ಇರುವದು ೩) ಬಡತನ, ಬೇನೆ ಬೇಸರಿಕೆಗಳು, ತಂದೆ ತಾಯಿಗಳ ದುರ್ಲಕ್ಷ್ಯ ಮುಂತಾದ ಕಾರಣಗಳಿಂದ ವಿದ್ಯಾರ್ಥಿಗಳು ಸಾಲೆಗೆ ಸರಿಯಾಗಿ ಬಾರದಿರುವದು ಶಾಲೆಗಳ ವ್ಯವಸ್ಥೆಯು ಸರಿಯಾಗಿಲ್ಲದಿರುವದು ಇವೇ ಮುಂತಾದ ಅನೇಕ ಸಂಗತಿಗಳು ಮುಂದೆ ಬರುವವು. ಈಗ ಸಾಲೆಗೆ ಹೋಗುವ ವಿದ್ಯಾರ್ಥಿಗಳಲ್ಲಿ ಬಹು ಜನರು ಸಾಕ್ಷರರಿಗಳಾಗುವ ಯೋಜನೆಯನ್ನು ಪೂರ್ಣವಾಗಿ ಕೈಕೊಂಡ ಹೊರತು ಶಾಲೆಗಳನ್ನೂ ವಿದ್ಯಾರ್ಥಿಗಳನ್ನೂ ಹೆಚ್ಚಿಸುವ ಕಾರ್ಯಕ್ರಮದಿಂದ ಏನೂ ಪ್ರಯೋಜನವಾಗಲಾರದು.

ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಕೈಕೊಳ್ಳಬೇಕೆನ್ನುವ ಶಿಕ್ಷಣಾಧಿಕಾರಿಗಳು ಈ ಕೆಳಗಿನ ಕೋಷ್ಟಕವನ್ನು ನೋಡಿ ಜೆನ್ನಾಗಿ ವಿಚಾರ ಮಾಡುವದು ಅವಶ್ಯವಾಗಿದೆ.

ಸ್ಥಾನಗಳು	ಒಟ್ಟು ಬಾಲಕರಲ್ಲಿ ೧೦೦ಕ್ಕೆ ಎಷ್ಟು ಜನರು ಸಾಲೆಗೆ ಹೋಗುವರು?	ಸಾಕ್ಷರರಿಗಳಾಗುವ ಎಂದರೆ ನಾಲ್ಕನೆಯ ತರಗತಿಗೆ ಮುಟ್ಟುವ ಹುಡುಗರ ಪ್ರಮಾಣ
ಮದ್ರಾಸ	೭೧·೨	೪೧
ಮುಂಬಯಿ	೫೯·೫	೩೧

ಬಂಗಾಲ	೬೧.೫	೧೪
ಸಂಯುಕ್ತಪ್ರಾಂತ	೩೬.೮	೨೫
ಪಂಜಾಬ	೫೧.೦	೨೫
ಬ್ರಹ್ಮದೇಶ	೨೯.೦	೧೮
ಬಿಹಾರ ಒಡಿಸಾ ಪ್ರಾಂತಗಳು	೩೬.೧	೧೫
ಮಧ್ಯಪ್ರಾಂತ ಬೀರಾರ	೩೯.೨	೪೮
ಅಸಾಮ	೪೧.೩	೩೬
ವಾಯವ್ಯ ಸರಹದ್ದಿನ ಪ್ರಾಂತ	೪೦.೯	೨೩
ಕೊಡಗು	೫೬.೮	೬೨
ದಿಲ್ಲಿ	೬೩.೪	೨೭
ಜಮೀರ ಮಾರವಾಡ	೩೪.೫	ಗೊತ್ತಿಲ್ಲ.
ಲೂಚಿಸ್ತಾನ	೧೪.೩	೭೯
ಬಂಗಳೂರು	೯೪.೯	೩೭
ಇತರ ಪ್ರದೇಶಗಳು	೭೫.೧	೩೪
ಬ್ರಿಟಿಷ ಹಿಂದುಸ್ತಾನ	೫೦.೩	೨೬

ಮೇಲಿನ ಅಂಕಿಗಳನ್ನು ನೋಡಿದರೆ ಶಾಲೆಗೆ ಹೋಗುವ ಹುಡುಗರ ಸಂಖ್ಯೆಗೂ ಸಾಕ್ಷರಿಗಳಾಗುವ ಉಪ ಸಂಖ್ಯೆಗೂ ಪರಸ್ಪರ ಅವಲಂಬನವಿಲ್ಲೆಂಬದು ಸ್ಪಷ್ಟವಾಗುವದು. ಮದ್ರಾಸ ಪ್ರಾಂತದ ಸಾಲೆಗೆ ಹೋಗುವ ಹುಡುಗರ ಸಂಖ್ಯೆಯ ಪ್ರಮಾಣವು ಹೆಚ್ಚಿದ್ದರೂ ಸಾಕ್ಷರಿಗಳಾಗುವ ಪ್ರಮಾಣವು ತೀರ ಡಿಮೆಯಿರುವದು. ಆದ್ದರಿಂದ ಹುಡುಗರ ಅಥವಾ ಸಾಲೆಗಳ ಸಂಖ್ಯೆಯನ್ನು ಹೆಚ್ಚಿ ವದರಿಂದ ಅಥವಾ ಒತ್ತಾಯದ ಶಿಕ್ಷಣವನ್ನು ಪ್ರಚಾರದಲ್ಲಿ ತರುವದರಿಂದಲೇ ಕ್ಷರಿಗಳ ಪ್ರಮಾಣವು ಬೆಳೆಯುವದೆಂದು. ಹೇಳುವಂತಿಲ್ಲವೆಂಬದು ಸಿದ್ಧವಾಗು ದು. ಬ್ರಿಟಿಷ ಹಿಂದುಸ್ತಾನದೊಳಗಿನ ಅನೇಕ ಪ್ರಾಂತಗಳಲ್ಲಿ ಪ್ರಾಥಮಿಕ ಕ್ಷಣವನ್ನು ಒತ್ತಾಯಪಡಿಸುವ ವಿಚಾರವು ನಡೆದಿದ್ದು ಕೆಲಕೆಲವು ಪ್ರದೇಶ ಳಲ್ಲಿ ಅವನ್ನು ಕಾರ್ಯರೂಪಕ್ಕೆ ತಂದಿರುವದೂ ಉಂಟು. ಆದರೆ ಆದರಿಂದ ಳಿಕೊಳ್ಳುವಂಥ ಪ್ರಯೋಜನವೇನೂ ಆಗಿಲ್ಲ.

ಒಟ್ಟಿನ ಮೇಲೆ ಶಿಕ್ಷಣ ಖಾತೆಯಲ್ಲಿ ವೆಚ್ಚವಾಗುವ ಹಣದ ಸಾರ್ಥಕವಾಗ ೀಕಾದರೆ ನಿರರ್ಥಕ ವೆಚ್ಚವನ್ನು ಕಡಿಮೆ ಮಾಡುವದು ಮೊದಲನೆಯ ಕಾರ್ಯ ಮವಾಗಿರಬೇಕು. ಶಾಲೆಗೆ ಹೋಗುವ ಹುಡುಗರು ಕ್ರಮದಿಂದ ಹೋಗಿ

ಸಾಕ್ಷರಿಗಳಾಗುವಂತೆ ಮಾಡಬೇಕಾದರೆ ಶಾಲೆಗಳಲ್ಲಿ ಶಿಕ್ಷಣ ಕಾರ್ಯವು ಸುಸೂತ್ರವಾಗಿಯೂ ಮೇಲ್ತರಗತಿಯದಾಗಿಯೂ ಸಾಗುವಂತೆ ಮಾಡಬೇಕಾಗುವದು. ಶಿಕ್ಷಕರ ಯೋಗ್ಯತೆಯೂ ಆ ಶಿಕ್ಷಕರಿಗೆ ದೊರೆಯುವ ಶಿಕ್ಷಣಕ್ರಮವೂ ಇದಕ್ಕೆ ಅಂಶತಃ ಕಾರಣವಾಗಿವೆ. ಆದಕ್ಕಾಗಿ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಸಂಸ್ಥೆಗಳ ಹಾಗು ಪ್ರಾಥಮಿಕ ಶಾಲೆಗಳ ಅಭ್ಯಾಸಪತ್ರಿಕೆಯಲ್ಲಿ ತಕ್ಕ ಬದಲಾವಣೆ ಮಾಡುವ ವಿಚಾರವು ಅನೇಕ ಪ್ರಾಂತಗಳಲ್ಲಿ ನಡೆದಿರುವದು. ಸರಕಾರವೂ ಸ್ಥಾನಿಕ ಸಂಸ್ಥೆಗಳೂ ಈ ವಿಷಯದಲ್ಲಿ ಸಾಕಷ್ಟು ಲಕ್ಷ್ಯವೂರೈಸ ತೊಡಗಿರುವದು ಶುಭಲಕ್ಷಣವಾಗಿದೆ.

ಇಂಗ್ಲಂಡದೇಶದ ಒಂದು ಹಳ್ಳಿಯ ಶಾಲೆಯು

ಮೆ|| ತಾವಡೆ ಸಾ|| ಎಂ ಎ. ಅವರ ಮರಾಠಿ ಲೇಖದ ಆಧಾರದಿಂದ

[ಜೂನ ತಿಂಗಳಿನಿಂದ ಮುಂದುವರಿದುದು]

ಇಂಗ್ಲಂಡದ ಹಳ್ಳಿಯ ಹುಡುಗರು ಸಹ ಮನೆಗೆಲಸಗಳಲ್ಲಿ ತೊಡಗಿ ಪೇಟೆಗೆ ತಮ್ಮ ಪಿಂಡುವ ದನಗಳನ್ನು ಒಯ್ಯುವದಲ್ಲದೆ ಅವಕ್ಕೆ ಬೇಕಾಗುವ ಕಣಿಕೆ ನೀರುಗಳನ್ನು ಸಹ ಸಂಗಡ ಒಯ್ಯುತ್ತಾರೆ. ದೊಡ್ಡ ಹುಡುಗರು ತಮ್ಮ ತಮ್ಮ ಅಕಳುಗಳ ಹಾಲನ್ನು ಪಿಂಡಿ ಮಾರುತ್ತಾರೆ. ಹೀಗೆಯೇ ಹೆಣ್ಣು ಮಕ್ಕಳಿಗೂ ಹಲವು ಕೆಲಸಗಳು ಇದ್ದೇ ಇರುತ್ತವೆ. ಆದದರಿಂದ ಅವರು ಶಾಲೆಗಳಿಗೆ ಒಮ್ಮೊಮ್ಮೆ ತಡಮಾಡಿ ಬರುತ್ತಾರೆ. ಹೀಗೆ ತಡಮಾಡಿ ಬಂದವರಿಗೆ ಶಿಕ್ಷಕೆಯರು ಬುದ್ಧಿಗಲಿಸುವರು. ಅವರ ಪಾಲಕರಿಗೆ ಭೆಟ್ಟಿಯಾಗಿ ಅವರಿಗೂ ತಿಳಿ ಹೇಳುವರು. ಆದರಿಂದ ನಿಯಮಿತತನದಿಂದ ಸಕಾಲಕ್ಕೆ ಹುಡುಗರು ಶಾಲೆಗೆ ಬರಲಿಕ್ಕೆ ಅನುಕೂಲವಾಗುವದು. ಹುಡುಗರು ಶಾಲೆಗೆ ಬಂದ ಕೂಡಲೆ ಶಾಲೆಯ ಕೆಲಸವು ಆರಂಭವಾಗುವದು. ಬಹುತರವಾಗಿ ಇಂಗ್ಲಂಡದ ಎಲ್ಲ ಶಾಲೆಗಳಲ್ಲಿ ಆರಂಭದ ಪಾಠವು ಧಾರ್ಮಿಕ ಶಿಕ್ಷಣಕ್ಕಾಗಿಯೇ ಕಾದಿಡಲ್ಪಟ್ಟಿರುವದು. ಈ ಮೊದಲನೆಯ ತಾಸಿನಲ್ಲಿ ಈಶ ಪ್ರಾರ್ಥನೆಯನ್ನಾಗಲಿ, ಬಾಯಿಬಲ್ಲಿನೊಳಗಿನ ಸಂಗತಿಗಳ ಚರ್ಚೆಯನ್ನಾಗಲಿ ಮಾಡುವರು. ಆ ಮೇಲೆ ಶಾಲೆಯೊಳಗಿನ ವಿಷಯಗಳ ಅಭ್ಯಾಸವನ್ನು ಪ್ರಾರಂಭಿಸುವರು. ನಮ್ಮ ದೇಶದೊಳಗಿನ ಹಳ್ಳಿಗರ ಭಾಷೆಯಂತೆ ಅಲ್ಲಿಯ ಹಳ್ಳಿಗರ

ಭಾಷೆಯೂ ಅಶುದ್ಧವೂ ಅಸ್ಪಷ್ಟವೂ ಆಗಿರುತ್ತದೆ ಇಂಗ್ಲಂಡ ದೇಶದಲ್ಲಿ ಇಂಗ್ಲಿಷ ಭಾಷೆಯು ಸರ್ವಸಾಮಾನ್ಯವಾಗಿದ್ದರೂ ಬೇರೆ ಬೇರೆ ಭಾಗಗಳ ಭಾಷೆಯಲ್ಲಿ ಹೆಚ್ಚು ಕಡಿಮೆಯು ಕಂಡುಬರುತ್ತದೆ. ಶಬ್ದಗಳ ಉಚ್ಚಾರದಲ್ಲಿಯೂ ವಿವಿಧತ್ವವು ತೋರುವದು. ಇಂಗ್ಲಂಡದ ಭಾಷೆಗಿಂತ ವೇಲ್ಸಿನ ಭಾಷೆಯು ತೀರ ಬೇರೆತರ ದ್ದಾಗಿ ಕಾಣುವದು. ಸ್ಕಾಟ್ಲಂಡದ ಭಾಷೆಯು ಸಹ ಸ್ವಲ್ಪ ಹೆಚ್ಚು ಕಡಿಮೆ ಬೇರೆ ತರದ್ದಾಗಿ ತೋರುವದು. ಹಳ್ಳಿಯ ಶಾಲೆಗಳಲ್ಲಿ ಅವನ್ನೆಲ್ಲ ಸರಿಪಡಿಸಲಿಕ್ಕೆ ಶಿಕ್ಷಕರು ಯತ್ನಿಸುತ್ತಿರುತ್ತಾರೆ. ಇಲ್ಲಿಂದ ಹೋದವರಿಗೆ ಅಲ್ಲಿಯ ಹಳ್ಳಿಗರ ಭಾಷೆಯು ತಿಳಿಯುವದಿಲ್ಲ. ಗ್ರಂಥಸ್ಥ ಭಾಷೆಯು ಮಾತ್ರ ಎಲ್ಲೆಡೆಯಲ್ಲಿಯೂ ಶುದ್ಧವಾಗಿರುತ್ತದೆ. ಶಾಲೆಗೆ ಬರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಭಾಷೆಯ ನ್ನಾದರೂ ಸುಧಾರಿಸಬೇಕೆಂದು ಶಿಕ್ಷಕ ಶಿಕ್ಷಿಕೆಯರು ಬಹಳವಾಗಿ ಯತ್ನಿಸುತ್ತಿರು ವರು. ಇದು ಒಮ್ಮೆಲೆ ಆಗತಕ್ಕ ಕೆಲಸವಲ್ಲ. ಹುಡುಗರ ಕೂಡ ಮೇಲೆ ಮೇಲೆ ಸಂಭಾಷಣ ಮಾಡಿ ಸರಿಯಾದ ಶಬ್ದಗಳನ್ನೂ ಆವುಗಳ ಉಚ್ಚಾರವನ್ನೂ ಸುಧಾರಿ ಸಲಿಕ್ಕೆ ಹವಣಿಸುತ್ತಿರುತ್ತಾರೆ. ಹುಡುಗರಾದರೂ ದೊಡ್ಡವರಾಗುತ್ತ ನಡೆದ ಹಾಗೆ ತಮ್ಮ ಭಾಷೆಯಲ್ಲಿ ತಿದ್ದುಪಡಿಮಾಡಿಕೊಳ್ಳಲಿಚ್ಛಿಸುತ್ತಾರೆ.

ಈ ಶಾಲೆಯಲ್ಲಿ ಉಪಕರಣಗಳ ಕೊರತೆಯೇನೂ ಇರುವದಿಲ್ಲ. ಎಲ್ಲ ವಿದ್ಯಾರ್ಥಿಗಳಿಗೆ ಬೇಕಾಗುವಷ್ಟು ಪುಸ್ತಕಗಳೂ ಲೇಖನ ಸಾಹಿತ್ಯಗಳೂ ಬೋರ್ಡಿನವರಿಂದ ಸೊರೆದಿರುತ್ತವೆ. ಇವು ಅಲ್ಲದೆ ಶಿಕ್ಷಣ ಕಾರ್ಯಕ್ಕೆ ಬೇಕಾಗುವ ಸಾಹಿತ್ಯಗಳೆಲ್ಲ ಬೋರ್ಡಿನವರಿಂದ ಬೇಡಿದಾಗ ದೊರೆಯುತ್ತವೆ. ಈ ಉಪಕರಣಗಳ ವಿಷಯದಲ್ಲಿ ಇಂಗ್ಲಂಡದಲ್ಲಿಯ ಶಿಕ್ಷಕರು ಸುಖಿಗಳೇ ಸರಿ. ಪ್ರತಿಯೊಂದು ಶಾಲೆಗೆ ಜೋಡಿಸಿ ವಿದ್ಯಾರ್ಥಿಗಳ ವಾಚನಾಲಯವಿರುತ್ತದೆ. ಇದರ ಹೊರತಾಗಿ ಒಂದು ಪಿಯಾನ ವನ್ನು ಕೊಟ್ಟಿರುತ್ತಾರೆ. ಸಣ್ಣ ಶಾಲೆಗಳಿಗೆ ಸಹ ಆಟದ ಬಯಲು ಇರುತ್ತದೆ. ನಮ್ಮಲ್ಲಿಯ ಹಳ್ಳಿಯ ಶಾಲೆಗಳಲ್ಲಿ ಕಟ್ಟಡ ಹಾಗು ಆಟದ ಬಯಲು, ವಾಚನಾಲಯ, ತೋಟ ಇವೇನ್ನವುಗಳ ಕೊರತೆಯಿರುತ್ತದೆ. ಸಾಕಷ್ಟು ಸ್ಥಳದ ಅಭಾವವೇ ಇದಕ್ಕೆ ಕಾರಣವಾಗಿರುತ್ತದೆ. ನಮ್ಮದೇಶವು ಒಕ್ಕಲತನದ್ದಾದ್ದರಿಂದ, ದನಗಳಮನೆ, ಪಸ ನಿಲ್ಲುವ ಸ್ಥಳ, ಮೇವಿಗಾಗಿ ಕಾದಿಟ್ಟಸ್ಥಳ, ಹೊಲ ಇತ್ಯಾದಿಗಳಿಗಾಗಿ ಭೂಮಿಯ ಆವಶ್ಯಕತೆಯಿದೆ. ಕೆಲವೆಡೆ ಮಾತ್ರ ಶಾಲೆಯು ಪಟಾಂಗಣದಲ್ಲಿಯೇ ತೋಟದ ಅನುಕೂಲತೆಯಿರುತ್ತದೆ. ಹಳ್ಳಿಯ ಶಾಲೆಗಳಲ್ಲಿಸಹ ಸ್ಥಳದ ಅಭಾವದ ಮೂಲಕ ಕುಂಡಿಗೆಗಳಲ್ಲಿ ಗಿಡಗಳನ್ನು ಬೆಳೆಯಿಸಿ ಸೃಷ್ಟಿ ನಿರೀಕ್ಷಣೆಯ ಪಾಠ ಸಾಗಿ ಸುತ್ತಾರೆ.

ಈ ಶಾಲೆಯು ಯಾರ್ಕಶಾಯರದಲ್ಲಿರುವುದರಿಂದ ಅಲ್ಲಿಯ ಪಾಲಕರ ಸ್ಥಿತಿ ಗತಿ ತಿಳಿಯುವದಕ್ಕಾಗಿ ಅವರ ಉದ್ಯೋಗ ಸ್ಥಿತಿಗತಿಗಳ ವಿಷಯವಾಗಿ ಸ್ವಲ್ಪ ವಿಚಾರಿಸೋಣ.

ಈ ಪರಗಣಿಯಲ್ಲಿ ನಮ್ಮಲ್ಲಿಯಂತೆ ಪೈರು ಬೆಳೆಯುವ ಹೊಲಗಳಿಲ್ಲ. ಊರ ಮನೆಗಳ ಎಡಬಲಗಳಲ್ಲಿ ಮಾತ್ರ ಪಲ್ಲೆಕಾಯಿ ಬೆಳೆಯಿಸುವ ಸಣ್ಣ ತೋಟಗಳಿವೆ. ಊರ ಹೊರಗೆ ಲೈನವಾರ್ಗದ ಎಡಬಲಗಳಲ್ಲಿ ನಮ್ಮಲ್ಲಿಯಂತೆ ಹೊಲಗಳಿರುವ ಬದಲು ಹುಲ್ಲುಬೆಳೆಯುವ ಭೂಮಿಗಳಿವೆ. ಆ ಅಡವಿಗಳಲ್ಲಿ ಆಕಳು ಕುರಿಗಳ ಕೋಳಿಗಳು ತಿರುಗುತ್ತಿರುತ್ತವೆ.

ಇಲ್ಲಿಯ ಒಕ್ಕಲಿಗರು ನಡತೆಯಿಂದ ಸರಳರಿರುವರು. ಜನರ ಕೂಡ ಪ್ರೇಮದಿಂದ ನಡೆಯುವರು. ಒಕ್ಕಲಿಗರ ಕುಟುಂಬದ ಜನರು ತಮ್ಮ ತಮ್ಮ ಒಕ್ಕಲತನದ ಉದ್ಯೋಗದಲ್ಲಿ ಅಂದರೆ ಪಲ್ಲೆ ಕಾಯಿಗಳನ್ನು ಬೆಳೆಯಿಸುವ ಕೆಲಸದಲ್ಲಿ ಇಲ್ಲವೆ ಕುರಿ, ಕೋಳಿಗಳ ಸಂಗೋಪನದ ಕೆಲಸದಲ್ಲಿ ತೊಡಗಿರುವರು. ಚಳಿಯು ಹೆಚ್ಚಾಗಿರುವದರಿಂದ ಹೊಲದಲ್ಲಿ ಹೇಳಿಕೊಳ್ಳುವಂತೆ ಪೈರು ಬೆಳೆಯುವದಿಲ್ಲ. ಆದುದರಿಂದ ಒಕ್ಕಲತನದ ಕೆಲಸವಾದರೂ ಅಷ್ಟಕ್ಕಷ್ಟೇ ಇರುವದು. ಆದರೂ ಆಕಳು ಹಿಂಡುವದು, ಹಾಲು ಕಾದಿಡುವದು, ಸಂತೆಯಲ್ಲಿ ಮಾರತಕ್ಕ ತತ್ತಿಗಳನ್ನು ಸಂಗ್ರಹಿಸುವದು, ದನಕರುಗಳನ್ನು ಮಾರುವದಕ್ಕಾಗಿ ಸಂತೆಗೆ ಒಯ್ಯುವದು ಇತ್ಯಾದಿ ಕೆಲಸಗಳನ್ನೆಲ್ಲ ರೈತರು ಮಾಡಬೇಕಾಗುತ್ತದೆ. ಇವುಗಳಲ್ಲೆಲ್ಲ ಲಾಭವಿರುವದರಿಂದ ಇಲ್ಲಿಯ ರೈತರು ಧನಿಕರಿರುತ್ತಾರೆ. ಅವರ ಮನೆಗಳು ಸ್ವಂತ ಮೋಟಾರಗಳಿರುತ್ತವೆ. ಅವರು ತಮ್ಮ ಕೆಲಸಗಳನ್ನೆಲ್ಲ ಸ್ವತಃ ಮಾಡಿಕೊಳ್ಳುತ್ತಾರೆ. ಲಂಡನವೊಂದನ್ನು ನೋಡಿದರೆ ಇಂಗ್ಲಂಡದೇಶದ ಪರಿಚಯ ವಾದಂತಾಗುವದಿಲ್ಲ. ಸುತ್ತಲಿನ ಹಳ್ಳಿಗಳನ್ನು ನೋಡಿದರೆ ಅಲ್ಲಿಯ ಜನರ ಸ್ಥಿತಿ-ಗತಿ-ಸ್ವಭಾವಗಳು ಗೊತ್ತಾಗುವವು. ಹಳ್ಳಿಗಳಲ್ಲಿಯ ಹುಡುಗರ ಪಾಲಕರ ಅಂದರೆ ರೈತರು ಸ್ವಚ್ಛ ಮನಸ್ಸಿನವರೂ ಸರಳ ಸ್ವಭಾವದವರೂ ಇರುವರು. ಆವ ಹುಡುಗರು ಸಹ ಹಾಗೆಯೇ ಇರುತ್ತಾರೆ.

ಅಲ್ಲಿಯ ಶಿಕ್ಷಕರಿಗೆ ನಮ್ಮಲ್ಲಿಯಂತೆ ಅಭ್ಯಾಸಪತ್ರಿಕೆಯನ್ನು ನಿಶ್ಚಿತಪಡಿಸಿ ಕೊಟ್ಟಿರುವದಿಲ್ಲ. ಶಿಕ್ಷಕರು ತಾವೇ ಪರಂಪರೆಯಿಂದ ಬಂದದ್ದರಲ್ಲಿ ಪರಿಸ್ಥಿತಿಯನ್ನನುಸರಿಸಿ ಹೆಚ್ಚು ಕಡಿಮೆ ಮಾಡಿ ಗೊತ್ತುಮಾಡಿಕೊಳ್ಳುತ್ತಾರೆ. ಶಾಲೆಯ ಮುಖ್ಯ ಶಿಕ್ಷಕ ಶಿಕ್ಷಿಕೆಯರು ವರ್ಷಕ್ಕೊಮ್ಮೆ ವಿಚಾರಿಸಿ ವರ್ಗಗಳನ್ನು ಬದಲು ಮಾಡಿಕೊಳ್ಳುತ್ತಾರೆ. ಶಾಲಾಧಿಕಾರಿಗಳು ಬಂದು ಶಾಲೆಯ ಕೆಲಸವು ಚೆನ್ನಾಗಿ

ಸ್ಥಿದಿರುವದನ್ನು ನೋಡಿಕೊಂಡು ಹೋಗುತ್ತಿರುತ್ತಾರೆ. ಶಾಲೆಗೆ ಹೆಡ್‌ಮಾಸ್ತರನೇ ಮುಖ್ಯನು. ಶಾಲಾಧಿಕಾರಿಯು ಒಳಗೆ ಬರುವಾಗ ಸಹ "ನಾನು ಒಳಗೆ ಬರ ಬಹುದೋ" ಎಂಬದಾಗಿ ಕೇಳಿ ಬರುತ್ತಾನೆ. ಅಧಿಕಾರಿಗಳನ್ನು ಕಂಡಕೂಡಲೆ ಶಿಕ್ಷಕರು ನಮ್ಮಲ್ಲಿಯಂತೆ ಗಡಿಬಿಡಿ ಮಾಡಲಾರಂಭಿಸುವದಿಲ್ಲ; ಶಾಲೆಯು ಮುಂಚಾ ಗಿನ ಬದಿಯಲ್ಲಿ ಮೋಟಾರ ಬಂದು ನಿಂತರೂ ಶಿಕ್ಷಕರು ತಮ್ಮ ಕೆಲಸದಲ್ಲಿಯೇ ಮಗ್ನರಾಗಿರುವರು. ಒಳಗೆ ಅಧಿಕಾರಿಗಳು ಬಂದಮೇಲೆ ಅವರ ಕೂಡ ಶಿಷ್ಟಾ ಚಾರದಂತೆ ನಡೆದುಕೊಳ್ಳುವರು. ಅಧಿಕಾರಿಗಳ ಕೂಡ ಇಲ್ಲದ ವಿನಯಾದಿಗಳನ್ನು ತೋರಿಸಲಿಕ್ಕೆ ಹವಣಿಸುವದಿಲ್ಲ.

ಇಲ್ಲಿಯ ಹಳ್ಳಿಯ ಶಿಕ್ಷಕರಿಗಿಂತ ಅಲ್ಲಿಯ ಹಳ್ಳಿಯ ಶಿಕ್ಷಕರು ಶಿಕ್ಷಣವನ್ನು ಹೆಚ್ಚಾಗಿ ಪಡೆದವರು ಇರುತ್ತಾರೆ. ಅವರು ಹಾಯಸ್ಕೂಲುಗಳಲ್ಲಿ ತೇರ್ಗಡೆಹೊಂದಿ ೨ವರ್ಷ ಟ್ರೇನಿಂಗ ಹೊಂದಿ ಸುಮಾರು ೨೦ನೆಯ ವರ್ಷಕ್ಕೆ ಶಿಕ್ಷಕ ಕೆಲಸವನ್ನು ಪಡಿಸುತ್ತಾರೆ, ನಮ್ಮಲ್ಲಿ ಹಳ್ಳಿಯ ಶಿಕ್ಷಕರು ವ್ಹ. ಫಾ. ಪರೀಕ್ಷೆಯನ್ನು ಮಾತ್ರ ಪಾಸಾಗಿರುತ್ತಾರೆ, ಶಿಕ್ಷಣದ ಅನುಭವವಿಲ್ಲದೆ ಶಿಕ್ಷಕರಾಗಿ ಮುಂದೆ ಟ್ರೇನಿಂಗ ಕೊಂಡಲು ಯತ್ನಿಸುತ್ತಾರೆ. ಆದುದರಿಂದ ನಮ್ಮಲ್ಲಿಯ ಹಳ್ಳಿಯ ಶಿಕ್ಷಕರ ಜ್ಞಾನವು ಅಷ್ಟಕ್ಕಷ್ಟೇ ಇರುತ್ತದೆ. ಅಲ್ಲಿಯ ಶಿಕ್ಷಕರು ಇಲ್ಲಿಯ ಶಿಕ್ಷಕರಿಗಿಂತ ೫, ೬ ವರ್ಷ ಹೆಚ್ಚಿಗೆ ಶಿಕ್ಷಣಹೊಂದಿ ಅನುಭವ ಪಡೆದಿರುತ್ತಾನೆ, ಇದುದರಿಂದ ಶಿಕ್ಷಣ ಕೆಲಸದಲ್ಲಿ ಅಲ್ಲಿಯ ಶಿಕ್ಷಕರು ನಮ್ಮಲ್ಲಿಯ ಶಿಕ್ಷಕರಿಗಿಂತ ಹೆಚ್ಚು ಯೋಗ್ಯತೆ ಹೊಂದಿರುತ್ತಾರೆ. ಅವರು ತಮ್ಮ ಮೇಲಿನ ಜವಾಬುದಾರಿಯನ್ನು ಪೂರ್ಣ ಅರಿ ತಿರುತ್ತಾರೆ. ನಮ್ಮಲ್ಲಿಯ ಶಿಕ್ಷಕರು ಕಡಿಮೆ ಕಲಿತವರಿರುವದರಿಂದ ತಮ್ಮ ಸೊರತೆಯನ್ನು ತಿಳಿದುಕೊಂಡಿರುತ್ತಾರೆ. ಆದುದರಿಂದ ಅಧಿಕಾರಿಗಳೊಡನೆ ಅಂಜಿಕೆ ಯಿಂದ ನಡೆಯುತ್ತಾರೆ. ಶಿಕ್ಷಕನ ಯೋಗ್ಯತೆಯನ್ನೂ ಜ್ಞಾನವನ್ನೂ ಅನುಭವ ವನ್ನೂ ಬೆಳೆಯಿಸಿ ಅವನನ್ನು ಸ್ವಾವಲಂಬಿಯನ್ನಾಗಿ ಮಾಡಿದರೆ ಮುಂದೆ ಅವನಿಂದ ಯೋಗ್ಯ ವಿದ್ಯಾರ್ಥಿಗಳು ಸಿದ್ಧರಾಗುವರು.

ಯೋಗ್ಯ ಶಿಕ್ಷಕನನ್ನು ಸಿದ್ಧಮಾಡುವ ಮೊದಲು ಶಿಕ್ಷಕನಿಗೆ ಸಾಮಾನ್ಯ ಜ್ಞಾನವು ಹೆಚ್ಚಾಗಿರುವದರ ಕಡೆಗೆ ಲಕ್ಷಗೊಡಬೇಕು. ವ್ಹ. ಫಾ. ಪರೀಕ್ಷೆಯ ವರೆಗಿನ ಜ್ಞಾನವು ತೀರ ಕಡಿಮೆ ಇರುತ್ತದೆ. ಇಂಥವರು ಶಿಕ್ಷಕ ಕೆಲಸಕ್ಕೆ ಬೇಕಾಗುವ ಯೋಗ್ಯತೆಗಿಂತ ಬಹಳ ಕಡಿಮೆಯವರೆಂದೆನಿಸುತ್ತಾರೆ. ಇಂಥವರಿಗೆ ನಮ್ಮಲ್ಲಿಯ ಟ್ರೇನಿಂಗ ಕಾಲೇಜಗಳಿಗೆ ಜೋಡಿಸಿ ೨ ವರ್ಷ ಹೆಚ್ಚಿಗೆ ವಿಷಯ ಜ್ಞಾನಕ್ಕಾಗಿ ಶಿಕ್ಷಣ ಕೊಡಿಸಬೇಕು. ವಿಷಯ ಜ್ಞಾನವು ಹೆಚ್ಚಾದನಂತರ

ಶಿಕ್ಷಣ ಪದ್ಧತಿಯ ಜ್ಞಾನಕ್ಕಾಗಿ ಮತ್ತೆ ೧ ವರ್ಷವಾದರೂ ಶಿಕ್ಷಣಕೊಡಬಹುದು. ಶಿಕ್ಷಕನಿಗೆ ಮೊದಲು ಸಾಕಾದಷ್ಟು ವಿಷಯ ಜ್ಞಾನವುಬೇಕು, ಬಳಿಕ ಶಿಕ್ಷಣ ಪದ್ಧತಿಯ ಜ್ಞಾನವು ಬೇಕು. ಟ್ರೇನಿಂಗ ಕಾಲೇಜಗಳಲ್ಲಿ ಶಿಕ್ಷಣದ ಮರ್ಯಾದೆಯು ೨, ೩ ವರ್ಷಗಳವರೆಗಾದರೂ ಸಡೆಯಲು ಬೇಕು. ಆಂದರೆ ಯೋಗ್ಯ ಶಿಕ್ಷಕರು ಸಿದ್ಧರಾಗುವರು. ಹೀಗಾದರೆ ಸರ್ವಸಾಮಾನ್ಯ ಶಾಲೆಗಳಲ್ಲಿಯ ಶಿಕ್ಷಣವು ಸಹ ಸುಧಾರಿಸಬಹುದು. ಅಭ್ಯಾಸ ಕ್ರಮವನ್ನು ಎಷ್ಟು ಸುಧಾರಿಸಿ ಬೆಳೆಯಿಸಿದರೂ ಶಿಕ್ಷಕನು ಕಾರ್ಯಕ್ಷಮನಾದ ಹೊರತು ಗತ್ಯಂತರವಿಲ್ಲ. ಪ್ರಾ. ಶಾ. ಗಳ ಶಿಕ್ಷಣ–ಅಭ್ಯಾಸಕ್ರಮಗಳನ್ನು ಸುಧಾರಿಸುವಾಗ ಟ್ರೇನಿಂಗ ಕಾಲೇಜಗಳಲ್ಲಿ ಶಿಕ್ಷಣಪಡೆಯುವ ವರ್ಷಗಳನ್ನು ಬೆಳೆಯಿಸಲುಬೇಕು. ಟ್ರೇನಿಂಗ ಕಾಲೇಜಗಳ ಅಭ್ಯಾಸ ಕ್ರಮವನ್ನು ಹೊಂದಲು ಯೋಗ್ಯನಾಗಬೇಕಾದರೆ ಅಂಥ ಅಭ್ಯಾಸ ಕ್ರಮವನ್ನು ತಿಳಿದುಕೊಳ್ಳುವಷ್ಟು ಬುದ್ಧಿವಂತನಾದ ವಿದ್ಯಾರ್ಥಿಯು ಮೊದಲು ಬೇಕು. ಅಲ್ಲಿಯ ಅಭ್ಯಾಸಕ್ರಮವು ಪರಿಪಕ್ವ ಹೊಂದಲಿಕ್ಕೆ ತಕ್ಕಷ್ಟು ಅವಧಿಯು ಮುಂದೆ ಬೇಕು. ಟ್ರೇನಿಂಗ ಕಾಲೇಜಗಳಲ್ಲಿ ಒಂದೇ ವರ್ಷ ಶಿಕ್ಷಣಪಡೆದರೆ ಸಾಕೆಂದು ತಿಳಿಯುವದು ತಪ್ಪು. ಅಲ್ಪ ಅವಧಿಯಲ್ಲಿ ಅವಸರದಿಂದ ತುಂಬಿದ ಜ್ಞಾನವು ಸರಿಯಾಗಿ ಉಪಯೋಗವಾಗಲಾರದು. ಮೊದಲು ಆಗುವ ಪ್ರತಿಯೊಂದು ವಿಷಯವು ಪೂರ್ಣ ತಿಳಿದಮೇಲೆ ಮುಂದಿನ ವಿಷಯವನ್ನು ಕಲಿಯಲು, ವಿದ್ಯಾರ್ಥಿಯು ಯೋಗ್ಯನಾಗುವನು. ಅಭ್ಯಾಸವು ಪೂರ್ಣ ಫಲದ್ರೂಪವಾಗಲಿಕ್ಕೆ ಸಾಕಷ್ಟು ವೇಳೆ ದೊರೆಯಲಿಕ್ಕೆ ಬೇಕು. ಆದುದರಿಂದ ಟ್ರೇನಿಂಗ ಕಾಲೇಜಗಳಲ್ಲಿ ಶಿಕ್ಷಣವು ೨-೩ ವರ್ಷಗಳವರೆಗಾದರೂ ದೊರೆಯಲಿಕ್ಕೇಬೇಕು.

ಮಾಧ್ಯಮಿಕ ಶಾಲೆಗಳ ಶಿಕ್ಷಕರ ಮಾತು ಬೇರೆ. ಅವರು ಹೆಚ್ಚು ಶಿಕ್ಷಣ ಪಡೆದಿರುವರಲ್ಲದೆ ಅವರು ಜ್ಞಾನ ಬೆಳೆಯಿಸಿಕೊಳ್ಳಲು ಬೇಕಾದಷ್ಟು ಪುಸ್ತಕಗಳನ್ನು ದೊರಕಿಸಿಕೊಳ್ಳಬಲ್ಲರು. ಅದರಿಂದ ಅವರ ಕೆಲಸವಾದರೂ ಪದ್ಧತಿಗೆ ಸರಿಯಾಗಿ ನಡೆಯುವದು.

ಇಂಗ್ಲಂಡದೇಶದ ಹಳ್ಳಿಗಳ ಶಿಕ್ಷಕರಾದರೂ ಹೆಚ್ಚು ಇಯತ್ತೆಗಳನ್ನು ಕಲಿಸುವರೆಂದು ಮೇಲೆ ಹೇಳಿದೆ. ಈ ವಿಷಯವಾಗಿ ಶಿಕ್ಷಕರು ತಮಗೆ ತೊಂದರೆಯಾಗಿದೆಯೆಂದು ಎಂದೂ ಅನ್ನಲಾರರು. ಹಾಗು ಕೈಸಾಗದೆ ನಿರಾಶರಾಗಿ ಕೂಡಲಾರರು. ತಾವು ಕಲಿಸುವ ಎಲ್ಲ ವರ್ಗಗಳ ಅಭ್ಯಾಸವು ಚೆನ್ನಾಗಿ ಸಾಗುವ ಬಗ್ಗೆ ವಿಚಾರಮಾಡಿಕೊಂಡು ಅವರಿಗೆ ಚೆನ್ನಾಗಿ ಕಲಿಸಲು ಸಾಕಾಗುವಷ್ಟು ವಿಷಯವನ್ನು ಗೊತ್ತುಮಾಡಿಕೊಂಡು ವೇಳೆಗೆ ಸರಿಯಾಗಿ ಕಲಿಸುತ್ತ ಸಾಗುವರು.

ವರು ಕಲಿಸತಕ್ಕ ವಿಷಯಗಳು ಸ್ವಲ್ಪ ಇರುವವೆಂದು ತಿಳಿಯಲಾಗದು. ಕೆಳಗೆ ವಿವರಿಸಿದಂತೆ ಅವರು ಕಲಿಸುವ ವಿಷಯಗಳು ಇರುವವ್ರ.

೧ ಧಾರ್ಮಿಕ ಶಿಕ್ಷಣ, ೨ ಗಣಿತ, ೩ ಭಾಷೆ, ೪ ಲೇಖನ. ೫ ವಾಚ್ಯಾಯ ೬ ಇತಿಹಾಸ, ೭ ಭೂಗೋಲ, ೮ ಶಾರೀರಿಕ ಶಿಕ್ಷಣ, ೯ ಹಸ್ತವ್ಯವಸಾಯ, ೧೦ ಚಿತ್ರಕಲೆ, ೧೧ ಹೊಲಿಗೆಯ ಕೆಲಸ. ೧೨ ತೋಟದ ಕೆಲಸ ೧೩ ಗಾಯನ.

ಪ್ರತಿಯೊಂದು ವರ್ಷದ ಮುಂಚೆ ಈ ವಿಷಯಗಳನ್ನು ಪ್ರತಿಯೊಂದು ವರ್ಗಕ್ಕೆ ಎಷ್ಟೆಷ್ಟು ಕಲಿಸತಕ್ಕದ್ದಿರುತ್ತದೆಂದು ಗೊತ್ತುಪಡಿಸಿ ಬರೆಸಿ ಅಧಿಕಾರಿಗಳಿಗೆ ತೋರಿಸುವರು. ಈ ಗೊತ್ತುಪಟ್ಟಿಯಲ್ಲಿ ವಿಷಯಗಳ ಸಂಪೂರ್ಣ ವಿವರವಿರುವದು. ಅಂದರೆ ವಾಚನ ಪಾಠಗಳ ಹೆಸರು, ಕವಿತೆಗಳ ಹೆಸರು, ಗಣಿತ ಸಂಗ್ರಹ ಇತ್ಯಾದಿ.

ಈ ರೀತಿಯಾಗಿ ವಿಷಯಗಳನ್ನು ವರ್ಗೀಕರಿಸುವದು ಶಿಕ್ಷಕರ ಕೈಯಲ್ಲಿಯೇ ಇರುವದರಿಂದ ಬೇರೆ ಬೇರೆ ಶಾಲೆಗಳ ಅಭ್ಯಾಸ ಕ್ರಮದಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸವಾಗಬಹುದು. ಈ ಪದ್ಧತಿಯು ಪರಂಪರೆಯಿಂದ ಬಂದಿರುವದರಿಂದ ಹಿಂದಿನವನ್ನೇ ಹೆಚ್ಚು ಕಡಿಮೆಯಾಗಿ ಅನುಸರಿಸಿ ಮುಂದಿನ ಅಭ್ಯಾಸಕ್ರಮವನ್ನು ಶಿಕ್ಷಕರು ಗೊತ್ತುಮಾಡುತ್ತಾರೆ. ಆದದರಿಂದ ಒಟ್ಟಿಗೆ ಅಭ್ಯಾಸ ಕ್ರಮವು ಬೇರೆ ಬೇರೆ ಶಾಲೆಗಳಲ್ಲಿ ಹೇಳಿಕೊಳ್ಳುವಷ್ಟು ಅಂತರವುಳ್ಳದ್ದಾಗಿ ತೋರಿಬಂದಿರುವದಿಲ್ಲ. ಹೆಚ್ಚು ಕೆಲಸವನ್ನು ಮಾಡಿ ತೋರಿಸತಕ್ಕ ಶಿಕ್ಷಕರು ಯೋಗ್ಯಕಾರಣವನ್ನು ಬರೆದು ತೋರಿಸಬೇಕಾಗುತ್ತದೆ. ಬಳಿಕ ಅಧಿಕಾರಿಗಳು ವಿಚಾರಿಸಿ ಅಭ್ಯಾಸ ಕ್ರಮಕ್ಕೆ ತಮ್ಮ ಸಮ್ಮತಿಯನ್ನು ಕೊಡುವರು. ತಮಗೆ ತೋರಿದ ಸೂಚನೆಗಳನ್ನು ಅದರ ಕೆಳಗೆ ಬರೆಯುವರು. (ಎಲ್ಲ ವರ್ಗಗಳಿಗೆ ಸಾಕಷ್ಟು ವಿಷಯವಾಯಿತೋ ಇಲ್ಲವೋ, ಎಲ್ಲ ಶಿಕ್ಷಕರಿಗೂ ಕೆಲಸವು ಸರಿಯಾಗಿ ಬಿದ್ದಿರುವದೋ ಇಲ್ಲವೋ ಇತ್ಯಾದಿ.) ಈ ಎಲ್ಲ ವಿಚಾರಗಳಿಗೂ ಅಧಿಕಾರಿಗಳು ಗಮನಿಸುವರು. ಯಾವ ವರ್ಗಗಳಿಗೆ ತಕ್ಕಷ್ಟು ಯೋಗ್ಯತೆಯು ಬಂದಿರುವದೋ ಇಲ್ಲವೋ ಎಂಬುದರ ಕಡೆಗೆ ಅಧಿಕಾರಿಗಳ ಲಕ್ಷ್ಯವಿರುವದು. ಒಂದು ಶಾಲೆಯಲ್ಲಿ ಒಂದು ವರ್ಗಕ್ಕೆ ಸ್ವಲ್ಪ ಕವಿತೆಗಳು ಅಥವಾ ಮತ್ತೇನಾದರೂ ವಿಷಯಗಳು ಹೆಚ್ಚಾಗಿರಬಹುದು. ಅಥವಾ ಕಡಿಮೆ ಆಗಬಹುದು. ಇಂಥ ಸಣ್ಣ ಸಂಗತಿಗಳ ಬಗ್ಗೆ ಲಕ್ಷ್ಯ ಕೊಡುವದಿಲ್ಲ. ಒಂದು ಶಾಲೆಯಿಂದ ಒಬ್ಬ ವಿದ್ಯಾರ್ಥಿಯು ಮತ್ತೊಂದು ಶಾಲೆಗೆ ಹೋಗುವದಾದರೆ ಹಿಂದಿನ ಶಾಲೆಯಲ್ಲಿ ಕಲಿತ ಇಯತ್ತೆಯ ಮುಂದಿನ

ಇಯತ್ತೆಗೆ ಹಾಕುವ ಪರಂಪರೆಗೆ ಲಕ್ಷ್ಯಗೊಡದೆ, ಇವನು ಯಾವ ಇಯತ್ತೆಗೆ ಯೋಗ್ಯನಿರುವನೆಂಬದನ್ನು ಪರೀಕ್ಷಿಸಿ ಆ ಪ್ರಕಾರ ಮಾಡುವರು. ಹೀಗೆ ಶಾಲೆಗಳನ್ನು ಬದಲಿಸುವ ಪ್ರಸಂಗವಾದರೂ ವಿಶೇಷವಾಗಿ ಬರುತ್ತಿರುವದಿಲ್ಲ. ಶಿಕ್ಷಕರಿಗೆ ಇಲ್ಲಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಅಲ್ಲಿ ಕೊಟ್ಟಿದ್ದರೂ ಶಿಕ್ಷಕರಾದರೂ ಜವಾಬುದಾರಿಯಿಂದಲೂ ಕಾರ್ಯಕ್ಷಮತೆಯಿಂದಲೂ ಕೆಲಸಮಾಡುವರೆಂಬ ಅಧಿಕಾರಿಗಳ ಅಭಿಪ್ರಾಯವಿದೆ. ಪ್ರಾ. ಶಾ. ಗಳಲ್ಲಿ ವಿದ್ಯಾರ್ಥಿಗಳ ವಯಸ್ಸಿನ ಗಳನೆಯ ವರ್ಷವು ಪೂರ್ಣ ಮುಗಿದಬಳಿಕ ಪ್ರತ್ಯೇಕ ಪರೀಕ್ಷೆಯೇನೂ ಇರುವದಿಲ್ಲ. ಆ ಶಾಲೆಯ ಹೆಡ್‌ಮಾಸ್ತರನು ಈ ವಿದ್ಯಾರ್ಥಿಯು ಇಂಥ ಇಂಥ ವಿಷಯಗಳನ್ನು ಇಷ್ಟು ಇಷ್ಟು ಕಲಿತಿರುವನೆಂದು ಸರ್ಟಿಫಿಕೇಟ ಕೊಟ್ಟರೆ ತೀರಿತು, ಈ ಸ್ವಾಭಾವಿಕ ದಾಖಲೆಯ ಮೇಲೆಯೇ ಎಲ್ಲಿ ಹೋದರೂ ಅವನಿಗೆ ತಕ್ಕ ಬೆಲೆಯು ದೊರೆಯುವದು.

ಬಾಲಕರ ವರ್ಗಕ್ಕೆ ಗೊತ್ತುಮಾಡಿದ (ಪೀರಿಯಡ್ಡುಗಳ) ಪ್ರತಿಯೊಂದು ವಿಷಯದ ಕಲಿಸುವ ಅವಧಿಯು ೨೦ ನಿಮಿಟುಗಳವರೆಗೂ ಮೇಲಿನ ವರ್ಗಗಳ ವಿದ್ಯಾರ್ಥಿಗಳ ಅವಧಿಯು ೪೦ ನಿಮಿಟುಗಳ ವರೆಗೂ ಇರುವದು. ಪ್ರತಿಯೊಬ್ಬ ಶಿಕ್ಷಕನು ತಾನು ಕಲಿಸುವ ೪, ೫ ಇಯತ್ತೆಗಳಿಗೂ ಬೇರೆ ಬೇರೆಯಾಗಿ ಕೆಲಸಗಳನ್ನು ಕೊಟ್ಟು ತಾನು ಕಲಿಸುವ ಇಯತ್ತೆಗಳನ್ನು ವೇಳೆಗೆ ಸರಿಯಾಗಿ ಕಲಿಸುತ್ತ ಇರುವನು. ಎಲ್ಲ ಇಯತ್ತೆಗಳ ಅಭ್ಯಾಸವು ಶಾಂತರೀತಿಯಿಂದ ಸಾಗುವದನ್ನು ನೋಡಿಕೊಳ್ಳುತ್ತ ಇರುವನು. ೪, ೫ ಇಯತ್ತೆಗಳು ಒತ್ತಟ್ಟಿಗೆ ಬೇರೆತರೂ ಇಲ್ಲದ ಗದ್ದಲವು ಆಗುವದಿಲ್ಲ. ಸ್ವಲ್ಪ ಆದರೂ ಅದು ಮಿತಿಯಲ್ಲಿ ಇರುವದು. ಬೈಲೊಳಗೆ ಆಡಲಿಕ್ಕೆ ಹೋದಾಗ ಮಾತ್ರ ಸ್ವಲ್ಪ ಹೆಚ್ಚು ಗದ್ದಲವಾದರೂ ಅದು ಸಹ ಮಿತಿಮೀರುವದಿಲ್ಲ.

ವರ್ಗದಲ್ಲಿ ಸ್ವಲ್ಪ ಗದ್ದಲವಿದ್ದರೆ ಶಿಕ್ಷಕನು ಒಳಗೆ ಬಂದಕೂಡಲೆ ತೀರ ಶಾಂತವಾಗುತ್ತದೆ. ಒಬ್ಬರೊಬ್ಬರ ಕೂಡ ಮಾತನಾಡುವ, ನಡೆಯುವ ತಕ್ಕ ಪಾಠವು ಇಂಗ್ಲಿಷ ವಿದ್ಯಾರ್ಥಿಗಳಿಗೆ ತೀರ ಚಿಕ್ಕತನದಿಂದಲೇ ದೊರೆತಿರುತ್ತದೆ. ಆದದರಿಂದ ಶಾಲೆಯಲ್ಲಿ ಇಲ್ಲದಿದ್ದ ಗದ್ದಲವು ಕೇಳಬರುವದಿಲ್ಲ. ಶಿಕ್ಷಕನು ವರ್ಗದಲ್ಲಿ ಶಾಂತರೀತಿಯಿಂದ ತಕ್ಕಸ್ವರದಿಂದ ಮಾತನಾಡುತ್ತಿರುತ್ತಾನೆ. ಏರಿಕೆಯ ಸ್ವರವು ಎಂದೂ ಕೇಳಬರುವದಿಲ್ಲ. ಯಾವದೊಂದು ವರ್ಗದಲ್ಲಿ ನಾಲ್ಕೇ ವಿದ್ಯಾರ್ಥಿಗಳಿದ್ದರೆ ಅವರ ಹತ್ತಿರವೇ ಹೋಗಿ ಅವರಿಗೆ ಕೇಳಿಸುವ ಸ್ವರದಿಂದ ಕಲಿಸಿ ತಿರುಗಿ ಮತ್ತೊಂದು ವರ್ಗಕ್ಕೆ ಸಾಗುತ್ತಾನೆ.

ವ್ಯಕ್ತಿಶಿಕ್ಷಣ

ಇಂಗ್ಲಂಡದೇಶದ ಹಳ್ಳಿಯ ಶಾಲೆಯಲ್ಲಿ ವ್ಯಕ್ತಿಶಿಕ್ಷಣಕ್ಕೆ ವರ್ಗಶಿಕ್ಷಣಕ್ಕಿಂತ ಹೆಚ್ಚು ಪ್ರಾಧಾನ್ಯವಿದೆ. ಶಿಕ್ಷಕನು ಪ್ರತಿ ವಿದ್ಯಾರ್ಥಿಯ ಹತ್ತಿರ ನಿಂತು, ಇಲ್ಲವೆ ಅವನಲ್ಲಿ ಕುಳಿತು ಅವನಿಗೆ ಬಂದ ತೊಂದರೆಗಳನ್ನು ಅರಿತು ಅದನ್ನು ಸುಧಾರಿಸಿ ಬರೆಸಿಕೊಡುತ್ತಿರುತ್ತಾನೆ. ಪ್ರತಿಯೊಂದು ವರ್ಗಕ್ಕೆ ವಾರದಲ್ಲಿ ಮಾಡಿಸುವ ಅಭ್ಯಾಸದ ಅಂದಾಜಪತ್ರಿಕೆಯನ್ನು ಮೊದಲೇ ಶಿಕ್ಷಕನು ಗೊತ್ತುಮಾಡಿ ಇಟ್ಟಿರುತ್ತಾನೆ. ಅದನ್ನು ನೋಡಿ ವಿದ್ಯಾರ್ಥಿಗಳಾದರೂ ತಾವು ಮುಂದಿನವಾರದಲ್ಲಿ ಮಾಡಿ ಮುಗಿಸುವ ಅಭ್ಯಾಸದ ಮೇರೆಯನ್ನು ಅರಿಯುತ್ತಾರೆ. ಆ ಅಂದಾಜಪತ್ರಿಕೆಯೊಳಗಿನ ಎಷ್ಟೋ ವಿಷಯಗಳನ್ನು ವಿದ್ಯಾರ್ಥಿಗಳು ಸ್ವತಃ ಪ್ರಯತ್ನದಿಂದ ಮಾಡುತ್ತಾರೆ. ತೀರ ಹೊಸದಾಗಿ ಕಲಿಸುವ ಭಾಗವನ್ನು ಮಾತ್ರ ಶಿಕ್ಷಕನು ತಿಳಿಸಿಕೊಟ್ಟರೆ ತೀರಿತು, ಮಿಕ್ಕುದ್ದನ್ನೆಲ್ಲ ಸ್ವಪ್ರಯತ್ನದಿಂದ ವಿದ್ಯಾರ್ಥಿಗಳು ಮಾಡಲು ಪ್ರಯತ್ನಿಸುತ್ತಾರೆ. ಶಿಕ್ಷಕನು ವರ್ಗದಲ್ಲಿ ಅಡ್ಡಾಡಿ ಅವರವರಿಗೆ ಅವಶ್ಯವಾಗಿ ಸಹಾಯಮಾಡತಕ್ಕಷ್ಟು ಮಾಡಿ ಮುಂದೆ ಸಾಗಲಿಕ್ಕೆ ಉತ್ತೇಜನಕೊಡುತ್ತಾನೆ. ತಾವು ಮಾಡತಕ್ಕ ಕೆಲಸವನ್ನು ಅಂದಾಜಪತ್ರಿಕೆಯನ್ನು ನೋಡಿ ವಿದ್ಯಾರ್ಥಿಗಳು ಮೊದಲೇ ಅರಿತಿರುವದರಿಂದ ತಮ್ಮ ಕಾರ್ಯಕ್ಕೆ ಕೂಡಲೆ ಅವರು ಅಭಿಮುಖರಾಗುತ್ತಾರೆ.

ಅಲ್ಲಿಯ ಶಾಲೆಗಳಲ್ಲಿ ವಾಚನ ವಿಷಯಕ್ಕೆ ಹೆಚ್ಚು ಮುಖ್ಯತ್ವವಿದೆ. ಹುಡುಗರು ಬಹಳವಾಗಿ ಓದುತ್ತಿರುತ್ತಾರೆ. ಬಾಲಕವರ್ಗದವರು ಸಹ ಚೆನ್ನಾಗಿ ಓದುತ್ತಿರುತ್ತಾರೆ. ಹಾಗೆಯೇ ಬರಹಕ್ಕೂ ಮಹತ್ವವಿದೆ. ಕೆಳಗಿನ ವರ್ಗದಲ್ಲಿಯೂ ಕೂಡ ವಿದ್ಯಾರ್ಥಿಗಳು ತಮ್ಮ ಮನಸ್ಸಿನಲ್ಲಿಯ ವಿಚಾರಗಳನ್ನು ಬರೆಯುವ ರೂಢಿಯು ಹೆಚ್ಚಾಗಿ ಇರುತ್ತದೆ. ಹೀಗೆ ಬರೆದ ಅವರ ಅಕ್ಷರಗಳಾದರೂ ತಿಳಿಯುವಂತೆ ಚೆನ್ನಾಗಿ ಇರುತ್ತವೆ. ಆರಂಭದಲ್ಲಿ ವಿದ್ಯಾರ್ಥಿಗಳು, ಶಿಕ್ಷಕನು ಕರಿಹಲಗೆಯಮೇಲೆ ಬರೆದದ್ದನ್ನು ನೋಡಿ ಅದರಂತೆಯೇ ಬರೆಯಲು ರೂಢಿಮಾಡುತ್ತಿರುತ್ತಾರೆ. ಮಕ್ಕಳು ಬರೆಯುತ್ತಿರುವಾಗ ಅವು ಚೆನ್ನಾಗಿ ಆಗುವಂತೆ ಶಿಕ್ಷಕನು ಸಹಾಯಮಾಡುತ್ತಿರುತ್ತಾನೆ. ವಿದ್ಯಾರ್ಥಿಗಳು ಬರೆದ ಟಿಪ್ಪಣಿ ಪುಸ್ತಕಗಳನ್ನು ಶಿಕ್ಷಕನು ನೋಡಿ ಸುಧಾರಿಸುತ್ತಾನೆ. ಅವರವರ ಪುಸ್ತಕಗಳನ್ನು ತಿದ್ದುವಾಗ ಆಯಾ ವಿದ್ಯಾರ್ಥಿಗಳನ್ನು ಶಿಕ್ಷಕನು ಹತ್ತಿರ ಕರೆದು ಸಮಕ್ಷವೇ ತಿದ್ದುತ್ತಾನೆ. ಹೀಗೆ ವ್ಯಕ್ತಿಶಃ ಲಕ್ಷ್ಯಗೊಡುವದರಿಂದ ಅವರವರ ಸುಧಾರಣೆಗೆ ಬಹಳ ಅನುಕೂಲವಾಗುತ್ತದೆ. ಹಳ್ಳಿಯ ಶಾಲೆಗಳಲ್ಲಿ ಒಬ್ಬ ಶಿಕ್ಷಕನು

ಒಂದೆರಡು ಇಯತ್ತೆಗಳನ್ನು ಕಲಿಸುವ ಪ್ರಸಂಗವಿರುವದರಿಂದ ವಿದ್ಯಾರ್ಥಿಗಳು ಸ್ವಪ್ರಯತ್ನದಿಂದಲೇ ಹೆಚ್ಚು ಕೆಲಸಗಳನ್ನು ಮಾಡಿ ಮುಗಿಸುವ ರೂಢಿಯು ತಾನಾಗಿ ಒದಗುತ್ತದೆ. ಒಂದು ವರ್ಗದವರು ನಿಬಂಧ ಬರೆಯುತ್ತಿದ್ದರೆ ಮತ್ತೊಂದು ವರ್ಗದವರು ಓದುತ್ತಿರುತ್ತಾರೆ, ಇನ್ನೊಂದು ವರ್ಗದವರು ಲೆಕ್ಕದ ಉದಾಹರಣಗಳನ್ನು ಬಿಡಿಸುತ್ತಿರುತ್ತಾರೆ. ಮೊದಲೇ ಸಿದ್ಧಪಡಿಸಿದ ಅಭ್ಯಾಸ ಪತ್ರಿಕೆಯಂತೆಯೂ ವೇಳಾಪತ್ರಿಕೆಯಂತೆಯೂ ಕೆಲಸವು ನಡೆಯುತ್ತಿರುತ್ತದೆ. ವರ್ಗದಲ್ಲಿ ಆಗಾಗ ಮಾಡಿ ಮುಗಿಸಿದ ವಿಷಯಗಳ ಭಾಗಗಳನ್ನು ಶಿಕ್ಷಕನು ತನ್ನ ಪುಸ್ತಕದಲ್ಲಿ ಕೂಡಲೆ ಬರೆದಿಡುತ್ತಾನೆ. ಈ ಪ್ರಕಾರ ಪದ್ಧತಿಗನುಸರಿಸಿ ಕೆಲಸಗಳು ನಡೆಯುವದರಿಂದ ಎಲ್ಲ ವರ್ಗಗಳ ಅಭ್ಯಾಸವೂ ಸರಿಯಾಗಿ ತಪ್ಪದಲೆ ಮುಗಿಯುತ್ತವೆ. ಕೆಲವೊಂದು ಅವಧಿಯಲ್ಲಿ ಮೇಲುನೋಡಲಿಕ್ಕೆ ಬಂದ ಅಧಿಕಾರಿಗಳಿಗೆ ಕ್ರಮವಾಗಿ ಬರೆದ ಪುಸ್ತಕಗಳೂ ಅಭ್ಯಾಸಪತ್ರಿಕೆಗಳೂ ಜೆನ್ನಾಗಿ ಉಪಯೋಗ ಬೀಳುತ್ತವೆ. ಇಂಗ್ಲಂಡದೇಶದ ಹಳ್ಳಿಯ ಶಾಲೆಯಲ್ಲಿ ವಾಚನವಿಷಯದಬಗ್ಗೆ ಬಹಳ ಲಕ್ಷ್ಯವನ್ನು ತೆಗೆದುಕೊಳ್ಳುತ್ತಾರೆ. ಮಕ್ಕಳಿಗೋಸ್ಕರ ಬರೆದ ಸುಲಭ ಸುಲಭವಾದ ಅನೇಕ ಪುಸ್ತಕಗಳಿರುತ್ತವೆ. ಅವನ್ನು ಓದಲಿಕ್ಕಾಗಿ ಅವರಕೈಯಲ್ಲಿ ಕೊಡುತ್ತಾರೆ. ಪ್ರತ್ಯೇಕವರ್ಗಕ್ಕೆ ಇಂಥದೇ ಕ್ರಮಿಕ ಪುಸ್ತಕವೆಂದು ನಮ್ಮಲ್ಲಿಯಂತೆ ನಿರ್ಧರಿಸಿರುವದಿಲ್ಲ. ಎಲ್ಲ ವರ್ಗಗಳ ವಿದ್ಯಾರ್ಥಿಗಳ ವಾಚನದ ಯೋಗ್ಯತೆಯು ಮಾಸ್ತರ ಇಂತಿಷ್ಟೆಂದು ನಿರ್ಧರಿಸಲ್ಪಟ್ಟಿರುತ್ತದೆ. ಆಪ್ರಕಾರ ಗೊತ್ತುಮಾಡಿದ ಯೋಗ್ಯತೆಯ ಒರೆಗೆ ಹತ್ತುವಂಥ ಪುಸ್ತಕವನ್ನು ಓದಿದರೆ ತೀರಿತು. ಈ ಬಗೆಯ ಪುಸ್ತಕಗಳನ್ನು ಬರೆಯುವಾಗಲೇ ಆ ಮಕ್ಕಳ ಯೋಗ್ಯತೆಗೆ ತಕ್ಕ ಶಬ್ದಗಳನ್ನೇ ಉಪಯೋಗಿಸಿರುವದರಿಂದ ಪ್ರತಿಯೊಂದು ವರ್ಗದಲ್ಲಿ ಮುಖ್ಯವಾಗಿ ಬಾಲಕರ ವರ್ಗದಲ್ಲಿ ವಾಚನ ಕಲಿಸುವಾಗ ಶಬ್ದಾರ್ಥಜ್ಞಾನಕ್ಕಾಗಿ ಹೆಚ್ಚಾಗಿ ಹೆಣಗುವ ಪ್ರಸಂಗವಿರುವದಿಲ್ಲ. ಆದದರಿಂದ ವಾಚನ ನಡೆದಾಗ ಬಾಲಕರು ಶಬ್ದಾರ್ಥವನ್ನು ತಾವೇ ಸಹಜವಾಗಿ ತಿಳಿದುಕೊಳ್ಳುತ್ತಾರೆ. ಬಾಲಕ ವರ್ಗದಲ್ಲಿ ವಾಚನ ವಿಷಯವು ನಡೆದಾಗ ವಾಕ್ಯದಲ್ಲಿ ಬರುವ ಪ್ರತಿಶಬ್ದದ ಅರ್ಥಕ್ಕಾಗಿಯೂ ಪ್ರತ್ಯೇಕವಾಕ್ಯದ ವಿಷಯವಾಗಿಯೂ ಶಿಕ್ಷಕನು ಅರ್ಥ ಹೇಳತ್ತ ಕೂಡ್ರುವ ಸಮಯವು ಎಂದೂ ಬರುವದಿಲ್ಲ. ಮಕ್ಕಳಿಗೆ ಆ ವಾಚನವು ತಿಳಿದರೆ ತೀರಿತು.

[ಮುಂದೆ ಸಾಗುವದು.]

ಪ್ರಕಟಣೆ

ಧಾರವಾಡದಲ್ಲಿಯ ಕನ್ನಡ ಬುಕ್ ಕಮೀಟಿಯವರು ೩—೬—೧೯೩೭ ನೆಯ ದಿನ ನೆರೆದ ಕಮಿಟಿಯಲ್ಲಿ ಮಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು ಕೆಳಗೆ ವಿವರಿಸಿದಂತೆ ಅದೆ.

ಪ್ರಾಥಮಿಕ ಶಾಲೆ = ಪ್ರಾ. ಶಾ; ಶಿಕ್ಷಕರು = ಶಿ; ವಿದ್ಯಾರ್ಥಿಗಳು = ವಿ; ಲಾಯಬ್ರರಿ ಬುಕ್ಕು = L.

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂ.	ಇ. ಸಾ. ರ. ನಂ.	
೧	೫ನೆಯ ದರ್ಜೆಯ ಗಣಿತ ಕೈಪಿಡಿ ೩ನೆ ಆವೃತ್ತಿ	ಮೆ॥ಯು. ಆರ್. ಶೇಣ್ಯೈ ಆ್ಯಂಡ್ ಸನ್ಸ ಕೊಡಿಯಲ್ ಬೈಲ್ ಕಾರ್ ಸ್ಟ್ರೀಟ ಮಂಗಳೂರ	ಗ್ರಂಥಕರ್ತರು	೦—೧೨-೦	ಪ್ರಾ ಶಾ. ಗಳ ಶಿ. ರ L ಬುಕ್ಕು	47 P	1733
೨	೪ನೆಯ ದರ್ಜೆಯ ಗಣಿತ ಪುಸ್ತಕ ೧೯೩೫ರ ಆವೃತ್ತಿ	ಸದರ	ಸದರ	೦— ೬—೦	ಪ್ರಾ. ಶಾ. ಗಳ ವಿ. ಗಳ L ಬುಕ್ಕು	ಸದರ	1735
೩	೩ನೆಯ ದರ್ಜೆಯ ಗಣಿತ ಪುಸ್ತಕ ಸುಧಾರಿಸಿದ ಆವೃತ್ತಿ ೧೯೩೭	ಸದರ	ಸದರ	೦— ೪—೦	ಪ್ರಾ. ಶಾ. ಗಳ ಶಿ. ರ L	ಸದರ	1737

೩—೧೯೭

೪	೨ನೆಯ ದರ್ಜೆಯ ಗಣಿತ ಪುಸ್ತಕ ಸುಧಾರಿಸಿದ ಆವೃತ್ತಿ ೧೯೩೧	ಸದರ	ಸದರ	೦– ೪–೦	ಸದರ	ಸದರ	1739
೫	ಹೊಗನ್ನಡ ಪಾಠ ಮೂಲೆ ೧ನೆಯ ಪು. ೨ನೆ ಆ. ೧೯೩೬	ಸದರ	ಗ್ರಂ. ಕರ್ತರು	೦– ೨–೦	ಪ್ರಾ. ಶಾ. ಗಳ ವಿ. ಗಳ L	47P	1741
೬	ನಾಲ್ಕನೆಯದರ್ಜೆಯ ಗಣಿತ ಕೈಪಿಡಿ ೪ನೆ ಆ. ೧೯೩೬	ಸದರ	ಸದರ	೦– ೬–೦	ಪ್ರಾ. ಶಾ. ಗಳ ಶಿ. ರ L	ಸದರ	1743
೭	ಹೊಗನ್ನಡ ಪಾಠ ಮೂಲೆ ೩ನೆ ಬುಕ್ಕು ೨ನೆ ಆ. ೧೯೩೬	ಸದರ	ಸದರ	೦– ೩–೦	ಪ್ರಾ. ಶಾ. ಗಳ ವಿ. ಗಳ L	ಸದರ	1745
೮	ಹೊಗನ್ನಡ ಪಾಠ ಮೂಲೆ ೪ನೆ ಬುಕ್ಕು ೨ನೆ ಆ. ೧೯೩೬	ಸದರ	ಸದರ	೦– ೪–೦	ಪ್ರಾ. ಶಾ. ಗಳ ವಿ. ಗಳ L	ಸದರ	1747

ಸಂ ಖ್ಯೆ	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರ	ಬೆಲೆ	ಯಾತಕ್ಕಾಗಿ ಮಂಜೂರ ಆಗಿದೆ	ಇ. ಸಾ. ರ ನಂಬರ
೯	ಹೂಗನ್ನಡ ಪಾಠ ಮಾಲೆ ೫ನೆ ಬುಕ್ಕು ೨ನೆ ಆ. ೧೯೩೬	ಮೆಸರ್ಸ ಯು. ಆರ್. ಶೇಣ್ಬೈ ಆ್ಯಂಡ ಸನ್ಸ ಮಂಗಳೂರ	ಸದರ	೦– ೬–೦	ಪ್ರಾ. ಶಾ. ಗಳ ವಿ. ಗಳ L	47/P. 1749
೧೦	ಐದನೆಯ ದರ್ಜೆಯ ಗಣಿತ ಪುಸ್ತಕ	ಸದರ	ಗ್ರಂ. ಕರ್ತರು	೦–೧೦-೦	ಸದರ	ಸದರ 1751
೧೧	ಹೂಗನ್ನಡ ಪಾಠ ಮಾಲೆ ೨ನೆ ಬುಕ್ಕು ೨ನೆ ಆ. ೧೯೩೬	ಸದರ	ಸದರ	೦– ೨–೦	ಸದರ	ಸದರ 1753 / ಸದರ
೧೨	ರೇಖಾ ಗಣಿತದ ಮೂಲ ಪಾಠಗಳು ಅಥವಾ ಭೂಮಿತಿ ಭಾಗ ೧	ಚಿದಂಬರರಾವ ಕುಲಕರ್ಣಿ ಧಾರವಾಡ	ವಿ. ಆರ್. ಶಿವನಾಗಪ್ಪ ಹುಬ್ಬಳ್ಳಿ	೦– ೬–೦	ಪ್ರಾ. ಶಾ. ಗಳ ಶಿ. ರ L	ಸದರ 1755
೧೩	ಹೊಸ ಪದ್ಧತಿಯ ಪ್ರಶ್ನೋತ್ತರ ಜಮಾಖರ್ಚು	ಮ. ಆರ್. ಎವನ್. ಬೆಟಗೇರಿ ಮಾ. ಕ. ಶಾಲಾ	,,	೧– ೦–೦	ಪ್ರಾ. ಶಾ. ಗಳ ವಿ. ಗಳ ಹಾಗು ಶಿ.ರ. L	ಸದರ 1757

೧೪	ಮೊದಲನೆಯ ದೇಶ ದ್ರೋಹಿ ೧೯೩೩ ರ ಆ.	ರಾ. ಸಾ. ಪಿ. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ಪ್ಲೀಡರ ವಿಜಾಪೂರ	ಗ್ರಂಥಕರ್ತರು	೦– ೨–೦	ಪ್ರಾ. ಶಾ. ಗಳ ವಿ. ಗಳ L	47/P. 1759
೧೫	ಹುರುಪು ೧೯೩. ಆ. ೧೯೩೫	ಮ. ರಾ. ಸಿ. ಎ. ಕಿರೇಸೂರ ಚೆಅರಮನ್ ಟೀಚರ ಸೊಸೈಟಿ ಹುಬ್ಬಳ್ಳಿ	ಗ್ರಂಥಕರ್ತರು	೦– ೧–೩	ಪ್ರಾ. ಶಾ. ಗಳ ವಿ ಗಳ L	ಸದರ 1761
೧೬	ನಿಬಂಧಮಾಲೆ ೨೯೩. ಆ. ೧೯೩೬	ಮ. ಕರವೀರಪ್ಪ ಬಸವಪ್ಪ ಅಂಗಡಿ ಟೀಚರ ಕ. ಶಾಳಾ ಗದಗ	ಆರ್. ಆರ್. ಕಾಮುಲಾಪೂರ ಗದಗ	೦-೧೨–೦	ಪ್ರಾ. ಶಾ. ಗಳ ಶಿ. ರ. L	ಸದರ 1763
೧೭	ನೂತನ ಬಾಲಗಣಿತ ೨೯೩. ಇ ಗಾಗಿ ೧೯೩೬	ಮ. ಉಳ್ಳಾಳ ಸಂಜೀವರಾವ ಬಾಲಸಾಹಿತ್ಯ ಮಂಡಲ ಕೊಡಿಯಲ್ ಬಾಯಿಲ್ ಮಂಗಳೂರ	ನೂತನ ಬಾಲ ಸಾಹಿತ್ಯ ಮಂಡಲ ಮಂಗಳೂರ	೦-೧೦–೦	ಪ್ರಾ. ಶಾ. ಗಳ ಶಿ. ರ. L	ಸದರ 1765

ಕ್ರ. ಸಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ	ಮಂ. ಇ. ಸಾ. ಸಂ.	ಪಾ. ಸಾ. ನ. ನಂ.
೧೮	ಲನೆ. ಎಡ್ವರ್ಡ ಬಾದ ಶಹರು ೧೯೬. ಆ. ೧೯೩೬	ಮ. ಕೆ. ಜಿ. ವಿಜಾಪೂರ ೧೫೯೮ ಮಹದೇವಗಲ್ಲಿ ಬೆಳಗಾವ	ಗ್ರಂಥಕರ್ತರು	೦– ೪–೦	ಪ್ರಾ. ಶಾ. ಗಳ ವಿ ಗಳ L	47/P	1761
೧೯	ಕುಂತಿದೇವಿಯ ಚರಿತ್ರೆ ೧೯೩೬	ಮ. ಶಿವಲಿಂಗಪ್ಪ ಗೌಡರ ಧಾರವಾಡ	ಗ್ರಂಥಕರ್ತರು	೦– ೧–೬	ಸದರ	ಸದರ	1769
೨೦	ಗಾಂಧಾರಿ ಚರಿತ್ರೆ ೧೯೩೬	ಮ. ಶಿವಲಿಂಗಪ್ಪ ಗೌಡರ ಧಾರವಾಡ	ಗ್ರಂಥಕರ್ತರು	೦– ೧–೬	ಪ್ರಾ. ಶಾ. ಗಳ ವಿ. ಗಳ L	ಸದರ	1771
೨೧	ಅರ್ಜುನ ಚರಿತ್ರೆ ೧೯೩೬	ಸದರ	ಸದರ	೦– ೧–೬	ಸದರ	ಸದರ	1773 ಸದರ
೨೨	ಕರ್ಣನ ಚರಿತ್ರೆ ೧೯೩೬	ಸದರ	ಸದರ	೦– ೧–೬	ಸದರ	ಸದರ	1775

೨೩	ನವಲಗುಂದ ತಾಲೂಕಿನ ವರ್ಣನೆಯು	ಮೆ॥ ವಾಯ್. ಪ್ಹಿ. ಜಹಾಗಿರದಾರ ಹೆ. ಮಾ. ಉರ್ದುಶಾಳಾ ಹಾಗು ಎನ್. ಪಿ. ಮೋಡಕ ಹೆ. ಮಾ. ಹಳ್ಳಿಕೇರಿಶಾಳಾ	ವಿದ್ಯಾವಿಲಾಸ ಬುಕ್ ಡಿಪೋ ಗದಗ	೦– ೨–೬	ಪ್ರಾ. ಶಾ. ಗಳ ಶಿ. ರ L	ಸದರ 1777
೨೪	ರೋಣ ತಾಲೂಕಿನ ವರ್ಣನೆಯು	ಸದರ	ಸದರ	೦– ೨–೬	ಸದರ	ಸದರ 1779
೨೫	ಗದಗ ತಾಲೂಕಿನ ವರ್ಣನೆಯು	ಸದರ	ಗ್ರಂಥಕರ್ತರು	೦– ೨–೬	ಸದರ	1781
೨೬	ಹುಬ್ಬಳ್ಳಿ ತಾಲೂಕಿನ ವರ್ಣನೆ	ಸದರ	ಸದರ	೦– ೨–೬	ಸದರ	1783
೨೭	೩ನೆಯ ದರ್ಜೆಯ ಗಣಿತ ಪುಸ್ತಕ ೨ನೆಯ ಆವೃತ್ತಿ	ಸಿ. ಯು. ಆರ್. ಶೇಣ್ಯೈ ಕೊಡಿಯಲ್ ಬೈಲ ಮಂಗಳೂರ	ಗ್ರಂಥಕರ್ತರು	೦– ೪–೦	ಪ್ರಾ. ಶಾ. ಗಳ ವಿ. ಗಳ L	1785

ಪ್ರಕಟನೆ

ಕನ್ನಡ ಬುಕ್ ಕಮೀಟಿ ಧಾರವಾಡ ಇವರಿಂದಾ ೧೪-೬-೩೭ ನೆಯ ದಿನಸ ಮುಂಜೂರಾದ ಪುಸ್ತಕಗಳು

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂ.	ಇ. ಸಾ. ನಂ.	ಡಾ. ಸಾ. ರ ನಂ.
೧	ಬಸವೇಶ್ವರ ಷಟ್ ಸ್ಥಲ ಪಚನದ ಕಥಾಸಾರ ೧೯೩೪	ರಾವಸಾಹೇಬ ಪಿ.ಜಿ. ಹಳಕಟ್ಟಿ, ಬಿ. ಎ., ಎಲ್ ಎಲ್. ಬಿ. ಪ್ಲೀಡರ, ವಿಜಾಪೂರ	ಗ್ರಂಥಕರ್ತರು	೦-೧೨-೦	ಪ್ರಾ ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ L ಬುಕ್ಕಾಗಿ ಹಾಗು ಮಾಧ್ಯಮಿಕ ಶಾ. ಗಳ ಶಿ. ರ L ಬು.	47 P / 2172	S 86 C / 732 C / 24 5-37
೨	ಕೋರಿಕೆ ೧೯೩೪	ಸದರ "	ಸದರ	೦- ೯-೦	ಮೂ. ಶಾಲೆಗಳ ವಿ. ಗಳ L ಬುಕ್ಕಾಗಿ	,,	ಸದರ ನಂ. 734 / ಸದರ
೩	ಭಾರತೀಯ ಮಹಾ ಪುರುಷರು ೧೯೩೪	ಸದರ	ಸದರ	೦ - ೯-೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ L ಬುಕ್ಕಾಗಿ ಹಾಗು ಮೂ. ಶಾ. ಗಳ ಶಿ. ರ L ಬುಕ್ಕಾಗಿ.	ಸದರ	ಸದರ ನಂ. 733 / 24-5-37
೪	ಬೀಳಗಿ ಅರಸುಗಳ ವಂಶಾವಳಿ ೧೯೩೪	ಸದರ	ಸದರ	೦- ೯-೦	ಸದರ	ಸದರ	ಸದರ ನಂ 730 / 24-5-37

೬

೫	ವರದಾನಿ ಗುಡ್ಡಮ್ಮೆಯ ಚರಿತ್ರೆ ೧೯೩೬	ಸದರ	ಸದರ	೦– ೩–೦	ಪ್ರಾ. ಶಾ. ಗಳ ಶಿ. ರ ಹಾಗುಟ್ರೇ. ಸಂ.ಗಳ ವಿ. ಗಳL ಬುಕ್ಕಾಗಿ ಹಾಗೂ ಮಾ. ಶಾ. ಗಳ ಶಿ. ರ L. ಬು.	47 P 2172	ಸದರ ನಂ 729 24-5-37
೬	ಉರಿಲಿಂಗ ಪೆದ್ದಿಯ ವಚನಗಳು	ಸದರ	ಸದರ	೧– ೦–೦	ಹೈ. ಟ್ರೇ. ಸಂ. ಗಳ ವಿ. ಗಳ ಹಾಗು ಪ್ರಾ. ಶಾ. ಗಳ ವಿ. ಗಳ ಮತ್ತು ಶಿ. ರ L ಬುಕ್ಕಾಗಿ	ಸದರ	ಸದರ ನಂ. 727 ಸದರ
೭	ಸಾಮಾನ್ಯವಿಜ್ಞಾನ ಭಾಗ ೧ ೧೯೩೬	ಮೆಸರ್ಸ ಯು. ಆರ್ ಪೈ ಅಣ್ಣೈ ಸನ್ಸ, ಬುಕ್ ಸೇಲರ್ಸ ಕಾರಸ್ಟ್ರೀಟ ಮಂಗಳೂರ	ಗ್ರಂಥಕರ್ತರು	೦–೧೦-೦	ಪ್ರಾ. ಶಾ. ಗಳ ಹಾಗೂ ಹೈ. ಟ್ರೇ. ಸಂ. ಗಳ ವಿ. ಗಳ Lಮತ್ತು ಮಾ. ಶಾ. ಗಳ ವಿ. ಗಳL ಬು.	47 P 2170	S 86 C 724 C ಸದರ
೮	ಸಾಮಾನ್ಯವಿಜ್ಞಾನ ಭಾಗ ೨ ೧೯೩೬	ಸದರ	ಸದರ	೦ –೧೦-೦	ಸದರ	ಸದರ 2168	ಸದರ 24-5-37

ಸಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ	ಅ. ಸಾ. ನಂ.	ಡಾ. ಸಾ. ರ ನಂ.
೯	ಸಾಮಾನ್ಯ ವಿಜ್ಞಾನ ಭಾಗ ೩	ಮೆ॥ ಯು. ಆರ್. ಶೇಣ್ಬೈ ಹಾಗು ಸನ್ಸ್ ಕೂಡಿಯಲ್ ಬಾಯಿಲ್ ಕಾರ ಸ್ಟ್ರೀಟ ಮಂಗಳೂರ	ಗ್ರಂ. ಕ.	೦– ೧–೦	ಪ್ರಾ. ಶಾ. ಗಳ ಪ್ರೌ. ಸ್ಕೂ. ಸಂ. ಗಳ ವಿ. ಗಳ L ಬು. ಹಾಗು ಮೂ. ಶಾ. ಗಳ ವಿ. ಗಳ L ಬು.	47 P / 2164	s-86-c 724-c / 24-5-37
೧೦	ಹೂಗನ್ನಡ ಪಾಠ ಮೂಲೆ ಬುಕ್ಕು VI	ಸದರ	ಸದರ	೦– ೬–೦	ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ ಹಾಗು ಮೂ. ಶಾ.ಗಳ ವಿ. ಗಳ L ಬು.	ಸದರ / ಸ. 2166	ಸದರ 723 / 22–5–37
೧೧	ಹೂಗನ್ನಡ ಪಾಠ ಮೂಲೆ ಬುಕ್ಕು VIII ೧೯೩೬	ಸದರ	ಸದರ	೦– ೬–೦	ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ ಹಾಗು ಮೂ. ಶಾ. ಗಳ ವಿ. ಗಳ L ಬು.	ಸದರ / 2162	ಸದರ ನಂ. 723 / 22–5–37
೧೨	ಹೂಗನ್ನಡ ಪಾ.ಮೂ ಬುಕ್ಕು VII ೧೯೩೬	ಸದರ	ಸದರ	೦– ೬–೦	ಸದರ	ಸದರ/2160	ಸದರ
೧೩	ಶಾಸನಶಾಸ್ತ್ರ ಪರಿಚಯ	ಮ. ಡಿ. ಪಿ. ಕರಮರಕರ ಲೈನ ಬರ್ಚೂರ ಧಾರವಾಡ	ಮ. ಆರ್. ಡಿ. ಕಾಳೆ. ಲೈನಬರ್ಚೂರ ಧಾರವಾಡ	೦– ೯–೦	ಪ್ರಾ. ಶಾ. ಗಳ ,, ಟ್ರೈ. ಸಂ.ಗಳ ತಿ.ರ L ಬು. ಹಾಗು ಮೂ. ಶಾ.ಗಳ ತಿ.ರ Lಬು.	ಸದರ / 2158	739 / 22-5-37

೧೪	ಅಪ್ಪೈತ ಮಕರಂದ	ಮು. ಕೆ. ನರಸಿಂಹ ಭಟ್ಟ ಅಪ್ಪೈತಾಶ್ರಮ ರತ್ನವಿಲಾಸ ಸ್ಟ್ರೀಟ ಬಸವನ ಗುಡಿ ಬೆಂಗಳೂರ	ಗ್ರಂ. ಕ.	೦–೮–೦	ವ್ಹ. ಟ್ರೀ. ಸಂ. ಗಳ ಶಿ. ರ L ಬುಕ್ಕು ಹಾಗು ಮಾ. ಶಾ. ಗಳ ಶಿ. ರ L ಬು.	47 P / 2156	ಸದರ 720 / 22-5-37
೧೫	ನಿಷ್ಕಾಮ ಪ್ರೇಮ ೧ನೆ ಆವೃತ್ತಿ	ಮ್ಯಾನೇಜಿಂಗ ಡಾಯರೆಕ್ಟರ ಬಾಲ ಸಾಹಿತ್ಯ ಮಂಡಳ ಮಂಗಳೂರ	ಬಾಲಸಾಹಿತ್ಯ ಮಂಡಳ ಮಂಗಳೂರ	೦–೧೨-೦	ಪ್ರಾ. ಶಾ. ಗಳ ಹಾಗು ಟ್ರೀ. ಸಂ. ಗಳ ವಿ. ಗಳ L ಮಾ. ಶಾ. ಗಳ ವಿ. ಗಳ L	47 P / 2154	ಸದರ 725 / 24-5-37
೧೬	ವಿಜಯನಗರ ಸಾಮ್ರಾಜ್ಯ	ಚೇರಮನ್ ವಿಜಯನಗರ ಸಾಮ್ರಾಜ್ಯ ಇನ ಸ್ಕೂಶನ್ ಧಾರವಾಡ	ವಿಜಯನಗರ ಸಾಮ್ರಾಜ್ಯ ಮಂಡಲ	೧–೧೬-೦	ಪ್ರಾ. ಶಾ. ಗಳ ಹಾಗು ಟ್ರೀ. ಸಂ. ಗಳ ವಿ. ಗಳ L ಹಾಗು ಮಾ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ	47 P / 2152	ಸದರ 738 / 24-5-37
೧೭	ಗಣಿತ ಶಿಕ್ಷಕ ಳನೆ ಆ. ೧೯೩೬	ಮು. ಬಿ. ಡಿ. ಹಿರೇಮಠ ಮಾಸ್ತರ ಕ. ಶಾ. ವಿಜಾಪೂರ	ಮು. ಬಿ ಡಿ. ಹಿರೇಮಠ ಮಾಸ್ತರ ತಾ. ಬಾ. ವಿಜಾಪೂರ	೦–೧೪-೦	ಪ್ರಾ. ಶಾ. ಗಳ, ಮಾ. ಶಾ. ಗಳ ಟ್ರೀ. ಸಂ. ಗಳ T ಬುಕ್ಕು	,,	ಸದರ 737 / 24-5-37

೨೬-೧-೩೭ನೆಯ ದಿವಸ ಮಂಜೂರಾದ ಕನ್ನಡಪುಸ್ತಕಗಳ ಯಾದಿಯು

ಸಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ	ಮುಂ. ಇ. ಸಾ. ರ. ನಂ.	ಡಾ. ಸಾ. ರ ನಂ.
೧	ಶಿವಂಭಾವ ಸೂತ್ರ ೨ನೆ ಆ. ೧೯೩೪	ರಾ. ಸಾ. ಪಿ. ಜಿ. ಹಳಕಟ್ಟಿ ಬಿ. ಎ, ಎಲ್ ಎಲ್. ಬಿ. ಪ್ಲೀಡರ, ವಿಜಾಪೂರ	ಗ್ರಂ. ಕ.	೦-೧೨-೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ಶಿ.ರ L ಮತ್ತು ಮೂ. ಶಾ. ಗಳ ಶಿ. ರ L ಬುಕ್ಕಾಗಿ	47 P / 2420	S86C731-C / 24-5-37
೨	ಅಂಬಿಗರ ಚೌಡಯ್ಯನ ವಚನಗಳು ೧೯೩೪	ಸದರ	ಸದರ	೦-೧೪-೦	ವ್ಹ್ಲ. ಟ್ರೇ. ಸಂ. ಗಳ ವಿ. ಗಳ L ಹಾಗು ಪ್ರಾ. ಶಾ. ಮೂ.ಶಾ.ಗಳ ಶಿ.ರL	2418	ಸದರ ನಂ. 726 / ಸದರ
೩	ಪ್ರಾಣಿರಕ್ಷಣೆಯ ಪ್ರಥಮ ಪುಸ್ತಕ ಭಾಗ ೧. ೨ನೇ ಆ. ೧೯೩೬	ಮೆ. ಲಾಂಗಮನ್ಸ್ ಗ್ರೀನ ಆಂಡ ಕಂ. ಮುಂಬಯಿ	ಸದರ	೦- ೨-೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ವಿ. ಗಳ L ಹಾಗು ಮೂ. ಶಾ. ಗಳ ವಿ. ಗಳ L ಬು.	2422	ಸದರ ನಂ 722 / ಸದರ
೪	ಪ್ರಬುದ್ಧ ಒಕ್ಕಲಿಗ ಭಾ. ೧. ೨ ನೇ ಆ.	ಮೆ. ವ್ಹಿ. ಸಿ. ಪಾವಟೆ ಸಾ. ಕಾಟನ್ ಸುಪ. ಧಾರವಾಡ	ಮ. ಎಚ್. ಎಸ್. ಶಿವಲಿಂಗಶಾಸ್ತ್ರಿಗಳು ಧಾರವಾಡ	೧- ೦-೦	ಸದರ ಸದರ ಹಾಗು ಅಗ್ರಿಕಲ್ಚರ ಬಾಯ ಸ್ ಕ್ಲಾ. T ಬು.	2414	ಸದರ ನಂ. 741 / ಸದರ

೫	ಹಿಂದುಸ್ತಾನದ ಕನ್ನಡ ಇತಿಹಾಸವು ಇ. ಮಾರ್ಸಡನ್ನರ ವರ ಸುಧಾರಿಸಿದ ಆ.	ಮ್ಯಾಕ್ಮಿಲನ್ ಅಂಡ ಕಂಪನಿ, ಬಾಂಬೆ.	ಗ್ರಂಥಕರ್ತರು	೧–೪–೦	ಪ್ರಾ. ಶಾ. ಗಳ ಮಾ. ಶಾ. ಗಳ ಹೈ. ಟ್ರೇ. ಸಂ. ಗಳ T	47 P 2416	S 86 C 735 24-5-37
೬	ಹೊಸಮಾದರಿಯ ಅಂಕಗಣಿತ ಸಂಗ್ರಹ ಭಾ. ೧. ಸುಧಾರಿಸಿದ ಆವೃತ್ತಿ	ಸಿ.ಎಸ್.ಕುಲಕರ್ಣಿ ಗುಂಜೀಕರ ಬಂಗ್ಲೆ ಮಾಳಮಡ್ಡಿ, ಧಾರವಾಡ	ಸದರ	೦–೫–೦	ಪ್ರಾ. ಶಾ. ಗಳ ಶಿ. ರ L ಹಾಗು ಮಾ. ಶಾ. ಗಳ ಶಿ. ರ L	2412	ಸದರ ನಂ 721 225–37
೭	ಸುಲಭ ಭೂಮಿತಿ ಭಾಗ ೧	ಮ. ಡಿ. ಎಮ್. ಜೋಗುಳ, ಅಸಿ. ಮಾ. ಸ್ಕೂಲ್. ಸೂ. ಟ್ರೈ. ಕಾ. ಪೂನಾ	ಸದರ	೦–೧೧–೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ ಟ್ರೇ. ಸಂ. ಗಳ T ಬುಕ್ಕು	2408	ಸದರ ನಂ. 736 24–5–37
೮	ಕನ್ನಡ ಬಾಲಬೋಧೆ ೧೯೩೬	ಮೆ. ಟಿ. ಪ್ಹಿ. ಕಟ್ಟಿ ಹೆ. ಮಾ. ನರಸಾಪೂರ, ಕ. ಶಾ.	ಸದರ	೦–೧–೬	ಪ್ರಾ. ಶಾ. ಗಳ T ಬುಕ್ಕು	2410	ಸದರ 719 22–5–37
೯	ಕನ್ನಡ ಬಾಲಬೋಧೆ ೨ನೆ ಆ. ೧೯೩೭	ಮಿ. ಎಸ್. ಎಫ್. ಕಟ್ಟೀಮನಿ, ಹೆ. ಮಾ. ಕ. ಬಾ. ಸ್ಕೂ. ನಂ. ೧. ಹುಬ್ಬಳ್ಳಿ.	ಸದರ	೦ - ೧–೯	ಸದರ	2406	ಸದರ 740 24–5-37

ಉರ್ದು ಸ್ಕೂಲು ಬುಕ್ ಕಮೀಟಿ ಮುಂಬಯಿ ಇವರು ೬-೩-೧೯೩೬ನಯು ದಿನ ಕೂಡಿದ ಮೀಟಿಂಗಿನಲ್ಲಿ ಮುಂಬಯಿ
ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಮಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

T=ಟೆಕ್ಸ್ಟ L=ಲಾಯಬ್ರರಿ ಶಿ=ಶಿಕ್ಷಕರು ವಿ=ವಿದ್ಯಾರ್ಥಿಗಳು ಆ=ಆವೃತ್ತಿ

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧	ಉರ್ದುಕಾ ಆಸಾನ್ ಕಾಯದಾ ೧ ನೆಯ ಆ. ೧೯೩೬	ಸೈಯ್ಯದ ಮಹಮ್ಮದ ಝೂಕಿ ಸುಪರ್ವಾಯಿಜರ ಉರ್ದು ಬಾಯ್ಜ ಸ್ಕೂಲ್ಸ ಕರಾಚಿ	ಕಾಪೂರ ಬ್ರದರ್ಸ ಖಂಡರ ರೋಡ ಕರಾಚಿ	೦-೧-೬	ಪ್ರಾ. ಶಾ. ಗಳ T ಬು.
೨	ತಾರೀಖ-ಎ-ಇಸ್ಲಾಮ ೨ನೆ. ಆವೃತ್ತಿ ೧೯೩೬	ಮುನ್ಸಿ ಅಬ್ದುರ್ರಹಿಮಾನ ನಾತಿಕ್	ಅಖ್ತಾರ ಬುಕ್ ಡಿಪೋ ಬಾಂಬೇ ೩	೮-೨-೦	ಮಾಪ್ರೇಸಾಸ್ ಶಾಲೆಗಳ (ಸಿಂಧ ಪ್ರಾಂತದ ಉರ್ದು ಶಾಲೆಗಳ) T ಬುಕ್ಕಾಗಿ
೩	ಗುಲ್ ದಸ್ತ-ಎ-ಅದಬ್ ಭಾ. ೧ (೩ ನೆ. ಆ. ೧೯೩೬)	ಅಬ್ದುಲ್ ಹಕೀಮ	ಅಂಜುಮನ್-ಎ-ಹಿಮಾಯತ್-ಎ ಇಸ್ಲಾಮ ಲಾಹೋರ	೦-೬-೦	ಪ್ರಾ ಶಾ. ಗಳ ಶಿ. ರ ಹಾಗು ವಿ. ಗಳ L ಬುಕ್ಕಾಗಿ
೪	ಇಲ್ಮ-ಎ ಬದನ್ ೧ನೆ. ಆ. ೧೯೩೬	ಡಾ. ಮಹಮ್ಮದ ಯಾಸಿನ್ ಸಿದ್ದೀಕಿ	ಗ್ರಂಥಕರ್ತರು	೧-೦-೦	ಶಿ. ರ L ಬುಕ್ಕಾಗಿ

೫ ಹಾಗು ೬	ಉರ್ದುಕಾ ಕಾಯುದಾ ಬಾತಸ್ವೀರ ನಂ. ೫ ಮತ್ತು ೬		ಆಲ್ ಇಂಡಿಯಾ ಎಜ್ಯು ಕೇಶನಲ್ ಲಿಟ್ರೇಚರಿ ಬುಕ್ ಸೊಸೈಟಿ ಲಾಹೋರ	೦– ೦–೬ ೦– ೧–೦	ಪ್ರಾ. ಶಾ. ಗಳ ೫. ರ L ಬುಕ್ಕಾಗಿ
೭,೮ ಹಾಗು ೯	ಹಿಂದುಸ್ತಾನಿ ಸ್ಟ್ಯಾಂಡರ್ಡ ಹಿಸಾಬ ಭಾ. ೧, ೨, ೩. (ಫಾರ ಬಾಂಬೆ ಪ್ರೆ. ಗಲ್ಸ್ ಸ್ಕೂಲ್ಸ)		ನ್ಯೂ ಇಂಡಿಯಾ ಪಬ್ಲಿ ಸಿಂಗ ಕಂ. ಲಾಹೋರ	೦– ೩–೬ I ೦– ೬–೬ II ೦– ೭–೬ III	೫. ರ L ಬುಕ್ಕಾಗಿ
೧೦	ಉರ್ದುಕಿ ಆಸಾನ ಸರಫ ವ ನಹು	ಶೇಖ ಮುಸ್ತಾಖ ಅಹ್ಮದ ಹೆ. ಮಾ. ಗ. ಸೀ. ಯು. ರತ್ನಾಗಿರಿ	ಮದೀನಾ ಬಾರ್ಮಿ ಪ್ರೆಸ್ ಬ್ರಿಜ್ನೋರ	೦– ೫–೦	ಪ್ರಾ. ಶಾ. ಗಳ ೬ನೆಯ ಇಯತ್ತೆಯ ಗ್ರಾಮರ T ಬುಕ್ಕಾಗಿ
೧೧	ಮೊಯಿನುಲ್ ಕವಾಯಿದ್ ಭಾ. ೧	ಸಿದ್ದಿಕ್ ಅಹ್ಮದ ಸಿದ್ದಿಕಿ	ದಿ. ನ್ಯಾಶನಲ್ ಪ್ರೆಸ್ ಅಲಹಾಬಾದ	೦– ೪-೬	೫. ರ L ಬುಕ್ಕಾಗಿ
೧೨	ಆಫ್ತಾಬ್ ಜ್ಯಾಮಿಟರಿ ಭಾ. ೧	ಖಾಜಿ ಖುರ್ ಸಿದ್ದ ಅಹ್ಮದ	ಸದರ	೦– ೮-೦	ಸದರ
೧೩	ಆಫ್ತಾಬ್ ಜಾಮಿಟರಿ ಭಾ. ೨ ಹಾಗು ೩	,,	ಸದರ	೧– ೦–೦	ಸದರ

೧೪	ಉರುಸುಲ್–ಬಿಲಾಡ (ಬಾಂಬೆ ದಿ. ಬ್ಯೂಟಿಫುಲ್)	ಅಸಗರಲಿ ಸಿದ್ದಿಕ್	ತಾಜಮಹಾಲ ಪ್ರಾಯಿನ ಆರ್ಟ್ ಪ್ರೆಸ್ ಮುಂಬಯಿ–೮	೮– ೫–೬	ಮುಂಬಯಿ ಸಿಟಿಯೊಳಗಿನ ಪ್ರಾ. ಶಾ. ಗಳಿಗೆ ಮಾತ್ರ T ಬುಕ್ಕಾಗಿ
೧೫	ಜದೀದ ಕಾಯದಾ ೧ನೆ ಆ. ೧೯೫೬	ಮುನಸಿ ಅಬ್ದುರ್ ರಹಿಮಾನ ಅಹ್ಮದ ಹೆ. ಮಾ. ಪೂನಾ ಮು. ಉರ್ದು ಸ್ಕೂ. ನಂ. ೧	ಗ್ರಂಥಕರ್ತ	೮– ೧–೬	ಪ್ರಾ. ಶಾ. ಗಳ T ಬು.
೧೬	ಕವಾಯಿದ್–ಎ–ಮೊಅಲ್ಲಾ ಉರ್ದು (ಪ್ರಾ. ಶಾ. ಗಳ ೪ನೆಯ ಇ. ಗೆ)	—	ನ್ಯೂ ಇಂಡಿಯಾ ಪಬ್ಲಿಸಿಂಗ ಕಂ., ಲಾಹೋರ	೮– ೩–೬	ಶಿ. ರ ಲಾಯಬ್ರರಿ
೧೭ರಿಂದ ೧೯ ಹಾಗು ೨೦	ಮುಶಾಹದಾ ಹಿಸಾಬ ಭಾ. ೧, ೨, ೩ ಹಾಗು ೪ ೧ನೆ ಆ. ೧೯೫೬	ಸೈಯ್ಯದ ಮಹಮ್ಮದ ರುಮೂಕಿ ಸುಪರ್ವಾಯಿಜರ ಉರ್ದು ಸ್ಕೂಲ್ಸ್ ಕರಾಚಿ	ಕಾಪೂರ ಬ್ರದರ್ಸ	೦– ೭–೬ I ೦– ೮–೦ II ೦–೧೧–೬ III ೦–೧೯–೦ IV	ಪ್ರಾ. ಶಾ. ಗಳ T ಬು.
೨೧	ಲಾಂಗಮನ್ಸ ಉರ್ದು ಅಟ್ಲಾಸ್	ಲಾಂಗಮನ್ ಗ್ರೀನ್ ಅ್ಯಂಡ ಕ. ಲಿ. ಮುಂಬಯಿ	—	೮–೧೭–೨	ನಕಾಶೆಗಳಂತೆ ಉಪಯೋಗಿಸುವುದಕ್ಕಾಗಿ

೨೨ ಹಾಗು ೨೩	ಬಚ್ಚೌಂಕಿ ನಜಮೆ ಬಚ್ಚೌಂಕಿ ಕಪಾನಿಯಾ	ಮುನ್ಸಿ ಅಬ್ದುರ್ರಹಿಮಾನ ನಾತಿಕ್ ಸದರ	ಅಖ್ತರ ಬುಕ್ ಡಿಪೋ ಬಾಂದೆ	೦– ೧–೦ ೦– ೧–೦	ಪ್ರಾ ಶಾ. ಗಳ ವಿ.ಗಳ L ಬು. ಸದರ
೨೪	ನಿಗಾರಿಸ್ತಾನ್–ಎ–ಆದಬ್ ಭಾ ೧ ಹಾಗು ೨	ಹಮೀದುಲ್ಲಾ ಅಫ್ಸರ	ನವಿಲ ಕಿಶೋರ ಪ್ರೆಸ್ ಲಖನೌ	೧– ೮–೦ ೧– ೦–೦	ಮಾ. ಶಾ. ಗಳ Tಬುಕ್ ಹಾಗು ಟ್ರೇ. ಸಂ. ಗಳ T ಹಾಗು ಶಿ. ರ L
೨೬	ತಾಹಜಿಬ್–ಉಲ್–ಅಖ್ಲಾಕ್	,,	ಸದರ	೦–೧೦–೦	ಶಿ. ರ L ಬುಕ್ಸ

ಸೈಯ್ಯದ ನೂರುಲ್ಲಾ
ಎ. ಇ. ದ. ಭಾ.

ಪ್ರಾಥಮಿಕ ಶಿಕ್ಷಣ

ಪ್ರ ಕ ಟ ನೆ

—ಂಂಳ್ಳಂ—

ಎಲ್ಲ ಕಡೆಗೆ ಬಳಕೆಯಲ್ಲಿರುವ ಪಂ. ಪೂಜಾರಕೃತ ಕನ್ನಡ ವ್ಯಾಕರಣ ಪುಸ್ತಕಗಳು.

ಯ ಭಾಗ ನುಡಿಗನ್ನಡಿ. ಪ್ರಾಥಮಿಕ ೩–ಳನೆಯ ಇಯತ್ತೆಗಳಿಗೆ ಬೆಲೆ ೦–೩–೬
ಯ ಭಾಗ ನುಡಿಗನ್ನಡಿ. ಪ್ರಾಥಮಿಕ ೫ನೆಯ ಇಯತ್ತೆಗೆ ಬೆಲೆ ೦–೪–೦
ಯ ಭಾಗ ನುಡಿಗನ್ನಡಿ. ಪ್ರಾಥಮಿಕ ೬–೭ನೆಯ ಇ. ಗಳಿಗೆ ಬೆಲೆ ೦–೧೦–೦

ಕವಿಶಿಕ್ಷನು— ೧ನೆಯ ೩ನೆಯ ಭಾಗಗಳಿಗೆ ಚಿಲ್ಲರೆ ೩೦/ರಂತೆ, ತೋಕು ೩೫/ತೆ, ೩ನೆಯ ಭಾಗಕ್ಕೆ ಚಿಲ್ಲರೆ ೧೪/ರಂತೆ ತೋಕು೩೦/ರಂತೆ.

ಪುಸ್ತಕಗಳು ಎಲ್ಲ ಬುಕ್ ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು.

ಇಂತಹ ಇನ್ನೊಂದು ಪುಸ್ತಕವೇ ಇಲ್ಲ!
ಶಿಕ್ಷಕರಿಗೆ ಭಾಷಾವಿಷಯ ಕಲಿಸುವ ಅಪೂರ್ವ ಸಾಧನ!

ಕನ್ನಡ ನುಡಿಯ ಹುಟ್ಟು.

ಬರೆದವರು: ಕಂ. ಬಾ. ಜೋಶಿ

ಕನ್ನಡ ಶಬ್ದಗಳಲ್ಲಿ ಹುದುಗಿಕೊಂಡಿರುವ ಅರ್ಥದ ಆಳವು ಗೊತ್ತಿಲ್ಲದ್ದರಿಂದ ನಾ ಯೋಗ್ಯ ಶಬ್ದಗಳು ಹೊತ್ತಿಗೆ ದೊರೆಯದ್ದರಿಂದ ಆಗುತ್ತಿದ್ದ ಒದ್ದಾಟಕ್ಕೆ ಪ್ಪ ಮೇಲೆ ಅವಕಾಶವೇ ಇಲ್ಲ. ಈ ಪುಸ್ತಕದ ಅಭ್ಯಾಸದಿಂದ ಕನ್ನಡ ನುಡಿಯ ಟ್ಟು ಗೊತ್ತಾಗಿ ಭಾಷೆಯ ಮೇಲೆ ಪ್ರಭುತ್ವವು ಬಾರದೆ ಇರಲಾರದು.

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಇದೊಂದು ಮಹೋಪಕಾರಿಯಾದ ಗ್ರಂಥ.

ಬೆಲೆ— ೧೨ ಆಣೆ ಮಾತ್ರ

ಮಾಧವ ಬಲ್ಲಾಳ ಬಂಧುಗಳು,
ಸಾಧನಕೆರೆ, ಧಾರವಾಡ

Reg. No. B. 369

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನರ್ಸ್) ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಸೆ|| ಡಾಯರೆಕ್ಟರಸಾಹೆ ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವ ಮುಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕ ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಪೆರ್ಸಿ, ಉ. ಕಾನಡಾ

ಆಗಷ್ಟ ೧೯೩೨ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ	ಪುಟ.
೧.	ಮುಂಬಯಿ ಸರಕಾರದ ಮಂತ್ರಿಮಂಡಲ	೧
೨.	ಶಿಶುಶಾಲೆಗಳು	೨
೩.	ಇಂಗ್ಲಂಡ್ ದೇಶದ ಒಂದು ಹಳ್ಳಿಯ ಶಾಲೆಯು ..	೧೧
೪.	ದುಃಖವಾರ್ತೆ	೧೯
೫.	ಬ್ರಹ್ಮದೇಶದ ಸ್ತ್ರೀಯರು	೨೨
೬.	ಕಲಿಸುವ ಪಾಠವೂ ಟಿಪ್ಪಣಿಯೂ	೨೪
೭.	ನಮ್ಮ ಶಾಲೆಗಳಲ್ಲಿಯ ವ್ಯಾಯಾಮ ಶಿಕ್ಷಣ	೨೯

Printed by K R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ರೂ. ಆ. ಪೈ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦- ೮-೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಿಕೃತ)	೦- ೮-೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦- ೪-೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧- ೮-೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦- ೨-೦
ನೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦- ೩-೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧೨-೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦- ೨-೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦- ೪-೦
,, ೩ನೇ ,,	೦- ೫-೦
,, , ೪ನೇ ,,	೦- ೮-೦
ಅಂಕಗಣಿತ (ಗಾಂವಕರಕೃತ) ೩ನೇ ,,	೦- ೫-೦
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦- ೬-೦
ಭೂಮಿತಿ-ರೇಖಾಗಣಿತ (ಕುಲಕರ್ಣಿ ಕೃತ)	೦- ೭-೦
ಧಾರವಾಡ ಜಿಲ್ಲಾ ,, (ಕುರಡೀಕೃತ)	೦- ೫-೦
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	೦- ೮-೦
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧- ೦-೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦- ೫-೦
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-೧೨-೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦- ೨-೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧೦-೦
ಭೂಮಿತಿ (ಚಂದಾವರಕರ ಕೃತ)	೦- ೭-೦
ಸರಸ್ವತೀ ವಿಜಯ (ಬೂದೀಹಾಳಕೃತ)	೦- ೪-೦

ಪತ್ರೆ:— ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬	ಆಗಷ್ಟ ೧೯೬೭	ವರ್ಷ ೯ ಸಂ. ೫.

ಮುಂಬಯಿ ಸರಕಾರದ ಮಂತ್ರಿಮಂಡಲ

ಮುಂಬಯಿ ಅಸೆಂಬ್ಲಿಯ ಮಂತ್ರಿಮಂಡಲವು ಕಳೆದ ತಿಂಗಳಲ್ಲಿ ಪ್ರಕಟ ಗಿದ್ದು ಅದರ ಕಾರ್ಯವಿಭಾಗವು ಈ ಕೆಳಗಿನಂತಿರುವದು:—

ನರೇಬಲ್ ಮಿ. ಜಿ. ವಿ. ಮಾವಲಸಕರರು— ಅಧ್ಯಕ್ಷರು.

ನರೇಬಲ್ ಮಿ. ಬಿ. ಜಿ. ಖೇರರು—

ಮುಂಬಯಿ ಅಸೆಂಬ್ಲಿಯ ಮುಖ್ಯ ಮಂತ್ರಿಗಳು. ಅವರೇ ಶಿಕ್ಷಣಖಾತೆಯ ಂತ್ರಿಗಳೂ ಆಗಿರುವರು.

ನರೇಬಲ್ ಮಿ. ಎ. ಬಿ. ಲಠ್ಠೆಯವರು – ಆಯವ್ಯಯದ ಮಂತ್ರಿಗಳು.

ನರೇಬಲ್ ಮಿ. ಕೆ. ಎಮ್. ಮುನಶಿಯವರು—

ಕಾಯದೆಯ ಮತ್ತು ಹೋಮ ಡಿಪಾರ್ಟಮೆಂಟಿನ ಮಂತ್ರಿಗಳು.

ನರೇಬಲ್ ಡಾ॥ ಎಮ್. ಡಿ. ಗಿಲ್ಡರರು—

ಆರೋಗ್ಯ (ಔಷಧಾಲಯಗಳ ಮೇಲ್ವಿಚಾರಣೆ, ಸಾರ್ವಜನಿಕ ಆರೋಗ್ಯ ತ್ತು ಅಬಕಾರಿ) ಖಾತೆಯ ಮಂತ್ರಿಗಳು.

ನರೇಬಲ್ ಮಿ. ಮುರಾರಜಿ ಆರ್. ದೇಸಾಯಿಯವರು–

ರೆವ್ಹಿನ್ಯೂ, ಗ್ರಾಮಸುಧಾರಣೆ ಮತ್ತು ಬಕ್ಕಲತನ ಖಾತೆಗಳ ಮಂತ್ರಿಗಳು.

ಆನರೇಬಲ್ ಮಿ. ಎಮ್. ವಾಯ್. ನೂತಿಯುವರು—

ಪಬ್ಲಿಕ್‌ವರ್ಕ್ಸ್ ಖಾತೆಯ ಮಂತ್ರಿಗಳು.

ಆನರೇಬಲ್ ಮಿ. ಎಲ್. ಎಮ್. ಪಾಟೀಲ—

ಲೋಕಲ್ ಸೆಲ್ಫ್ ಗವರ್ನಮೆಂಟ್ (ಸ್ಥಾನಿಕ ಸ್ವರಾಜ್ಯ) ಖಾತೆಯ ಹಾಗೂ ಇತರ ಖಾತೆಗಳ ಮಂತ್ರಿಗಳು.

ಶಿಶುಶಾಲೆಗಳು

(ಎಪ್ರಿಲ್ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು)

೨. **ಅಸಹ್ಯತೆ ಮತ್ತು ತಿರಸ್ಕಾರಭಾವನೆ**— ಈ ಮನೋವೃತ್ತಿಯನ್ನು ಶಿಕ್ಷಕರು ಬಾಲಕರ ನೈತಿಕ ಶಿಕ್ಷಣದಲ್ಲಿ ಹೆಚ್ಚಾಗಿ ಉಪಯೋಗಿಸಿಕೊಳ್ಳಬಹುದು. ಕ್ರೂರಾಚರಣೆಯ ಮತ್ತು ಅಸ್ವಚ್ಛತೆಯ ಎಲ್ಲ ಪ್ರಸಂಗಗಳಲ್ಲಿ ಈ ಭಾವನೆಯನ್ನು ಜಾಗ್ರತಗೊಳಿಸಬೇಕು.

೩. **ಶೋಧಕಬುದ್ಧಿ** (Curiosity) **ಅಥವಾ ಕುತೂಹಲ ಮತ್ತು ಆಶ್ಚರ್ಯಭಾವನೆ**— ಬಾಲಕರಿಗೆ ಅಂಶತಃ ಅಪರಿಚಿತವಾದ ಸಂಗತಿಗಳಿಂದ ಈ ಮನೋವೃತ್ತಿಯು ಜಾಗ್ರತವಾಗುವದು; ಮತ್ತು ಅಸಂಗತಿಗಳ ಬಗ್ಗೆ ಹೆಚ್ಚಿನ ತಿಳಿವಳಿಕೆಮಾಡಿಕೊಳ್ಳಬೇಕೆಂಬ ಬಯಕೆಯನ್ನು ಹುಟ್ಟಿಸುವದರ ಮೂಲಕ ಈ ಭಾವನೆಯು ತೃಪ್ತಿಹೊಂದುವದು. ಈ ಸಂದರ್ಭಗಳಲ್ಲಿ ಆಶ್ಚರ್ಯಭಾವನೆಯೊಡನೆಯೇ ಭಯದ ಉತ್ಪತ್ತಿಯು ಆಗುತ್ತಿದ್ದರೂ ಅದು ಭಯದಿಂದ ಓಡಿ ಹೋಗುವ ಅಥವಾ ಅಡಗಿಕೊಳ್ಳುವ ಪ್ರವೃತ್ತಿ (ಮೊದಲನೆಯದು) ಯಷ್ಟು ಪ್ರಬಲವಾಗಿರುವದಿಲ್ಲ.

ಶೈಕ್ಷಣಿಕ ದೃಷ್ಟಿಯಿಂದ ಈ ಭಾವನೆಗೆ ತುಂಬ ಮಹತ್ವವಿರುವದು. ಬಾಲಕರಿಗೆ ತಮ್ಮ ಕೆಲಸದಲ್ಲಿ ಅಭಿರುಚಿಯುಂಟಾಗಲಿಕ್ಕೆ ಈ ಭಾವನೆಯು ತೀರ ಆವಶ್ಯಕವಾಗಿರುವದು. ಶೋಧಕಬುದ್ಧಿಯು ಚಿಕ್ಕಬಾಲಕರಲ್ಲಿ ವಿಶೇಷವಾಗಿ ಕಂಡುಬರುವದು. ಮತ್ತು ಅವರು ಆ ಪದಾರ್ಥಗಳನ್ನು ಮುಟ್ಟಿ, ವಾಸನೆ ತೆಗೆದುಕೊಂಡು, ಬಾಯೊಳಗಿಟ್ಟು ರುಚಿನೋಡಿ ಇಲ್ಲವೆ ಇದ್ದದ್ದರೊಳಗೆ ಏನಾದರೂ ಹೆಚ್ಚುಕಡಿಮೆಮಾಡಿ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ

ಮಾಡುತ್ತಿರುವರು. ಇಂಥ ಶಿಶುಗಳಿಗಾಗಲಿ ಪರರಿಗಾಗಲಿ ಏನಾದರೂ ಕೇಡು ಸಂಭವಿಸಬಹುದಾದ ಸಂದರ್ಭವಿದ್ದಾಗಲೊರತು ಅಪ್ಪಣೆ ಯೋಗ್ಯ ಕಾರಣವಿದ್ದ ಹೊರತು ಪರರು ಹೀಗೆ ಶೋಧಕಬುದ್ಧಿಯು ಪ್ರೇರಣೆಯಿಂದ ಕೆಲಸಮಾಡುತ್ತಿರುವ ಬಾಲಕರನ್ನು ಪ್ರತಿಬಂಧಿಸಲಾಗದು. ಬೇರೆ ಬೇರೆ ಬಾಲಕರಲ್ಲಿ ಈ ಶೋಧಕ ಬುದ್ಧಿಯ ಪ್ರಮಾಣವು ಭಿನ್ನಭಿನ್ನವಾಗಿರುವದು. ಈ ಮನಃಪ್ರವೃತ್ತಿಯು ಕಡಿಮೆ ಪ್ರಮಾಣದಲ್ಲಿರುವ ಬಾಲಕರಲ್ಲಿ ಇದನ್ನು ಜಾಗ್ರತಗೊಳಿಸಿ ಬೆಳಿಸುವದಕ್ಕೆ ಶಿಕ್ಷಕರು ಯತ್ನಿಸಬೇಕಾಗುವದು. ಯಾಕಂದರೆ, ಈ ಮನೋವೃತ್ತಿಯು ಮೂಲಕವಾಗಿಯೇ ಹೊಸ ಹೊಸ ಶಾಸ್ತ್ರೀಯ ಶೋಧಗಳು ಜಗತ್ತಿನಲ್ಲಿ ಬೆಳಕಿಗೆ ಬಂದು ನಮಗೆ ಅತ್ಯಂತ ಉಪಕಾರವಾಡಿವೆ; ಈ ಮನೋವೃತ್ತಿಯೇ ಶಾಸ್ತ್ರೀಯ ಶೋಧಗಳ ಉತ್ಪತ್ತಿಗೆ ಕಾರಣವಾಗುವದು. ಆದುದರಿಂದ ಬಾಲಕರಲ್ಲಿರುವ ತರತರದ ಪ್ರಶ್ನೆಕೇಳುವ ಕುತೂಹಲಬುದ್ಧಿಯು ಅವರ ಜ್ಞಾನಕ್ಕೆ ಅತಿ ಮುಖ್ಯವಾದ ಸಾಧನವೆಂದು ಹೇಳಲ್ಪಡುವದು. ಮತ್ತು ಶಿಕ್ಷಕರು ಈ ಕುತೂಹಲವನ್ನು ಬಾಲಕರಲ್ಲಿ ಹೆಚ್ಚಿಸುತ್ತಿರಬೇಕೆಂದು ಬಲ್ಲವರು ಹೇಳುವರು.

೪. **ಜಗಳಗಂಟತನ ಮತ್ತು ಕೋಪ**— ವ್ಯಕ್ತಿಗತವಾದ ಅಧಿಕಾರದ ಅಥವಾ ಇಚ್ಛೆಯ ವಿರುದ್ಧ ವರ್ತನೆಯಿಂದ ಈ ಮನೋವೃತ್ತಿಯು ವ್ಯಕ್ತವಾಗುವದು. ಉದಾ:— ಎಡವಿಬಿದ್ದ ಮಗುವು ತನ್ನ ಕಾಲಿಗೆ ತಡೆದ ಕಲ್ಲುಕಟ್ಟಿಗೆಗಳ ಮೇಲೆ ಸಿಟ್ಟಿಗೇಳಬಹುದು. ಮತ್ತು ಅದನ್ನು ತುಳಿದು ಅಥವಾ ಎತ್ತಿ ಒಗೆದು ತನ್ನ ಸೇಡುತೀರಿಸಿಕೊಳ್ಳಲು ಯತ್ನಿಸಬಹುದು. ಅದರಂತೆಯೇ ತಾನು ಮಾಡಬೇಕೆಂದೆನಿಸುವ ಕೆಲಸಕ್ಕೆ ತಡೆಯುಸ್ನುಂಟುಮಾಡುವ ಓರಗೆಯ ಗೆಳೆಯರ ಮೇಲೆಯೂ ಇತರರ ಮೇಲೆಯೂ ಮಗುವು ಕೋಪಗೊಳ್ಳುವದು. ಆ ಕೋಪವು ತನಗೆ ನೋವನ್ನುಂಟುಮಾಡಿದ, ತೊಂದರೆಗೊಳಿಸಿದ ಇಲ್ಲವೆ ತನ್ನ ಇಚ್ಛಾಪೂರ್ತಿಗೆ ವಿಘ್ನವನ್ನುಂಟುಮಾಡಿದ ವ್ಯಕ್ತಿಯನ್ನು ದೂರವಾಡುವ ಇಲ್ಲವೆ ತನಗಾಗುವ ತಡೆಯನ್ನು ಪರಿಹಾರಮಾಡಿಕೊಳ್ಳುವ ಬಯಕೆಯಿಂದ ಕೆಲವೊಂದು ಕಾರ್ಯವನ್ನು ಮಾಡಲು ಪ್ರೇರಿಸುವದು. ಈ ಮನಃಪ್ರವೃತ್ತಿಯು ಸಮ್ಮ ಅಂಕಿತದಲ್ಲಿದ್ದಾಗ ಮತ್ತು ಸರಿಯಾದ ಮಾರ್ಗದಲ್ಲಿರುವಾಗ ಮಾತ್ರ ತುಂಬಾ ಪ್ರಯೋಜನಕಾರಿಯಾಗಿರುವದು. ಜಗಳಗಂಟ ಹುಡುಗರನ್ನು ಹಿಂದುಮುಂದು ನೋಡದೆ ದಂಡಿಸುವಾಗಿರುವದು. ಜಗಳಗಂಟ ಹುಡುಗರನ್ನು ಹಿಂದುಮುಂದು ನೋಡದೆ ದಂಡಿಸುವಾಗಿರುವದು. ಆದರೆ ಅವರ ಈ ಮನೋವೃತ್ತಿಯನ್ನು ಕೊಂದುಬಿಡಲು ಯತ್ನಿಸಲಾಗದು. ಆದರೆ ಈ ಪ್ರವೃತ್ತಿಯು ಮೂಲಕ ಓರಗೆಯ ಗೆಳೆಯರಿಗೆ ತೊಂದರೆಯಾಗದಂತೆಯೂ ಈ ಪ್ರವೃತ್ತಿಯು ಮೂಲಕ ಓರಗೆಯ ಗೆಳೆಯರಿಗೆ ತೊಂದರೆಯಾಗದಂತೆಯೂ ಅಂಥ ಬಾಲಕ ಪ್ರವೃತ್ತಿಯು ಯೋಗ್ಯಮಾರ್ಗದಲ್ಲಿ ಬೆಳೆವಣಿಗೆಹೊಂದುವಂತೆಯೂ ಅಂಥ ಬಾಲಕ ಪ್ರವೃತ್ತಿಯು ಯೋಗ್ಯಮಾರ್ಗದಲ್ಲಿ ಬೆಳೆವಣಿಗೆಹೊಂದುವಂತೆಯೂ

ರಲ್ಲಿ ಕಂಡುಬರುವ ಆ ತರದ ಚಟುವಟಿಕೆಯಿಂದ ತಕ್ಕ ಪ್ರಯೋಜನವಾಗು ವಂತೆಯೂ ನೋಡಿಕೊಳ್ಳುವುದು ಜಾಣರಾದ ಶಿಕ್ಷಕರ ಕರ್ತವ್ಯವಾಗಿದೆ. ಆದರೆ ತಮ್ಮ ಕೋಪದಿಂದ ತಮಗೆ ಪ್ರಯೋಜನವಾಯಿತೆಂದಾಗಲಿ ತಮ್ಮ ಮನೋಭೀಷ್ಟ ವನ್ನು ಪಡೆಯುವದಕ್ಕೆ ಕೋಪವು ಒಂದು ಸಾಧನವಾಗುವುದೆಂದಾಗಲಿ ಬಾಲಕರಲ್ಲಿ ಭಾವನೆಯುಂಟಾಗಲಾಗದು. ಕೋಪದ ಅಥವಾ ಜಗಳಗಂಟತನದ ಎಲ್ಲ ಸಂದರ್ಭ ಗಳಲ್ಲಿ ಬಾಲಕರಿಗೆ ಕೆಡುಕಾಗದಂತೆ ಹೇಗೆ ನಡೆಯಬೇಕೆಂಬುದನ್ನು ನಿರ್ದೇಶಿಸಿ ಹೇಳುವದು ಸುಲಭವಲ್ಲ. ತಮ್ಮ ಪ್ರೀತಿಯ ಯಾವದೇ ಕೆಲಸದಲ್ಲಿ ತೊಡಗಿದ್ದರೂ ಅದಕ್ಕೆ ಪ್ರತಿಬಂಧವುಂಟಾದಕೂಡಲೆ ಕೋಪಗೊಳ್ಳುವದು ಚಿಕ್ಕಮಕ್ಕಳ ಸ್ವಭಾವ ವಾಗಿದೆ. ಒಂದು ಮಗುವು ಗೊಂಬೆಯನ್ನು ತೆಗೆದುಕೊಂಡು ಆಡುತ್ತಿದೆಯೆಂದು ತಿಳಿಯೋಣ. ಅದು ಆ ಗೊಂಬೆಯನ್ನು ಇನ್ನೊಬ್ಬನಿಗೆ ಕೊಡಬೇಕಾದ ಸಂದರ್ಭವು ಬಂದಕೂಡಲೆ ಸಿಟ್ಟಿಗೇಳಬಹುದು. ಅಥವಾ ಆ ಆಟವನ್ನು ಬಿಟ್ಟು ಊಟಕ್ಕೆ ಹೋಗಬೇಕಾದ ಸಮಯ ಬಂದರೂ ಕೂಡ ಅದು ಕೋಪಗೊಳ್ಳಬಹುದು. ಇಂಥ ಸಂದರ್ಭಗಳಲ್ಲಿ ಆ ಸಮಯಕ್ಕಿಂತ ಸ್ವಲ್ಪ ಕಾಲ ಮೊದಲೇ ಅದಕ್ಕೆ ತಕ್ಕ ಸೂಚನೆಯನ್ನು ಕೊಟ್ಟಿರಬೇಕು. ಎಂದರೆ ಅದಕ್ಕೆ ನೀನು ಇಷ್ಟುಹೊತ್ತಿನ ತರುವಾಯ ಈ ಗೊಂಬೆಯನ್ನು ಇಂಥವರಿಗೆ ಕೊಡಬೇಕಾಗುವದು; ಅಥವಾ ಈ ಕೆಲಸವನ್ನು ನಿಲ್ಲಿಸಬೇಕಾಗುವದು; ಆದ್ದರಿಂದ ಅಷ್ಟರೊಳಗಾಗಿಯೇ ನೀನು ಮಾಡುವದನ್ನೆಲ್ಲ ಮಾಡಿಕೊಂಡು ಸಿದ್ಧನಾಗಿರು, ಎಂದು ಮುಂತಾಗಿ ಹೇಳಿರ ಬೇಕು. ಇದರಿಂದ ಆ ಮಗುವಿಗೆ ವಿಚಾರಮಾಡಲಿಕ್ಕೆ ಸಾಕಷ್ಟು ಅವಕಾಶ ದೊರೆ ಯುವದರಿಂದ ತಟ್ಟನೆ ಕೋಪವು ಪ್ರಕಟವಾಗದಿರಲಿಕ್ಕೆ ಕಾರಣವಾಗುವದು. ಹಟಮಾರಿತನದ ಅಥವಾ ಕೋಪದ ಸ್ವಭಾವದ ಮಗುವಿನ ಮುಂದೆ ಅದು ಹಾಗೆ, ಇದು ಹೀಗೆ, ಎಂದು ಪ್ರತಿಪಾದನೆಮಾಡುವದರಿಂದ ಏನೂ ಪ್ರಯೋಜನವಾಗದು. ಅಥವಾ ತಾವೂ ಕೋಪಗೊಂಡು ಬೆದರಿಸಿ ಅದರ ಆ ತರದ ಮನಃಪ್ರವೃತ್ತಿಯನ್ನು ಹತ್ತಿಕ್ಕುವದರಿಂದಲೂ ಕಾರ್ಯವಾಗದು. ಕೋಪಗೊಂಡ ಮಗುವನ್ನು ಅದು ದಣಿದು ಶಾಂತವಾಗುವವರೆಗೂ ತನ್ನ ಹತ್ತರ ಇಟ್ಟುಕೊಂಡು ಅದರ ಸಿಟ್ಟು ಇಳಿದು ಸಮಾಧಾನಹೊಂದಿದ ಬಳಿಕ ಅದನ್ನು ಪ್ರೀತಿಸಿ ಅದು ಕೋಪದ ಸಮಯ ದಲ್ಲಿ ಮಾಡಿದ ತಪ್ಪನ್ನು ಕ್ಷಮಿಸಿ ತರುವಾಯ ಯೋಗ್ಯ ಸಮಯ ಬಂದಾಗ ಸಮಾಧಾನದಿಂದ ನೀನು ಕೋಪಗೊಂಡು ಮಾಡಿದ ಈ ಕೆಲಸದಿಂದ ಇಷ್ಟು ಅನರ್ಥವಾಯಿತೆಂಬುದನ್ನು ಸಕಾರಣವಾಗಿ ತಿಳಿಯಹೇಳುವದು ಶಿಕ್ಷಕರ ಕರ್ತ ವ್ಯವು. ಇದರಿಂದ ಆಗುವಷ್ಟು ಸತ್ಪರಿಣಾಮವು ಬೇರೆ ಯಾವ ಮಾರ್ಗದಿಂದಲೂ ಆಗಲಾರದೆಂದು ಹೇಳಬಹುದು. ಮತ್ತು ಆ ಮಗುವಿನ ಕೋಪಕ್ಕೆ ಕಾರಣವಾದ

ತಪ್ಪುತಿಳಿವಳಿಕೆಯನ್ನು ದೂರಮಾಡಲು ಯತ್ನಿಸುವದಕ್ಕಿಂತ ಮೊದಲು ಬೇರೆ ಯಾವದಾದರೊಂದು ವಿಷಯದ ಕಡೆಗೆ ಅದರ ಮನಸ್ಸನ್ನು ಸೆಳೆದುಕೊಂಡು ಸಮಾಧಾನಪಡಿಸಲು ಯತ್ನಿಸಬೇಕಾಗುವದು.

೫. **ಆತ್ಮಪ್ರೌಢಿ ಮತ್ತು ಅಹಂಕಾರ**— ಈ ಮನೋವೃತ್ತಿಯು ಪಶುಪಕ್ಷಿಗಳಲ್ಲಿಯೂ ಚಿಕ್ಕಮಕ್ಕಳಲ್ಲಿಯೂ ಒಡೆದು ಕಾಣಿಸುತ್ತಿರುವದು. ಪಕ್ಷಿಗಳಲ್ಲಿ ನವಿಲು ಇದಕ್ಕೆ ಉತ್ತಮವಾದ ಉದಾಹರಣೆಯಾಗಬಹುದು. ಅನೇಕ ಕೋಳಿಗಳ ನಡುವೆ ಅಲೆದಾಡುವ ಹುಂಜದಲ್ಲಿಯೂ ಈ ಮನಃಪ್ರವೃತ್ತಿಯನ್ನು ಕಾಣಬಹುದು.

ಇದೊಂದು ಸಾಮಾಜಿಕ ಭಾವನೆ ತನ್ನ ಹೆಚ್ಚಳವನ್ನು ಅನ್ಯರಿಗೆ ತೋರಿಸಿ ಹೌದೆನ್ನಿಸಿಕೊಳ್ಳಬೇಕೆಂಬ ಮನೋವೃತ್ತಿಯು ಇದರ ಮೂಲ ಸ್ವರೂಪವೆಂದು ಹೇಳಬಹುದು.

ಚಿಕ್ಕದೊಂದು ಮಗುವು ಹೊಸ ಅಂಗಿಯನ್ನು, ಅಲಂಕಾರವನ್ನು ಅಥವಾ ಹೊಸದೊಂದು ಬೂಟನ್ನು ಹಾಕಿಕೊಂಡು ಸಾಲೆಗೆ ಬಂದಿರುವದೆಂದು ತಿಳಿಯೋಣ. ತನ್ನ ಒರಗೆಯ ಗೆಳೆಯರ ನಡುವೆ ಆ ಮಗುವಿನ ಅಂದಿನ ನಡತೆಯೇ ಬೇರೆಯಾಗಿ ತೋರುವುದುಂಟಲ್ಲವೇ? ತನ್ನ ಯೋಗ್ಯತೆಯನ್ನೂ ತಾನು ಕಲಿತಿರುವ ತಿಳಿದಿರುವ ಸಂಗತಿಗಳನ್ನೂ ಅನ್ಯರಿಗೆ ತೋರಿಸಬೇಕೆಂಬ ಲವಲವಿಕೆಯೂ ಚಿಕ್ಕ ಮಗುವಿನಲ್ಲಿರುವುದುಂಟು. ತಾನು ಎಷ್ಟು ದೂರ ಜಿಗಿಯುವೆನೆಂಬುದನ್ನೂ ತನ್ನ ಪಟವನ್ನು ಎಷ್ಟು ದೂರ ಹಾರಿಸಬಲ್ಲೆನೆಂಬದನ್ನೂ ಅನ್ಯರಿಗೆ ತೋರಿಸಿ ಹೌದೆನ್ನಿಸಿಕೊಳ್ಳುವ ಆತುರತೆಯನ್ನು ತೋರಿಸುವ ಮಕ್ಕಳನ್ನೂ ಅನೇಕರು ನೋಡಿರಬಹುದು.

ಚಿಕ್ಕ ಮಗುವು ತಾಯಿಯ ಗರ್ಭದಿಂದ ಹೊರಗೆ ಬಂದಾಗ ಅದು ಸರ್ವತೋಮುಖವಾಗಿ ಪರಾವಲಂಬಿಯಾಗಿರುವದು. ಹಾಲು ನೀರುಗಳನ್ನು ಮೊದಲುಗೊಂಡ ಎಲ್ಲ ಸಂಗತಿಗಳಲ್ಲಿಯೂ ತಾನು ಪರಾವಲಂಬಿಯಾಗಿರಬೇಕಾಗಿರುವದೆಂಬ ಭಾವನೆಯು, ಕೇವಲ ಪರಾವಲಂಬನೆಯು, ಆ ಮಗುವಿನ ಆಯುಷ್ಯದಲ್ಲಿ ಅನುಭವಕ್ಕೆ ಬಂದ ಎಲ್ಲಕ್ಕೂ ಮೊದಲನೆಯ ಮನೋವಿಕಾರವಾಗಿರುವದು. ಅದು ಬೆಳೆದು ದೊಡ್ಡದಾಗುತ್ತ ಹೋದಂತೆ ತನ್ನವರೊಡನೆ ಕೂಡಿ ನಡೆಯುವದರಿಂದ ಪ್ರೀತಿ ಮಮತೆಗಳನ್ನೂ ಮಾನಮರ್ಯಾದೆಗಳನ್ನೂ ಗ್ರಹಿಸತೊಡಗುವದು. ತಾನು ಪರರಿಂದ ಹೌದೆನ್ನಿಸಿಕೊಳ್ಳಬೇಕೆಂದು ಬಯಸಹತ್ತುವದು. ಮುಂದೆ ಯೋಗ್ಯ ಶಿಕ್ಷಕರಿಂದ ಈ ಮನೋವೃತ್ತಿಯು ಬೆಳೆವಣಿಗೆ ಹೊಂದಿ ಸತ್ಯತೆ ಪರಸ್ಪರ ಪ್ರೀತಿ ಸಹಾನುಭೂತಿಗಳೆಂಬ ಉಚ್ಚ ಮನೋವಿಕಾರಗಳಾಗಿ ಮಾರ್ಪಡುವದು.

ಚಿಕ್ಕ ಮಕ್ಕಳು ಯಾವದಾದರೂ ಕಾರಣದಿಂದ ತಮಗೆ ಸಾಕಷ್ಟು ಮನ್ನಣೆ ದೊರೆಯಲಿಲ್ಲೆಂಬ ಮನೋವೃತ್ತಿಗೆ ಒಳಗಾಗಿರುವಾಗ ಒಂಟಿಗರಾಗಿ ದೂರ ಕುಳಿತು ಮಿಕ್ಕವರ ದೃಷ್ಟಿಯನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಯತ್ನಿಸಬಹುದು. ಬಟ್ಟಲತುಂಬ ಪಾಯಸ ದೊರೆಯುದೆ ಇದ್ದದರಿಂದ ಮುದ್ದನ ಕೋಣೆಯ ಮೂಲೆಯನ್ನು ಸೇರಿ ಕುಳಿತದ್ದು ಆತನ ಹಟಮಾರಿತನವೆಂದು ಹೇಳಲ್ಪಟ್ಟಿದ್ದರೂ ಅದರಲ್ಲಿ ಆತನ ಈ ಬಗೆಯ—ಅನ್ಯರ ದೃಷ್ಟಿಯನ್ನು ತನ್ನ ಕಡೆಗೆ ಕದಾರಿಯಿಂದ ಸೆಳೆದುಕೊಳ್ಳಬೇಕೆಂಬ—ಮನೋವೃತ್ತಿಯು ವ್ಯಕ್ತವಾಗುವದು. ಜ್ವರ ಬಂದಾಗ ಮುಸಂಬಿಯ ಹಣ್ಣು ತಿನ್ನಲಿಕ್ಕೆ ಸಿಕ್ಕಿದ ನೆನಪಿನಿಂದ ಮಗುವು ಜ್ವರದ ನಟನೆ ಮಾಡುವದು ಆಶ್ಚರ್ಯಕ್ಕೆ ಕಾರಣವಲ್ಲ. ಅಶಕ್ತ ಬಾಲನ ಸೊಬ್ಬನನ್ನು ಹೆಚ್ಚು ಪೀಡಿಸಿ ಪಾಠ ತೆಗೆದುಕೊಳ್ಳಬಾರದೆಂದು ಶಿಕ್ಷಕನು ಕೆಲವು ದಿವಸ ಸುಮ್ಮನೆ ಬಿಟ್ಟರೆ ಅವನು ತನ್ನ ಆ ಅಶಕ್ತತೆಯನ್ನು ಮೇಲೆ ಮೇಲೆ ತೋರಿಸಲು ಬಯಸಿದರೆ ಅದು ಅವನ ತಪ್ಪೆಂದು ಹೇಳಲಾಗದು. ತಾನು ಮುಂಚೆ ಬರಬೇಕೆಂದು ಹಾತೊರೆಯುವ ಒಬ್ಬ ಹುಡುಗನು ತನ್ನ ಪ್ರಯತ್ನದಿಂದ, ತಾನು ಅನುಸರಿಸಿದ ಮಾರ್ಗದಿಂದ, ಯಶಸ್ವಿಯಾಗದೆ ಇದ್ದ ಸಂದರ್ಭದಲ್ಲಿ ತನ್ನ ಮನಸ್ಸಿಗೆ ತೋರಿದ ಒಂದು ತುಂಟತನದ ದಾರಿಯಿಂದ ನಡೆದು ಶಾಲೆಯಲ್ಲಿ ಶಿಕ್ಷಕನ ಅಥವಾ ಮನೆಯಲ್ಲಿ ಪಾಲಕರ ದೃಷ್ಟಿಯನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಎಷ್ಟೋ ಉದಾಹರಣೆಗಳಿರುವುವು. ಅಂಥ ಬಾಲಕರನ್ನು ಹೇಗೆ ಸಮಾಧಾನ ಪಡಿಸಬಹುದು? ಅವರನ್ನು ವರ್ಗದ ಮುಂದೆ ನಿಲ್ಲಿಸಿ ಅವರ ತಪ್ಪನ್ನು ವಿವರಿಸುವದರಿಂದ ಪ್ರಯೋಜನವಾದೀತೇನು? ಅಥವಾ ಶಿಕ್ಷಕನು ಆ ಬಾಲಕನನ್ನು ಬೇರೆಯಾಗಿ ಕರೆದು ನೀನು ಈಗ ಅನುಸರಿಸಿರುವ ಮಾರ್ಗವನ್ನು ಬಿಟ್ಟು ಈ ಹೊಸ ದಾರಿಯಿಂದ ಹೋದರೆ ನಿನ್ನ ಬಯಕೆಯು ಈಡೇರುವದೆಂದು ಉಪದೇಶಮಾಡುವದರಿಂದ ಯೋಗ್ಯ ಪರಿಣಾಮವಾದೀತೇನು? ಇಂಥ ಸಂದರ್ಭಗಳಲ್ಲಿ ಬಾಲಕನ ಹಟಮಾರಿತನವು ಅಥವಾ ತುಂಟತನವು ಬಯಲಿಗೆ ಬರುವುದೂ ಉಂಟು. ತಮ್ಮ ಜಾಣತನದ ಅಥವಾ ಧೈರ್ಯದ ಪ್ರಶಂಸೆಯಾಗಿ ಮಿಕ್ಕವರ ದೃಷ್ಟಿಯು ತಮ್ಮ ಕಡೆಗೆ ಹೊರಳಬೇಕೆಂಬ ವಿಚಾರದಿಂದಲೇ ಆ ಬಾಲಕರು ಇಂಥ ಯಾವದೊಂದು ತುಂಟತನದ ಅಥವಾ ಹಟಮಾರಿತನದ ಕೆಲಸಮಾಡುತ್ತಿರುವರು.

ಆತ್ಮ ಪ್ರತಿಷ್ಠೆಯು ಮನೋವೃತ್ತಿಯು ಪ್ರಬಲವಾಗಿರುವ ಯಾವುದೊಂದು ಮಗುವು ತುಂಟ (ಕಿಡಿಗೇಡಿ) ತನದ ಇನ್ನೊಂದು ಮಗುವು ತನಗಿಂತಲೂ ಹೆಚ್ಚಿನ ಮನ್ನಣೆಯನ್ನು ಪಡೆದಿರುವುದನ್ನು ನೋಡಿದಾಗ ತನ್ನ ಪ್ರತಿಷ್ಠೆಯನ್ನು

ಕಚ್ಚಿಸಿಕೊಳ್ಳುವುದಕ್ಕಾಗಿ ದೂರ ಸರಿದು ಕುಳಿತು ಮಿಕ್ಕವರ ಲಕ್ಷ್ಯವನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದೂ ಉಂಟು.

ಮಗುವಿನ ಜಗಳಗಂಟತನ ಅಥವಾ ತುಂಟತನದ ಮನೋವೃತ್ತಿಯನ್ನು ಬೇರೊರಿಸಿ ಕಿತ್ತು ಚೆಲ್ಲುವುದಕ್ಕೆ ಯತ್ನಿಸುವುದಾಗಲಿ ಅಂಥ ಬಾಲಕರನ್ನು ಕ್ರೂರ ರೀತಿಯಿಂದ ನಡಿಸಿಕೊಳ್ಳುವುದಾಗಲಿ ಯೋಗ್ಯವಲ್ಲ. ಯಾಕೆಂದರೆ ಈ ಮನೋವೃತ್ತಿಯಲ್ಲಿ ಒಂದು ತರದ ತಾನು ಹೆಚ್ಚಿನವನಾಗಬೇಕೆಂಬ ಉಚ್ಚ ಮನೋವಿಕಾರದ ಕುರುಹು ಇರುವುದು. ಆದ್ದರಿಂದ ಇದನ್ನು ಸರಿಯಾದ ಮಾರ್ಗಕ್ಕೆ ಬಯ್ದು ಮುಟ್ಟಿಸುವುದಕ್ಕಾಗಿ ಮಗುವನ್ನು ತಕ್ಕ ವಿಶೇಷತೆಯಿಂದ ಸಮಾಧಾನ ಪಡಿಸಿ ಅದಕ್ಕೆ ಹಿತಾಹಿತದ ಜ್ಞಾನಮಾಡಿಕೊಟ್ಟು ಸರಿಪಡಿಸುವುದೇ ಯೋಗ್ಯ ವೆನಿಸುವುದು. ಮಿಕ್ಕ ಸಂಗಡಿಗರ ಉತ್ಕರ್ಷಕ್ಕೆ ಬಾಧೆಯನ್ನುಂಟುಮಾಡುವ ಕಥವಾ ಅಸ್ಯರನ್ನು ದುರ್ಮಾರ್ಗಕ್ಕೆ ಪ್ರೇರಿಸುವ ಸಂದರ್ಭವಿದ್ದಾಗ ಮಾತ್ರ ಈ ಬಗೆಯ ನಡತೆಯನ್ನು ಪ್ರತಿಬಂಧಿಸುವುದು ಆವಶ್ಯಕವಾಗುವುದು.

೬. **ಆಧೀನತೆ ವಿಧೇಯತೆಗಳು**—ಈ ಗುಣಗಳು ಬಾಲಕರಲ್ಲಿ ಶಿಕ್ಷಕರ ಸಂಬಂಧದಿಂದ ಒಡೆದುಕಾಣಿಸುವವು. ಶಿಕ್ಷಕರಿಗೆ ವಿಧೇಯನಾಗಿರುವುದು ಎಂದರೆ ಶಿಕ್ಷಕರು ಹೇಳಿದಂತೆ ಕೇಳುವದು, ತಮ್ಮ ಕರ್ತವ್ಯವೆಂದೂ ತಮ್ಮ ಮೇಲೆ ಅವರ ನಿಯಂತ್ರಿತವಾದ ಅಧಿಕಾರವಿರುವುದೆಂದೂ ಬಾಲಕರು ತಿಳಿದು ಕೊಂಡಿರುವರು. ತಾವು ತಮ್ಮ ಶಿಕ್ಷಕರಿಂದ ಅನೇಕ ಸಂಗತಿಗಳನ್ನು ಕಲಿತು ಕೊಳ್ಳಬೇಕಾಗಿರುವದೆಂದೂ ಅವರು ತಮಗಿಂತ ಹೆಚ್ಚು ಜಾಣರೆಂದೂ ಬಾಲಕರು ತಿಳಿದುಕೊಳ್ಳುವುದಂತೂ ತೀರ ಸ್ವಾಭಾವಿಕವಾದ ಮಾತು. ಆದರೆ ಈ ಮನೋವೃತ್ತಿಯ ಪರಾಕಾಷ್ಠೆಯಿಂದಲೂ ಕೆಡಕಾಗುವ ಸಂಭವವಿದೆ. ಇದರಿಂದ ಬಾಲಕರ ಮನಸ್ಸಿನಲ್ಲಿ ತಾವು ಹೀನ ದೀನ ಕಂಗಾಲರೆಂಬ ಕ್ಷುಲ್ಲಕ ವಿಚಾರವುಂಟಾಗಲು ಅವಕಾಶಕೊಡದಂತೆ ಶಿಕ್ಷಕರು ತುಂಬ ಜಾಣ್ಮೆಯಿಂದ ನೋಡಿಕೊಳ್ಳಬೇಕಾಗುವದು. ತೀರ ಚಿಕ್ಕ ಮಗುವಿನಲ್ಲಿಯೂ ಕೂಡ ತನ್ನಲ್ಲಿ ಹೆಚ್ಚಿಲ್ಲದಿದ್ದರೆ ಸ್ವಲ್ಪ ವಾದರೂ ಶಕ್ತಿಸಾಮರ್ಥ್ಯಗಳಿವೆ ಬುದ್ಧಿಯಿದೆ ಎಂಬ ಆತ್ಮವಿಶ್ವಾಸವುಂಟಾಗು ವಂತೆ ಮಾಡುವದು ಅವಶ್ಯವಾಗಿದೆ. ಶಾಲೆಯಲ್ಲಿ ಮಗುವು ಕೈಕೊಂಡಿರುವ ಒಂದು ಸಾಮಾನ್ಯ ಕೆಲಸದಿಂದಲೂ ಸಹ ಅದರಲ್ಲಿ ಆತ್ಮವಿಶ್ವಾಸವುಂಟಾಗುವಂತೆ ಮಾಡಬಹುದು. ಆಧೀನತೆ ವಿಧೇಯತೆಗಳು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಅವಶ್ಯಕವಾಗಿದ್ದರೂ ಈ ಗುಣಗಳ ಪೋಷಣ ನಡೆದಾಗ ಆತ್ಮವಿಶ್ವಾಸದ ಕೊಲೆ ಯಾಗದಂತೆ ನೋಡಿಕೊಳ್ಳಬೇಕಾಗುವದು.

೭. **ಹಿರಿಯತನದ ಭಾವನೆ ಮತ್ತು ಕೋಮಲತೆ**— ಈ ಮನೋಭಾವನೆಯು ಎಲ್ಲ ಪ್ರಾಣಿಗಳಲ್ಲಿಯೂ ಮನುಷ್ಯನಲ್ಲಿಯೂ ಹೆಚ್ಚು ಪ್ರಬಲವಾಗಿ ಕಾಣಬರುವುದು. ಅಂಜುಬುರುಕ ಸ್ವಭಾವದ ಪ್ರಾಣಿಯು ಕೂಡ ತನ್ನ ಕರುಮರಿಗಳಿಗೆ (ಸಂತತಿಗೆ) ಏನಾದರೂ ಆಪತ್ತು ಒದಗುವ ಲಕ್ಷಣ ತೋರಿದ ಕೂಡಲೆ ಅತಿಶಯ ಧೈರ್ಯವನ್ನು ತಾಳಿ ಹಗೆಯನ್ನು ಎದುರಿಸಲು ಸಿದ್ಧವಾಗುವದು.

ಈ ಮನಃಪ್ರವೃತ್ತಿಯು ಚಿಕ್ಕ ಬಾಲಕರಲ್ಲಿಯೂ ಕಂಡುಬರುವುದು. ಚಿಕ್ಕ ಮಗುವು ತನ್ನ ಆಟಿಗೆಯ ಗೊಂಬೆಯೊಡನೆ ಆಡುತ್ತಿರುವಾಗ ಈ ತರದ ಮನೋಭಾವಗಳನ್ನು ತೋರ್ಪಡಿಸುವದು. ಮಕ್ಕಳಲ್ಲಿ ಈ ಭಾವನೆಯು ಎಲ್ಲಕ್ಕೂ ಕೊನೆಗೆ ಕಂಡುಬಂದು ಬೆಳೆವಣಿಗೆ ಹೊಂದುವದು.

ಈ ಮನಃಪ್ರವೃತ್ತಿಯೇ ಎಲ್ಲ ತರದ ಪ್ರೀತಿಯ ಮನೋವಿಕಾರಗಳಿಗೆ ಮೂಲಕಾರಣವೆಂದು ಹೇಳುವುದುಂಟು. ಪಶುಪಕ್ಷಿಗಳ ಮೇಲಿನ ಪ್ರೀತಿ ಬೇಸತ್ತ ಬಿದ್ದವರ ಅರೈಕೆ ನಿರಾಶ್ರಿತರ ಮೇಲೆ ದಯ ತೋರಿಸುವುದು ಇವೇ ಮೊದಲಾದ ಮನೋವೃತ್ತಿಗಳು ಹಾಗು ಭೂತದಯೆ ಸಹಾನುಭೂತಿ ಮುಂತಾದ ಎಲ್ಲ ಮನೋವಿಕಾರಗಳು ಈ ಮೂಲ ಮನಃಪ್ರವೃತ್ತಿಯಿಂದಲೇ ಹುಟ್ಟಿ ಬೆಳೆಯುವ ವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಬಾಲಕರಲ್ಲಿ ಮೇಲೆ ಹೇಳಿದ ಏಳು ಪ್ರಾಥಮಿಕ ಮನಃ ಪ್ರವೃತ್ತಿಗಳಲ್ಲದೆ ವಿಧಾಯಕ (ರಚನಾಪರ) ಪ್ರವೃತ್ತಿ ಸ್ವಾಮಿತ್ವದ ಕಲ್ಪನೆ ಮತ್ತು ಅನುಕರಣೆಯಿಂದ ಪುನರ್ಘಟನೆ ಮಾಡುವ ಮನೋಭಾವನೆ ಎಂಬ ಮೂರು ದೈತೀಯಕ ಭಾವನೆಗಳೂ ಕಂಡುಬರುವವ್ರ. ಇವು ಶೈಕ್ಷಣಿಕ ದೃಷ್ಟಿಯಿಂದ ಶಿಕ್ಷಕರಿಗೆ ತುಂಬ ಪ್ರಮೋಜನಕಾರಿಯಾಗಿರುವವು.

ಸ್ವಾಮಿತ್ವ (ಒಡೆತನ) ದ ಕಲ್ಪನೆ— ಎಷ್ಟೋ ಚಿಕ್ಕ ಮಕ್ಕಳು ಮೂರು ವರ್ಷ ವಯಸ್ಸಿಗೆ ಮುಟ್ಟಿದಾಗ ತಮ್ಮ ಆಟದ ಗೊಂಬೆಗಳು ಉಪಕರಣಗಳು ಮುಂತಾದವುಗಳ ಬಗ್ಗೆ ಅವು ತಮ್ಮ ಸ್ವಂತದವೆಂದೂ ಅವುಗಳ ಮೇಲೆ ತಮ್ಮ ಸಂಪೂರ್ಣ ಸ್ವಾಮಿತ್ವವಿರುವದೆಂದೂ ಪರರು ಅವನ್ನು ಹಿಡಿಯಬಾರದೆಂದೂ ಅಪೇಕ್ಷೆಪಡುವರು. ಇದು ಸ್ವಾರ್ಥಪರತೆಯ ಲಕ್ಷಣವೆಂದೂ ಹೇಳುವುದುಂಟು. ಆದರೆ ಇದು ಮಗುವು ಪ್ರಪಂಚದಲ್ಲಿ ತನ್ನ ಅಸ್ತಿತ್ವವನ್ನು, ತನಗೆ ಸಂಬಂಧಪಟ್ಟ ಹಲಕೆಲವು ಒಡವೆಗಳೂ ಅಧಿಕಾರವೂ ಇರುವವೆಂಬುದನ್ನು, ತೋರ್ಪಡಿಸುವ ಮನೋಭಾವನೆಯ ಉಗಮವೆಂದು ಹೇಳಬಹುದು. ಈ ಭಾವನೆಯು ಮೂಲಕವಾಗಿ ಮಕ್ಕಳು ಹಲವು ಒಡವೆಗಳನ್ನು ಸಂಗ್ರಹಿಸಿ ಅವು

ತಮ್ಮ ಸ್ವಂತ ಸಂಪಾದನೆಯವೆಂದೂ ಅವುಗಳ ಮೇಲೆ ತಮ್ಮ ಸಂಪೂರ್ಣ ಸ್ವಾಮಿತ್ವವಿರುವವೆಂದೂ ಭಾವಿಸುವರು. ಮತ್ತು ಅದರಿಂದ ಅವರಿಗೆ ಆನಂದ ವಾಗುವದು. ಕಡ್ಡಿಯ ಪೆಟ್ಟಿಗೆ, ಸಿಗರೇಟ ಪೆಟ್ಟಿಗೆ, ಸೋಡಾಬಾಟಲಿಯ ಮುಚ್ಚಳಗಳು ಮುಂತಾದ ಒಣಿಯಲ್ಲಿ ಬಿದ್ದ ಒಡವೆಗಳನ್ನು ಸಂಗ್ರಹಿಸಿಟ್ಟಿರುವ ಬಾಲಕರನ್ನು ನಾವು ಅಡಿಗಡಿಗೆ ನೋಡುತ್ತಿರುವೆವಷ್ಟೆ? ಶಾಲೆಗಳಲ್ಲಿ ಬಾಲಕರ ಈ ಮನೋಭಾವನೆಯನ್ನು ಉಪಯೋಗಿಸಿಕೊಂಡು ಶೈಕ್ಷಣಿಕ ದೃಷ್ಟಿಯಿಂದ ಮಹತ್ವ ವುಳ್ಳ ಚಿತ್ರಗಳು, ಹಲಕೆಲವು ಮಾದರಿಗಳು, ಸ್ಟಾಂಪುಗಳು ಮುಂತಾದವುಗಳನ್ನು ಸಂಗ್ರಹಿಸಲಿಕ್ಕೆ ಅವರಿಗೆ ಉತ್ತೇಜನಕೊಡಬೇಕು.

ಹಲಕೆಲವು ಪದಾರ್ಥಗಳು ತಮ್ಮ ಸ್ವಂತದವೆಂಬ ಅಭಿಮಾನವೂ ಅವುಗಳನ್ನು ರಕ್ಷಿಸಿಕೊಳ್ಳಬೇಕೆಂಬ ಪ್ರೀತಿಯೂ ಬಾಲಕರಲ್ಲಿ ಬೆಳೆಯುವಂತೆ ಶಿಕ್ಷಕರು ನೋಡಿ ಕೊಳ್ಳಬೇಕಾಗಿರುವದು. ಹಾಗೆಯೇ ಪರರ ಸ್ವಾಮಿತ್ವಕ್ಕೆ ಒಳಪಟ್ಟ ವಸ್ತುಗಳ ವಿಷಯದಲ್ಲಿ ಅನ್ಯರ ಒಡವೆಗಳ ಮೇಲಿರುವ ಅನ್ಯರ ಸ್ವಾಮಿತ್ವವನ್ನು ನೋಡಿ ಕೊಳ್ಳುವದೂ ಅವಶ್ಯವೆಂಬ ಮತ್ತು ಶಾಲೆಗೆ ಸಂಬಂಧಿಸಿದ ಸಾರ್ವಜನಿಕ ಒಡವೆಗಳ ವ್ಯವಸ್ಥೆಯನ್ನು ನೋಡಿಕೊಳ್ಳುವದು ತನ್ನ ಕರ್ತವ್ಯವೆಂಬ ವಿಚಾರ ವನ್ನು ಬಾಲಕರಲ್ಲಿ ಹುಟ್ಟಿಸಬೇಕಾಗಿರುವದು. ಅಲ್ಲದೆ ಸಾರ್ವಜನಿಕ ಪದಾರ್ಥ ಗಳನ್ನು ಉಪಯೋಗಿಸಿಕೊಳ್ಳುವಾಗ ಯೋಗ್ಯ ಎಚ್ಚರಿಕೆಯನ್ನು ತಕ್ಕೊಳ್ಳುವ ಚಟವನ್ನು ಹುಡುಗರಲ್ಲಿ ಈಗಲೇ ಹುಟ್ಟಿಸಬೇಕಾಗಿರುವದು. ಇದು ತನ್ನದು ತನ್ನ ಸ್ವಂತದ್ದು ಎಂಬ ಅಭಿಮಾನವು ಒಳ್ಳೆಯದಾದರೂ ಅದನ್ನು ಅನ್ಯರು ಹಿಡಿಯಲೇ ಬಾರದು, ಅದನ್ನು ಬೇರೆಯವರು ಉಪಯೋಗಿಸಲೇಬಾರದು, ಎಂಬ ಭಾವನೆಯು ಅಷ್ಟು ಒಳ್ಳೆಯದಲ್ಲ. ಇಂಥ ಸಂದರ್ಭಗಳಲ್ಲಿ ಮಕ್ಕಳ ಮನೋಭಾವನೆಯು ಯೋಗ್ಯಮಾರ್ಗವನ್ನು ಅನುಸರಿಸುವದೆಂಬದನ್ನು ಶಿಕ್ಷಕರು ಅಡಿಗಡಿಗೆ ನೋಡಿ ಕೊಳ್ಳಬೇಕಾಗುವದು. ಮತ್ತು ಮಕ್ಕಳಿಗೆ ಯೋಗ್ಯ ರೀತಿಯಿಂದ ಉತ್ತೇಜನ ಕೊಟ್ಟು ಅವರು ಅನ್ಯರೊಡನೆ ಕೂಡಿ ನಡೆಯುವಂತೆಯೂ ದೊಡ್ಡ ಮನಸ್ಸಿನ (ಔದಾರ್ಯದ) ಆವಶ್ಯಕತೆಯು ಅವರಲ್ಲಿ ಬಿಂಬಿಸುವಂತೆಯೂ ನೋಡಿಕೊಳ್ಳಬೇಕು. ಇಂಥ ಗುಣಗಳಿಗೆ ಯೋಗ್ಯ ಮನ್ನಣೆ ದೊರೆಯುವದೆಂದು ಚಿಕ್ಕ ಮಗುವು ಒಮ್ಮೆ ಮನಗಂಡಿತೆಂದರೆ ಅದು ಅವುಗಳನ್ನು ತೋರಿಸಲಿಕ್ಕೆ ಹಾತೊರೆಯಹತ್ತುವದು.

ರಚನಾಪರ (ವಿಧಾಯಕ) ಪ್ರವೃತ್ತಿ:— ಈ ಮನೋಭಾವನೆಯ ಮೂಲಕ ಮಗುವು ಜ್ಞಾನಸಂಪಾದನೆ ಮಾಡಿಕೊಳ್ಳುವದು ಇಷ್ಟೇ ಅಲ್ಲ. ಮನೋಭಾವನೆಗಳನ್ನು ಅನುಸರಿಸಿ ಕೆಲಸ ಮಾಡುವದಕ್ಕೆ ಆವಶ್ಯಕವೆನಿಸುವ

ಅದರ ಶರೀರದೊಳಗಿನ ಸ್ನಾಯುಗಳಿಗೂ ತಕ್ಕ ಲಕ್ಷಣ ದೊರೆಯುವದು. ಬೇರೆ ಬೇರೆ ಮಾದರಿಗಳನ್ನು ಮಾಡಬೇಕೆನ್ನುವ ಹಂಬಲವು ಬಹುತರ ಎಲ್ಲ ಮಕ್ಕಳಲ್ಲಿ ಇದ್ದೇ ಇರುವದು. ಬಾಲಕರ ಈ ಮನೋಭಾವನೆಯು ಕಾರ್ಯರೂಪಕ್ಕೆ ಬರುವಂತೆ ಮಾಡುವದಕ್ಕಾಗಿ ಶಾಲೆಗಳಲ್ಲಿ ಬೇಕಾದಷ್ಟು ಸಲಕರಣೆಗಳನ್ನೂ ಸಂದರ್ಭಗಳನ್ನೂ ಒದಗಿಸಿ ಕೊಡುವದು ಶಿಕ್ಷಕರ ಕರ್ತವ್ಯವಾಗಿರುವದು. ಬಾಲಕರ ಕಲ್ಪನಾ ಶಕ್ತಿಯನ್ನೂ ನಿರೀಕ್ಷಣ ಶಕ್ತಿಗ್ರಹಣ ಶಕ್ತಿಗಳನ್ನೂ ಜಾಗ್ರತಗೊಳಿಸಿ ಕಾರ್ಯ ರೂಪಕ್ಕೆ ತರಲು ಈ ರಚನಾಪರ ಪ್ರವೃತ್ತಿಯು ಮೂಲಕ ಬಾಲಕರು ಕೆಲಸ ಮಾಡತೊಡಗಿದ ಸಂದರ್ಭವು ತುಂಬ ಅನುಕೂಲವುಳ್ಳದ್ದಿರುವದು. ಈಗ ಮಗು ವಿಗೆ ತಾನು ಗಳಿಸಿಕೊಂಡ ಜ್ಞಾನವನ್ನೂ ಅನುಭವವನ್ನೂ ಕಾರ್ಯರೂಪಕ್ಕೆ ತರುವುದಕ್ಕೂ ಹೊಸ ಅನುಭವ ಪಡೆಯಲಿಕ್ಕೂ ಅನುಕೂಲ್ಯವುಂಟಾಗುವುದು.

ಸಾಮೂಹಿಕವಾಗಿ ಕೆಲಸ ಮಾಡುವ ಪ್ರವೃತ್ತಿ :— ಈ ಮನೋ ಭಾವನೆಯು ಬಾಲಕರಲ್ಲಿ ಸಾಲ್ಕೈದು ವರುಷ ವಯಸ್ಸಾದಾಗ ಕಂಡುಬರುವದು. ಈ ವಯಸ್ಸಿನಲ್ಲಿ ಬಾಲಕರು ತಮ್ಮ ಓರಗೆಯ ಬಾಲಕರೊಡನೆ ಕೂಡಿ ನಡೆಯುವ ದರಿಂದ ತುಂಬಾ ಆನಂದಪಡುವರು. ಮತ್ತು ಇದಕ್ಕೂ ಮುಂದಿನ ವಯಸ್ಸಿನಲ್ಲಿ ಅವರು ತಮಗಿಂತ ದೊಡ್ಡವರ ಸಹವಾಸವನ್ನು ಹೆಚ್ಚಿಗೆ ಪ್ರೀತಿಸಹತ್ತುವರು; ಇಲ್ಲವೆ ತಮ್ಮಷ್ಟಕ್ಕೆ ತಾವೇ ಆಡುವ ಪ್ರವೃತ್ತಿಯನ್ನು ತೋರಿಸುವರು. ಈ ಸಮಯದಲ್ಲಿ ಅವರಲ್ಲಿ ಸಾಮೂಹಿಕ ಜೀವನದ ಭಾವನೆಯು ಜಾಗ್ರತವಾಗಿರು ವದು. ಆದ್ದರಿಂದ ಈ ಸಮಯದಲ್ಲಿ ಶಿಕ್ಷಕರು ಹೆಚ್ಚು ಕಾರ್ಯವನ್ನು ಮಾಡ ಬಹುದಾಗಿರುವದು. ಈ ಕಾಲದಲ್ಲಿ ಬಾಲಕರಲ್ಲಿ ಸಮಾಜಕ್ಕೆ ಸಂಬಂಧಿಸಿದ ಯೋಗ್ಯ ಮನೋಭಾವನೆಗಳನ್ನೂ ಯೋಗ್ಯ ಕಾರ್ಯಪ್ರವೃತ್ತಿಯನ್ನೂ ಹುಟ್ಟಿಸ ಲಿಕ್ಕೆ ಸಾಧ್ಯವಿರುವದು. ಪುನಃ ಪುನಃ ಉತ್ತೇಜನ ಕೊಟ್ಟು ಅವನ್ನೇ ಕಾರ್ಯ ರೂಪದಲ್ಲಿ ವ್ಯಕ್ತಪಡಿಸುವದರಿಂದ ಬಾಲಕರಲ್ಲಿ ಅಂಥ ಸ್ವಭಾವವೇ ಒಡಮೂಡು ವದು. ವ್ಯಕ್ತಿಯು ಹಿತಸಂಬಂಧಗಳನ್ನಷ್ಟೇ ಅಲ್ಲದೆ ಸಮಾಜದ ಹಿತಸಂಬಂಧಗ ಳನ್ನು ಬಾಲಕರ ಮುಂದಿಡುವದಕ್ಕೆ ಈ ಕಾಲದಲ್ಲಿ ಪ್ರಾರಂಭಮಾಡಬಹುದು.

ಶಿಶುಶಾಲೆಗಳು ನೆರವೇರಿಸುವ ಅನೇಕ ಮಹತ್ವದ ಕಾರ್ಯಗಳಲ್ಲಿ, ಬಾಲಕ ರಿಗೆ ಸಮಾಜ ಜೀವನಕ್ಕೆ ಯೋಗ್ಯವಾದ ಮಾರ್ಗವನ್ನು ತೋರಿಸಿಕೊಟ್ಟು ಅವ ರನ್ನು ಮುಂದಿನ ಜೀವನಕ್ಕೆ ಯೋಗ್ಯರಾದ ವ್ಯಕ್ತಿಗಳನ್ನಾಗಿ ಮಾರ್ಪಡಿಸುವದು, ಕೊಟ್ಟುಕೊಳ್ಳುವದು, (Give and take) ತಾನು ಅನ್ಯರೊಡನೆ ಯಾವ ರೀತಿ ಯಿಂದ ನಡೆಯುವನೋ ಅದೇ ರೀತಿಯಾಗಿ ಅನ್ಯರು ತನ್ನೊಡನೆ ನಡೆಯುವದರಿಂದ

ಅರ್ಥಾತ್ ತಾನು ಒಳ್ಳೆಯವನಾದರೆ ಜಗತ್ತೇ ಒಳ್ಳೆಯದಾಗುವದೆಂಬ ಭಾವನೆಯನ್ನು ಅವರಲ್ಲಿ ಹುಟ್ಟಿಸುವದು, ಸ್ವಾರ್ಥಪರಾರ್ಥಗಳೆರಡನ್ನೂ ಸಮತೆಯಿಂದ ನೋಡುವದಕ್ಕೆ ಕಲಿಸುವದು, ಇವು ಅತ್ಯಂತ ಹೆಚ್ಚಿನವಾಗಿರುವವು.

ಇಂಗ್ಲಂಡದೇಶದ ಒಂದು ಹಳ್ಳಿಯ ಶಾಲೆಯು

(ಮೆ|| ತಾವಡೆ ಸಾ|| ಎಂ. ಎ. ಅವರ ಮರಾಠಿ ಲೇಖನದ ಆಧಾರದಿಂದ ಬರೆದದ್ದು.)

[ಕಳೆದ ತಿಂಗಳಿನಿಂದ ಮುಂದೆ ಸಾಗಿದೆ.]

ಇಂಗ್ಲಂಡ ದೇಶದ ಹಳ್ಳಿಯ ಶಾಲೆಗಳು ಬಹುತರವಾಗಿ ಒಂದೇ ಮಾದರಿಯವು ಇರುತ್ತವೆ. ಆಯಾಯಲ್ಲಿಯ ಪರಿಸ್ಥಿತಿಗನುಸರಿಸಿ ಶಾಲೆಗಳ ಅಭ್ಯಾಸಪತ್ರಿಕೆಗಳನ್ನು ಅಲ್ಪ ಸ್ವಲ್ಪ ಬದಲು ಮಾಡಿಕೊಳ್ಳಲಿಕ್ಕೆ ಶಾಲೆಯ ಹೆಡ್‌ಮಾಸ್ತರನಿಗೆ ಅಧಿಕಾರವಿದೆ. ಹೀಗೆ ಅಭ್ಯಾಸಕ್ರಮವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುವಾಗ ವರ್ಷಾರಂಭದಲ್ಲಿ ಶಾಲೆಯ ಹೆಡ್‌ಮಾಸ್ತರನು ತನ್ನ ವರಿಷ್ಠರಿಗೆ ಹೆಚ್ಚು ಕಡಿಮೆಯ ಕಾರಣವನ್ನು ತಿಳಿಸಿ ಅವರ ಅಪ್ಪಣೆಯನ್ನು ಪಡೆದುಕೊಂಡಿರುತ್ತಾನೆ.

ಬಾಲಕರ ವರ್ಗಕ್ಕೆ ವಾಚನ ವಿಷಯವನ್ನು ಕಲಿಸುವಾಗ ಯಾವದೊಂದು ವಾಕ್ಯದ ಅರ್ಥವನ್ನು ಹೇಳುತ್ತ ಇಲ್ಲವೆ ಆ ವಾಕ್ಯದ ರಚನೆಯ ವಿಷಯವಾಗಿ ವಿಚಾರಿಸುತ್ತ ಬಾಲಕರ ವೇಳೆಯನ್ನು ವ್ಯರ್ಥವಾಗಿ ಅವರು ಕಳೆಯುವದಿಲ್ಲ. ವಾಚನ ನಡೆದಾಗ ವಾಚನಕ್ಕೇ ಹೆಚ್ಚು ಮಹತ್ವವಿರುವದು. ಓದುತ್ತ ಸಾಗಿದಂತೆ ಅದರ ಅರ್ಥವು ಒಟ್ಟಾಗಿ ತಿಳಿದರೆ ತೀರಿತು. ಮಕ್ಕಳ ವಾಚನಾಭಿರುಚಿಯು ಬೆಳೆದು ಒಂದೇ ಯೋಗ್ಯತೆಯ ಅನೇಕ ಪುಸ್ತಕಗಳನ್ನು ಅವರು ಓದಲು ಅವರ ಭಾಷಾ ಜ್ಞಾನವು ತಾನಾಗಿ ಹೆಚ್ಚುತ್ತ ನಡೆಯುವದು. ಹುಡುಗರು ಓದುವಾಗ ಯಾವ ಒಂದು ಶಬ್ದದ ಅರ್ಥವು ತಿಳಿಯದಂತಾದರೆ ಅವರು ತಾವಾಗಿಯೇ ಶಿಕ್ಷಕನನ್ನು ಕೇಳಿ ತಿಳಿದುಕೊಳ್ಳುವರು. ವರ್ಗದಲ್ಲಿ ಸಾಮೂಹಿಕವಾಗಿ ಒಂದು ಪಾಠವು ಮುಗಿದ ನಂತರ ಯಾರಿಗೆ ಯಾವ ವಾಕ್ಯವು ತಿಳಿಯಲಿಲ್ಲ ಅಂದರೆ ವಾಕ್ಯದ ಅರ್ಥ ಜ್ಞಾನವಾಗುವದಕ್ಕಾಗಿ ಯಾವ ಶಬ್ದವು ತಪ್ಪಿದುನಿಲ್ಲಿಸಿದೆ ಎಂಬ ಬಗ್ಗೆ ಚರ್ಚೆಯು ನಡೆಯುವದು. ಈ ಪ್ರಕಾರವಾಗಿ ಒಂದು ಪಾಠವು ಮುಗಿದ ಬಳಿಕ ಮತ್ತೊಂದು ಪಾಠವೂ ಒಂದು ಪುಸ್ತಕವು ಮುಗಿದ ಬಳಿಕ ಇನ್ನೊಂದು ಪುಸ್ತಕವೂ ಅನುಸರಿಸಲ್ಪಡುವವು, ಈ ರೀತಿಯಾಗಿ ಅಲ್ಲಿ ವಾಚನಪಾಠವು ನಡೆಯುವದು.

ಬಾಲಕರನ್ನು ಕೆಲಸದಲ್ಲಿ ತೊಡಗಿಸುವದಕ್ಕಾಗಿ ವರ್ಗ ಸಾಗಿಸುವ ಪದ್ಧತಿಯು ನಮ್ಮಲ್ಲಿಯಂತೆಯೇ ಇರುತ್ತದೆ. ಮಕ್ಕಳ ಕೈಯಲ್ಲಿ ಚಿತ್ರವನ್ನು ಕೊಟ್ಟು ಅದರ ಹೆಸರನ್ನು ಬರೆಯಲಿಕ್ಕೆ ಹೇಳುತ್ತಾರೆ. ಇದೇ ರೀತಿಯಾಗಿ ಚಿತ್ರಗಳನ್ನೂ ಅವುಗಳ ಹೆಸರಿನ ಚೀಟಿಗಳನ್ನೂ ಗುಂಪುಗೂಡಿಸಿಟ್ಟು ಚಿತ್ರದ ಸಾಲುಗಳ ಕೆಳಗೆ ಅವುಗಳ ಹೆಸರುಗಳ ಚೀಟಿಗಳನ್ನು ಇಡಲಿಕ್ಕೆ ತಿಳಿಸುತ್ತಾರೆ. ಕರಿಹಲಗೆಯ ಮೇಲೆ ಶಬ್ದ ಬರೆದು ಅದರಂತೆ ಬರೆಯಲಿಕ್ಕೆ ತಿಳಿಸುತ್ತಾರೆ. ಅನೇಕ ವಸ್ತುಗಳನ್ನು ಕೊಟ್ಟು ಅವನ್ನು ಎಣಿಸಿ ಸಂಖ್ಯೆ ಬರೆಯಲಿಕ್ಕೆ ಹೇಳುತ್ತಾರೆ. ಸಂಖ್ಯೆಯನ್ನು ಹೇಳಿ ಅಷ್ಟು ವಸ್ತುಗಳನ್ನು ಎಣಿಸಿ ಬೇರೆಯಾಗಿಡಲಿಕ್ಕೆ ತಿಳಿಸುತ್ತಾರೆ. ಸಣ್ಣ ಸಣ್ಣ ಬೇರೀಜು, ವಜಾಬಾಕಿ, ಗುಣಾಕಾರಗಳ ವಿಷಯವಾಗಿ ಎಲ್ಲ ಹುಡುಗರ ಕೈಯಲ್ಲಿಯೂ ಕಾರ್ಡುಗಳನ್ನು ಕೊಟ್ಟು ಉದಾಹರಣಗಳನ್ನು ಬಿಡಿಸಲು ತೊಡಗಿಸುತ್ತಾರೆ. ವಸ್ತುಗಳನ್ನು ಕೊಟ್ಟು ಅದರಂತೆ ಚಿತ್ರತೆಗೆಯಲು ಹೇಳುತ್ತಾರೆ. ಕಾಗದಗಳಿಂದ ಇಲ್ಲವೆ ಬೆಂಡುಗಳಿಂದ ವಸ್ತುಗಳ ಮಾಪರಿಗಳನ್ನು ಮಾಡಿಸುತ್ತಾರೆ. ಹೀಗೆ ಅನೇಕ ಬಗೆಯಾಗಿ ಹುಡುಗರನ್ನು ಕೆಲಸದಲ್ಲಿ ತೊಡಗಿಸುವ ಕ್ರಮವು ಅಲ್ಲಿ ನಡೆಯುತ್ತದೆ. ಇದೇ ರೀತಿಯಿಂದ ಹೆಚ್ಚು ವರ್ಗಗಳನ್ನು ಕಲಿಸುವ ಶಿಕ್ಷಕನು ಎಲ್ಲ ವರ್ಗಗಳ ಹುಡುಗರನ್ನು ಒಂದಿಲ್ಲ ಒಂದು ಕೆಲಸದಲ್ಲಿ ತೊಡಗಿಸಬಹುದು. ಹುಡುಗರು ತಾವೇ ಕೆಲಸದಲ್ಲಿ ತೊಡಗಲು ಕಲಿತ ಸಂಗತಿಗಳು ಅವರ ಹೃದಯದಲ್ಲಿ ದೃಢವಾಗಿ ಉಳಿಯುತ್ತವೆ. ಈ ಪ್ರಕಾರವಾಗಿ ಕಲಿತ ಬಗ್ಗೆ ಅವರಲ್ಲಿ ಆತ್ಮವಿಶ್ವಾಸವು ಉತ್ಪನ್ನವಾಗುತ್ತದೆ. ಶಿಕ್ಷಕನಿಂದ ಆಯತ್ತವಾಗಿ ದೊರೆದ ಜ್ಞಾನಕ್ಕಿಂತ ತಾವೇ ಕೆಲಸದಲ್ಲಿ ತೊಡಗಿ ಅನುಭವ ಪಡೆದು ಸಂಪಾದಿಸಿದ ಜ್ಞಾನವು ಹೆಚ್ಚಿನದೆಂದು ವಿದ್ಯಾರ್ಥಿಗಳು ಬಗೆಯುತ್ತಾರೆ. ತಾವೇ ತಮ್ಮ ಕೈಯಿಂದ ಮಾಡುತ್ತ ಕಲಿಯುವದಕ್ಕೆ ವಿದ್ಯಾರ್ಥಿಗಳು ಮೆಚ್ಚುಪದು ಸ್ವಾಭಾವಿಕವಾದದ್ದು ಒಟ್ಟಿನ ಮೇಲೆ ವರ್ಗದಲ್ಲಿ ತಕ್ಕ ಪದ್ಧತಿಗಳು ಚಟಗಳಂತೆ ಪರಿಣಮಿಸುವದೂ ವಿದ್ಯಾರ್ಥಿಗಳಲ್ಲಿ ತಕ್ಕ ಶಿಸ್ತನ್ನು ನೆಲೆಗೊಳಿಸುವದೂ ಮಹತ್ವದ ಮಾತುಗಳಾಗಿವೆ.

ಒಬ್ಬನೇ ಶಿಕ್ಷಕನಿರುವ ಶಾಲೆಗಳಲ್ಲಿ ಅಥವಾ ಒಬ್ಬೊಬ್ಬ ಶಿಕ್ಷಕನು ಒಂದಕ್ಕಿಂತ ಹೆಚ್ಚು ಇಯತ್ತೆಗಳನ್ನು ಕಲಿಸುವ ಪ್ರಸಂಗದಲ್ಲಿ ಕವಿತೆ, ಗಾಯನ ಇತಿಹಾಸ, ಭೂಗೋಲ, ಡ್ರಾಯಿಂಗು, ಆರೋಗ್ಯವಿಜ್ಞಾನ, ಡ್ರಿಲ್, ಆಟ ಮುಂತಾದ ವಿಷಯಗಳನ್ನು ಕೆಲವು ವರ್ಗಗಳಿಗೆ ಸಾಮೂಹಿಕವಾಗಿ ಕಲಿಸಲಿಕ್ಕೆ ಬರುವಂತೆ ಯೋಜನೆಯಿರುವದು. ಉದಾಹರಣಾರ್ಥವಾಗಿ ಬಾಲಕರ ವರ್ಗ ಮೊದಲನೆಯ ಇಯತ್ತೆಗಳಿಗೆ ಗಾಯನ, ಕಥೆ ಈ ವಿಷಯಗಳೂ, ಮೂರನೆಯ ಮತ್ತು ನಾಲ್ಕನೆಯ ಇಯತ್ತೆಗಳಿಗೆ ಇತಿಹಾಸ, ಭೂಗೋಲ ವಿಷಯಗಳೊಳಗಿನ ಹಲಕೆಲವು ಭಾಗ

ಗಳೂ ಒಟ್ಟಾಗಿ ಕಲಿಸಲಿಕ್ಕೆ ಬರುವಂತೆ ಇರುತ್ತವೆ. ಇದೇ ರೀತಿಯಾಗಿ ಶಿಕ್ಷಕನು ಕುಶಲತೆಯಿಂದ ಇನ್ನೂ ಕೆಲಕೆಲವು ವಿಷಯಗಳನ್ನು ಒಟ್ಟಾಗಿ ಕಲಿಸುವಂತೆ ಯೋಜನೆ ಮಾಡಿಕೊಳ್ಳಲು ಅನುಕೂಲವಿರುತ್ತದೆ. ಮುಖ್ಯವಾಗಿ ವಿದ್ಯಾರ್ಥಿಗಳೇ ಹೆಚ್ಚು ಕೆಲಸ ಮಾಡಿ ಜ್ಞಾನಸಂಪಾದನೆ ಮಾಡಿಕೊಳ್ಳುವಂತೆ ವಿಷಯಗಳನ್ನು ಜೋಡಿಸಿ ಕೊಡುವದು ಶಿಕ್ಷಕನ ಜಾಣತನವನ್ನು ಅವಲಂಬಿಸಿರುತ್ತದೆ. ವಿದ್ಯಾರ್ಥಿಗಳಿಗೆ ಕೆಲಸಗಳನ್ನು ನಿಯಮಿಸಿಕೊಟ್ಟು ಅವರು ತಮ್ಮ ಕಾರ್ಯದಲ್ಲಿ ತೊಡಗಿದಾಗ ಮೇಲು ನೋಡುತ್ತ ಅವಶ್ಯ ಪ್ರಸಂಗದಲ್ಲಿ ಸಹಾಯ ಮಾಡುತ್ತ ವಿಷಯ ಸಾಗಿಸುವದು ಚಲೋಪದ್ಧತಿಯಾಗಿದೆ. ಒಬ್ಬ ಶಿಕ್ಷಕನು ಒಂದೇ ಇಯತ್ತೆಯನ್ನು ಕಲಿಸುವಾಗ ತಾನೇ ಹೇಳುತ್ತ ವಿದ್ಯಾರ್ಥಿಗಳ ಬೇಸರದ ಕಡೆ ಲಕ್ಷ್ಯ ಗೊಡದೆ ವಿಷಯ ಕಲಿಸುವದಕ್ಕಿಂತ ಹಳ್ಳಿಯ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದಲೇ ಕೆಲಸ ಮಾಡಿಸುತ್ತ ಅವಶ್ಯ ಕಂಡಾಗ ಸಹಾಯ ಮಾಡುತ್ತ ಕಲಿಸುವ ಪದ್ಧತಿಯು ಉತ್ತಮವಾಗಿರುವದು. ಶಿಕ್ಷಕನೊಬ್ಬನೇ ಯತ್ನಮಾಡುವ ಪದ್ಧತಿಗಿಂತ ವಿದ್ಯಾರ್ಥಿಗಳೊಡನೆ ಯತ್ನಿಸುವ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಜವಾಬುದಾರಿಯು ಹೆಚ್ಚಾಗಿ ಉಳಿಯಲಿಕ್ಕೆ ಮಾರ್ಗವಿದೆ.

ಹಿಂದುಳಿದ ವಿದ್ಯಾರ್ಥಿಗಳ ಶಿಕ್ಷಣ

ಇಂಗ್ಲಂಡದ ಹಳ್ಳಿಯ ಶಾಲೆಯಲ್ಲಿ ೪ ವರ್ಗಗಳಿವೆ ಎಂದು ಈ ಮೊದಲೇ ಹೇಳಿದೆ. ಈ ಪ್ರತಿಯೊಂದು ವರ್ಗದಲ್ಲಿ ಸಮ್ಮಲ್ಲಿಯಂತೆ ಕೆಲವರು ಬುದ್ಧಿವಂತರೂ ಕೆಲವರು ಮಧ್ಯಮರೂ ಇನ್ನು ಕೆಲವರು ತೀರ ಹಿಂದುಳಿದವರೂ ಇರುವರು. ಈ ಬಗೆಯ ಕನಿಷ್ಠ ವಿದ್ಯಾರ್ಥಿಗಳ ದೆಸೆಯಿಂದ ಅಲ್ಲಿಯ ಶಾಲಾಮಾಸ್ತರರು ಬಹಳ ಲಕ್ಷ್ಯ ತೆಗೆದುಕೊಳ್ಳುತ್ತಾರೆ. ಈ ಪ್ರಕಾರ ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಾಗ ಮೇಲು ತರಗತಿಯ ವಿದ್ಯಾರ್ಥಿಗಳು ಹಿಂದುಳಿಯದಂತೆ ಮತ್ತಿಷ್ಟು ಹೆಚ್ಚಾಗಿ ಜಾಗ್ರತೆ ಪಡಬೇಕಾಗುತ್ತದೆಂದು ಬರೆಯುವ ಕಾರಣವಿಲ್ಲ. ಒಟ್ಟಿನ ಮೇಲೆ ವ್ಯಕ್ತಿಶಃ ಶಿಕ್ಷಣಪದ್ಧತಿಯನ್ನು ಕೈಕೊಂಡು ಹಿಂದುಳಿದವರಿಗೆ ಪ್ರತ್ಯೇಕ ಕೆಲಸಗಳನ್ನು ಕೊಟ್ಟು ಮಾಡಿಸಬೇಕಾಗುತ್ತದೆ. ಸಮ್ಮಲ್ಲಿಯ ಹಳ್ಳಿಯ ಶಾಲೆಗಳಿಗಿಂತಲೂ ಅಲ್ಲಿಯ ಹಳ್ಳಿಯ ಶಾಲಾಮಾಸ್ತರರಿಗೆ ಇನ್ನೊಂದು ಬಗೆಯ ತೊಂದರೆಯು ಅಂಟಿರುತ್ತದೆ, ಅದೇನೆಂದರೆ— ವಿದ್ಯಾರ್ಥಿಗಳ ವಯೋಮಾನಕ್ಕನುಸರಿಸಿ ಮೇಲಿನ ವರ್ಗಕ್ಕೆ ಏರಿಸುವದು. ಇದೂ ಅಲ್ಲದೆ, ಒಬ್ಬ ವಿದ್ಯಾರ್ಥಿಯು ಭಾಷಾ ವಿಷಯದಲ್ಲಿ ಬಲ್ಲಿದನಿದ್ದರೆ ಇನ್ನೊಂದು ವಿಷಯದಲ್ಲಿ ಹಿಂದುಳಿಯುತ್ತಿರುತ್ತಾನೆ. ಇಷ್ಟೆಲ್ಲ ತೊಂದರೆಗಳನ್ನೆಲ್ಲ ಪರಿಹರಿಸಿಕೊಂಡು ನಿಜವಾಗಿ ಪ್ರತಿಯೊಬ್ಬ ವಿದ್ಯಾ

ರ್ಥಿಯು ಪ್ರತಿಯೊಂದು ವಿಷಯದ ಕಡೆಗೆ ಲಕ್ಷ್ಯಗೊಟ್ಟು ಕೆಲಸ ಮಾಡಬೇಕಾದರೆ ಅಲ್ಲಿಯ ಹಳ್ಳಿಯ ಶಾಲೆಯ ಶಿಕ್ಷಕರು ಬಹಳ ಶ್ರಮಪಟ್ಟು ಕೆಲಸ ಮಾಡುತ್ತಾರೆಂದು ವಾಚಕರಿಗೆ ಸಹಜವಾಗಿ ಗೊತ್ತಾಗುತ್ತದೆ. ಉದಾಹರಣಾರ್ಥವಾಗಿ ಗಣಿತ ವಿಷಯದಲ್ಲಿ ಜಾಣನಾದ ಒಬ್ಬ ವಿದ್ಯಾರ್ಥಿಯು ಳನೆಯ ಇಯತ್ತೆಯಲ್ಲಿದ್ದು ಭಾಷಾ ವಿಷಯದಲ್ಲಿ ಹಿಂದುಳಿದು ೩ನೆಯ ಇ. ಯ ವಿದ್ಯಾರ್ಥಿಗಳಿಗೆ ಸರಿಯಾದವನಿದ್ದರೆ ಭಾಷಾವಿಷಯವು ನಡೆಯುವಾಗ ಅವನನ್ನು ೩ನೆಯ ಇಯತ್ತೆಯ ಕೂಡ ಅಭ್ಯಾಸ ನಡೆಯಿಸಿ ಸರಿಪಡಿಸಿಕೊಂಡು ಪ್ರತ್ಯೇಕವಾಗಿ ಹೆಚ್ಚಿಗೆ ಲಕ್ಷ್ಯಗೊಟ್ಟು ಮೇಲಿನ ಇಯತ್ತೆಯ ಅಭ್ಯಾಸಕ್ಕೆ ಸರಿಪಡಿಸಿಕೊಳ್ಳುವರು. ಹೀಗೆ ಕೆಲಸ ಮಾಡಿ ತೋರಿಸಬೇಕಾದರೆ ಶಾಲೆಯ ವೇಳೆಯ ಹೊರತಾಗಿ ಸಹ ಕೆಲಸ ಮಾಡಬೇಕಾಗಬಹುದು. ಈ ಬಗೆಯ ಹೆಚ್ಚಿನ ವೇಳೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಅನುಕೂಲವಾಗುತ್ತದೆ. ಇದರಂತೆ ಪಟ್ಟಣದ ಶಾಲೆಗಳಲ್ಲಿ ಸಹ ಪ್ರತಿಯೊಂದು ವರ್ಗದಲ್ಲಿಯೂ ಭಿನ್ನ ಭಿನ್ನ ಯೋಗ್ಯತೆಯ ಹುಡುಗರಿರುವದು ಸಹಜ. ವರ್ಗದ ಅನುಕೂಲಕ್ಕಾಗಿ ಜಾಣ ಹುಡುಗರನ್ನು ಹಿಂದೆ ಉಳಿಯುವ ಹುಡುಗರ ಕೂಡ ತಡೆದು ಹಿಡಿಯುವ ಕಾರಣವಿಲ್ಲ. ಜಾಣ ಹುಡುಗರಿಗೆ ಮುಂದೆ ಸಾಗಲಿಕ್ಕೆ ಉತ್ತೇಜನ ಕೊಡುತ್ತಾರೆ. ಹಿಂದೆ ಉಳಿಯುವ ಹುಡುಗರ ಹತ್ತಿರ ಹೋಗಿ ಅವರಿಗೆ ಒದಗುವ ತೊಂದರೆಗಳಿಗಾಗಿ ತಕ್ಕ ಸಹಾಯ ಮಾಡಿ ಕಲಿಸುತ್ತಿರುತ್ತಾರೆ. ಒಂದೇ ವರ್ಗದಲ್ಲಿ ಒಂದು ಕಠಿಣ ವಿಷಯದ ಪುಸ್ತಕ ಅದೇ ವಿಷಯದ ಮತ್ತೊಂದು ಸುಲಭ ಪುಸ್ತಕ ಈ ರೀತಿಯಾಗಿ ವಿಭಾಗ ಮಾಡಿಕೊಂಡು ಹುಡುಗರ ಯೋಗ್ಯತೆಗೆ ತಕ್ಕಂತೆ ಅವನ್ನು ಉಪಯೋಗಿಸುತ್ತಾರೆ. ಈ ವಿಷಯವಾಗಿ ಮುತ್ತೊಮ್ಮೆ ಪ್ರತ್ಯೇಕವಾಗಿ ಬರೆಯೋಣ.

ಇಂಗ್ಲಂಡದಲ್ಲಿಯ ಹಳ್ಳಿಯ ಶಾಲೆಗಳ ಸಂಬಂಧವಾದ ಹೆಚ್ಚಿನ ವಾಹಿತಿ.

೧. ನಮ್ಮಲ್ಲಿಯಂತೆ ಇಂಗ್ಲಂಡದೇಶದ ಹಳ್ಳಿಯ ಶಾಲೆಗಳಲ್ಲಿಯೂ ಇಬ್ಬರು ಶಿಕ್ಷಕರಿದ್ದ ಶಾಲೆಗಳು ಇರುತ್ತವೆ. ಅವರಲ್ಲಿ ಒಬ್ಬೊಬ್ಬರಿಗೆ ಹೆಚ್ಚಿಗೆ ವರ್ಗಗಳನ್ನು ಕಲಿಸುವ ಪ್ರಸಂಗವು ಬಂದೇಬರುವದು. ಇಂಗ್ಲಂಡದೇಶದಲ್ಲಿ ಸಾರ್ವತ್ರಿಕ ಶಿಕ್ಷಣವು ಮಕ್ಕಳ ೫ನೆ ವರ್ಷದ ಆರಂಭದಿಂದ ಅವರಿಗೆ ೧೪ ವರ್ಷಗಳು ಮುಗಿಯುವವರೆಗೂ ಬಲಾತ್ಕಾರದಿಂದ ಸಾಗುತ್ತದೆ. ಒಂದೊಂದು ಶಾಲೆಯಲ್ಲಿ ಒಬ್ಬನೇ ಶಿಕ್ಷಕನು ಒಂಬತ್ತು ವರ್ಗಗಳನ್ನು ಒಂದೇ ಕೋಣೆಯಲ್ಲಿ ಕೂಡಿತು ಕಲಿಸುವ ಪ್ರಸಂಗವು ಕ್ವಚಿತ್ತಾಗಿ ಬರುತ್ತದೆ. ನಮ್ಮಲ್ಲಿಯ ಹಳ್ಳಿಯ ಶಾಲೆಗಳಲ್ಲಿ ನಾಲ್ಕು

ರುತ್ತೆಗಳನ್ನು ಮಾತ್ರ ಬಹುಶಃ ಕಲಿಸುತ್ತಿರುವದರಿಂದ ಒಬ್ಬ ಶಿಕ್ಷಕನು ನರ್ಗಗಳನ್ನು ಕಲಿಸಬೇಕಾಗುವದು. ನಮ್ಮ ದೇಶದಲ್ಲಿ ಒತ್ತಾಯದ ಶಿಕ್ಷಣದ ಸೀಮಯರ್ಯಾದೆಯು ೬ ರಿಂದ ೧೧ರ ವರೆಗೆ ಎಂದು ಗೊತ್ತಾಗಿದೆ.

೨. ಒಂಬತ್ತು ವರ್ಗಗಳನ್ನು ಕಲಿಸುವ ಪ್ರಸಂಗವು ಅಲ್ಲಿ ಇರುವದರಿಂದ ಇಬ್ಬರು ಶಿಕ್ಷಕರಿದ್ದರೆ ಜೋಡಿ ಜೋಡಿಯ ಇಯತ್ತೆಗಳನ್ನು ಹಂಚಿಕೊಳ್ಳುತ್ತಾರೆ;

ಉದಾ— ೧–೨–೩, ೪–೫, ಹೀಗೆ, ಒಟ್ಟಾಗಿ ವಿಷಯಗಳನ್ನು ಕಲಿಸಲಿಕ್ಕೆ ಬರಬೇಕೆಂಬದೇ ಈ ವಿಭಾಗ ಪದ್ಧತಿಯ ಧ್ಯೇಯವಾಗಿರುವದು. ನಮ್ಮಲ್ಲಿ ಕೆಲವು ಶಾಲೆಗಳಲ್ಲಿ ೭ನೆಯ ಇ., ಬಾಲಕರ ವರ್ಗ ಇವುಗಳನ್ನು ಒಬ್ಬೊಬ್ಬ ಶಿಕ್ಷಕರು ಕಲಿಸುವದನ್ನು ನೋಡುತ್ತೇವೆ. ೭ನೆಯ ಇ. ಯ ಹುಡುಗರು ಪ್ರೌಢರು ಇರುವದರಿಂದ ಸರತಿಯಂತೆ ಅನುಕೂಲ ಸಮಯದಲ್ಲಿ ವಿದ್ಯಾರ್ಥಿ ಶಿಕ್ಷಕರ ಕೆಲಸಕ್ಕೆ ಉಪಯೋಗಬೀಳುವರೆಂಬದೇ ಇಲ್ಲಿಯ ಶಿಕ್ಷಕರ ಧ್ಯೇಯವಾಗಿರುವದು. ಜೋಡಿಯ ವರ್ಗಕ್ಕೆ ಗಾಯನ, ಇತಿಹಾಸ ಭೂಗೋಲ, ಚಿತ್ರಕಲೆ, ಹಸ್ತವ್ಯವಸಾಯ ಇತ್ಯಾದಿ ವಿಷಯಗಳನ್ನು ಒಟ್ಟಾಗಿ ಕಲಿಸಲಿಕ್ಕೆ ಬರುವದು.

೩. ಇಂಗ್ಲಂಡದೇಶದ ಹಳ್ಳಿಯ ಶಾಲೆಗಳಲ್ಲಿ ವ್ಯಕ್ತಿಶಃ ಶಿಕ್ಷಣಪದ್ಧತಿಗೆ ಪ್ರಾಧಾನ್ಯವಿರುವದೆಂದು ಮೇಲೆ ಬರೆದದೆ. ಒಂದೊಂದು ವರ್ಗಕ್ಕೆ ಇಂಥಿಂಥ ವಿಷಯವೆಂದು ಗೊತ್ತುಮಾಡಿ ಆ ಪ್ರಕಾರ ಕೆಲಸಮಾಡ ಹಚ್ಚಿ ಸಹಾಯಮಾಡ ಬೇಕಾಗಿ ಶಿಕ್ಷಕನು ಓಡಾಡುತ್ತ ಮೇಲು ನೋಡುತ್ತ ಇರಬೇಕಾಗುವದು. ಈ ರೀತಿಯಾಗಿ ವರ್ಗ ನಡೆಯಲು ಅನುಕೂಲವಾಗುವಂತೆ ಗಣಿತದ ಉದಾಹರಣೆಗಳು, ಕಾರ್ಡುಗಳು, ಶಬ್ದಗಳ ಕಾರ್ಡುಗಳು ಚಿತ್ರಗಳು ಮುಂತಾದ ಇನ್ನೂ ಹಲವು ಬಗೆಯ ಉಪಕರಣಗಳನ್ನು ಅವರು ಕಲ್ಪಿಸಿಕೊಂಡಿರುವರು. ಈ ಬಗೆಯ ಉಪಕರಣಗಳನ್ನು ನಮ್ಮ ಶಾಲೆಗಳಲ್ಲಿಯೂ ಕಲ್ಪಿಸಿ ಉಪಯೋಗಿಸಿಕೊಳ್ಳಲಿಕ್ಕೆ ಶಿಕ್ಷಕರು ಯತ್ನಮಾಡಬೇಕು. ಶಿಕ್ಷಕರು ಈ ಪ್ರಕಾರ ವರ್ಗಗಳು ಸಂಸೂತ್ರವಾಗಿ ನಡೆಯುವಂತೆ ಪೂರ್ವಸಿದ್ಧತೆ ಮಾಡಿಟ್ಟುಕೊಳ್ಳಬೇಕಾಗುವದು. ನಡುನಡುವೆ ಅವಶ್ಯವಿದ್ದಂತೆ ಹೆಚ್ಚಿಗೆ ಸಾಹಿತ್ಯಗಳನ್ನು ಸಿದ್ಧಪಡಿಸುತ್ತ ನಡೆದರೆ ಶಾಲೆಯು ಒಳ್ಳೇ ಆಕರ್ಷಕವಾಗಿ ತೋರುವದು.

೪. ಮೇಲೆ ಬರೆದಂತೆ ಶಿಕ್ಷಣ ನಡೆಯುವದಕ್ಕಾಗಿ ಅಭ್ಯಾಸ ಕ್ರಮದ ಯೋಜನೆಯನ್ನು ಮೊದಲೇ ಮಾಡಿಟ್ಟುಕೊಳ್ಳಬೇಕಾಗುವದು. ಪ್ರತಿ ವಾರದಲ್ಲಿ ಇಂಥಿಂಥ ವರ್ಗಕ್ಕೆ ಇಷ್ಟಿಷ್ಟು ವಿಷಯ ಕಲಸಬೇಕೆಂಬದಾಗಿ ಅಭ್ಯಾಸಪತ್ರಿಕೆಯನ್ನು ವಿಭಾಗಿಸಿಟ್ಟುಕೊಳ್ಳಬೇಕಾಗುವದು. ಅವು ಯೋಜನೆಗೆ ಸರಿಯಾಗಿ ಸಾಗದವೋ

ಏನಾದರೂ ಸ್ವಲ್ಪ ಉಳಿದಿರುವದೋ, ಮುಂತಾದದ್ದನ್ನೂ ಬರೆದಿಟ್ಟುಕೊಂಡು ಉಳಿದ ವಿಷಯಗಳನ್ನು ಮತ್ತೆ ಮುಂದಿನ ವಾರದಲ್ಲಿ ಸೇರಿಸಿಕೊಳ್ಳಬೇಕಾಗುವದು.

೫. ಹಳ್ಳಿಯ ಶಾಲೆಗಳಿಗಾಗಿ ಕರಿಹಲಗೆ ಮುಂತಾದ ಉಪಕರಣಗಳನ್ನು ಅಲ್ಲಿಯ ಬೋರ್ಡಿನವರು ಬೇಕಾದಷ್ಟು ಪೂರೈಸುವರೆಂದು ಮೊದಲೇ ಹೇಳಿದೆ. ಹಾಗೆಯೇ ವಾಚನಕ್ಕಾಗಿ ಸುಲಭ ವಾಚನ ಪುಸ್ತಕಗಳನ್ನೂ ಕೊಡುವರು. ಶಿಕ್ಷಕರೆಲ್ಲ ಟ್ರೇಂಡರೇ ಇರುವರು. ನಮ್ಮಲ್ಲಿಯ ಹಳ್ಳಿಯ ಶಾಲೆಗಳಿಗೂ ಇದೇ ಪ್ರಕಾರದ ಅನುಕೂಲತೆಯ ಆವಶ್ಯಕತೆಯಿದೆ. ಟ್ರೇಂಡ ಶಿಕ್ಷಕರಿದ್ದರೆ ತಮ ತಮಗೆ ಬೇಕಾದ ಉಪಕರಣಗಳನ್ನು ತಾವೇ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುವದು.

ಈ ವರೆಗೆ ಬೀವೆನ್ಲ್ಲ ಮತ್ತು ಪೇಟಿಟ್ ಶಾಲೆಯ ವಿಷಯವಾಗಿ ಹೇಳಿದಂತಾಯಿತು. ಇನ್ನು 'ಗ್ರಿಂಡಲಟನ ಲೇಸ ಯೇಂಡ್ಸ' ಎಂಬ ಮತ್ತೊಂದು ಶಾಲೆಯ ವಿಷಯವಾಗಿ ಸ್ವಲ್ಪವಿಚಾರಿಸಿದೆ.

ಈ ಶಾಲೆಯಲ್ಲಿ ಹುಡುಗರು ೧೧ ವರ್ಷದವರೆಗೆ ಮಾತ್ರ ಇದ್ದಾರೆ. ಇದಕ್ಕೂ ಹೆಚ್ಚಿನ ವರ್ಷದವರಿಗಾಗಿ ಮತ್ತೊಂದು ಮಧ್ಯವರ್ತಿ ಶಾಲೆಯು ಇರುವದು. ಅದು ಕ್ಲಿಥರೋ ಎಂಬಲ್ಲಿ ಇರುತ್ತದೆ.

ಗ್ರಿಂಡಲಟನ್ ಲೆನಯೇಂಡ್ಸ ಎಂಬ ಶಾಲೆಯಲ್ಲಿ ಹಾಜರಿ ಪಟದಲ್ಲಿ ೧೮ ಹುಡುಗರು ಇರುವರು. ಒಬ್ಬಳೇ ಶಿಕ್ಷಕೆಯು ಕೆಲಸ ಸಾಗಿಸುತ್ತಿರುವಳು. ಶಾಲಾ ಕಟ್ಟಡವು ಚೆನ್ನಾಗಿರುವದು. ಆಡಲಿಕ್ಕಾಗಿ ಪಟಾಂಗಣವು ಸಾಕಷ್ಟು ವಿಸ್ತಾರವಾದದ್ದಿಲ್ಲ. ಮಿಕ್ಕ ವ್ಯವಸ್ಥೆಯೆಲ್ಲ ಮೇಲಿನ ಶಾಲೆಯಂತೆಯೇ ಇರುತ್ತದೆ.

ಈ ಹದಿನೆಂಟು ಹುಡುಗರಲ್ಲಿ ಬಾಲಕರ ವರ್ಗದಲ್ಲಿ ೬. ಮಿಕ್ಕ ವರ್ಗದಲ್ಲಿ ೧೨, ಹೀಗೆ ಅವೆ. ಇಯತ್ತೆಗಳು ಬಾಲಕರ ವರ್ಗವನ್ನು ಕೂಡಿ ೫ ವರ್ಗಗಳಾಗಿರುವವು. ಅಲ್ಲಿ ಕಲಿಸುವ ಪದ್ಧತಿಯು ಮೊದಲು ನೋಡಿದ ಹಳ್ಳಿಯ ಶಾಲೆಯಂತೆಯೇ ಅದೆ.

ಇನ್ನೊಂದು 'ಥಾನೀಹೋಲ್ಮ' ಎಂಬ ಶಾಲೆಯು ಹೆಚ್ಚು ಮಾದರಿಯದಾಗಿ ಕಂಡದ್ದರಿಂದಲೂ ಅಲ್ಲಿ ಧಾರ್ಮಿಕ ಶಿಕ್ಷಣವು ನಡೆಯುತ್ತಿರುವದರಿಂದಲೂ ಆದರ ವಿಷಯವಾಗಿ ಸ್ವಲ್ಪ ಸಂಗತಿಯನ್ನು ಕೆಳಗೆ ಬರೆದಿದೆ.

ಈ ಶಾಲೆಯು ರೋಮನ್ ಕೆಥೋಲಿಕರದು. ಆ ಕಾರಣ ಇಲ್ಲಿ ಧಾರ್ಮಿಕ ಶಿಕ್ಷಣವು ರೋಮನ್ ಕೆಥೋಲಿಕ ಪದ್ಧತಿಗೆ ಸರಿಯಾಗಿ ನಡೆಯುತ್ತದೆ. ಈ ಸಂಸ್ಥೆಯ ಚಾಲಕರು ರೋಮನ್ ಕೆಥೋಲಿಕ ಧರ್ಮದವರಿರುವರು. ಆದುದರಿಂದ ಈ ಶಾಲೆಗೆ ರೋಮನ್ ಕೆಥೋಲಿಕ ಶಾಲೆಯೆನ್ನುವರು. ಈ ಸಂಸ್ಥೆಯು ಅಲ್ಲಿಯ

ಬೋರ್ಡಿನವರಿಂದ ಮಾನ್ಯಮಾಡಲ್ಪಟ್ಟಿದೆ. ಇಲ್ಲಿಯು ಹುಡುಗರು ಮಾತ್ರ ಎಲ್ಲ ಪಂಥದವರೂ ಇರುವರು. ಸರಕಾರಿ ಅಧಿಕಾರಸ್ಥರು ಇದರ ಪರೀಕ್ಷೆಯನ್ನು ಮಾಡಿ ಸಹಾಯಮಾಡುವರು. ಇಲ್ಲಿ ಹುಡುಗರ ಸಂಖ್ಯೆಯು ೨೩ ಇರುವದು; ೨ಶಿಕ್ಷಕೆಯರು ಮಾತ್ರ ಇಬ್ಬರು, ಶಾಲಾಗೃಹವು ಯೋಗ್ಯವಾಗಿದ್ದು ಪಟಾಂಗಣವು ಸಾಕಷ್ಟು ಇರುವದು. ಬಾಲಕರ ವರ್ಗದಲ್ಲಿ ೨, ೧ನೆಯ ಇ. ಯಲ್ಲಿ ೪, ೨ನೆಯ ಇ. ಯಲ್ಲಿ ೩, ೩ನೆಯ ಇ. ಯಲ್ಲಿ ೩, ೪ನೆಯ ಇ. ಯಲ್ಲಿ ೩, ೫ನೆಯ ಇ. ಯಲ್ಲಿ ೪, ೬ನೆಯ ಇ. ಯಲ್ಲಿ ೨, ೭ನೆಯ ಇ. ಯಲ್ಲಿ ೩. ಈ ಪ್ರಕಾರ ಹುಡುಗರ ವರ್ಗೀಕರಣವಿದೆ. ಈ ಎಲ್ಲ ವರ್ಗಗಳಲ್ಲಿ ೩ ಜೋಡಿಗಳನ್ನು ಕಲ್ಪಿಸಿದ್ದಾರೆ. ಬಾಲಕರ ವರ್ಗ ೧ನೆಯ ಇ. ೧ನೆಯ ಜೋಡಿಯಲ್ಲಿ, ೨ನೆಯ ೩ನೆಯ ೪ನೆಯ ಇಯತ್ತೆಗಳು ೨ನೆಯ ಜೋಡಿಯಲ್ಲಿ, ಮಿಕ್ಕವು ೩ನೆಯ ಜೋಡಿಯಲ್ಲಿ. ೧ನೆಯ ಜೋಡಿಯನ್ನು ಒಬ್ಬ ಶಿಕ್ಷಕೆಯೂ ೨ನೆಯ ೩ನೆಯ ಜೋಡಿಗಳನ್ನು ಇನ್ನೊಬ್ಬ ಶಿಕ್ಷಕೆಯೂ ಕಲಿಸುತ್ತಿರುತ್ತಾಳೆ. ಮುಖ್ಯ ಶಿಕ್ಷಕೆಯು ಒಳ್ಳೆಯ ಬುದ್ಧಿವಂತಳೂ ಅನುಭವವುಳ್ಳವಳೂ ಇರುತ್ತಾಳೆ. ಇನ್ನೊಬ್ಬಳು ಮಾತ್ರ ಹೊಸಬಳು. ಈ ಶಾಲೆಯನ್ನು ೨,೩ ತಾಸು ನೋಡಿದರೂ ಸಾಕಾಗಲಿಲ್ಲ. ಹುಡುಗರ ಅಕ್ಷರಗಳು ಬಹು ಸುಂದರವಿದ್ದವು. ವಾಚನ ವಿಷಯವಾದರೂ ಉತ್ಕೃಷ್ಟವಿತ್ತು. ಹುಡುಗರು ಒಳ್ಳೆಯ ಚಟುವಟಿಕೆಯುಳ್ಳವರಾಗಿಯೂ ಬುದ್ಧಿವಂತರಾಗಿಯೂ ತೋರಿದರು. ಶಾಲೆಯು ಹಳ್ಳಿಯದಾಗಿದ್ದರೂ ಮೇಲುಪಂಕ್ತಿಯದಾಗಿ ತೋರಿತು. ಆ ಶಾಲೆಯ ಅಧಿಕಾರಿಗಳೂ ಸಹ ಆ ಶಾಲೆಯ ಕೆಲಸದ ಬಗ್ಗೆ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು. ಹಳ್ಳಿಯ ಶಾಲೆಗಳ ವರ್ಣನೆಯು ಇನ್ನೂ ಸ್ವಲ್ಪ ಇದ್ದರೂ ಸ್ಥಳ ಏಸ್ತಾರ ಭಯದಿಂದಲೂ ಅವೆಲ್ಲ ಮೇಲಿನ ಹಳ್ಳಿಯ ಶಾಲೆಗಳಿಗೆ ಸಮವಾಗಿದ್ದರಿಂದಲೂ ಇಷ್ಟಕ್ಕೇ ಬಿಟ್ಟು ಮುಂದೆ ಹಳ್ಳಿಯ ಶಾಲೆಗಳ ಹೆಚ್ಚಿನ ಮಾಹಿತಿಯನ್ನು ಕೆಳಗೆ ವಿವರಿಸುವೆವು.

ನಮ್ಮಲ್ಲಿಯ ಶರಾ ಪುಸ್ತಕದಂತೆ ಅಲ್ಲಿಯು ಪ್ರತಿಯೊಂದು ಹಳ್ಳಿಯ ಶಾಲೆಯಲ್ಲಿ ಲಾಗಬುಕ್ಕು ಎಂಬದು ೬೦೦ ಪುಟಗಳುಳ್ಳದ್ದು ಅಂದರೆ ೩೦೦ ಪಾನಿಸದು ಇರುವದು. ಈ ಪುಸ್ತಕದಲ್ಲಿ ಆ ಶಾಲೆಯ ಹೆಡ್‌ಮಾಸ್ತರನಾಗಲಿ ಅಧಿಕಾರಿಯಾಗಲಿ ಶಾಲೆಯಲ್ಲಿ ಒದಗಿದ ಮಹತ್ವದ ಸಂಗತಿಗಳನ್ನು ಬರೆದಿಡುವರು. ಕ್ರಮವಾಗಿ ಹಿಂದಿನಿಂದ ಈ ವರೆಗೆ ಶಾಲೆಯಲ್ಲಾದ ಸುಧಾರಣೆಗಳು ಈ ಪುಸ್ತಕದಿಂದ ತಿಳಿಯುವದರಿಂದ ಇದಕ್ಕೆ ಒಳ್ಳೇ ಮಹತ್ವವು ಪ್ರಾಪ್ತವಾಗಿರುವದು. ಪ್ರತಿಯೊಂದು ಶಾಲೆಯವರು ಇದನ್ನು ಜೋಕೆಯಿಂದ ಇಟ್ಟಿರುತ್ತಾರೆ.

ಅಧಿಕಾರಸ್ಥರು ಶಾಲೆಯನ್ನು ತಪಾಸಿಸಲಿಕ್ಕೆ ಬಂದಾಗ ಶಾಲಾಮಾಸ್ತರ ಹೆಚ್ಚಿನ ವಿನಯಾದಿಗಳನ್ನು ವ್ಯಕ್ತಪಡಿಸುವದಿಲ್ಲ. ಅಧಿಕಾರಸ್ಥರೂ ಶಾಲಾ ಮಾಸ್ತರರೂ ಬೆರೆತು ಸದ್ಯದ ವಿದ್ಯಾರ್ಥಿಗಳ ಶಿಕ್ಷಣದ ಸ್ಥಿತಿಗತಿಯ ವಿಷಯವಾಗಿ ವಿಚಾರವಿನಿಮಯ ಮಾಡಿಕೊಳ್ಳುವರು. ಇಲ್ಲಿಯಂತೆ ಹೆಚ್ಚಿನ ಭಯ, ಆದರಗಳು ಅಲ್ಲಿ ಕಂಡುಬರಲಾರವು. ಶಾಲೆಯನ್ನು ನೋಡಿಕೊಂಡು ಹಸ್ತಾಂದೋಲನಕೊಟ್ಟು ಅಧಿಕಾರಸ್ಥರು ಹೊರಟು ಹೋಗುವರು. ನಮ್ಮಲ್ಲಿಯ ಪ್ರಾ. ಶಿ. ರಲ್ಲಿ ಸ್ವಾಭಿಮಾನವೇ ತೋರಿಬರುವದಿಲ್ಲ. ಇವರು ತಮ್ಮ ಬೆಲೆಯನ್ನು ತಾವೇ ತೀರ ಕಡಿಮೆ ಮಾಡಿಕೊಂಡಿರುವರು. ಶಿಕ್ಷಕರಲ್ಲಿಯೇ ಸ್ವಾವಲಂಬನ ಧೈರ್ಯ ಇತ್ಯಾದಿ ಚಲೋ ಗುಣಗಳು ಇರದಿದ್ದರೆ ಭಾವೀ ರಾಷ್ಟ್ರದಲ್ಲಿ ಆ ಗುಣಗಳು ಉಂಟಾಗುವ ಬಗೆ ಹೇಗೆ?

ಇಂಗ್ಲಂಡದೇಶದ ಸ್ಕೌಟ ಶಿಕ್ಷಣ:— ಚಿಂಗಫರ್ಡ ಸ್ಟೇಶನದ ಹತ್ತರ ಇದ್ದ ಗಿಲವೇಲ ಪಾರ್ಕದಲ್ಲಿ ಸ್ಕೌಟ ಶಿಕ್ಷಣವು ನಡೆಯುತ್ತಿರುತ್ತದೆ. ಕಬ್ ಮಾಸ್ತರರ, ಇಲ್ಲವೆ ಸ್ಕೌಟ ಮಾಸ್ತರರ, ಅಥವಾ ರೋವ್ಹರ್ಸ ಇಲ್ಲವೆ ಕಮಿಶನರರ ಶಿಕ್ಷಣದ ವರ್ಗಗಳು ಮೇಲಿಂದಮೇಲೆ ಇಲ್ಲಿ ನಡೆಯುತ್ತಿರುತ್ತವೆ. ಸ್ಕೌಟ ಕಮೀಶನರರು ಈ ಬಾಲವೀರ ಶಿಕ್ಷಣವು ಚೆನ್ನಾಗಿ ನಡೆದು ವೃದ್ಧಿಂಗತವಾಗುವಂತೆಯೂ ಸ್ಕೌಟ ಶಿಕ್ಷಿತರ ಮೇಲ್ವಿಚಾರ ನೋಡುವದಕ್ಕಾಗಿಯೂ ಬಹಳ ಲಕ್ಷ್ಯ ತೆಗೆದುಕೊಳ್ಳುತ್ತಿರುತ್ತಾರೆ. ಗ್ರೇಟಬಟನದ ಯಾವ ಭಾಗದವರೇ ಆಗಲಿ ತರುಣರು ಇಲ್ಲಿಗೆ ಬಂದು ಸ್ಕೌಟ ಶಿಕ್ಷಣಪಡೆದು ಹೊರಗೆ ಹೋಗುತ್ತಾರೆ. ಸ್ಕೌಟ ಜಳವಳಿಯ ಮಧ್ಯವರ್ತಿ ಸ್ಕೌಟ ಶಿಕ್ಷಣದ ದ್ವಾರವಾಗಿ ಇಲ್ಲಿ ಶಿಕ್ಷಣವು ನಡೆಯುತ್ತಿರುತ್ತದೆ. ಕಮೀಶನರ ಶಿಕ್ಷಣ ಪಡೆಯುವರು ಹೆಚ್ಚಿನ ಉದ್ಯೋಗಸ್ಥರೂ ಗೌರವವುಳ್ಳವರೂ ಇರುವರು. ಉದಾ– ಡಾಕ್ಟರರು, ಇಂಜನಿಯರರು, ಸಿವ್ಹಿಲ್ ಸರ್ವಿಸದ ಪೆನಶನ್ನರು ಇ. ದೇಶದ ಭವಿತವ್ಯವು ದೇಶದಲ್ಲಿಯ ತರುಣರ ಮೇಲೆ ಅವಲಂಬಿಸಿರುವದರಿಂದ ಅವರು ಕಾರ್ಯಕ್ಷಮರೂ ಜವಾಬುದಾರಿಯನ್ನರಿತವರೂ ಆಗುವಂತೆ ಸಹಾಯಮಾಡುವದಕ್ಕಾಗಿ ಅನುಭವಿಕರು ಮುಂದೆ ಬರುತ್ತಿರುತ್ತಾರೆ. ದೇಶದಲ್ಲಿಯ ಸುಜ್ಞರೂ ವಿಚಾರವುಳ್ಳವರೂ ಆದ ಅನುಭವಿಕರು ಇಲ್ಲಿಗೆ ಬಂದು ತರುಣ ಜನರ ಮುಖಂಡರಾಗಿ ಅವರಿಗೆ ಯೋಗ್ಯ ಮಾರ್ಗವನ್ನು ತೋರಿಸುತ್ತಾರೆ. ಇಲ್ಲಿಯ ಸ್ಕೌಟ ಟ್ರುಪ್ಪುಗಳಲ್ಲಿ " ಓಪನ್, ಕಂಟ್ರೋಲ್ಡ " ಎಂಬದಾಗಿ ಎರಡು ವಿಧಗಳುಂಟು. ಮೊದಲನೆಯದರಲ್ಲಿ ಎಲ್ಲರೂ ಸ್ಕೌಟ ಅಸೋಸಿಯೇಶನದ ದ್ವಾರವಾಗಿ ಶಿಕ್ಷಣ ಪಡೆಯುತ್ತಾರೆ. ಎರಡನೆಯದರಲ್ಲಿ ಒಂದು ಧಾರ್ಮಿಕ ಪಂಥದವರಾಗಲಿ, ಪಾಠಶಾಲೆಯವರಾಗಲಿ ನಡೆಯಿಸಿದ ಸ್ಕೌಟ ಶಿಕ್ಷಣ ಟ್ರುಪ್ಪುಗಳಿರು

ತ್ತವೆ. ಇಲ್ಲಿ ಓಪನ್ ಟ್ರೂಪ್ಪುಗಳು ಹೆಚ್ಚು; ಯಾಕಂದರೆ ಪೆನ್‌ಶನರಾಗಲಿ, ಎರಡನೆಯ ಉದ್ಯೋಗಗಳಲ್ಲಿ ತೊಡಗಿದವರಾಗಲಿ ಈ ತರದ ಲೋಕಸೇವೆಯಲ್ಲಿ ತೊಡಗಿಕೊಳ್ಳಲಿಕ್ಕೆ ಇಚ್ಛಿಸುತ್ತಿರುತ್ತಾರೆ. ಅವರಿಗಾಗಿ ಈ ಓಪನ್ ಸಂಸ್ಥೆಗಳಿರುತ್ತವೆ. ಇವರು ತಲಬು ಇಲ್ಲದೆ ಕೆಲಸ ಮಾಡುತ್ತಾರೆ.

ಮೇಲೆ ಬರೆದ ಕಮೀಶನರ ವರ್ಗದಲ್ಲಿ ಸ್ಕೌಟ ಶಿಕ್ಷಣದ ಹೆಚ್ಚಿನ ಜ್ಞಾನವು ದೊರೆಯುತ್ತಿರುತ್ತದೆ. ಈ ವರ್ಗವು ಮೂರೇ ದಿವಸ ನಡೆಯುವದು. (ಶುಕ್ರವಾರ ಶನಿವಾರ, ರವಿವಾರ) ಈ ವರ್ಗದ ಫೀ ೧ ಪೌಂಡು ಇರುವದು. ಇಲ್ಲಿ ವಾಖ್ಯಾನ ದ್ವಾರವಾಗಿ ಬಾಲವೀರ ಸ್ಕೌಟ ಚಳವಳಿಯ ವಿಷಯವನ್ನು ಹೇಳುವರು. ಬಾಲವೀರ ಚಳವಳಿಯಲ್ಲಿ ಅಡ್ಡಬರುವ ಸಂಗತಿಗಳ ವಿಷಯವಾಗಿಯೂ ಚರ್ಚಿಸುವರು. ಜನತೆಯ ಕೂಡ ಸ್ಕೌಟರ ವರ್ತನ, ಲೋಕಲ ಅಥಾರಿಟಿಗಳ ಸಂಬಂಧ, ಇತ್ಯಾದಿ ಎಲ್ಲ ಮಾಹಿತಿಗಳ ಬಗ್ಗೆ ಇಲ್ಲಿ ವಿಚಾರವು ನಡೆಯುವದು. ಇಲ್ಲಿ ದೊಡ್ಡ ದೊಡ್ಡವರ ವ್ಯಾಖ್ಯಾನಗಳು ನಡೆಯುವವು.

ಈ ವರ್ಗಗಳ ವಿದ್ಯಾರ್ಥಿಗಳು ತಮ್ಮ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವರು, ವ್ಯವಸ್ಥೆಗಾಗಿ ೪ ವರ್ಗಗಳನ್ನು ಕಲ್ಪಿಸಿರುವರು. ಅಡಿಗೆಯನ್ನು ಮಾಡಿಸಿ ತಂದನಂತರ ಊಟದ ವ್ಯವಸ್ಥೆಯನ್ನು ವಿದ್ಯಾರ್ಥಿಗಳೇ ಮಾಡಿಕೊಳ್ಳುವರು. ದಿವಸಕ್ಕೆ ೪ ಸಾರೆ ಆಹಾರದ ವ್ಯವಸ್ಥೆಯು ಇರುವದು. (ಪ್ರಾತಃಕಾಲದ ನ್ಯಾಹರಿ, ಮಧ್ಯಾಹ್ನದ ಊಟ, ಸಾಯಂಕಾಲದ ಚಹಾ ರಾತ್ರಿಯ ಊಟ ಇ.) ವ್ಯಾಖ್ಯಾನಕ್ಕಾಗಿ ಬಂದ ಮಹನೀಯರು ಸಹ ವಿದ್ಯಾರ್ಥಿಗಳ ಗುಂಪಿನಲ್ಲಿ ಕೆಲಸ ಮಾಡಲಿಕ್ಕೆ ತೊಡಗುತ್ತಾರೆ, ಎಲ್ಲರೂ ಪರಸ್ಪರ ನಗುತ್ತ ಕೆಲೆಯುತ್ತ ಆನಂದದಿಂದ ಕಾಲಕಳೆಯುವರು.

ದುಃಖವಾರ್ತೆ

ತಂತಿಯಿಲ್ಲದ ತಾರಾಯಂತ್ರದ ಜನಕರಾದ ಎಮ್. ಜಿ. ಮಾಕೋನಿಯವರು ತಳೆದ ಜುಲೈತಿಂಗಳ ೨೦ನೆಯ ತಾರೀಖಿನ ದಿನ ರೋಮ ಪಟ್ಟಣದಲ್ಲಿ ಹೃದಯದ ವಿಕಾರದಿಂದ ಅಕಸ್ಮಾತ್ ಮರಣಹೊಂದಿದರು. ಜಗತ್ತಿನ ಪ್ರಗತಿಗೆ ಕಾರಣವಾದ ಅತಿ ಮಹತ್ವದ ವೈಜ್ಞಾನಿಕ ಪ್ರಪಂಚದಲ್ಲಿ ಅಭಿಜ್ಞರಾದ ಇವರ ನಿಧನದಿಂದ ಜಗತ್ತಿಗೇ ಅತಿಶಯ ದುಃಖವಾಗಿರುವದು. ಪಾರ್ಥಿವಿಕ ಶಿಕ್ಷಕರಿಗೆ

ತಂತಿಯಿಲ್ಲದ ತಾರಾಯಂತ್ರದ ಜನಕನೆಂದು ಪರಿಚಿತರಾದ ಜಗತ್ತಿನ ಮಹಾ ಪುರುಷರಲ್ಲೊಬ್ಬರಾದ ಈ ಮಹನೀಯರ ಸಂಕ್ಷಿಪ್ತ ಚರಿತ್ರೆಯನ್ನೂ ಅವರ ಕಾರ್ಯಗಳನ್ನೂ ಇಲ್ಲಿ ಕೊಟ್ಟಿರುವೆವು.

ಜಗತ್ತಿನಲ್ಲೆಲ್ಲ ಹೆಸರು ಪಡೆದ ಮಾರ್ಕೋನಿಯು ೧೮೭೪ನೆಯ ಇಸ್ವಿಯ ಏಪ್ರಿಲ್ ೨೫ನೆಯ ತಾರೀಖಿನ ದಿನ ಇತಾಲಿಯೊಳಗಿನ ಬೋಲೋನಾ ಎಂಬ ಊರಲ್ಲಿ ಹುಟ್ಟಿದನು. ಈತನ ತಾಯಿಯು ಆಯರ್ಲಂಡದವಳು. ತಂದೆಯು ಇಟಾಲಿಯನ್ನನು. ಇವರಿಬ್ಬರೂ ಗಾಯನ ಕಲೆಯ ಅಭ್ಯಾಸಕ್ಕಾಗಿ ಬೊಲೋನಾಕ್ಕೆ ಬಂದಾಗ ಈ ಮಹಾಪುರುಷನ ಜನ್ಮವಾಯಿತು. ಚಿಕ್ಕಂದಿನಿಂದಲೂ ಈತನಲ್ಲಿ ಮನಸ್ಸಿನ ಏಕಾಗ್ರತೆ ಮಾಡಿ ಯಾವದೊಂದು ಕೆಲಸದಲ್ಲಿ ತೊಡಗುವ ಶಕ್ತಿಯು ಅಸಾಧಾರಣವಾಗಿದ್ದಿತು. ಈತನು ೧೪ ವರ್ಷ ವಯಸ್ಸಿನವನಾದಾಗಲೇ ಪದಾರ್ಥ ವಿಜ್ಞಾನ ಶಾಸ್ತ್ರ ರಸಾಯನ ಶಾಸ್ತ್ರಗಳನ್ನು ತನ್ನ ಪ್ರೀತಿಯ ವಿಷಯವೆಂದು ಅರಿಸಿ ಕೊಂಡು ಅಭ್ಯಾಸಮಾಡಹತ್ತಿದನು. ಮತ್ತು ೨೦ ವರ್ಷ ವಯಸ್ಸಾದಾಗ ವಿದ್ಯುತ್‌ಶಕ್ತಿಯ ಸಹಾಯದಿಂದ ಸುದ್ದಿಯನ್ನು ಕಳಿಸುವ ಸಾಧನವನ್ನು ಕುರಿತು ಅಭ್ಯಾಸ ಮಾಡತೊಡಗಿದನು.

ಈ ತನ್ನ ಪ್ರಯೋಗಗಳನ್ನು ಬೋಲೋನಾದ ಹತ್ತಿರದ ಒಂದು ಹಳ್ಳಿಯ ಲ್ಲಿದ್ದ ತನ್ನ ತಂದೆಯ ಮನೆಯಲ್ಲಿಯೇ ನಡೆಯಿಸಿದ್ದನು. ೧೮೯೫ನೆಯ ಇಸ್ವಿಯ ಡಿಸೆಂಬರ ತಿಂಗಳಲ್ಲಿ ಒಂದು ದಿನ ರಾತ್ರಿ ಅಕಸ್ಮಾತ್ತಾಗಿ ತನ್ನ ಪ್ರಯೋಗ ಶಾಲೆಗೆ ತಾಯಿಯನ್ನು ಕರೆದುಕೊಂಡು ಹೋಗಿ ೩೦ ಫೂಟು ಅಂತರದಲ್ಲಿದ್ದ ಒಂದು ಗಂಟೆಯು ಅದರ ಎದುರಿನಲ್ಲಿಟ್ಟ ವಿದ್ಯುದ್ಯಂತ್ರದಲ್ಲಿ ವಿದ್ಯುತ್ತಿನ ತರಂಗಗಳನ್ನು ಹುಟ್ಟಿಸಲು ತಾನಾಗಿಯೇ ಬಾರಿಸುವದನ್ನು ತೋರಿಸಿದನು. ತುಸುದಿನಗಳಲ್ಲಿಯೇ ಈ ಅಂತರವನ್ನು ಒಂದು ಮೈಲಿನವರೆಗೆ ಬೆಳಿಸಿ ಪ್ರಯೋಗಮಾಡಿ ತೋರಿಸಿದನು.

೧೮೯೬ರಲ್ಲಿ ಇಂಗ್ಲಂಡದಲ್ಲಿರುತ್ತಿದ್ದ ತನ್ನ ತಾಯಿಯ ಸಂಬಂಧಿಕರನ್ನು ನೋಡಲು ಇಂಗ್ಲಂಡಕ್ಕೆಹೋಗಬೇಕಾಗಿ ಬಂದದ್ದರಿಂದ ಅಲ್ಲಿಗೆಹೋಗಿ ಮರುವರ್ಷ ಇತಾಲಿಯನ್ ಸರಕಾರದ ಆಮಂತ್ರಣ ಬರಲು ಇತಾಲಿಗೆ ಬಂದು ಅಲ್ಲಿ ತಂತಿಯಿಲ್ಲದ ತಾರಾ ಯಂತ್ರವನ್ನು ನಡೆಯಿಸುವ ಕಾರ್ಯಕ್ರಮವನ್ನು ಪುನಃ ಪ್ರಾರಂಭಿಸಿದನು. ಮತ್ತು ಒಂದು ಇಂಗ್ಲಿಷ ಕಂಪನಿಯವರು ಮಾರ್ಕೋನಿಯ ಈ ಜ್ಞಾನವನ್ನು ಜಗತ್ತಿನ ತುಂಬ ಹಬ್ಬಿಸುವ ಕಾರ್ಯವನ್ನು ಪ್ರಾರಂಭಿಸಿದರು. ೧೮೯೭ನೆಯ ಇಸ್ವಿಯಿಂದ ತಂತಿಯಿಲ್ಲದೆ ವಿದ್ಯುತ್ತಿನ ತರಂಗಗಳ ಮೂಲಕ ಸುದ್ದಿಯನ್ನು ಕಳುಹಿಸುವ ಕಾರ್ಯಕ್ರಮವು ತುಂಬ ಯಶಸ್ವಿಯಾಗಿ ನಡೆಯತೊಡಗಿತು.

ಮುದ್ರದಲ್ಲಿದ್ದ ಹಡಗುಗಳಿಗೆ ಅಪಾಯ ಸಂಭವಿಸಿದಾಗ ದಂಡೆಯಲ್ಲಿರುವವರಿಗೆ ಬಿದ್ದಿಯನ್ನು ಮುಟ್ಟಿಸುವದರ ಮೂಲಕ ಜನರ ವಿತ್ತಜೀವಿತಗಳ ರಕ್ಷಣೆಗೆ ಇದ ಬಹು ತುಂಬ ಸಹಾಯವಾಗಹತ್ತಿತು. ೧೯೦೧ನೆಯ ಇಸ್ವಿಯಲ್ಲಿ ಈತನ ಯಂತ್ರಗಳ ಮೂಲಕ ಅತ್ಲಾಂಟಿ ಮಹಾಸಾಗರದ ಒಂದು ದಂಡೆಯಿಂದ ಮತ್ತೊಂದು ದಂಡೆಗೆ ಸಿಗ್ನೆಲ್ ಕಳಿಸುವದು ಸಾಧ್ಯವಾಯಿತು. ೧೯೦೩ನೆಯ ಇಸ್ವಿಯಲ್ಲಿ ಸಾವಿರ ಮೈಲುಗಳ ಅಂತರದಲ್ಲಿದ್ದವರು ಪರಸ್ಪರ ಮಾತಾಡಲು ಅನುಕೂಲ ವಾಯಿತು. ೧೯೧೧ನೆಯ ಇಸ್ವಿಯಲ್ಲಿ ಈ ಅಂತರವು ಆರುಸಾವಿರ ಮೈಲುಗಳ ವರೆಗೆ ಬೆಳೆಯಿತು. ೧೯೧೭ನೆಯ ಇಸ್ವಿಯಲ್ಲಿ ಮಾರ್ಕೋನಿಯು ಇಂಗ್ಲಂಡದಲ್ಲಿ ನಿಂತು ಆಸ್ಟ್ರೇಲಿಯದವರೊಡನೆ ಮಾತಾಡಲು ಸಾಧ್ಯಮಾಡಿಕೊಟ್ಟನು.

ಮಾರ್ಕೋನಿಯಂತೆಯೇ ಎಷ್ಟೋ ಜನ ಶಾಸ್ತ್ರಜ್ಞರು ಈ ವಿಷಯದ ಅಭ್ಯಾಸ ವನ್ನು ಕೈಕೊಂಡಿದ್ದರೂ ಅವರಲ್ಲಿ ಹಲವರು ನಡುವೆಯೇ ಕೈಬಿಟ್ಟರು. ಏಕ್ಕಟ್ಟಿಗೆ ಇವರು ತಮ್ಮ ಪ್ರಯೋಗಪರೀಕ್ಷೆಗಳನ್ನು ಮುಂದೆಸಾಗಿಸಿದರೂ ಮಾರ್ಕೋನಿಯ ಮುಂದೆ ಅವರ ಬೆಳಕು ಬೀಳಲೇ ಇಲ್ಲ. ೪೨ ವರ್ಷಗಳ ಹಿಂದೆ ಮಾರ್ಕೋನಿಯು ತನ್ನ ತಾಯಿಗೆ ತೋರಿಸಿದ ೩೦ ಫೂಟು ಅಂತರದಲ್ಲಿ ಗಂಟೆಯನ್ನು ಬಾರಿಸುವ ಪ್ರಥಮ ಪ್ರಯೋಗದ ತರುವಾಯ ಆ ವಿದ್ಯೆಯು ಇಂದು ಇಡಿಯ ಜಗತ್ತನ್ನೇ ವ್ಯಾಪಿಸಿಬಿಟ್ಟಿರುವದು. ಇದೀಗ ಮಾರ್ಕೋನಿಯು ಏಕನಿಷ್ಠೆಯ ಪ್ರಯತ್ನದ ಪ್ರದರ್ಶನವಲ್ಲದೆ ಮತ್ತೇನು? ಇಂದು ಮುಂಬಯಿಯಲ್ಲಿ ಕೂತ ಮನುಷ್ಯನು ಯುರೋಪದ ದೇಶಗಳು, ಕಾನಡಾ, ಅಮೇರಿಕೆಯ ಸಂಯುಕ್ತ ರಾಜ್ಯಗಳು, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ದಕ್ಷಿಣ ಅಮೇರಿಕಾ ಮೊದಲಾದ ಜಗತ್ತಿನೊಳ ಗಿನ ಬೇಕಾದ ದೇಶಗಳು ಇವುಗಳೊಡನೆ ಮಾತಾಡಲು ಸಾಧ್ಯವಾಗಿದೆ. ಗ್ರೇಟ ಬ್ರಿಟನ್ನವೊಂದೇ ದೇಶದಲ್ಲಿ ೭೦ ಲಕ್ಷ ಮನೆಗಳಲ್ಲಿ ವಾಯರಲೆಸ್ ರಿಸೀವರ ಯಂತ್ರಗಳಿವೆ! ಹಿಂದುಸ್ಥಾನ ಸರಕಾದದವರೂ ಇದರ ಪ್ರಸಾರವನ್ನು ಇತ್ತೀಚಿಗೆ ಕೈಕೊಂಡಿರುವರು.

ಈ ಅದ್ವಿತೀಯಶಾಸ್ತ್ರಶೋಧಕನು ಜಗನ್ಮಾನ್ಯ ವ್ಯಕ್ತಿಯಾಗಿದ್ದನು. ೧೯೦೯ ನೆಯ ಇಸ್ವಿಯಲ್ಲಿ ಈತನಿಗೆ ಪದಾರ್ಥಜ್ಞಾನಶಾಸ್ತ್ರದಅಭ್ಯಾಸಕ್ಕಾಗಿ ನೋಬೆಲ್ ಪ್ರಾಯಿಝು ದೊರೆಯಿತು. ಮತ್ತು ಮೂರು ವರ್ಷಗಳ ತರುವಾಯ ಗ್ರಾಂಡ್ ಕ್ರಾಸ್ ಆಫ್ ಆಲ್ಫಾನ್ಸೊ XII ಎಂಬ ಬಹುಮಾನವು ದೊರೆಯಿತು. ಈತನು ಇತಾಲಿಯನ್ ಸರಕಾರದಲ್ಲಿಯೂ ಸೈನ್ಯದಲ್ಲಿ ಹಡಗುಪಡೆಯಲ್ಲಿಯೂ ಲೆಫ್ಟಿನೆಂಟ್ ಕಮಾಂಡರ ಮುಂತಾದ ಅನೇಕ ದೊಡ್ಡ ದೊಡ್ಡ ಅಧಿಕಾರಗಳಲ್ಲಿ ಕೆಲಸ ಮಾಡಿರು

ವನು. ಮತ್ತು ಇತಾಲಿನ್ ಸರಕಾರದ ಅನೇಕ ಗೌರವದ ಬಿರುದುಗಳನ್ನು ಪಡೆದಿದ್ದನು. ಇಂಗ್ಲಂಡ ದೇಶದಲ್ಲಿಯೂ ಆತನಿಗೆ ತುಂಬಾ ಗೌರವವಿದ್ದಿತು. ಈತನು ಲಂಡನ್ನಿನೊಳಗಿನ ಮಾರ್ಕೋನಿ ಕಂಪನಿಯ ಬೋರ್ಡ ಆಫ್ ಡಾಯರೆಕ್ಟರ್ಸದ ಚೆಅರಮನ್ನನಾಗಿದ್ದನು. ಈತನ ಸನ್ಮಾನಕ್ಕಾಗಿ ಕಳೆದ ತಿಂಗಳ ೨೧ನೆಯ ತಾರೀಖಿನ ದಿನ ಈತನ ಅಂತ್ಯವಿಧಿಯು ನಡೆದಾಗ ಜಗತ್ತಿನೊಳಗಿನ ಎಲ್ಲ ತಾರಾ ಯಂತ್ರಗಳೂ ವಾಯರಲೆಸ್ ಸ್ಟೇಶನ್ನಗಳೂ ರೇಡಿಯೋ ಟೆಲಿಫೋನೋಗಳೂ ೨ ಮಿನಿಟಗಳವರೆಗೆ ತಮ್ಮ ಕೆಲಸವನ್ನು ನಿಲ್ಲಿಸಿದ್ದವು.

ತನ್ನ ಶಾಸ್ತ್ರೀಯ ಶೋಧಗಳಿಂದ ಅಸಾಧಾರಣವಾದ ಲೋಕ ಕಲ್ಯಾಣ ಕರ್ತನೆಂದು ಹೆಸರುಪಡೆದ ಮಾರ್ಕೋನಿಯ ಮರಣದಿಂದ ಪ್ರಪಂಚಕ್ಕೇ ಪ್ರಚಂಡ ಹಾನಿತಟ್ಟಿತು. ಕಾಲಪುರುಷನ ಈ ಕ್ರೂರ ಕಾರ್ಯಕ್ಕಾಗಿ ಪ್ರಪಂಚವೇ ದುಃಖದಿಂದ ನಿಟ್ಟುಸಿರು ಹಾಕಿತು!

ಬ್ರಹ್ಮದೇಶದ ಸ್ತ್ರೀಯರು

(ಕನ್ನಡ ಲೇಖದ ಆಧಾರದಿಂದ)

ಬ್ರಹ್ಮದೇಶವು ನಮ್ಮಲ್ಲಿಯ ದಿಲ್ಲಿ ಮಧುರೆಗಳ ಅಕ್ಷಾಂಶದಲ್ಲಿದೆ. ಇದರ ಮಹತ್ವದ ಭಾಗವು (ಇರಾವತಿಯ ಡೆಲ್ಟಾ) ಉಷ್ಣಕಟಿ ಬಂಧದಲ್ಲಿದೆ, ಉಷ್ಣಹವೆ, ಬೇಕಾದಷ್ಟು ಮಳೆ, ಪೂರದಿಂದ ನೀರಾಡುವ ರೇವೆಯ ಬೈಲು ಇವೆಲ್ಲ ಕಾರಣಗಳಿಂದ ಬಂಗಾಲದಂತೆ ಬತ್ತದ ನಾಡಾಗಿದೆ. ಆದುದರಿಂದ ಇದಾದರೂ ನಮ್ಮ ದೇಶದಂತೆ ಒಕ್ಕಲತನದ ದೇಶವಾಗಿದೆ, ಇಲ್ಲಿ ಅವಿಭಕ್ತಸಂಯುಕ್ತ ಕುಟುಂಬಗಳು ಬಹಳ. ಸಮಾಜದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ಬಹಳ. ಪೂರ್ವ ದೇಶಗಳಲ್ಲಿ ಇದು ನಿಜವಾಗಿ ಸ್ತ್ರೀರಾಜ್ಯವೆಂದು ಹೇಳಬಹುದು. ಸ್ತ್ರೀಯರು ಇಲ್ಲಿ ಒಕ್ಕಲತನ ವ್ಯಾಪಾರಗಳನ್ನು ಮಾಡುವರು. ಗಂಡಸರಿಗಿ ತ ಹೆಂಗಸರೇ ಹೆಚ್ಚಾಗಿ ದುಡಿಯುತ್ತಾರೆ. ಕೆಲವರು ಸ್ತ್ರೀಯರು ಕಾರಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ನೂಲುವ ನೇಯುವ ಕೆಲಸಗಳಲ್ಲಿಯೂ ಮತ್ತೆ ಕೆಲವರು ತೊಡಗಿರುವರು. ಬ್ರಹ್ಮೀ ಸ್ತ್ರೀಯರು ಗಂಡಸರಂತೆ ಪೇಟೆ ಅಂಗಡಿಗಳಲ್ಲಿ ಬೇಕಾದ ಹಾಗೆ ನಿರ್ಭಯದಿಂದ ವ್ಯಾಪಾರಮಾಡುತ್ತಾರೆ.

ಅಲ್ಲಿಯಾದರೂ ನಮ್ಮಲ್ಲಿಯಂತೆ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳೂ ನಗರ
ಲ್ಲಿ ಆಂಗ್ಲ ಭಾಷೆಯ ಶಾಲೆಗಳೂ ಇರುತ್ತವೆ. ಬ್ರಹ್ಮೀ ಹುಡುಗರೆಲ್ಲ ಕೆಲಕಾಲ
ತಿ ಪಗೋಡಾಗಳಲ್ಲಿದ್ದು ಬೌದ್ಧ, ಭಿಕ್ಷುಕ ಭಿಕ್ಷುಕಿಯರ ಸೇವೆ ಮಾಡುತ್ತ
ಕಲಿಯುವ ಪರಿಪಾಠವಿದೆ. ಆಂಗ್ಲ ಭಾಷೆಯಲ್ಲಿ ನಿಪುಣೆಯರಾದ ಸ್ತ್ರೀಯರು
ಕಾರೀ ಕೆಲಸದಲ್ಲಿ ತೊಡಗಿರುತ್ತಾರೆ. ಪಾಶ್ಚಾತ್ಯ ಪದ್ಧತಿಯಂತೆ ಅಲ್ಲಿ ಸ್ತ್ರೀ
ಸ್ಥೆಗಳಿವೆ. ಅವೆಲ್ಲ ಸ್ತ್ರೀಯರ ಏಳಿಗೆಗಾಗಿ ಪ್ರಯತ್ನ ಮಾಡುತ್ತಿರುವವು.
ಷ್ಟು ಸುಧಾರಿಸಿದ ಬಳಿಕ ಸ್ತ್ರೀಯರು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿ
ಸಮಾಡುತ್ತಿರುವದು ಸಹಜವಾದದ್ದೇ ಸರಿ.

ಬ್ರಹ್ಮೀಸ್ತ್ರೀಯರ ಸ್ವಭಾವವು ಸರಳವಾದದ್ದು. ಸ್ತ್ರೀಸ್ವಭಾವಕ್ಕನುಸರಿಸಿ
ಣಾಳುಗಳೂ ಇರುವರು. ಅಪಮಾನವಾದರೆ ಮಾತ್ರ ತೀರ ಸಹಿಸುವದಿಲ್ಲ.
ಗ ಬೇಕಾದಷ್ಟು ಕ್ರೂರತನವು ಅವರಲ್ಲಿ ತೋರಿಬರುತ್ತದೆ. ಪುರುಷರ ಕೂಡ
ರೆತು ಓಡಾಡಲಿಕ್ಕೆ ನಮ್ಮ ಸಮಾಜದಲ್ಲಿ ಸಂಕೋಚವೆನಿಸುವದು; ಆದರೆ
ಸ್ತ್ರೀಯರು ಅಲ್ಲಿ ಏನೂ ಅನುಮಾನವಿಲ್ಲದೆ ಉಗೆಬಂಡಿಗಳಲ್ಲಿ ಸಹಜವಾಗಿ ಗಂಡಸರ
ಡ ಕೂಡ್ರಬಲ್ಲರು.

ಅಲ್ಲಿಯ ಸ್ತ್ರೀಯರ ಮುಖ್ಯ ಉದ್ಯೋಗವು ಒಕ್ಕಲತನ. ಹೊಲದಲ್ಲಿ ಕೆಲಸ
ಮಾಡುವಾಗ ತೆಂಗಿನ ಸೊಪ್ಪಿನಿಂದ ಸಿದ್ಧಪಡಿಸಿದ ಕೊಡೆಯಂಥ ಟೊಪ್ಪಿಗೆಯನ್ನು
ರಿಸಿಕೊಳ್ಳುವರು; ಯಾಕಂದರೆ ಇಲ್ಲಿ ೪೦ ರಿಂದ ೬೦ ಇಂಚಿನ ವರೆಗೆ ಮಳೆ ಸುರಿ
ಯುತ್ತದೆ. ಈ ಬಗೆಯಾಗಿ ಮಳೆಸುರಿಯುವಾಗ ಸ್ತ್ರೀಯರು ಸಹಜವಾಗಿ
ಹೊಲದಲ್ಲಿ ಉದ್ಯೋಗಮಾಡುತ್ತಿರುವರು. ಆದರೆ ಪೇಟೆಯಲ್ಲಿ ಓಡಾಡುವಾಗ
ಶೈಮೆಯ ಅಂಗಿ ಲುಂಗಿಗಳಿಂದ ಭೂಷಿತರಾಗಿ ಹಿಕ್ಕಿದ ಹೊಳಪು ಕೇಶಗಳ ತರ
ನದ ಆಕಾರದ ಮುಡಿಗಳಲ್ಲಿ ಅಂದವಾದ ಹೂಗಳನ್ನು ಧರಿಸಿಕೊಂಡು ಓಡಾಡು
ತ್ತಿರುತ್ತಾರೆ. ಓಡಾಡುವಾಗ ಬಾಯಲ್ಲಿ ಇಲ್ಲಿಯ ಗಂಡಸರಂತೆ ಚಿರೂಟುಗಳನ್ನು
ರಿಸಿ ಸೇದಿ ಹೊಗೆಬಿಡುತ್ತ ನಿರ್ಭಯವಾಗಿ ಓಡಾಡಬಲ್ಲರು.

ಇವರ ನಿಲುವಿಕೆ ಸಾಧಾರಣ. ಎಂಥ ಬಡತನದ ಸ್ತ್ರೀಯಳಿದ್ದರೂ ಶೈಮೆಯ
ಸುಗೆ ತೊಡಿಗೆಗಳನ್ನೇ ಧರಿಸುವಳು. ಹೆಚ್ಚಿನ ಆಭರಣಗಳ ಆಗತ್ಯವು ಅವರಿ
ರುವದಿಲ್ಲ. ಏಳು ಅಥವಾ ಒಂಬತ್ತು ಹರಳುಗಳುಳ್ಳ ಬೆಂಡವಾಲೆಗಳು ಕಿವಿಯಲ್ಲಿ
ದ್ದರೆ ಸಾಕು. ಕೈಗಳಲ್ಲಿ ಮಾತ್ರ ಎರಡು ಹರಳಿನ ಎರಡೆರಡು ಬಳೆಗಳು.
ಶ್ರೀಮಂತರು ಮಾತ್ರ ಕೊರಳಲ್ಲಿ ಹರಳುಕೆಚ್ಚಿದ ಹಾರವನ್ನು ಧರಿಸಿಕೊಳ್ಳುವರು.

ಇವರ ಪ್ರತಿನಿತ್ಯದ ಆಹಾರವು ಅಕ್ಕಿಯಿಂದ ಸಿದ್ಧಪಡಿಸಿದ್ದು. ಶ್ರೀಮಂತರು ಸಹ ಮಣ್ಣಿನ ಪಾತ್ರೆಗಳಲ್ಲಿಯೇ ಅಡಿಗೆಮಾಡಿಕೊಳ್ಳುವರು. ಕರಿದ ಪದಾರ್ಥಗಳ ಮೇಲೆ ಇವರ ಮೆಚ್ಚುಗೆ ಬಹಳ. ಆದರೆ ಕರಿದ ವಾಸನೆ ಮಾತ್ರ ಇವರಿಗೆ ತಡೆಯಲಾರದು; ಆದುದರಿಂದ ಅಡಿಗೆಯ ಮನೆಗಳು ಕೂಡುವ ಸ್ಥಳಕ್ಕೆ ದೂರವಾಗಿರುವವು. ಬರ್ಮೀಯರು ಮೀನು, ಹಕ್ಕಿ, ಪ್ರಾಣಿಗಳಿಂದ ಅಡಿಗೆಯನ್ನು ಸಿದ್ಧಪಡಿಸಿಕೊಳ್ಳುವರು. ಇವರು ಹಸಿ ಕಾಯಿಪಲ್ಲೆಗಳನ್ನು ಸೇವಿಸಲಿಕ್ಕೆ ಪ್ರೀತಿಪಡುತ್ತಾರೆ. ಹಸಿ ಮೆಣಸಿನಕಾಯಿಯ ಉಪಯೋಗವನ್ನು ಅಡಿಗೆಯಲ್ಲಿ ಹೇರಳವಾಗಿ ಮಾಡುತ್ತಿರುತ್ತಾರೆ.

ಊಟಮಾಡುವಾಗ ಗಂಡಸರೂ ಹೆಂಗಸರೂ ಒತ್ತಟ್ಟಿಗೆ ಸೇರಿ ಕೂಡುತ್ತಾರೆ. ನೆಲಕ್ಕಿಂತ ೧೪ ಫೂಟು ಎತ್ತರಿಸಿದ ಮೇಜುಗಳ ಮೇಲೆ ಬಡಿಸುವರು. ಅವನ್ನು ಮುಂದಿಟ್ಟುಕೊಂಡು ಕುಳಿತು ಊಟಮಾಡುವರು.

ಇವರು ಸ್ವಚ್ಛತೆ ಓರಣಗಳಿಗೆ ಹೆಚ್ಚಿಗೆ ಮೆಚ್ಚಿರುವರು. ಸ್ನಾನಮಾಡಿ ಬಗೆಬಗೆದ ಉಡುಪುಗಳನ್ನು ಧರಿಸಿ ಪ್ರಾತಃಕಾಲದಲ್ಲಿ ಹವೆಗಾಗಿ ಓಡಾಡುವರು. ಭಾರತೀಯ ಸ್ತ್ರೀಯರ ಕೂಡ ಮಮತೆಯಿಂದ ವರ್ತಿಸುವರು.

ಇವರು ಮೊಂಗೋಲಿಯನ್ ಬರ್ಮಾ–ತಿಬೇಟು ಪಂಥಕ್ಕೆ ಸೇರಿದವರು. ಇತ್ತಿತ್ತಲಾಗಿ ಇವರಲ್ಲಿಯೂ ಸಮ್ಮಲ್ಲಿಯಂತೆ ಅನೇಕ ಪಂಗಡಗಳಾಗಿವೆ. ಬರ್ಮೀ ಭಾಷೆಯು ಸಾಮಾನ್ಯವಾಗಿದ್ದರೂ ಪಂಗಡಕ್ಕೊಂದರಂತೆ ಆಡುವ ಬೇರೆ ಭಾಷೆಗಳಿರುತ್ತವೆ.

ಕಲಿಸುವ ಪಾಠವೂ ವಿಷಯ ಟಿಪ್ಪಣಿಯೂ

ಲೇಖಕ— ಸಾತೇನಹಳ್ಳಿ

ಕೈಲಿಬಾರದ ವಜಾಬಾಕಿ

೧. ಮೊದಲು ಸಾದಾ ವಜಾಬಾಕಿಯನ್ನು ಕಲಿಸುವ ಪೂರ್ವದಲ್ಲಿ ಹಿಂದೆ ಕಲಿತ ಬೇರೀಜಿನ ಜ್ಞಾನವು ಸ್ಥಿರವಾದ ಬಗ್ಗೆ ಮನದಟ್ಟು ಮಾಡಿಕೊಳ್ಳಬೇಕು.

೨. ಹಿಂದೆ ಬೇರೀಜು ಕಲಿಸುವಾಗ ಸಹ ಪ್ರತ್ಯಕ್ಷ ವಸ್ತುಗಳ (ಹುಣಸಿ ಬೀಜ ಇ. ಸಹಾಯದಿಂದ ೧೦೦ರ ಒಳಗಿನ ಸಣ್ಣ ದೊಡ್ಡ ಸಂಖ್ಯೆಗಳಲ್ಲಿ ಎರಡೆರಡರಂ

ಮೂರು ಮೂರರಂತೆ ಬೆಳಿಸುತ್ತ ೧೦೦ರ ವರೆಗೂ ಆಗುವಂತೆ ರೂಢಿಮಾಡಿಸಿರ ಬೇಕು. ಇದರಿಂದ ಅಂಕೆಗಳ ಬೇರೀಜು ಅಂದರೆ ವಸ್ತುಗಳ ಬೇರೀಜು ಎಂದು ದೃಢವಾಗುವದು. ೩. ಅವರು ಕೂಡಿಸಿದ ಸಂಖ್ಯೆಗಳ ಬೇರೀಜನ್ನು ಕೇಳಿದಾಗ ಬಾಯಿಂದ ಹೇಳಲು ಸಮರ್ಥರಾಗುವಂತೆ ಒಳ್ಳೇ ರೂಢಿ ಮಾಡಿಸಬೇಕು. ಈ ರೀತಿ ಯಾಗಿ ಕಲಿತ ಬೇರೀಜಿನ ಜ್ಞಾನವು ಬಳಕೆಯಲ್ಲಿ ಬರುವದಕ್ಕಾಗಿ ಸಂತೆಯಲ್ಲಿಯೂ ಅಥವಾ ಮನೆಯಲ್ಲಿಯೂ ಬೆಣ್ಣೆಯ ಲೆಕ್ಕ, ಮುಸರಿನ ಲೆಕ್ಕಗಳನ್ನು ಮಾಡಿಸಲಿಕ್ಕೆ ಹಚ್ಚಬೇಕು. ವ್ಯವಹಾರದ ಲೆಕ್ಕಗಳನ್ನು ಮಾಡುವಾಗ ಹಣದ ಕೋಷ್ಟಕವು ತಾನಾಗಿ ಬರುವದು. ಪೈಗಳನ್ನು ಕೊಟ್ಟು ಬಿಲ್ಲೀ ಕಟ್ಟಿಸಬೇಕಾಗುವದು. ಅದರಂತೆ ಬಿಲ್ಲಿಗಳನ್ನು ಕೊಟ್ಟು ಅಣೆ ಕಟ್ಟಿಸಬೇಕಾಗುವದು. ೪. ಒಂದನೆಯ ಇಯತ್ತೆಯಲ್ಲಿ ಸಂಖ್ಯೆಯ ಬರಹದ ಜ್ಞಾನವು ೧೦ ಸಾವಿರದವರೆಗೂ ಆಗಿರುವದು. ಅದನ್ನೇ ಮುಂದೆ ಎಳೆದು ಲಕ್ಷ, ದಶಲಕ್ಷಗಳವರೆಗೂ ಸಂಖ್ಯೆಗಳ ಕಲ್ಪನೆ ಮಾಡಿ ಕೊಟ್ಟು ಅವುಗಳ ಬರಹವನ್ನು ಕಲಿಸಿರಬೇಕು.

ಈ ಬಗೆಯಾಗಿ ಎಲ್ಲ ಜ್ಞಾನವು ಸರಿಯಾಗಿ ಆಗದಿದ್ದರೆ ಮುಂದೆ ಕಲಿಸುವಾಗ ತೊಂದರೆ ಬರುವದು. ಮುಂದ ಹುಡುಗರಿಗೆ ಏನೂ ತಿಳಿಯದಂತಾಗುವದು. ಎರಡು ಸಂಖ್ಯೆಗಳ ಬೇರೀಜು ಮಾಡಲಿಕ್ಕೆ ಗೊತ್ತಾದಬಳಿಕ ಅವರ ಕಲ್ಪನೆ ವೃದ್ಧಿ ಯಾಗುವಂತೆ ಒಂದು ಬುಟ್ಟಿಯಲ್ಲಿ ೨೫ ಹಣ್ಣುಗಳಿವೆ, ಅದಕ್ಕಿಂತ ೯ ಹೆಚ್ಚು ಮತ್ತೊಂದು ಬುಟ್ಟಿಯಲ್ಲಿ ಅವೆ. ಎರಡೂ ಕೂಡಿಸಿದರೆ ಎಷ್ಟಾಗುವವು? ಇತ್ಯಾದಿ ಕೇಳಿದಾಗ ಒಂದು ಬುಟ್ಟಿಯೊಳಗಿನ ವಸ್ತುಗಳ ಸಂಖ್ಯೆಯಿಂದ ಮತ್ತೊಂದು ಬುಟ್ಟಿಯೊಳಗಿನ ಸಂಖ್ಯೆಯನ್ನು ತೆಗೆದು ಅವೆರಡನ್ನು ಕೂಡಿಸಬೇಕಾಗುವದು. ಇಷ್ಟೆಲ್ಲ ಆದಬಳಿಕ ವಜಾಬಾಕಿಯನ್ನು ಹೇಗೆ ಕಲಿಸಬೇಕೆಂಬ ವಿಷಯವಾಗಿ ಕೆಳಗಿನ ಟಿಪ್ಪಣಿಯನ್ನು ವಾಚಕರು ನೋಡಬೇಕು.

ಗಣಿತ ವಜಾಬಾಕಿ

೨ನೆಯ ಇಯತ್ತೆ

ವೇಳೆ—೩೫ ನಿಮಿಷ

ಕಲಿಸುವ ಉದ್ದೇಶ— ವಿದ್ಯಾರ್ಥಿಗಳಿಗೆ ವಜಾಬಾಕಿಯ ಕಲ್ಪನೆ ತಂದು ಕೊಡುವದು,

,, ವಜಾಬಾಕಿಯ ಗಣಿತದ ಕೃತಿ ತಿಳಿಸುವದು,

ವಜಾಬಾಕಿಯ ವ್ಯವಹಾರದ ಉದಾಹರಣೆಗಳನ್ನು ಬಿಡಿಸಲು ವಿದ್ಯಾರ್ಥಿಗಳು ಸಮರ್ಥರಾಗುವದು.

ಉಪಕರಣ—೧೦೦ ಗಂಟುಗಳು, ಬಿಡಿಗಾಳುಗಳು.

೧. **ಉಪೋ.**— ೮ ದುಡ್ಡುಗಳಲ್ಲಿ ೫ ದುಡ್ಡು ಕೊಟ್ಟರೆ ಎಷ್ಟು ದುಡ್ಡು ಉಳಿಯುವವು ?

೨. ೧೪ ಅಗಿಗಳಲ್ಲಿ ೩ ಅಗಿಗಳು ಹತ್ತಲಿಲ್ಲ, ಎಷ್ಟು ಅಗಿಗಳು ಹತ್ತಿದಂತಾದವು ?

೩. ೧೦ ಜೋಳದ ಚೀಲಗಳಲ್ಲಿ ಸಂತೆ ದಿನ ಮಾರಿ ೩ ಚೀಲ ಉಳಿದವೆ. ಎಷ್ಟು ಚೀಲ ಮಾರಿದಂತಾಯಿತು ?

೪. ೧೨ ರೂಪಾಯಿಗಳಲ್ಲಿ ೩ ರೂಪಾಯಿಗಳನ್ನು ಕೊಟ್ಟೆನು, ಇನ್ನೆಷ್ಟು ಉಳಿದವು ?

ಜಾತ್ರೆಯಲ್ಲಿ ೯೯ ರೂಪಾಯಿಗಳನ್ನು ಒಯ್ದಿದ್ದೆವು. ೭೩ ರೂಪಾಯಿಗಳನ್ನು ಎತ್ತುಗಳಿಗಾಗಿ ಖರ್ಚು ಮಾಡಿದೆವು. ಇನ್ನೆಷ್ಟು ಉಳಿದವು ? ಇದನ್ನು ಬೇಗನೆ ಹೇಳಲಿಕ್ಕೆ ಬಂದೀತೇ ? ಇದಕ್ಕೂ ದೊಡ್ಡ ಅಂಕೆಗಳ ಲೆಕ್ಕವನ್ನು ನೆನಪಿಟ್ಟು ಬಾಯಿಂದ ಮಾಡಲಿಕ್ಕೆ ಬರಬಹುದೇ ? ಇಂಥ ಲೆಕ್ಕಗಳನ್ನು ಮಾಡುವ ರೀತಿಯನ್ನು ನಿಮಗೆ ಈ ದಿನ ಕಲಿಸುವೆನು.

ಭಾಗ	ವಿಷಯ	ಕ್ರಮ	ಕ. ಹ. ಉಪಯೋಗ
೧. ವಜಾಬಾಕಿಯ ಕಲ್ಪನೆ ಮಾಡಿ ಕೊಡುವದು.	**ಉದಾ.**—೬೭ ಹಣ್ಣುಗಳಿದ್ದವು. ಅವುಗಳಲ್ಲಿ ೩೪ ಹಣ್ಣುಗಳನ್ನು ಎಲ್ಲರೂ ಕೂಡಿ ತಿಂದೆವು. ಇನ್ನೆಷ್ಟು ಉಳಿಯುವವು?	(ಪ್ರತ್ಯಕ್ಷ) ೬೭ (ಇದರಲ್ಲಿ ಹತ್ತರ ಗಂಟು ಬಿಡಿಗಾಳು ಇಡಲಿಕ್ಕೆ ಹೇಳಬೇಕು) ಇದರಂತೆ ೩೪ರಲ್ಲಿ ಹೇಳು ಇದರಲ್ಲಿ ೩೪ ಕಳೆಯಿರಿ. ಇನ್ನೆಷ್ಟು ಉಳಿದವು?	
೨. ಕರಿಹಲಗೆಯ ಮೇಲೆ ಮಾಡಿಸುವದು.	ಹತ್ತರ ಗಂಟು ಎಷ್ಟು ಇದ್ದವು ಎಷ್ಟು ಕೊಟ್ಟೆ?	(ಬರೆಹ) ಮೇಲೆ ಪ್ರತ್ಯಕ್ಷವಾಗಿಟ್ಟದ್ದನ್ನೇ ಕರಿಹಲಗೆಯ ಮೇಲೆ ಬರೆಯಲಿಕ್ಕೆ ಹೇಳುವದು ಹ್ಯಾಗಂದರೆ—	
	ಬಿಡಿಗಾಳು ಎಷ್ಟು ಇದ್ದವು? ಎಷ್ಟು ಕೊಟ್ಟೆ?		

	ಹತ್ತರ ಗಂಟು	ಬಿಡಿಗಾಳು
ಎಷ್ಟು ಹಣ್ಣು ಇದ್ದವು? ೬೭	೬	೭
ತಿಂದ ಹಣ್ಣುಗಳೆಷ್ಟು? ೩೪	೩	೪
ಉಳಿದವು ಎಷ್ಟು (ಬಾಕಿ) ೩೩	೩	೩

		ಕಳೆಯಿಸಿಕೊಂಡ ಸಂಖ್ಯೆ	೬೭
		ಯಾವದು ಬರೆಯಿರಿ	
		ಕಳೆದ ಸಂಖ್ಯೆ ಯಾವದು	೩೪
		ಬರೆಯಿರಿ	
		ಬಾಕಿ ಯಾವದು ಬರೆಯಿರಿ	೩೩
೭. ರೂಢಿ.	ಉದಾಹರಣೆ—	ಪ್ರತ್ಯಕ್ಷವಾಡಿ ತೋರಿಸು	
		ಕರಿಹಲಿಗೆಯ ಮೇಲೆ ಬರೆದು	
	೬೪ ಶೇರು ಕಾಳು ಅವೆ.	ತೋರಿಸು.	
	ಅವುಗಳಲ್ಲಿ ೫೫ ಶೇರು ವಡಾರಿ	ಕಳೆಯಿಸಿಕೊಂಡ ಸಂಖ್ಯೆ	
	ದೆವು?	ಯಾವದು?	೬೪
		ಕಳೆದ ಸಂಖ್ಯೆ ಯಾವದು?	೫೫
		ಬಾಕಿ ಯಾವದು?	೧೧
೮. ವಜಾಬಾಕಿಯ	— ಉಣಾ ಚಿಹ್ನ	ಉಣಾ ಚಿಹ್ನವನ್ನು ಯಾವ	ಬಾಕಿ
ಗುರುತು.	ಮೇಲಿನ ಲೆಕ್ಕದಲ್ಲಿ	ಸಂಖ್ಯೆಯ ಹಿಂದೆ ಬರೆದದೆ?	೬೪— ೫೫ = ೧೧
	೬೪		
	—೫೫	ಯಾವ ಸಂಖ್ಯೆಯಲ್ಲಿ ಯಾವ ಸಂಖ್ಯೆ	
		ಕಳೆದದೆ ಓದಿ ಹೇಳು	
	ಬಾಕಿ ೧೧		

ಉ ಪ ಸ ಂ ಹಾ ರ

೧. ೫ ಹಣ್ಣುಗಳಲ್ಲಿ ೩ ಹೆಣ್ಣು ತಿಂದು ಉಳಿದದ್ದನ್ನು ಬರೆದು ತೋರಿಸು.

೨. ೮—೪=೪ ಇದನ್ನು ಓದಿ ತೋರಿಸು.

೩. ೬೨ ರೂಪಾಯಿಗಳಲ್ಲಿ ೫೧ ರೂ. ಕಳೆದಮೆ. ವಜಾಬಾಕಿ ಮಾಡಿ ತೋರಿಸು

ನಮ್ಮ ಶಾಲೆಗಳಲ್ಲಿಯ ವ್ಯಾಯಾಮ ಶಿಕ್ಷಣ

ಕನ್ನಡ ಲೇಖನದ ಆಧಾರದಿಂದ

ಶರೀರ ಸಂಪತ್ತೇ ಎಲ್ಲ ಸಂಪತ್ತುಗಳಲ್ಲಿ ಶ್ರೇಷ್ಠವಾದದ್ದು ಎಂಬದಾಗಿ ಎಲ್ಲರೂ ಹೇಳಬಲ್ಲರು. ಅದರಂತೆಯೇ ಯಾವದೊಂದು ದೇಶದ ನಿಜವಾದ ಧನವು ಬರಿ ಅಲ್ಲಿಯ ಮಳೆ, ಬೆಳೆ, ಉದ್ಯೋಗ ಐಶ್ವರ್ಯಾದಿಗಳಿಂದ ಎಣಿಸಲ್ಪಡದೆ ಆ ದೇಶದ ನಿವಾಸಿಗಳ ದೈಹಿಕ ಹಾಗು ಮಾನಸಿಕ ಬಲದ ಉನ್ನತಿಯಿಂದ ಎಣಿಸ ಲಾಗುವದೆಂದು ಬಲ್ಲವರು ಹೇಳುತ್ತಿರುವರು. ವಿದ್ಯಾರ್ಥಿಗಳ ಬುದ್ಧಿಬಲದ ಕಡೆಗೆ ಲಕ್ಷ್ಯಗೊಟ್ಟಂತೆ ಅವರ ದೇಹ ಸಾಮರ್ಥ್ಯದ ಬೆಳವಣಿಗೆಯ ಕಡೆಗೂ ಗಮನಿಸ ಬೇಕು; ಯಾಕಂದರೆ ಬುದ್ಧಿಬಲವೂ ದೇಹಬಲವೂ ಒಂದನ್ನೊಂದು ಅವಲಂಬಿಸಿರು ವವು. ಇವು ಒಂದನ್ನೊಂದು ಅಗಲಿ ಇದ್ದರೆ ಉಪಯೋಗ ಬೀಳದೆ ಹೋಗುವವು. ಇವೆರಡೂ ಸ್ವಾಭಾವಿಕವಾಗಿ ಚಿಕ್ಕ ವಯಸ್ಸಿನಿಂದಲೇ ಸರಿಯಾಗಿ ಬೆಳೆಯುತ್ತ ಹೋಗಬೇಕಾಗುವದು, ಅಂದಮೇಲೆ ಇವೆರಡೂ ಸಮಕಾಲಿಕವಾಗಿ ಸರಿಯಾಗಿ ಬೆಳೆಯುತ್ತ ಹೋಗಬೇಕು ಎಂದು ಗೊತ್ತಾಗುವದು.

ಸುಧಾರಿಸಿದ ದೇಶಗಳಲ್ಲಿ ಶಿಕ್ಷಣಜ್ಞರು ವಿದ್ಯಾರ್ಥಿಗಳ ಶಾರೀರಿಕ ಶಕ್ತಿ, ಬೌದ್ಧಿಕ ಶಕ್ತಿ, ಇವೆರಡರ ಕಡೆಗೂ ಸರಿಯಾಗಿ ಲಕ್ಷ್ಯಗೊಡಲಿಕ್ಕೆ ಬೇಕೆಂದು ನಿರ್ಣ ಯಿಸಿ ವಿದ್ಯಾಭ್ಯಾಸ ಕ್ರಮದಲ್ಲಿ ವ್ಯಾಯಾಮ ಶಿಕ್ಷಣಕ್ಕೂ ಯೋಗ್ಯವಾದ ಸ್ಥಾನ ವನ್ನು ಕಾದು ಇಟ್ಟಿದ್ದಾರೆ. ಜಪಾನ ಸರಕಾರದವರು ಹುಡುಗರ ಶರೀರಾರೋ ಗ್ಯದ ವಿಷಯವಾಗಿ ಪ್ರತ್ಯೇಕವಾಗಿ ' ಬ್ಯುರೋ ಆಫ್ ಫಿಜಿಕಲ್ ಎಜ್ಯುಕೇಶನ್ ' ಎಂಬ ಒಂದು ಖಾತೆಯನ್ನೇ ಏರ್ಪಡಿಸಿದ್ದಾರೆ. ಇಂಗ್ಲಂಡಿನಲ್ಲಿಯ ಶಾಲೆಗಳು ವ್ಯಾಯಾಮ ಶಿಕ್ಷಣಕ್ಕಾಗಿ ಕೊಡುತ್ತಿರುವ ಪ್ರಾಮುಖ್ಯತೆಯು ಅನುಕರಣೀಯ ವಾಗಿರುವದು.

ನಮ್ಮಲ್ಲಿಯ ಅಭ್ಯಾಸ ಕ್ರಮದಲ್ಲಿ ವ್ಯಾಯಾಮಕ್ಕಾಗಿ ಕೆಲವು ತಾಸುಗಳನ್ನು ಕಾದು ಇಟ್ಟಿದ್ದಾರೆ. ಆ ವೇಳೆಯನ್ನು ವಿದ್ಯಾರ್ಥಿಗಳು ಹ್ಯಾಗೋ ಹ್ಯಾಗೋ ಕಳೆಯುತ್ತಿರುತ್ತಾರೆ. ವೇಳಾಪತ್ರಿಕೆಗನುಸರಿಸಿ ಆಟದ ಬೈಲಿಗೆ ಹೋದರೂ ವ್ಯಾಯಾಮದ ಕಡೆಗೆ ವಿದ್ಯಾರ್ಥಿಗಳೂ ಶಿಕ್ಷಕರೂ ಸರಿಯಾಗಿ ಲಕ್ಷ್ಯಗೊಡುವ ದಿಲ್ಲ; ಯಾಕಂದರೆ ಶಾಲಾಭ್ಯಾಸದಂತೆ ವ್ಯಾಯಾಮ ವಿಷಯದಲ್ಲಿ ಇಂಥ ದಿವಸ ಇಂಥ ಆಟವನ್ನಾಗಲಿ, ಈ ಬಗೆಯ ವ್ಯಾಯಾಮವನ್ನಾಗಲಿ ಮಾಡತಕ್ಕದ್ದೆಂದು ನಿಶ್ಚಿತಪಡಿಸಿರುವದಿಲ್ಲ. ಅಯತ್ನವಾದ ವೇಳೆಯಲ್ಲಿ ಮನಸ್ಸಿಗೆ ಬಂದದ್ದನ್ನು ಆಡಿ ಹಾರಾಡಿ ಬಂದರೆ ತೀರಿಹೋಯಿತು. ಆರೋಗ್ಯ, ಶುಚಿತ್ವ, ಶರೀರದಾರ್ಢ್ಯ ಇವು

ಒಂದನ್ನೊಂದು ಅವಲಂಬಿಸಿರುವವು. ಇವಕ್ಕೆ ಸಂಬಂಧಪಟ್ಟ ನಿಯಮಗಳನ್ನೂ ಅವುಗಳ ಕಾರಣಗಳನ್ನೂ ಶಿಕ್ಷಕರು ಹೇಳಿಬಲ್ಲರು; ವಿದ್ಯಾರ್ಥಿಗಳೂ ಕೇಳಿಬಲ್ಲರು. ನಿಜವಾಗಿ ನೋಡಿದರೆ ಆಚರಣೆಯಲ್ಲಿ ಅವು ಏನೂ ತೋರಿಬರುವದಿಲ್ಲ. ಹೀಗಾಗಲಿಕ್ಕೆ ವ್ಯಾಯಾಮ ಶಿಕ್ಷಣ ಕ್ರಮವನ್ನು ಅಭ್ಯಾಸ ಕ್ರಮದಾತೆ ನಿಶ್ಚಿತಪಡಿಸಿ ಬರೆದುಕೊಟ್ಟಿರುವದಿಲ್ಲ. ಅಭ್ಯಾಸ ಕ್ರಮದಲ್ಲಿ ಪುಸ್ತಕ ಉಪಕರಣಗಳು, ಮುಂತಾದವು ಎಂದಿನಿಂದಲೂ ನಿಶ್ಚಿತವಾದಂತೆ ವ್ಯಾಯಾಮದ ಬಗ್ಗೆಯೂ ಪುಸ್ತಕ, ಮುಂತಾದವು ಗೊತ್ತಾಗಲಿಕ್ಕೆಬೇಕು. ಹೊಸದಾಗಿ ಪ್ರಚಾರದಲ್ಲಿ ಬಂದ ಸ್ಕೌಟ ಪದ್ಧತಿಯಲ್ಲಿ ಮಾತ್ರ ಸ್ಕೌಟ ಜ್ಞಾನಕ್ಕಾಗಿ ಪುಸ್ತಕ, ಕಲಿಯತಕ್ಕ ಸಂಗತಿಗಳು ನಿಶ್ಚಿತವಾಗಿ ಗೊತ್ತಾಗಿರುವದರಿಂದ ಅದು ಎಲ್ಲ ಕಡೆಗೂ ಒಂದೇ ಸಮನಾಗಿ ಒಂದೇ ರೀತಿಯಿಂದ ಬಳಕೆಯಲ್ಲಿ ಬಂದಿರುವದು. ಅದೇ ಕ್ರಮವನ್ನನುಸರಿಸಿ ಶಾಲಾಭ್ಯಾಸಕ್ರಮದಲ್ಲಿ ವ್ಯಾಯಾಮದಬಗ್ಗೆ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಬರಿ ಪುಸ್ತಕವೂ ಉಪಯೋಗದ್ದಲ್ಲ. ಆರೋಗ್ಯದ ಬಗ್ಗೆ ಬೇಕಾದಷ್ಟು ಬರೆದು ಗುಣಗಳನ್ನು ಪಡೆದು ಅರಿಸಿ ಬಂದ ವಿದ್ಯಾರ್ಥಿಗಳ ಹಲ್ಲುಗಳನ್ನೂ ಬಟ್ಟೆಗಳನ್ನೂ ದೇಹದಾರ್ಢ್ಯವನ್ನೂ ನೋಡಿದರೆ ಆ ವಿದ್ಯಾರ್ಥಿಯು ತಾನು ಓದಿದ್ದರ ಸ್ವಲ್ಪಾಂಶವನ್ನು ಸಹ ಬಳಕೆಯಲ್ಲಿ ತಂದಿರುವದಿಲ್ಲವೆಂದು ಗೊತ್ತಾಗುತ್ತದೆ. ವಾಯ್ಯಾಮ ಡ್ರಿಲ್ಲುಗಳು ಶಾಲೆಗಳಲ್ಲಿ ಪಾಠಗಳ ಬೇಸರ ಕಳೆಯುವದಕ್ಕಾಗಿ ಏರ್ಪಡಿಸಿದಂತೆ ಸದ್ಯದ ಸ್ಥಿತಿಯಾಗಿದೆ.

ನಮ್ಮ ಪ್ರಾಥಮಿಕ ಶಾಲೆಗಳಿಂದ ಆರಂಭಿಸಿ ವಿಶ್ವವಿದ್ಯಾನಿಲಯದವರೆಗೂ ನೋಡಿದರೂ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಉದ್ದೇಶವು ವಿದ್ಯಾಭ್ಯಾಸದ ಕಡೆಗೆ ಒಲಿದಿರುವದೇ ಹೆಚ್ಚಾಗಿ ಕಂಡುಬರುತ್ತದೆ. ಜ್ಞಾನಾರ್ಜನೆಯೇ ವಿದ್ಯಾರ್ಥಿಗಳ ಧ್ಯೇಯವಾಗಿದೆ. ಎಲ್ಲೆಲ್ಲಿ ನೋಡಿದರೂ ವ್ಯಾಯಾಮ ಶಿಕ್ಷಣವು ತನ್ನ ಯೋಗ್ಯ ಸ್ಥಾನವನ್ನು ಪಡೆದಿರುವದಿಲ್ಲ. ನಮ್ಮಲ್ಲಿಯ ಸ್ಕೂಲು ವಿದ್ಯಾನಿಲಯಗಳಲ್ಲಿ ಸಾಹಿತ್ಯ ಚರಿತ್ರೆ, ಅಲಂಕಾರ, ತತ್ವಶಾಸ್ತ್ರ. ವಿಜ್ಞಾನಶಾಸ್ತ್ರ ಇವೆಲ್ಲವನ್ನು ಕಲಿತ ವಿದ್ಯಾರ್ಥಿಗಳು ನೆಟ್ಟಗೆ ನಿಲ್ಲುವದನ್ನೂ ಕೂಡುವದನ್ನೂ ಸಹ ಅರಿಯರೆಂದು ಉಪಹಾಸಮಾಡುವ ನುಡಿಯಲ್ಲಿ ನಿಜವಾಗಿ ಅರ್ಥವಿರುತ್ತದೆ. ಅವರು ತಮ್ಮ ದಿನಂಪ್ರತಿಯ ಆಹಾರ, ಬಟ್ಟೆಗಳ ಶುಚಿತ್ವ, ದೇಹದ ನೈರ್ಮಲ್ಯಗಳ ಬಗ್ಗೆ ಹೆಚ್ಚಾಗಿ ಏನೂ ಅರಿಯದಂತೆ ತಮ್ಮ ಆಚರಣೆಯನ್ನು ಇಟ್ಟುಕೊಂಡಿರುತ್ತಾರೆ.

ಹೀಗೆ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಜ್ಞಾನಾರ್ಜನೆಯೇ ತಮ್ಮ ಧ್ಯೇಯವೆಂದು ತಿಳಿಯದೆ ಆರೋಗ್ಯವೂ ಶರೀರ ದಾರ್ಢ್ಯವೂ ತಮಗೆ ತೀರ ಸಂಬಂಧಿಸಿರುವವೆಂದು ತಿಳಿಯಲಿಕ್ಕೆ ಬೇಕು.

ಈ ಮಾತಿನ ಸತ್ಯತೆಗಾಗಿ ದೇಶವಿದೇಶಗಳ ಹಾಗು ಹಿಂದುಸ್ತಾನದ ಮರಣ ಸಂಖ್ಯೆಯ ವಿಷಯವಾಗಿ ವಿಚಾರಿಸುವಾ—

	ದೇಶ	೧೦೦೦ ಜನಸಂಖ್ಯೆಯಲ್ಲಿ ಸಾಯುವವರ ಸಂಖ್ಯೆ
೧.	ಇಂಡಿಯ	೩೪
೨.	ಜಪಾನ	೩೪
೩.	ಫ್ರಾನ್ಸ	೧೬
೪.	ಇಟಲಿ	೧೫
೫.	ಇಂಗ್ಲಂಡ ವೇಲ್ಸ	೧೨

ಮೇಲಿನ ಪಟ್ಟಿಯಿಂದ ನಮ್ಮ ದೇಶದಲ್ಲಿಯ ಸಾಯುವವರ ಸಂಖ್ಯೆಯು ಎಲ್ಲ ದೇಶಗಳಿಗಿಂತ ಅಧಿಕವಾಗಿರುವದೆಂಬ ವಿಷಾದಕರ ಸಂಗತಿಯು ಪ್ರಕಟವಾಗುವದು.

ಬೇಕಾದಷ್ಟು ವಿದ್ಯಾಧ್ಯಯನ ಮಾಡಿ ಸಮಾಜದಲ್ಲಿ ಬೆಳಕಿಗೆ ಬರಬೇಕೆನ್ನುವ ತರುಣರು ಸಾವಿಗೀಡಾಗುವ ದುಃಖಕರ ಉದಾಹರಣಗಳು ಅನೇಕವುಂಟು. ಕುಡಿಯುವ ನೀರು ಶುಚಿಯಾಗಿಲ್ಲದಿದ್ದರೆ ವಾಂತಿಭೇದಿ, ಟೈಫಾಯಿಡ್ ಜ್ವರಗಳು ಬರಬಹುದು. ಸರಿಯಾಗಿ ಬೆಳಕೂ ಹವೆಯೂ ಸ್ವಚ್ಛತೆಯೂ ಇಲ್ಲದ ಮನೆಗಳಲ್ಲಿ ವಾಸಿಸುವದರಿಂದ ಕ್ಷಯ ಮುಂತಾದ ಅಂಟು ರೋಗಗಳು ಗಂಟು ಬೀಳಬಹುದು. ಈ ವಿಷಯಗಳಲ್ಲಿ ಉಪಾಧ್ಯಾಯರು ವಿದ್ಯಾರ್ಥಿಗಳಿಗೂ ಪಾಲಕರಿಗೂ ಸರಿಯಾಗಿ ಬೋಧಿಸಬೇಕು.

ವಿದ್ಯಾರ್ಥಿಗಳ ಬೆಳವಣಿಗೆಗೆ ವಿಘ್ನಕಾರಕವಾದ ಇನ್ನೂ ಅನೇಕ ಸಂಗತಿಗಳು ಇರುವವು.

೧. ಸರಿಯಾದ ಪುಷ್ಟಿಕರವಾದ ಆಹಾರದ ಕೊರತೆ

೨. ಆರೋಗ್ಯಕಾರಕವಾದ ಹವೆಯ ಅಭಾವ

೩. ಬಡತನ, ಅಜ್ಞಾನ, ದುರ್ಲಕ್ಷ್ಯ ಇತ್ಯಾದಿ

೪. ಪಾಲಕರಲ್ಲಿ ಆರೋಗ್ಯ ಜ್ಞಾನದ ಅಭಾವ

ಇಷ್ಟೆಲ್ಲ ತೊಂದರೆಗಳಿದ್ದರೂ ಅವನ್ನೆಲ್ಲ ಒಮ್ಮೆಲೆ ನೀಗಿಸುವದು ಕಠಿಣ. ಆದರೂ ಕೆಲವಂಶದಲ್ಲಿ ಶಿಕ್ಷಕರು ಪ್ರಯತ್ನಿಸಲು ಅನುಕೂಲವಿದೆ.

ಶಿಕ್ಷಕರ ಯತ್ನ :— ತಮ್ಮ ವೇತನಪತ್ರಿಕೆಯಲ್ಲಿ ಕಾದಿಟ್ಟ ಆಟದ ವೇಳೆಯನ್ನು ಸರಿಯಾಗಿ ಕಳೆಯಲು ಅನುಕೂಲವಾಗುವಂತೆ ಮೊದಲೇ ಯತ್ನಿಸಿರಬೇಕು.

ಈ ದಿನ ಇಂಥ ಆಟವನ್ನಾಗಲಿ ಬಗೆಯ ವ್ಯಾಯಾಮವನ್ನಾಗಲಿ ಮಾಡಿ ಮುಗಿಸಬೇಕೆಂದು ಅಭ್ಯಾಸಪತ್ರಿಕೆ ಬರೆದು ಇಟ್ಟಿರಬೇಕು. ಆಟವಾಡುವ ದಿನ ಆಡಲಿಕ್ಕೆ ಅನುಕೂಲವಾಗುವಂತೆ ಆಡತಕ್ಕ ಸ್ಥಳವನ್ನು ಸಿದ್ಧಪಡಿಸಿ (ಗೆರೆ ಹೊಡೆದು) ಇಟ್ಟಿರಬೇಕು. ಆ ಸ್ಥಳಕ್ಕೆ ಹೋದ ಕೂಡಲೆ ಪದ್ಧತಿಗೆ ತಕ್ಕಂತೆ ನಿಂತು ತಿಸ್ತ್ರ ಸರಿಯಾಗುವಂತೆ ಆಡಬೇಕು. ವ್ಯಾಯಾಮಗಳಸಾಧನ (ಲೇಝುೀವ್ಸ್, ಡಂಬೆಲ್ಸ್ ಲೋಡು) ಗಳನ್ನು ಮೊದಲೇ ಕ್ರಮಗೊಳಿಸಿ ಇಡಬೇಕು. ಆಟದ ಬೈಲಿಗೆ ಹೋದ ಕೂಡಲೆ ಪದ್ಧತಿಗೆ ಸರಿಯಾಗಿ ಆಡಬೇಕು. ವಿದ್ಯಾರ್ಥಿಗಳಿಗೆ ಮನೋರಂಜನೆಯಾಗುವಂತೆ ಪಿಯಾನು, ಸೀಟಿ, ಮುಂತಾದವುಗಳನ್ನು ಸಕಾಲದಲ್ಲಿ ಉಪಯೋಗಿಸಬೇಕು. ಪ್ರತಿತಿಂಗಳ ಕೊನೆಗೆ ತೂಕ, ಎದೆಯ ಹರವು ಇತ್ಯಾದಿಗಳ ಬೆಳೆದದ್ದರ ನಿದರ್ಶನಕ್ಕಾಗಿ ಒಂದು ಪಟ್ಟಿಯನ್ನು ಬರೆದು ತೂಗ ಹಾಕಬೇಕು. ವ್ಯಾಯಾಮ ಶಾಲೆಯಲ್ಲಿ ಅಂಗಸಾಧನೆಯ ಪ್ರಕಾರಗಳನ್ನು ತೋರಿಸುವ ಪಟ (ಚಾರ್ಟ) ಗಳನ್ನು ತೂಗಹಾಕಬೇಕು. ಆಟ, ವ್ಯಾಯಾಮಗಳಲ್ಲಿ ಅಂಗಜಲನ ಯಿಂದ ಶರೀರದಲ್ಲಿಯ ಮಾಂಸಖಂಡಗಳೆಲ್ಲ ಸಾಧನೆ ಹೊಂದಿ ಗಟ್ಟಿಮುಟ್ಟಾಗುತ್ತವೆ. ಕಣ್ಣಿಗೆ ಅಂದಕಾಣುವಂತೆ ದೇಹರಚನೆಯು ಸಿದ್ಧವಾಗುತ್ತದೆ. ಸಣ್ಣ ಪುಟ್ಟ ತೊಂದರೆಗಳಿಗೆ ದೇಹವು ಬಳಲುವದಿಲ್ಲ. ದೇಹದಲ್ಲಿ ಕಾಂತಿಯೂ ಉತ್ಸಾಹವೂ ತುಂಬಿತುಳುಕುವದು. ಇತ್ಯಾದಿಗಳಲ್ಲಿ ಒಂದನ್ನಾದರೂ ವಿದ್ಯಾರ್ಥಿಗಳು ತಮ್ಮ ದೇಹದಲ್ಲಿ ಕಂಡದ್ದಾದರೆ ಆಟ, ವ್ಯಾಯಾಮಗಳಿಗೆ ಮೆಚ್ಚುತ್ತಾರೆ.

ಆಹಾರ :—ವಿದ್ಯಾರ್ಥಿಗಳು ದೇಹಪೋಷಣೆಗಾಗಿ ತಕ್ಕ ಆಹಾರ ಸೇವಿಸುವದು ಅವಶ್ಯ. ಡಾಕ್ಟರರು ನಮ್ಮಲ್ಲಿಯ ವಿದ್ಯಾರ್ಥಿಗಳ ಆಹಾರದ ವಿಷಯವಾಗಿ ವಿಚಾರಿಸಿ ಅವರ ಆಹಾರದಲ್ಲಿಯ ಕುಂದುಕೊರತೆಗಳನ್ನು ವಿಶದಪಡಿಸಿದ್ದಾರೆ. ನಮ್ಮವರ ಆಹಾರದಲ್ಲಿ ಶರ್ಕರೆ ಪಿಷ್ಟಭಾಗಗಳು ಪ್ರಮಾಣಕ್ಕಿಂತ ಹೆಚ್ಚಾಗಿ ಬಳಕೆಯಲ್ಲಿವೆ. ಮೇದಸ್ಸು, ಸಾರಜನಕ ಪದಾರ್ಥಗಳು ಅಲ್ಪ ಪ್ರಮಾಣದಲ್ಲಿರುತ್ತವೆ; ಆದುದರಿಂದ ಆಹಾರದೊಡನೆ ಹಣ್ಣು ಹಾಲು ಮುಂತಾದವುಗಳನ್ನು ಅಥವಾ ಅವು ಕೂಡಿದ ಪದಾರ್ಥಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕು. ಪುಷ್ಟಿಕರವಾದ ಆಹಾರಕ್ಕೆ ಹೆಚ್ಚು ಬೆಲೆ ಬೀಳುವದೆಂದು ತಿಳಿಯಬಾರದು. ನಾವು ಪ್ರತಿನಿತ್ಯ ಖರ್ಚು ಮಾಡುವ ಹಣದಲ್ಲಿಯೇ ಯೋಗ್ಯ ಆಹಾರಗಳು ನಮಗೆ ದೊರೆಯುವಂತೆ ಅವೆ. ತೀರ ಕಡಿಮೆ ಬೆಲೆಯಿಂದ ಕೆಳಗೆ ತೋರಿಸಿದಂತೆ ಯೋಗ್ಯ ಆಹಾರವನ್ನು ಸಿದ್ಧಪಡಿಸುವ ಸಾಧನಗಳನ್ನು ಪಡೆಯಬಹುದು.

(ಕವ್ವರ ಪುಟ ೩ ನೋಡಿರಿ.)

(೧) ಅಕ್ಕಿ, ರಾಗಿ ಅಥವಾ ಜೋಳ. (೨) ತಾಜಾ ಕಾಯಿಪಲ್ಲೆಗಳು ವಿಶೇಷವಾಗಿ ಸೊಪ್ಪುಗಳು. (೩) ಹಾಲು ಹಾಗು ಅದರಿಂದಾದ ಪದಾರ್ಥಗಳು. (೪) ಹೊಟ್ಟುಗೂಡಿದ ಗೋದಿ ಹಿಟ್ಟು. (೫) ಸೋಯಾಬೀನ ಮುಂತಾದ ಧಾನ್ಯಗಳು. (೬) ಹಣ್ಣುಗಳು– ಬಾಳೆ, ಪಪ್ಪರಬದನೆ, ಲಿಂಬೀಹಣ್ಣು, ಬದಾಮು, ಖರ್ಜೂರ.

೩. ಆಹಾರದ ಕಡೆಗೆ ಲಕ್ಷ್ಯಗೊಟ್ಟಂತೆ ಶುಚಿತ್ವದ ಕಡೆಗೂ ಲಕ್ಷ್ಯ ಕೊಡಬೇಕು. ಪ್ರತಿನಿತ್ಯ ಶಾಲೆಯಲ್ಲಿ ಕಾಣುವ ಅಂಗಳ, ಕೋಣೆ, ಗೋಡೆ, ಕರಿಪಲಿಗೆ, ಉಡುತೊಡಿಗೆ, ಪುಸ್ತಕ ಮುಂತಾದ ಎಲ್ಲೆಡೆಗಳಲ್ಲಿಯೂ ಶುಚಿತ್ವವು ಒಡೆದು ಕಾಣುವಂತೆ ಸ್ಥಿತಿಯು ಇರಬೇಕು. ನುಡಿದಂತೆ ನಡೆ ಎಂಬುದಕ್ಕೆ ತಕ್ಕಂತೆ ಶಿಕ್ಷಕನು ಸ್ವಚ್ಛತೆಗೂ, ವ್ಯವಸ್ಥೆಗೂ ಆರೋಗ್ಯಕ್ಕೂ ತಾನು ಮಾದರಿಯಾಗಿರಬೇಕು.

ಜಾಹೀರಾತು

(ಶ್ರೀ. ಉಮಡಿಕರ ಎಮ್. ಎ. ಕೃತ)

ಹಿಂದೂಪದ್ಧತಿಯ ಜಮಾಖರ್ಚು ಭಾಗ ೧ (ಹೊಸ ಆವೃತ್ತಿ)

ಪುಟ ೧೨೪ ಬೆಲೆ ೦–೧೦–೦

ಇದರ ಮೊದಲಿನ ಆವೃತ್ತಿ ತೀರಿದುದರಿಂದ ಈಗ ೩ನೆಯ ಆವೃತ್ತಿಯು ಸುಧಾರಿಸಿ ವಿಸ್ತರಿಸಿ ಪ್ರಕಟಿಸಲ್ಪಟ್ಟಿದೆ. ಈ ಆವೃತ್ತಿಯಲ್ಲಿ ಮನೆಯ ಜಮಾ ಖರ್ಚನ್ನು ಹೇಗೆ ಬರೆಯಬೇಕೆಂಬದನ್ನು ವಿಸ್ತಾರವಾಗಿ ಬರೆದು ತೋರಿಸಿದೆ. ಎಲ್ಲ ಪ್ರಕರಣಗಳಲ್ಲಿ ಮೊದಲಿಗಿಂತ ಹೊಸ ಉದಾಹರಣಗಳನ್ನು ಸೇರಿಸಿದೆ.

ಪ್ರತಿಯೊಂದು ಪ್ರಕರಣದ ಕೊನೆಗೆ ಪ್ರಶ್ನಗಳಿವೆ. ಕಟ್ಟಕಡೆಗೆ ರೂಢಿಗಾಗಿ ಪ್ರೀ. ಕಾಲೇಜ, ಸ್ಕೂಲಫಾಯನಲ್ ಪರೀಕ್ಷೆಗಳಿಗೆ ಬಿದ್ದ ಪ್ರಶ್ನಗಳು ಕೊಡಲ್ಪಟ್ಟಿವೆ. ಜಮಾಖರ್ಚುಬರೆಯುವ ಇಂಗ್ಲಿಶ್ ಪದ್ಧತಿಯನ್ನು ದೇಶೀಯ ಪದ್ಧತಿಯೊಡನೆ ಸೇರಿಸಿ ದೇಶೀಯ ಪದ್ಧತಿಯು ಈಗಿನ ಕಾಲಕ್ಕೆ ಹೇಗೆ ಉಪಯುಕ್ತವಾಗಬಹುದೆಂಬದನ್ನು ತೋರಿಸುವದು ಈ ಪುಸ್ತಕದ ಗುರಿಯಾಗಿದೆ. ಈಗಿನ ಕಾಲದ ಬಾಲಕರು ಕೇವಲ ಹಳೆಯ ಪದ್ಧತಿಯ ಪುಸ್ತಕಗಳಿಗಿಂತ ಈ ಪುಸ್ತಕದಿಂದ ಹೆಚ್ಚಿನ ಮತ್ತು ಸದ್ಯಕ್ಕೆ ಬೇಕಾಗಿರುವ ಜ್ಞಾನವನ್ನು ಪಡೆಯಬಹುದು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು

ಕೃಷ್ಣಾಜಿ ರಾಮರಾವ ಕುಲಕರ್ಣಿ,
ಕಿಲ್ಲೆ ಧಾರವಾಡ

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ಬ್ಹಿ. ಕಾಮತ, ಬಿ. ಎ. (ಆನರ್ಸ್) ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಶಿರ್ಸಿ, ಉ. ಕಾನಡಾ

ತ್ವರೆಮಾಡಿರಿ! ಬೆಲೆ ತೀರ ಕಡಿಮೆ!! ಹತ್ತೇ ಆಣೆಗಳು!!

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

(ಶ್ರೀ. ಚಿ. ಶ್ರೀ. ಕುಲಕರ್ಣಿ ಕೃತ)

ಗಣಿತ ಸಂಗ್ರಹ

—೦೦೫೦೦—

(ಸುಧಾರಿಸಿದ ೨ನೇ ಆವೃತ್ತಿ)

ಇದು ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಕಾಮಧೇನು. ಇದರಲ್ಲಿ ಮುಲ್ಕೀಪರೀಕ್ಷೆಯ ಎಲ್ಲ ಮಾದರಿಯ ಲೆಕ್ಕಗಳನ್ನು ಸುಲಭರೀತಿಗಳಿಂದ ಬಿಡಿಸಿ ತೋರಿಸಿದೆ. ಹಾಗೂ ಅಭ್ಯಾಸಕ್ಕೆಂದು ಹೇರಳವಾಗಿ ಉದಾಹರಣೆಗಳನ್ನು ಕೊಟ್ಟಿದೆ. ಲ. ಸಾ. ಭಾ. ದೃ. ಭಾ ದಿಂದ ಆರಂಭಮಾಡಿಕೊಂಡು ಎಲ್ಲ ವಿಷಯಗಳ ಸಮಾವೇಶವಾಗಿದೆ. ಕಡೆಗೆ ಮಾದರಿಯ ಪ್ರಶ್ನೆಗಳನ್ನೂ, ಹ ವ. ಡ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳನ್ನೂ ಸೇರಿಸಲಾಗಿದೆ. ಈ ಗ್ರಂಥದ ಉಪಯೋಗವನ್ನು ಚನ್ನಾಗಿ ಮಾಡುವದರಿಂದ ಗಣಿತಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂಖ್ಯೆಯು ಕಡಿಮೆಯಾಗುವದೆಂದು ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಇದೇ ಇವತ್ತಿಗೆ ಸ್ವತಂತ್ರವಾದ ಇಂಥ ಗ್ರಂಥ ಬೇರೊಂದಿಲ್ಲ. ಕಾರಣ ಇದರ ಉಪಯುಕ್ತತೆಯ ಬಗ್ಗೆ ಬರೆಯುವ ಕಾರಣವಿಲ್ಲ. ತರಿಸಿಕೊಂಡು ಅನುಭವ ಪಡೆಯಿರಿ.

ಪ್ರಕಾಶಕರು— ಆಯ್. ಆರ್. ಅಕಳವಾಡಿ ಎಂಡ ಸನ್ಸ,

ರಾಮಾಶ್ರಯ ಬುಕ್‌ಡಿಪೋ, ಧಾರವಾಡ

ಸಪ್ಟಂಬರ ೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ	ಪುಟ.
೧.	ಮುಂಬಯಿ ಇಲಾಖೆಯ ಆಯವ್ಯಯದ ಅಂದಾಜ ಪತ್ರಿಕೆ	೧
೨.	ಪಂಜಾಬದೊಳಗಿನ ಹಳ್ಳಿಯ ಶಾಲೆಗಳು	೩
೩.	ಪ್ರಾಥಮಿಕ ಶಾಲೆಗಳಲ್ಲಿ ನಿಬಂಧ ಶಿಕ್ಷಣ	೧೧
೪.	ಪ್ರಕಟನೆ	೨೮

Printed by K B. Bhise at the Karnatak Printing Works, Dharwar
and Published by D. V. Kale, B. A., Head Master
Training School Dharwar, at his Office

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಕೃತ)	೦– ೮–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪–೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೨–೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩ -೬
ಸೃಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೨-೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦– ೨–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪–೦
,, ೩ನೇ ,,	೦– ೫–೦
,, ,, ೪ನೇ ,,	೦– ೮–೦
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೫–೦
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦– ೬–೦
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	೦– ೭–೦
ಧಾರವಾಡ ಜಿಲ್ಲಾ ,, (ಕುರಡೀಕೃತ)	೦– ೫–೦
ಹಿಂದುಸ್ತಾನ ಭೂಗೋಲು (ಮಗದಾಲಕೃತ)	೦– ೮–೦
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧– ೦–೦
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೦– ೫–೦
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೪–೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–೦
ಭೂಮಿತಿ (ಚಂದಾವರಕರ ಕೃತ)	೦– ೭–೦
ಸರಸ್ವತೀ ವಿಜಯ (ಬೂದೀಹಾಳಕೃತ)	೧– ೪–೦

ಪತ್ತೆ:— ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬	ಸಪ್ಟಂಬರ ೧೯೩೭	ವರ್ಷ ೪ ಸಂ. ೬.

ಮುಂಬಯಿ ಇಲಾಖೆಯ ಆಯವ್ಯಯದ ಅಂದಾಜ ಪತ್ರಿಕೆ

(೧೯೩೭–೩೮)

ಅಗಸ್ಟ ತಿಂಗಳ ೨೪ನೆಯ ತಾರೀಖಿನ ದಿನ ಮುಂಬಯಿ ಕಾಯದೆ ಮಂಡಲದ ಅಧಿವೇಶನದ ಮುಂದೆ ಈ ವರ್ಷದ ಆಯವ್ಯಯದ ಅಂದಾಜ ಪತ್ರಿಕೆಯು ಇಡಲ್ಪಟ್ಟಿತು. ಅದರಲ್ಲಿ ಈ ವರ್ಷದ ಒಟ್ಟು ವೆಚ್ಚವು ೧೨,೧೭,೨೨,೦೦೦ ರೂ. ಗಳಾಗಬಹುದೆಂದೂ ಒಟ್ಟು ಉತ್ಪನ್ನವು ೧೧,೯೯,೫೫,೦೦೦ ರೂ. ಗಳು ಬರಬಹುದೆಂದೂ ಅಂದಾಜುಮಾಡಲಾಗಿದೆ. ಮತ್ತು ಪರಿಣಾಮದಲ್ಲಿ ೧೭,೬೭,೦೦೦ ರೂ. ಕಡಿಮೆ ಬೀಳಬಹುದೆಂದೂ ಈ ಕೊರತೆಯು ಇದೊಂದೇ ವರ್ಷದ ಮಟ್ಟಿಗೆ ಹೊರಡುವದಾದ್ದರಿಂದ ಇದನ್ನು ಕಳೆದ ವರ್ಷದ ಶಿಲಿಕಿನೊಳಗಿನ ರಕಮಿನಿಂದ ಬಾಯಿಗೂಡಿಸಿಕೊಳ್ಳಬೇಕೆಂದೂ ಅಧಿಕಾರಿಗಳು ನಿರ್ಣಯಿಸಿರುವರು.

ಈ ವರ್ಷದ ಅಂದಾಜಪತ್ರಿಕೆಯಲ್ಲಿ ನೀರಿನ ಪೂರೈಕೆಗಾಗಿ ಹತ್ತು ಲಕ್ಷ ರೂ. ಗಳನ್ನೂ ಹಳ್ಳಿಗಳ ಉದ್ಯೋಗವ್ಯವಸಾಯಗಳ ಬೆಳೆವಣಿಗೆಗಾಗಿ ೧೫೦ ಸಾವಿರ ರೂ. ಗಳನ್ನೂ ತೆಗೆದಿಡಲಾಗಿದೆ. ಕೆಲಕೆಲವು ಪ್ರದೇಶಗಳ ಭೂಕಂದಾಯವನ್ನು ಕಡಿಮೆಮಾಡುವದಕ್ಕಾಗಿ ೫ ಲಕ್ಷ, ಅಬಕಾರಿಯ ಉತ್ಪನ್ನದ ದೃಷ್ಟಿಯನ್ನು ಬದಲಾಯಿಸಿದುದರಿಂದ ಕಡಿಮೆಯಾಗಬಹುದಾದ ಉತ್ಪನ್ನ ೨ ಲಕ್ಷ,

ಹಿಂದುಳಿದ ವರ್ಗದ ಜನರ ಶಿಕ್ಷಣಕ್ಕಾಗಿ ಇನ್ನುಳಿದ ಆರುತಿಂಗಳುಗಳಿಗೆ ಸಾವಿರ, ಗೋಚರಾಯಿ ಫೀ (ಹುಲ್ಲಬನ್ನಿ) ಯನ್ನು ತೆಗೆದುಹಾಕಿದ್ದರಿಂದ ಕಡಿಮೆ ಬರಬಹುದಾದ ರಕೆಮು ೫ ಲಕ್ಷ, ಇವುಗಳ ಸೇರ್ಪಡೆಯಾಗಿದೆ ಇದ್ದಲ್ಲಿ ಖರ್ಚಿನ ಬಾಬುಗಳಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಕಡಿಮೆ ಮಾಡಲಾಗಿದೆ. ಈ ರಕಮಿನಲ್ಲಿ ೪೫೦ ಸಾವಿರ ರೂಪಾಯಿಗಳನ್ನು ತಿಂಗಳ ೭೫ ರೂ. ಗಿಂತ ಹೆಚ್ಚಿಗೆ ಪಗಾರವಿರುವ ಸರಕಾರೀ ನೌಕರ ಭತ್ತೆಯ ರಕಮಿನಿಂದಲೂ ಕಾಂಟಿಂಜೆನ್ಸಿ (ಸಾದಿಲವಾರ) ರಕಮಿನೊಳಗಿನಿಂದಲೂ ಉಳಿಸಿಕೊಳ್ಳಬಹುದೆಂದು ಗೊತ್ತಾಗಿದೆ. ಮುಂಬಯಿ ಇಲಾಖೆಯೊಳಗಿನ ಬಾಯ್ ಸ್ಕೌಟ್ ಹಾಗು ಗರ್ಲ್‌ಗಾಯಿಡ್ ಸಂಸ್ಥೆಗಳಿಗೆ ಕೊಡುವ ಸಹಾಯದ್ರವ್ಯದಲ್ಲಿಯೂ ಕ ವೊಂದು ರಕಮನ್ನು ಕಡಿಮೆಮಾಡಲಾಗಿದೆ.

ನವ್ಮ ಇಲಾಖೆಯ ಈ ವರ್ಷದ ಮುಖ್ಯ ಬಾಬುಗಳ ಉತ್ಪನ್ನದ ವಿವರ

	೧೯೩೭–೩೮		೧೯೩೮–೩೯	
ಭೂಕಂದಾಯ	೩೨೯೨೫	ಸಾವಿರ	೩೨೨೭೬	ಸಾವಿರ
ಅಬಕಾರಿ	೩೧೨೬೯	,,	೩೨೩೯೭	,,
ಸ್ಟ್ಯಾಂಪು	೧೩೯೭೯	,,	೧೪೪೫೫೫	,,
ಫಾರೆಸ್ಟ	೪೨೦೬	,,	೪೮೩೯	,,
ರೆಜಿಸ್ಟ್ರೇಶನ್	೧೫೦೩	,,	೧೫೦೩	,,
ಮೋಟಾರ ಟ್ಯಾಕ್ಸ	೩೭೭೩	,,	೩೮೯೧	,,
ಇತರ ಟ್ಯಾಕ್ಸುಗಳು	೪೭೩೩	,,	೪೭೯೦	,,
ಇರಿಗೇಶನ್ ಮುಂ.	೧೨೫೦	,,	೨೦೩೭	,,
ವಿದ್ಯಾಖಾತೆ	೧೫೧೪	,,	೧೪೭೨	,,

ಮುಖ್ಯ ಬಾಬುಗಳ ಖರ್ಚಿನ ವಿವರ.

ಭೂಕಂದಾಯ	೪೬೦೩	ಸಾವಿರ	೪೪೧೨	ಸಾವಿರ
ಅಬಕಾರಿ	೩೯೬೨	,,	೪೧೬೨	,,
ಸ್ಟ್ಯಾಂಪ	೧೯೪	,,	೨೦೪	,,
ಫಾರೆಸ್ಟ	೨೬೯೧	,,	೨೯೨೯	,,
ರೆಜಿಸ್ಟ್ರೇಶನ್	೫೬೬	,,	೫೭೫	,,
ಮೋಟಾರ ಟ್ಯಾಕ್ಸ	೧೫೧೬	,,	೧೩೭೦	,,

ಇತರ ಟ್ಯಾಕ್ಸುಗಳು	೧೮೯೦	,,	೧೭೨೫	,,
ಇರಿಗೇಶನ್ ಮುಂ.	೪೨೦೨	,,	೪೧೪೯	,,
ವಿದ್ಯಾಖಾತೆ	೧೬೧೧೪	,,	೧೫೯೬೬	,,

ಈ ವರ್ಷದ ಅಂದಾಜಪತ್ರಿಕೆಯನ್ನು ನಿರೀಕ್ಷಣೆಮಾಡಿದ ತಜ್ಞರೊಬ್ಬರು ಈ ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. " ಹುಲ್ಲಬನ್ನಿಯನ್ನು ತೆಗೆದುಹಾಕುವದು, ಭೂಕಂದಾಯವನ್ನು ಇಳಿಸುವದು, ಬಾಕಿ ಉಳಿದ ಹಪ್ತೆಯ ರಕಮನ್ನುಸೂಟಬಿಡುವದು, ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನೆಕೊಡುವದು, ನೀರಿನ ಪೂರೈಕೆಯ ವ್ಯವಸ್ಥೆ ಮಾಡುವದು, ಪ್ರಬುದ್ಧರ ಶಿಕ್ಷಣ, ಶಾರೀರಿಕಶಿಕ್ಷಣ, ಹಿಂದುಳಿದ ವರ್ಗಗಳ ಶಿಕ್ಷಣ ಇವುಗಳಿಗೆ ಪ್ರೋತ್ಸಾಹ ಮುಂತಾದ ಅನೇಕ ಜನ ಹಿತದ ಕಾರ್ಯಗಳಿಗೆ ಇದರಲ್ಲಿ ಅನುಕೂಲ್ಯವಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅತ್ಯಂತ ಉತ್ತಮ ಅಂದಾಜ ಪತ್ರಿಕೆಯೆಂದು ಹೇಳಬಹುದು. "

" ಈ ಅಂದಾಜಪತ್ರಿಕೆಯನ್ನು ತಯಾರಿಸಿದ ಶ್ರೇಯಸ್ಸು ಬಹ್ವಂಶದಿಂದ ನಾಮದಾರ ಲಠ್ಠೆಯವರಿಗೆ ಸಲ್ಲುವದು. ಇವರು ತೀರ ಅಲ್ಪಾವಧಿಯಲ್ಲಿ ಪ್ರಾಂತದ ಆರ್ಥಿಕ ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸಿ ತಮ್ಮ ಮುತ್ಸದ್ದಿತನವನ್ನು ತೋರಿಸಿರುವರು. ಖರ್ಚನ್ನು ಕಡಿಮೆಮಾಡುವದು, ಕರಭಾರವನ್ನು ಇಳಿಸುವದು, ಸಾರ್ವಜನಿಕ ಉದ್ಯೋಗಗಳ ಬೆಳೆವಣಿಗೆ ಮೊದಲಾದ ಲೋಕಹಿತದ ಕಾರ್ಯಗಳಿಂದ ಈ ಅಂದಾಜಪತ್ರಿಕೆಯು ಜನಪ್ರಿಯವಾಗಿದೆ. ಆದ್ದರಿಂದ ನಾಮದಾರ ಲಠ್ಠೆಯವರ ಬಗ್ಗೆ ನಾವು ಹೆಮ್ಮೆ ಪಡುವದು ಸ್ವಾಭಾವಿಕವಾಗಿದೆ" ಇತ್ಯಾದಿ.

ಪಂಜಾಬದೊಳಗಿನ ಹಳ್ಳಿಯ ಶಾಲೆಗಳು

ಹಳ್ಳಿಯ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಶಿಕ್ಷಕರ ಕಾರ್ಯಗಳಲ್ಲಿ ಸಮಾವೇಶವಾಗುವ ಅತಿಮಹತ್ವದ್ದೂ ಹೆಚ್ಚು ಸ್ಥಿರವಾದ ಪರಿಣಾಮವನ್ನುಂಟು ಮಾಡುವಂಥದೂ ಆದ ಇನ್ನೊಂದು ಕಾರ್ಯದ ವಿಷಯವಾಗಿ ಇಲ್ಲಿ ವಿವೇಚನೆ ಮಾಡಲಾಗಿದೆ.

ಪಂಜಾಬ ಪ್ರಾಂತದಲ್ಲಿ ಹಳ್ಳಿಗಳ ಸುಧಾರಣೆಯ ಕಾರ್ಯವು ಬಹುಕಾಲದಿಂದೆಯೇ ಪ್ರಾರಂಭವಾಗಿದೆ. ಅದಕ್ಕಾಗಿ ಬೇರೆ ಬೇರೆ ಅಧಿಕಾರಿಗಳೂ ನಿಯಮಿಸ

ಲ್ಪಟ್ಟಿದ್ದಾರೆ. ಗ್ರಾಮ ಸುಧಾರಣೆಯ ಕಾರ್ಯಕ್ಕಾಗಿಯೇ ಕಮಿಶನರ ಅಧಿಕಾರದಲ್ಲಿ ನಿಯುಕ್ತರಾಗಿದ್ದ ಶ್ರೀ. ಎಫ್. ಎಲ್. ಬ್ರೇಯನ್ (I. C. S.) ಇವರು ಬರೆದ ಒಂದು ಲೇಖನವು ಇದೇ ಅಗಷ್ಟ ತಿಂಗಳ ಮೂರನೆಯ ತಾರೀಖಿನ ದಿನ ಟೋಕಿಯೋ ನಗರದಲ್ಲಿ ನೆರೆದ ಜಗತ್ತಿನ ವಿದ್ಯಾಸುಧಾರಣೆಯ ವಿಷಯವನ್ನು ಕೈಕೊಂಡಿರುವ ಒಂದು ಸಂಸ್ಥೆಯ ದ್ವೈವಾರ್ಷಿಕ ಅಧಿವೇಶನದ ಮುಂದೆ ಓದಲ್ಪಟ್ಟಿತು. ಅದರ ಸಾರಾಂಶವನ್ನು ಇಲ್ಲಿ ಕೊಟ್ಟಿದೆ.

ಜಿಲ್ಲಾ ಸಭೆಗಳು— (District Councils) ಜಾತಿ ವಿಷಯಕ ಜಿಲ್ಲಾ ಸಭೆಯು ಸುಮಾರು ೧೯೨೫—೨೬ರ ಸುಮಾರಕ್ಕೆ ಪ್ರಚಾರದಲ್ಲಿ ಬಂದಿತು. ಈ ಸಭೆಯು ಪ್ರಾರಂಭವಾದ ಕೆಲವು ದಿನಗಳಲ್ಲಿಯೇ ಈ ಸಭೆಗಳ ಚಾಲಕರೂ ವಿದ್ಯಾ ಇಲಾಖೆಯ ಅಧಿಕಾರಿಗಳೂ ಇದರ ಕಾರ್ಯಗಳು ಯಶಸ್ವಿಯಾಗಿ ಜರುಗಲಿಕ್ಕೂ ಗ್ರಾಮ ಸುಧಾರಣೆಯ ಕಾರ್ಯಗಳು ಸುಫಲಕಾರಿಯೂ ಸ್ಥಿರಪರಿಣಾಮಕಾರಿಯಾಗಿಯೂ ನಡೆಯಬೇಕಾದರೆ ಪ್ರಾಥಮಿಕ ಶಾಲಾ ಶಿಕ್ಷಕರೇ ಈ ಕಾರ್ಯದಲ್ಲಿ ಮನಸ್ಸು ತುಂಬಿ ಪ್ರೀತಿಯಿಂದ ಕಾರ್ಯಮಾಡಬೇಕು. ಪ್ರಾಥಮಿಕ ಶಿಕ್ಷಕರನ್ನು ಬಿಟ್ಟರೆ ಅನ್ಯರಿಂದ ಈ ಕಾರ್ಯವು ಎಂದಿಗೂ ಯಶಸ್ವಿಯಾಗಿ ನಡೆಯಲಾರದು; ಪ್ರಾಥಮಿಕ ಶಿಕ್ಷಕರನ್ನು ಈ ಕಾರ್ಯಕ್ಕೆ ತಕ್ಕ ಶಿಕ್ಷಣ ಕೊಟ್ಟು ತಯಾರಿಸಬೇಕು, ಎಂದು ಅಭಿಪ್ರಾಯಪಟ್ಟರು. ಶಿಕ್ಷಕರಿಗೆ ಈ ಬಗೆಯ ಶಿಕ್ಷಣ ಕೊಡದೆ ಈ ಕಾರ್ಯವು ಅಷ್ಟು ಯಶಸ್ವಿಯಾಗಿ ನಡೆಯಲಾರದೆಂದೂ ಅವರ ಅನುಭವಕ್ಕೆ ಬಂದಿತು. ಆದ್ದರಿಂದ ಅವರು ಪ್ರಾಥಮಿಕ ಶಾಲಾ ಶಿಕ್ಷಕರನ್ನೂ ಜಿಲ್ಲೆಯ ವಿದ್ಯಾಧಿಕಾರಿಗಳನ್ನೂ ಕರೆಯಿಸಿಕೊಂಡು ಅವರಿಗೆ ಗ್ರಾಮ ಸುಧಾರಣೆಗೆ ಸಂಬಂಧಿಸಿದ ವಿಷಯಗಳನ್ನೂ ಅವನ್ನು ಆಚರಣೆಯಲ್ಲಿ ತರುವ ದಾರಿಗಳನ್ನೂ ಕಲಿಸುವ ಹೊಸ ವರ್ಗ (Refresher courses) ಗಳನ್ನು ಪ್ರಾರಂಭಿಸಿದರು. ಮತ್ತು ಈ ಮಾರ್ಗದಿಂದ ಅವರಿಗೆ ಗ್ರಾಮಸುಧಾರಣೆಯ ಕಾರ್ಯವನ್ನು ಹೆಚ್ಚು ಹುರುಪಿನಿಂದಲೂ ಹೆಚ್ಚು ಪರಿಣಾಮಕಾರಿಯಾಗಿಯೂ ನಡೆಯಿಸಲು ಯೋಗ್ಯ ಜನರ ಸಮೂಹವೇ ಸಹಾಯಕ್ಕೆ ದೊರೆದು ಅವರ ಕಾರ್ಯಕ್ಕೆ ತುಂಬ ಅನುಕೂಲವಾಯಿತು. ಪಂಜಾಬ ಇಲಾಖೆಯು ಬಹುತರ ಎಲ್ಲ ಜಿಲ್ಲೆಗಳಲ್ಲಿ ಈ ತರದ ಹೊಸ ವರ್ಗಗಳನ್ನು (Refresher courses) ಪ್ರಾರಂಭಿಸಿದರು. ಇಷ್ಟಾದರೂ ಮೆಸರ್ಸ ಸ್ಯಾಂಡರ್ಸನ್ ಮತ್ತು ಪಾರ್ಕಿನ್‌ಸನ್ ಕಂಪನಿಯವರು ಹಳ್ಳಿಯ ಶಾಲೆಗಳ ಶಿಕ್ಷಕರ ಅಭ್ಯಾಸಕ್ರಮದಲ್ಲಿ ಗ್ರಾಮಸುಧಾರಣೆಯ ವಿಷಯಗಳಿಗೆ ಪ್ರಾಮುಖ್ಯತೆಯುಳ್ಳ ಹೊಸದೆ.

ಯೋಜನೆಯನ್ನು ತಯಾರಿಸಿಕೊಡುವವರೆಗೂ ಈ ಕಾರ್ಯಕ್ರಮವು ಸಾಕಾದಷ್ಟು ಯಶಸ್ವಿಯಾಗಿ ನಡೆಯಲಿಲ್ಲ. ಸಾಂಪ್ರತಕ್ಕೆ ಶಿಕ್ಷಕರ ಟ್ರೇನಿಂಗ್ ಸಂಸ್ಥೆಗಳ ಅಭ್ಯಾಸ ಕ್ರಮದಲ್ಲಿ ಈ ಗ್ರಾಮಸುಧಾರಣೆಯ ವಿಷಯಗಳಿಗೆ ತುಂಬ ಪ್ರಾಧಾನ್ಯವುಂಟಾಗಿರುವದು

ಈ ಶಿಕ್ಷಕರ ಟ್ರೇನಿಂಗ್ ಕಾರ್ಯಕ್ರಮದಲ್ಲಿ ಸಹಕಾರ, ಸಾರ್ವಜನಿಕ ಆರೋಗ್ಯ, ಒಕ್ಕಲತನ ಇವುಗಳಿಗೆ ಸಂಬಂಧಿಸಿದ ವಿಷಯಗಳ ಮೂಲತತ್ವಗಳ ಜ್ಞಾನಕ್ಕೂ ಆ ತತ್ವಗಳ ವ್ಯಾವಹಾರಿಕ ಉಪಯೋಗಕ್ಕೂ ಈ ವಿಷಯಗಳಲ್ಲಿ ಪ್ರತ್ಯಕ್ಷ ಕೆಲಸಮಾಡುವದಕ್ಕೂ ಪ್ರಾಧಾನ್ಯವಿರುವದು. ವಿದ್ಯಾರ್ಥಿಗಳಲ್ಲಿ ಥ್ರಿಫ್ಟ್ ಸೊಸಾಯಿಟಿಗಳೂ ರೆಡ್‌ಕ್ರಾಸ ಸೊಸಾಯಿಟಿಗಳೂ ನೆರವೇರಿಸಲ್ಪಟ್ಟಿರುವವು. ಮತ್ತು ಅವನ್ನು ವಿದ್ಯಾರ್ಥಿಗಳು ಕೇವಲ ಸ್ವಂತ ಅನುಭವ ಉತ್ಸಾಹಗಳಿಂದಲೇ ನಡೆಯಿಸುತ್ತಿರುವರು. ವಿದ್ಯಾರ್ಥಿಗಳನ್ನು ಶಿಕ್ಷಕರು ಸಮೀಪದ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಹಳ್ಳಿಯ ದಾರಿಗಳನ್ನು ಸ್ವಚ್ಛಮಾಡುವದು: ಅವುಗಳಿಗೆ ಕಲ್ಲು ಹಾಕಿಸುವದು, ಕಟ್ಟಿ ಕೆಟ್ಟು ಹೋದ ಗಟಾರಗಳನ್ನು ತೋಡಿ ತೆಗೆದು ನೀರು ಸರಿಯಾಗಿ ಹರಿದು ಹೋಗುವಂತೆ ಮಾಡುವದು ಗೊಬ್ಬರದ ಕುಣಿಗಳಗನ್ನು ತಯಾರಿಸುವದು, ತಮ್ಮ ಕೈಯಲ್ಲಿಯೇ ಕಸಬರಿಗೆಗಳನ್ನು ಹಿಡಿದು ರಸ್ತೆಗಳನ್ನು ಉಡುಗುವದು ಮುಂತಾದ ಕೆಲಸಗಳನ್ನು ಮಾಡಿದರು. ಸಮಾಜದ ಅಹಿತಕ್ಕೆ ಕಾರಣವಾದ ಬೇರೆ ಬೇರೆ ವಿಷಯಗಳ ಚಳವಳಿಗಳಲ್ಲಿ ಈ ವಿದ್ಯಾರ್ಥಿಗಳು ಯಾವ ರೀತಿಯಾಗಿ ಕೆಲಸಮಾಡಬೇಕೆಂಬದನ್ನೂ ಹಳ್ಳಿಗರಲ್ಲಿ ಈ ವಿಷಯಗಳಲ್ಲಿ ಹೇಗೆ ಸುಧಾರಣೆ ಮಾಡಬೇಕೆಂಬದನ್ನೂ ಮನೆಗಳ ಕಟ್ಟಡದ ರಚನೆ, ಕುಡಿಯುವದಕ್ಕೆ ಒಳ್ಳೆಯ ನೀರಿನ ಪೂರೈಕೆ, ಮುಂತಾದ ವಿಷಯಗಳನ್ನೂ ತಿಳಿಯ ಹೇಳಿ ಆರೋಗ್ಯದ ವಿಷಯದಲ್ಲಿ ಜನರಿಗಿರುವ ಅಜ್ಞಾನ ಅನಾದರಗಳನ್ನು ದೂರಮಾಡುವ ಕಾರ್ಯವನ್ನೂ ಈ ವಿದ್ಯಾರ್ಥಿಗಳು ತಾವು ಕಲಿತು ಹಳ್ಳಿಗರಿಗೆ ಕಲಿಸಲಿಕ್ಕೆ ಯೋಗ್ಯರಾಗುವಂತೆ ಮಾಡಲಾಗುವದು.

ಶ್ರಮಜೀವನದ ಮಹತ್ವ—ಈ ಶಿಕ್ಷಕರ ಟ್ರೇನಿಂಗ್ ಕಾರ್ಯಕ್ರಮದಲ್ಲಿ ಇನ್ನೂ ಒಂದು ಅತಿ ಮಹತ್ವದ ಮಾತಿನ ಸೇರ್ಪಡೆಯಾಗುವದು. ಮುಂದೆ ಹಳ್ಳಿಯಲ್ಲಿ ಶಿಕ್ಷಕರಾಗಿ ಹೋಗಿ ಕೆಲಸಮಾಡಬೇಕಾಗಿರುವ ವಿದ್ಯಾರ್ಥಿಗಳಿಗೆ ಮೈಮುರಿ ದುಡಿದು ಹೊಟ್ಟೆತುಂಬಿಕೊಳ್ಳುವದರಲ್ಲಿ ಗೌರವವೂ ಶಾಲೆಯ ಕೆಲಸವಿಲ್ಲದ ವೇಳೆಯ ಸದುಪಯೋಗವೂ ಕಲಿಸಲ್ಪಡುವದು ಆವಶ್ಯಕವಾಗಿದೆ. ಇದರಲ್ಲಿ ತಾವು ಕೆಲಸಮಾಡುತ್ತಿರುವ ಹಳ್ಳಿಗಳ ನಿವಾಸಿಗಳ ಪ್ರೀತಿಯನ್ನು

ದೊರಕಿಸಿಕೊಳ್ಳುವದನ್ನೂ ಅವರಲ್ಲಿ ಮಾನಮಾನ್ಯತೆಗಳನ್ನು ಹೊಂದುವದಕ್ಕೂ ಹಳ್ಳಿಯ ಶಿಕ್ಷಕರಿಗೆ ತುಂಬ ಅನುಕೂಲವಾಗುವದು ಒಕ್ಕಲತನ, ತೋಟದ ಕೆಲಸ, ಹಣ್ಣು ಹೂಗಳನ್ನು ಬೆಳೆಯಿಸುವದು, ದನ ಕುರಿಗಳನ್ನೂ ಕೋಳಿಗಳನ್ನೂ ಸಾಕುವದು, ಮತ್ತೆ ಕೆಲವು ಕೈಗಾರಿಕೆಗಳು ಇವು ಹಳ್ಳಿಯ ಶಾಲೆಗಳ ಶಿಕ್ಷಕರ ಟ್ರೇನಿಂಗಿನಲ್ಲಿಯ ವ್ಯವಸಾಯ ಶಿಕ್ಷಣದ ವಿಷಯಗಳಾಗಿವೆ. ಆದುದರಿಂದ ಈ ಶಿಕ್ಷಕರು ಟ್ರೇನಿಂಗ್ ಸಂಸ್ಥೆಗಳಲ್ಲಿ (Normal Schools) ರುವಾಗ ತಮ್ಮ ಅರಿವೆ ಅಂಚಡಿಗಳನ್ನು ತಾವೇ ತಯಾರಿಸಿಕೊಳ್ಳುವದು, ದುರಸ್ತಿ ಮಾಡಿಕೊಳ್ಳುವದು, ಒಗೆದು ಮಡಿಮಾಡಿಕೊಳ್ಳುವದು, ಅಡುಗೆಮಾಡಿಕೊಳ್ಳುವದು, ತಮ್ಮ ಮೇಜು ಖುರ್ಚಿ ಮಂಚ ಮುಂತಾದ ಉಪಕರಣಗಳನ್ನು ರಿಪೇರಿ ಮಾಡಿಕೊಳ್ಳುವದು, ಚಿಕ್ಕ ಪುಟ್ಟ ಪಂಜೆ ಮುಂತಾದವುಗಳನ್ನು ನೆಯ್ದುಕೊಳ್ಳುವದು, ಹಗ್ಗಗಳನ್ನು ಹೊಸೆಯುವದು, ಪುಸ್ತಕಗಳನ್ನು ಬಾಯಿಂಡ್ ಮಾಡಿಕೊಳ್ಳುವದು ಮುಂತಾದ ತಮ್ಮ ನಿತ್ಯದ ವ್ಯವಹಾರದ ಕೆಲಸಗಳನ್ನು ತಾವೇ ಮಾಡಿಕೊಳ್ಳುವರೆಂದು ಹೇಳಿದರೆ ತಪ್ಪಾಗದು. ಈ ಶಿಕ್ಷಕರ ಟ್ರೇನಿಂಗ್ ಕ್ರಮದಲ್ಲಿ ಸ್ಕೌಟಿಂಗ್ ಮತ್ತು ಪ್ರಥಮ ಚಿಕಿತ್ಸೆಗಳ ವಿಷಯಗಳು ಕೂಡ ಕಲಿಸಲ್ಪಡುವವು.

ಈ ತರದ ಶಿಕ್ಷಣದಿಂದ ಅವರ ಮನಸ್ಸಿನ ಮೇಲಾಗುವ ಪರಿಣಾಮದಿಂದಲೂ ಶಾರೀರಕ ಕೆಲಸ ಮಾಡುವ ಯೋಗ್ಯತೆಯುಂಟಾಗುವದರಿಂದಲೂ ಈ ಹಳ್ಳಿಯ ಶಾಲೆಗಳ ಶಿಕ್ಷಕರು ಮೊದಲು ಹಳ್ಳಿಗಳಿಂದಲೇ ಬಂದವರಾಗಿರುವದರಿಂದಲೂ ಅವರು ತಿರುಗಿ ಹಳ್ಳಿಗಳಿಗೆ ಹೋದ ಬಳಿಕ ಮತ್ತೆ ಹಳ್ಳಿಗಳ ನಿವಾಸಿಗಳೇ ಆಗಿ ಬಿಡುವರಲ್ಲದೆ ಹಳ್ಳಿಯ ಜನರಲ್ಲಿ ಸಮ್ಮಿಶ್ರವಾಗಿ ಕಲೆತು ಕೆಲಸಮಾಡಿ ಅವರ ಉತ್ಕರ್ಷಕ್ಕೆ ಕಾರಣರಾಗುವರು. ಹಳ್ಳಿಗಳ ನಿವಾಸಿಗಳಲ್ಲಿ ಈ ವಿಷಯಗಳಲ್ಲಿ ಯೋಗ್ಯ ಸುಧಾರಣೆ ಮಾಡಿ ಅವರ ಪುರೋವೃದ್ಧಿಗೆ ನೆರವಾಗುವರು. ಕಳೆದ ಹತ್ತು ಅಥವಾ ತುಸು ಹೆಚ್ಚು ವರ್ಷಗಳ ಅನುಭವದಿಂದ ಈ ಮಾತು ಚೆನ್ನಾಗಿ ನಿದರ್ಶನಕ್ಕೆ ಬಂದಿರುವದು. ಇವನ್ನು ಮೊಟ್ಟ ಮೊದಲು ಪ್ರಾರಂಭಿಸಿದವರ ಆಶೆ ಆಕಾಂಕ್ಷೆಗಳು ಚೆನ್ನಾಗಿ ನೆರವೇರಿದವೆಂದು ಹೇಳಲು ಏನೂ ಅಡ್ಡಿಯಿಲ್ಲ.

ಪ್ರತ್ಯಕ್ಷ ಕೆಲಸ ಮಾಡುವದು— ಟ್ರೇನಿಂಗ್ ಸಂಸ್ಥೆಗಳ ಅಭ್ಯಾಸಕ್ರಮದಲ್ಲಿ ಗ್ರಾಮ ಸುಧಾರಣೆ, ಸಾಮಾಜಿಕ ಕಾರ್ಯಗಳು ಇವುಗಳಿಗೇ ಪ್ರಾಧಾನ್ಯವಿರುವದೆಂದು ಮೇಲೆ ಹೇಳಿದೆಯಷ್ಟೇ ? ಅಲ್ಲಿ ಒಕ್ಕಲತನ, ಸಾರ್ವಜನಿಕ

ಆರೋಗ್ಯ, ಸಹಕಾರ ಮತ್ತು ಹಳ್ಳಿಯ ಜನರ ಜೀವನ ಅವರ ಸಾಂಪತ್ತಿಕ ಸುಧಾರಣೆ ಈ ವಿಷಯಗಳ ಮೂಲತತ್ವಗಳಿಗೆ ಸಂಬಂಧಿಸಿದ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ಮನನಮಾಡಿಕೊಡುವದಲ್ಲದೆ ಆ ಜ್ಞಾನವನ್ನು ವ್ಯವಹಾರದಲ್ಲಿ ಹೇಗೆ ಉಪಯೋಗಮಾಡಿಕೊಳ್ಳಬೇಕೆಂಬದನ್ನೂ ಅವರಿಗೆ ಕಲಿಸಿಕೊಡುವರು. ಶಾಲೆಗಳಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ತಾತ್ಪ್ರಿಕ ವಿವೇಚನೆಯನ್ನು ಕಲಿಸುವದಲ್ಲದೆ ಅವರನ್ನು ನೆರೆಯ ಹಳ್ಳಿಗಳಿಗೆ ಕರೆದೊಯ್ದು ಅದನ್ನು ಪ್ರತ್ಯಕ್ಷ ಪ್ರಚಾರದಲ್ಲಿ ಹೇಗೆ ತರಬೇಕೆಂಬದನ್ನೂ ಕಲಿಸಲಾಗುವದು. ಮಲೇರಿಯಾ, ಕಾಲರಾ, ಮೈಲಿಬೇನೆ, ಪ್ಲೇಗು ಮುಂತಾದ ಸುಂಕುರೋಗಗಳು ನೆರೆಯ ಹಳ್ಳಿಗಳಲ್ಲಿ ಹಬ್ಬಿದಾಗ ಟ್ರೇನಿಂಗ್ ಸಂಸ್ಥೆಗಳಲ್ಲಿರುವ ಶಿಕ್ಷಕರು ಅಲ್ಲಿಗೆ ಹೋಗಿ ಕ್ವಿನೀನುಗಳನ್ನು ಉಪಯೋಗಿಸುವದು, ನೀರಿನಲ್ಲಿ ಕ್ಲೋರೀನ್ ಹಾಕಿ ರೋಗ ಜನಕ ಕ್ರಿಮಿಗಳನ್ನು ನಾಶಪಡಿಸುವದು, ವ್ಯಾಕ್ಸಿನೇಶನ್, ಇನಾಕ್ಯುಲೇಶನ್ ಮಾಡಿಸಿಕೊಂಡು ತಮ್ಮ ಉದಾಹರಣೆಗಳಿಂದ ಹಳ್ಳಿಯ ನಿವಾಸಿಗಳನ್ನು ಪ್ರೋತ್ಸಾಹಿಸುವದು ಮುಂತಾದ ಉಪಾಯಗಳಿಂದ ಆ ಸುಂಕು ರೋಗಗಳ ಪ್ರಸಾರವಾಗದಂತೆ ಮಾಡುವದು, ಒಕ್ಕಲತನದ ಕೆಲಸಗಳನ್ನು ಸುಪ್ರಯೋಗವಾಗಿ ಹಳ್ಳಿಗರ ಮುಂದೆ ಇಟ್ಟು ಅವುಗಳ ಮಹತ್ವವನ್ನು ತಿಳಿಯಹೇಳುವದು, ಹೊಸ ಹೊಸ ತರದ ಒಕ್ಕಲತನದ ಉಪಕರಣಗಳನ್ನೂ ಅವುಗಳ ಉಪಯೋಗಗಳನ್ನೂ ತಿಳಿಸಿಕೊಡುವದು, ಸುಧಾರಿಸಿದ ಬೀಜಹಿಡಿಯುವ ಕ್ರಮವನ್ನು ವಿವರಿಸುವದು ಮುಂತಾದ ಕಾರ್ಯಗಳನ್ನು ಹಳ್ಳಿಗಳ ನಿವಾಸಿಗಳಿಗೆ ತಿಳಿಸಿಕೊಡುವದಕ್ಕಾಗಿ ವರ್ಷಕ್ಕೊಮ್ಮೆ 'ಒಕ್ಕಲಿಗರ ಸಪ್ತಾಹ'ವೆಂಬ ವಿಶಿಷ್ಟ ದಿನಗಳನ್ನು ಗೊತ್ತುಪಡಿಸಿಕೊಂಡು ಸುತ್ತಲಿನ ಹಳ್ಳಿಗಳ ನಿವಾಸಿಗಳನ್ನು ಕಲೆಹಾಕಿ ಈ ವಿಷಯಕ್ಕೆ ಸಂಬಂಧಿಸಿದ ಹಲವು ಮಹತ್ವದ ವಿಚಾರಗಳನ್ನು ಅವರಿಗೆ ಸಪ್ರಯೋಗವಾಗಿ ತಿಳಿಸಿಕೊಡುವ ಕೆಲಸವನ್ನು ಟ್ರೇನಿಂಗ್ ಸಂಸ್ಥೆಗಳೊಳಗಿನ ವಿದ್ಯಾರ್ಥಿಗಳೂ ಶಿಕ್ಷಕರೂ ಮಾಡುತ್ತಿರುವರು. ಈ ವಿದ್ಯಾರ್ಥಿ ಶಿಕ್ಷಕರ ನೆರವಿನಿಂದ ಹಳ್ಳಿಗಳಲ್ಲಿಯ ಹೆಣ್ಣುಮಕ್ಕಳ ಹಾಗು ಗಂಡಸರ ಸಹಕಾರೀ ಸಂಘಗಳು ನಡೆಯಿಸಲ್ಪಡುವವು. ಹಳ್ಳಿಗಳಲ್ಲಿ ಶಾರೀರಿಕ ಶಿಕ್ಷಣಕ್ಕೆ ಸಂಬಂಧಿಸಿದ ತರತರದ ಆಟಗಳ ಯೋಜನೆಯಾಗಿರುವದು. ಮತ್ತು ಈ ಶಿಕ್ಷಕರು ಹಳ್ಳಿಯ ಗೌಡ ಕುಲಕರ್ಣಿಯರ ನೆರವಿನಿಂದ ವರ್ಷಕ್ಕೊಮ್ಮೆ ಇಂಥ ಅನೇಕ ಹಳ್ಳಿಗಳ ನಿವಾಸಿಗಳ ನಡುವೆ ಪಂದ್ಯಾಟಗಳನ್ನು ನೆರವೇರಿಸುವರು. ಮೇಲ್ತರಗತಿಯ ಬೀಜಗಳನ್ನು ಹಿಡಿದಿಡುವದು, ಬಿತ್ತುವ ತತಿಯಲ್ಲಿ ಅವನ್ನು ಬಿತ್ತಿ ಬೆಳೆಯಿಸುವದು, ಟೊಂಗೆಗಳನ್ನು ಕತ್ತರಿಸಿ ಹಚ್ಚಿ ಬೆಳೆಯಿಸುವದು, ಕಲಮು ಮಾಡುವದು

ಮುಂತಾದ ಕೆಲಸಗಳನ್ನೂ ಇವರು ಕಲಿಸುತ್ತಿರುವರು. ಇವರು ಒಳ್ಳೆಯತರದ ತತ್ತಿಗಳನ್ನು ಅಗ್ಗದ ಬೆಲೆಗೆ ಒದಗಿಸಿಕೊಟ್ಟು ಕೋಳಿಗಳನ್ನು ಸಾಕುವ ವ್ಯವಸಾಯವನ್ನು ಮಾಡುವದಕ್ಕೂ ಹಳ್ಳಿಗರನ್ನು ಪ್ರೋತ್ಸಾಹಿಸುತ್ತಿರುವರು.

ಪ್ರಬುದ್ಧರ ಶಿಕ್ಷಣ ಶಾಲೆಗಳು—ಈ ವಿದ್ಯಾರ್ಥಿಗಳು ಟ್ರೇನಿಂಗ್ ಸ್ಕೂಲಿನ ಸಮೀಪದಲ್ಲಿ ವಾಸಿಸುವ ಜನರಲ್ಲಿ ಪ್ರಬುದ್ಧರಾದವರಿಗೆ ಓದುಬರೆಹಗಳನ್ನು ಕಲಿಸುವ ಸಾಲೆಗಳನ್ನು ನಡೆಯಿಸುವರು. ಸಂತೆಯ ದಿನಗಳಲ್ಲಿ ಅಥವಾ ಜಾತ್ರೆಯ ವೇಳೆಯಲ್ಲಿ ಬಹುಜನರು ನೆರೆದಿರುವಾಗ ಇವರು ಅಲ್ಲಿಗೆ ಹೋಗಿ ಟ್ರೇನಿಂಗ್ ಸ್ಕೂಲಿನ ಶಿಕ್ಷಕರು ರಚಿಸಿ ಪ್ರಕಟಿಸಿರುವ ಚಿಕ್ಕದೊಡ್ಡ ನಾಟಕಗಳನ್ನು ಅಭಿನಯಿಸಿ ತೋರಿಸುವರು. ಒಟ್ಟಿನಮೇಲೆ ಈ ಟ್ರೇನಿಂಗ್ ಸಂಸ್ಥೆಗಳಲ್ಲಿರುವ ವಿದ್ಯಾರ್ಥಿಗಳು ಗ್ರಾಮಸುಧಾರಣೆಯ ಮೂಲತತ್ವಗಳನ್ನು ತಾತ್ಪಿಕವಾಗಿ ಅಭ್ಯಾಸಮಾಡುವದಲ್ಲದೆ ಟ್ರೇನಿಂಗ್ ಸಂಸ್ಥೆಯಲ್ಲಿರುವಾಗಲೇ ಹಳ್ಳಿಗಳಿಗೆಹೋಗಿ ಈ ತತ್ವಗಳನ್ನು ಪ್ರತ್ಯಕ್ಷ ಪ್ರಚಾರದಲ್ಲಿ ತರುವ ಕಾರ್ಯವನ್ನೂ ಮಾಡುತ್ತಿರುವರು. ಮತ್ತು ಮುಂದೆ ಇವರು ಹಳ್ಳಿಯ ಶಾಲೆಗಳ ಶಿಕ್ಷಕರಾಗಿ ಹೋದಬಳಿಕ ಈ ಕಾರ್ಯಗಳನ್ನು ಹೀಗೆಯೇ ಮುಂದೆ ಸಾಗಿಸುವರೆಂದು ತಿಳಿಯಲ್ಪಡುವದು. ಅಲ್ಲದೆ ಈ ಬಗೆಯ ಕಾರ್ಯಗಳಿಂದ ಅವರು ಕಲಿಯುವ ವಿಷಯಗಳ ತಾತ್ವಿಕ ವಿವೇಚನೆ ಅವುಗಳ ವ್ಯಾವಹಾರಿಕ ಉಪಯೋಗ ಇವೆರಡೂ ಅವರಿಗೆ ಚೆನ್ನಾಗಿ ಅವಗತವಾಗುವದು; ಅಲ್ಲದೆ ಮುಂದೆ ಪ್ರತ್ಯಕ್ಷ ಕಾರ್ಯಾರಂಭಮಾಡಿದಾಗ ಒದಗಬಹುದಾದ ಅಡಚಣಿಗಳನ್ನು ತಿಳಿದುಕೊಳ್ಳಲಿಕ್ಕೂ ಅವುಗಳ ನಿವಾರಣೋಪಾಯಗಳನ್ನು ಕಲ್ಪಿಸಿಕೊಳ್ಳಲಿಕ್ಕೂ ಇದರಿಂದ ತುಂಬಾ ಸಹಾಯವಾಗುವದು. ಮೇಲ್ತರಗತಿಯ ಶಾಲೆಗಳಲ್ಲಿಯ ವಿದ್ಯಾರ್ಥಿಗಳಂತೆ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳು ಈಬಗೆಯ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲವೆಂಬದಂತೂ ಸಹಜವೇ ಸರಿ. ಆದರೂ ಅವರು ಗುಂಪುಗುಂಪಾಗಿ ಪೆರೆವಣಿಗಳನ್ನು ಹೊರಡಿಸಿ ಹಾಡುತ್ತ ತಿರುಗಾಡಿ ಜನರಲ್ಲಿ ಆರೋಗ್ಯವಿಷಯಕ ಮತ್ತು ವಿದ್ಯಾವಿಷಯಕ ವಿಚಾರಗಳನ್ನು ಪ್ರಸಾರಮಾಡಲು ನೆರವಾಗುತ್ತಿರುವರು.

ವಿದ್ಯಾರ್ಥಿಗಳ ನಾಟಕ ಸಂಸ್ಥೆಗಳು—ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ನಾಟಕಸಂಸ್ಥೆಗಳಿರುವವು. ಈ ಸಂಸ್ಥೆಗಳು ಆಡುವ ಚಿಕ್ಕದೊಡ್ಡ ನಾಟಕಗಳಿಂದ ಜನರಲ್ಲಿ ವಿದ್ಯಾಪ್ರಸಾರವಾಗುವದಲ್ಲದೆ ಇವುಗಳಿಂದ ಜನರಿಗೆ ತಾತ್ಕಾಲಿಕ ಮನೋರಂಜನೆಯೂ ಆಗುವದು. ಈ ದೃಷ್ಟಿಯಲ್ಲಿ ಇವು ತುಂಬ ಪರಿಣಾಮಕಾರಿಯಾಗಿರುವವು. ಈ ಬಾಲಕರು ಹಳ್ಳಿಗಳಲ್ಲಿ ಸಂಚಾರಮಾಡಿ ಕ್ವೀನೀನ್ ಪೋಟಾಸಿಯಮ್

ರಮಾಂಗೆನೇಟ ಮುಂತಾದವುಗಳನ್ನು ಹಂಚುವ ಕೆಲಸವನ್ನು ಮಾಡುವರು. ಇವರು ಶಾಲೆಯ ಆವಾರದಲ್ಲಿ ಸ್ಥಳದ ಅನುಕೂಲತೆಯಿದ್ದರೆ ಹೂದೋಟಗಳನ್ನು ಮಾಡುವರು. ಆ ತೋಟಗಳಲ್ಲಿ ಅನೇಕ ತರದ ಅಡವಿಯ ಹೂಗಿಡಗಳನ್ನೂ ನಿಯತಕಾಲಿಕವಾಗಿ ಬೆಳೆಯುವ ಹೂವಿನ ಗಿಡಬಳ್ಳಿಗಳನ್ನೂ ಬೆಳೆಯಿಸುವರು. ಹಲಕೆಲವು ಶಾಲೆಗಳಲ್ಲಿ ಬುಕ್ ಬಾಯಿಂಡಿಂಗ್, ಮಶಿಮಾಡುವದು, ಸಾಬಾಣಮಾಡುವದು ಮುಂತಾದ ಚಿಕ್ಕಪುಟ್ಟ ವ್ಯವಸಾಯಗಳನ್ನು ಕಲಿಸುವ ಕ್ರಮವೂ ಇರುವದು. ಇಂಥ ಹಳ್ಳಿಗಳಲ್ಲಿ ಈ ವ್ಯವಸಾಯಗಳು ತುಂಬ ಜನಪ್ರಿಯವಾಗಿರುವವು.

ಹಳ್ಳಿಯ ಶಾಲೆಗಳ ಶಿಕ್ಷಕರು ಆಟನೋಟಗಳು ಮೊದಲಾದವುಗಳ ಮೂಲಕವಾಗಿ ಹಳ್ಳಿಗಳೊಳಗಿನ ತರುಣರೊಡನೆ ಕೂಡಿ ನಡೆಯುವರು. ಮತ್ತು ಆರೋಗ್ಯಕ್ಷಲತನದ ಸುಧಾರಣೆ, ವಾಚನಾಲಯಗಳ ಯೋಜನೆ, ಆಯಾ ಜನರ ವೈಕ್ತಿ ವಿಷಯಕ ಸುಖದುಃಖಗಳು, ಅನುವು ಆಪತ್ತುಗಳು ಇವುಗಳಲ್ಲಿ ಒಂದರ ಅಥವಾ ಅನೇಕ ವಿಷಯಗಳಮೂಲಕ ಊರ ಪ್ರಬುದ್ಧ ಜನರಲ್ಲಿ ಬಳಕೆಮಾಡಿ ನಡೆಯುವರು.

ಹಳ್ಳಿಯ ಕೇಂದ್ರಗಳು— ಸುತ್ತುಮುತ್ತಲಿನ ನಾಲ್ಕೈಂಟುಹಳ್ಳಿಗಳ ನಡುವಿರುವ ಚಿಕ್ಕ ಹೈಸ್ಕೂಲಿನ ಅಥವಾ ದೊಡ್ಡ ಪ್ರಾಥಮಿಕ ಶಾಲೆಗಳ ಶಿಕ್ಷಕರು ಕೈಕೊಳ್ಳಬಹುದಾದ ಗ್ರಾಮಸುಧಾರಣೆಯ ಕಾರ್ಯಗಳನ್ನು ಇಂಥ ಕೇಂದ್ರಗಳಲ್ಲಿ ನಡೆಯಿಸಲು ತುಂಬಾ ಅನುಕೂಲವಿರುವದು. ಇಂಥ ಶಾಲೆಗಳಲ್ಲಿ ಹೆಚ್ಚು ಜನ ಶಿಕ್ಷಕರಿರುವದರಿಂದಲೂ ಪ್ರಬುದ್ಧ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿಗೆ ಇರುವದರಿಂದಲೂ ಇವರಿಗೆ ಈ ಬಗೆಯ ಗ್ರಾಮಸುಧಾರಣೆಯ ಕಾರ್ಯಗಳನ್ನು ನೆರವೇರಿಸಲು ಚಿಕ್ಕಹಳ್ಳಿಯ ಶಾಲೆಗಳ ಶಿಕ್ಷಕರಿಗಿಂತಲೂ ಹೆಚ್ಚಾಗಿ ಅನುಕೂಲವಿರುವ ಸಂಬದನ್ನು ಹೇಳುವಕಾರಣವಿಲ್ಲ. ಆದ್ದರಿಂದ ಇಂಥ ಶಾಲೆಗಳು ತಮ್ಮ ಹಳ್ಳಿಯಲ್ಲಿಯೂ ನೆರೆಯ ಹಳ್ಳಿಗಳಲ್ಲಿಯೂ ಮೇಲೆ ಹೇಳಿದಂಥ ಕಾರ್ಯಗಳನ್ನು ಹೆಚ್ಚು ದೊಡ್ಡಪ್ರಮಾಣದಿಂದಲೂ ಹೆಚ್ಚು ಯಶಸ್ವಿಯಾಗಿಯೂ ಮಾಡುತ್ತಿರುವವು. ಇವಕ್ಕೆ ಸಂಬಂಧಿಸಿದ ಪ್ರಚಾರ ಕಾರ್ಯಗಳನ್ನು ಪೆರೆವಣಿಗೆ, ಚಿಕ್ಕದೊಡ್ಡ ನಾಟಕಗಳನ್ನು ಅಭಿನಯಿಸುವದು, ಗೋಡೆಗಳಿಗೆ ದೊಡ್ಡದೊಡ್ಡ ಪಟಗಳನ್ನು ಅಂಟಿಸುವದು ಮುಂತಾದ ಸಾಧನಗಳ ಮೂಲಕ ನೆರವೇರಿಸುವರು. ಮ್ಯಾಜಿಕ್ ಲ್ಯಾಂಟರ್ನದ ಸಹಾಯದಿಂದ ಚಿತ್ರಗಳನ್ನು ತೋರಿಸಿ ಉಪನ್ಯಾಸಗಳನ್ನು ಮಾಡುವರು. ಸುಂಕುರೋಗಗಳು ಹಬ್ಬಿದಾಗ ಜನರಿಗೆ ಉಪದೇಶಮಾಡಿ ಇನಾಕ್ಯುಲೇಶನ್

ಮುಂತಾದ ಉಪಾಯಗಳಿಂದ ಅವು ಹಬ್ಬದಂತೆ ಮಾಡಲು ಪ್ರಯತ್ನಿಸುವರು; ಜನರನ್ನು ಈ ಕಾರ್ಯಕ್ಕೆ ಉತ್ತೇಜನಗೊಳಿಸುವರು. ಹಳ್ಳಿಗಳಲ್ಲಿಯ ಗೊಬ್ಬರದ ಕುಣಿಗಳು, ಮಲಮೂತ್ರವಿಸರ್ಜನೆಮಾಡುವ ತಗ್ಗುಗಳು ಮುಂತಾದವುಗಳನ್ನು ತೋಡಿಕೊಡುವ ಕೆಲಸಗಳನ್ನೂ ಕೂಡ ಅನೇಕಸಾರೆ ಇಂಥ ಶಾಲೆಗಳ ವಿದ್ಯಾರ್ಥಿಗಳು ಮಾಡುವರು. ಮನೆಗಳಿಗೆ ಹೊಗೆಯ ಕಿಂಡಿಗಳನ್ನು ಹಚ್ಚುವದು, ಓಣಿ ಬೀದಿಗಳನ್ನು ಸ್ವಚ್ಛವಾಗಿಡುವದು, ಮಾರ್ಗಗಳನ್ನು ಕಲ್ಲುಹಾಸಿ ಗಟ್ಟಿಮಾಡುವದು, ಸಾರ್ವಜನಿಕ ಬಾವಿಗಳಿಗೆ ಕಟ್ಟೆಕಟ್ಟಿ ಸುತ್ತಲೂ ಬಿದ್ದ ನೀರು ಹರಿದುಹೋಗುವಂತೆ ಮಾಡುವದು ಇವೇ ಮೊದಲಾದ ಕೆಲಸಗಳನ್ನೂ ಇವರು ಮಾಡುವರು. ಶಾಲೆಗಳೊಳಗಿನ ಸ್ಕೌಟ ಟ್ರೂಪಿನವರು ಊರಸಂತೆ ಜಾತ್ರೆಗಳ ವೇಳೆಯಲ್ಲಿ ಜನರಿಗೆ ಬಗೆಬಗೆಯಿಂದ ನೆರವಾಗುವರು. ನಾನಾತರದ ಆಟನೋಟಗಳ ಮೂಲಕ ಬೇರೆಬೇರೆ ಹಳ್ಳಿಗಳ ಜನರಲ್ಲಿ ಬಳಕೆಯುಂಟಾಗಿ ಪರಸ್ಪರ ಪ್ರೀತಿವಿಶ್ವಾಸಗಳು ಬೆಳೆಯುವಂತೆ ಮಾಡುವ ಕಾರ್ಯವನ್ನೂ ಈ ಶಿಕ್ಷಕರು ಕೈಕೊಂಡಿರುವರು. ಈ ಶಿಕ್ಷಕರ ಪ್ರಯತ್ನದಿಂದಲೇ ಕುಸ್ತಿಗಳು ಈ ಭಾಗದಲ್ಲಿ ಹೆಚ್ಚಾಗಿ ಪ್ರಚಾರದಲ್ಲಿ ಬಂದು ತುಂಬಾ ಜನಪ್ರಿಯವಾಗಿವೆ. ಅನೇಕ ತರದ ದೇಶೀಯ ಆಟಗಳ ನಿಯಮಾವಲಿಗಳನ್ನು ರಚಿಸಿ ಪ್ರಕಟಿಸಿ ಅವನ್ನು ಜನತೆಯಲ್ಲಿ ಪ್ರಚಾರಮಾಡುವ ಕಾರ್ಯವನ್ನು ಈ ಶಿಕ್ಷಕರು ಕೈಕೊಂಡಿರುವರು.

ತೋಟದ ಕೆಲಸ— ಈ ಪ್ರಾಂತದೊಳಗಿನ ಅನೇಕ ಶಾಲೆಗಳಿಗೆ ಹೊಂದಿ ತೋಟವಾಗಲಿ ಹೊಲವಾಗಲಿ ಇರುವದು. ಇವು ಹಳ್ಳಿಯ ನಿವಾಸಿಗಳಿಗೆ ಮಾದರಿಯುವಾಗಿರುವವು. ಹಳ್ಳಿಯ ಒಕ್ಕಲಿಗರನ್ನು ಕರೆಯಿಸಿ ಅವರಿಗೆ ಒಕ್ಕಲ ತನದ ಅಧುನಿಕ ಸಾಧನಗಳ ಉಪಯೋಗದಿಂದಲೂ ಒಳ್ಳೆಯ ಬೀಜಗಳನ್ನು ಬಿತ್ತುವದರಿಂದಲೂ ಆಗುವ ಸತ್ಪರಿಣಾಮಗಳನ್ನು ತೋರಿಸುವರು. ಶಾಲೆಯ ತೋಟಗಳಲ್ಲಿ ಬೆಳೆಯಿಸುವ ಕಾಯಿಪಲ್ಲೆಗಳು ಹಣ್ಣುಗಳು ಇವು ಅಲ್ಲಿಯ ಜಮೀನದಾರರ ಲಕ್ಷ್ಯವನ್ನು ತಮ್ಮಕಡೆಗೆ ಎಳೆದುಕೊಂಡಿರುವವು. ಶಾಲೆಗಳಲ್ಲಿ ಹೂಗಿಡಗಳನ್ನು ಬೆಳೆಯಿಸುವ ಕ್ರಮವನ್ನು ನೋಡಿಕೊಂಡು ಹಳ್ಳಿಯ ನಿವಾಸಿಗಳಲ್ಲಿ ಈ ವಿಷಯದಲ್ಲಿ ತುಂಬ ಅಭಿರುಚಿಯುಂಟಾಗಿರುವದು. ಈ ಕಾರ್ಯಕ್ಕೆ ಉತ್ತೇಜನ ದೊರೆಯಲೆಂದು ಈಗ ಅನೇಕ ಜಿಲ್ಲೆಗಳಲ್ಲಿ ದೊಡ್ಡಪ್ರಮಾಣದಿಂದ ವರ್ಷಕ್ಕೊಮ್ಮೆ ಹೂವಿನ ಪ್ರದರ್ಶನ (Flower show) ಗಳನ್ನು ನೆರವೇರಿಸುವ ರೂಢಿಯುಂಟಾಗಿರುವದು. ಮುಲ್ತಾನ್ ಡಿವಿಜನ್ನಿನಲ್ಲಿ ಪ್ರತಿಮನೆಯು ಮುಂದೆಯೂ ಚಿಕ್ಕದೊಂದು ತೋಟವನ್ನು ಮಾಡಿಕೊಳ್ಳುವ ರೂಢಿಯು ಬಳಕೆಯಲ್ಲಿ ಬಂದಿರುವದು.

ಹಳ್ಳಿಯ ವಿದ್ಯಾರ್ಥಿಗಳ ಸಂಘಗಳನ್ನು ಸ್ಥಾಪಿಸುವದರಮೂಲಕ ಊರ ಜನಂಗೂ ವಿದ್ಯಾರ್ಥಿಗಳಿಗೂ ಪರಸ್ಪರ ಬಳಕೆಯುಂಟಾಗಲು ಅನುಕೂಲವಾಗಿರುವದು. ಶಾಲೆಗಳಲ್ಲಿ 'ಪಾಲಕರ ದಿನ' (Parents day) ವನ್ನು ಆಚರಿಸುವದರಿಂದಲೂ ಈ ಕಾರ್ಯಕ್ಕೆ ಸಹಾಯವಾಗುವದು. ಅನೇಕ ಶಾಲೆಗಳಲ್ಲಿ ವಾಚನಾಲಯಗಳಿರುವವು. ಅವುಗಳಲ್ಲಿ ಸರಕಾರದಿಂದ ದೊರೆಯುವ ಪುಸ್ತಕ ಪತ್ರಿಕೆಗಳ ಸಂಗ್ರಹವಿರುವದು. ಅವನ್ನು ಹಳ್ಳಿಯ ನಿವಾಸಿಗಳು ಉಪಯೋಗಿಸಿಕೊಳ್ಳುವರು. ಓದುಬರೆಹಬಲ್ಲ ಅಲ್ಲಿಯ ಹಳ್ಳಿಯ ನಿವಾಸಿಗಳು ಇವುಗಳಿಂದ ಪುಸ್ತಕ ಪತ್ರಿಕೆಗಳನ್ನು ಮನೆಗೆಒಯ್ದು ಓದಿ ತಿರುಗಿ ತಂದುಕೊಡುವರು. ಶಾಲೆಗಳಲ್ಲಿ ಪುರಾಣಪುಣ್ಯಕಥೆಗಳು, ಕೀರ್ತನೆಗಳು, ಲಾವಣಿಹಾಡು ಮುಂತಾದವು ನಡೆಯುವವು. ಅವುಗಳಮೂಲಕ ಜನರಲ್ಲಿ ಧರ್ಮಪ್ರಸಾರಕ್ಕೂ ನೀತಿಯ ಬೆಳೆವಣಿಗೆಗೂ ಸಹಾಯವಾಗುವದು.

ಪ್ರಾಥಮಿಕ ಶಾಲೆಗಳಲ್ಲಿ ನಿಬಂಧ ಶಿಕ್ಷಣ

ನಿಬಂಧ ಶಿಕ್ಷಣವು ಭಾಷಾವಿಷಯದ ಒಂದು ಮುಖ್ಯಾಂಗವಾಗಿರುವದು. ಭಾಷಾವಿಷಯಗಳ ಶಿಕ್ಷಣದಿಂದ ಬಾಲಕರ ಭಾಷೆ ಒಳ್ಳೆಯದಾಗಬೇಕೆಂಬದು ಮುಖ್ಯೋದ್ದೇಶ್ಯವಷ್ಟೇ. ವ್ಯಾಕರಣ, ಪದ್ಯ ಮುಂತಾದ ವಿಷಯಗಳು ಅಪ್ರತ್ಯಕ್ಷವಾಗಿ ಭಾಷಾಸುಧಾರಣೆಗೆ ಸಹಾಯಕವಾಗುವುವು; ಆದರೆ ನಿಬಂಧ ಶಿಕ್ಷಣವು ಪ್ರತ್ಯಕ್ಷವಾಗಿ ಭಾಷಾಸುಧಾರಣೆಗೆ ಸಹಾಯಕವು. ನಿಬಂಧದ ಎರಡು ಅಂಗಗಳಲ್ಲಿ ಒಂದು ಅಂಗವು ವಿಚಾರಶಕ್ತಿ, ಕಲ್ಪನಾಶಕ್ತಿ ಮೊದಲಾದವುಗಳನ್ನು ಬೆಳೆಸುವುದು; ಆದರೆ ಇನ್ನೊಂದು ಅಂಗವು ಭಾಷೆಯನ್ನು ತಿದ್ದುವದು.

ನಿಬಂಧವು ಭಾಷಾವಿಷಯಗಳಲ್ಲಿ ಒಂದು ಮುಖ್ಯ ವಿಷಯವಾಗಿದ್ದರೂ ಶಾಲೆಗಳಲ್ಲಿ ಈಗ ಇದಕ್ಕೆ ಕೊಡಬೇಕಾದಷ್ಟು ಗಮನವು ಕೊಡಲ್ಪಡುವುದಿಲ್ಲ; ಮತ್ತು ನಿಬಂಧ ಶಿಕ್ಷಣದ ಆರಂಭವು ಬಾಲಕರ ವರ್ಗದಿಂದ ಆಗದೆ, ೪ನೆಯ ಇಯತ್ತೆಯಿಂದ ಪತ್ರ ಬರಹದ ರೂಪವಾಗಿ ಆಗುವುದು. ದೊಡ್ಡ ದೊಡ್ಡ ವಿಷಯಗಳ ಮೇಲೆ ನಿಬಂಧಗಳನ್ನು ಬರೆಯುವುದಕ್ಕೆ ಬಾಲಕರಿಗೆ ಬರಬೇಕೆಂಬುದೇ ಈಗ

ನಿಬಂಧಶಿಕ್ಷಣದ ಉದ್ದೇಶವೆಂದು ಇಟ್ಟುಕೊಂಡಂತೆ ತೋರುವುದು. ಆದುದ
ರಿಂದಲೇ ನಿಬಂಧಗಳೆಂದರೆ ಪ್ರವಾಸ, ಮಹತ್ವಾಕಾಂಕ್ಷೆ, ಮೊದಲಾದುವೇ ಮುಖ್ಯ
ವಾದುವುಗಳೆಂಬ ತಿಳಿವಳಿಕೆಯೂ ನೆಲೆಸಿರುವಂತೆ ಕಾಣುವುದು. ಈ ತಿಳಿವಳಿಕೆ
ಯಿರುವುದರಿಂದಲೇ ಇಂತಹ ವಿಷಯಗಳನ್ನು ಕುರಿತು ಬರೆಯುವುದು ಶಾಲೆಯ
ಇಯತ್ತೆಗಿಂತ ಮೊದಲಿನ ಇಯತ್ತೆಗಳ ಬಾಲಕರಿಗೆ ಸಾಧ್ಯವಲ್ಲವೆಂಬ ವಿಚಾರದಿಂದ
ಆ ಇಯತ್ತೆಗೆ ಆರಂಭಮಾಡುವಂತೆ ಅಭ್ಯಾಸಪತ್ರಿಕೆಯೂ ಹೇಳುವುದು.

ಆದರೆ ಕೆಲವು ವರ್ಷಗಳಿಂದೀಚೆಗೆ ಈ ವಿಚಾರದಲ್ಲಿ ಪರಿವರ್ತನೆಯಾಗಿದೆ.
ನಿಬಂಧ ಶಿಕ್ಷಣದ ಉದ್ದೇಶವು ಬಾಲಕರು ನಿಬಂಧಕಾರರೇ ಆಗಬೇಕೆಂಬುದು
ಮುಖ್ಯವಲ್ಲವೆಂಬುದೂ, ಬಾಲಕರು ತಮ್ಮ ವಿಚಾರಗಳನ್ನು ಭಾಷೆಯಿಂದ—
ಭಾಷಣರೂಪವಾಗಿ ಇಲ್ಲವೆ ಲೇಖನರೂಪವಾಗಿ—ಪ್ರಕಟಿಸಲು ಸಮರ್ಥರಾಗ
ಬೇಕೆಂಬುದೇ ಉದ್ದೇಶವೆಂಬುದೂ ಈಗ ಗೊತ್ತಾದ ಮಾತು. ಈ ಮೇರೆಗೆ
ಉದ್ದೇಶದಲ್ಲಿ ಪರಿವರ್ತನೆಯುಂಟಾಗಲು ಅದಕ್ಕೆ ಅನುಸಾರವಾಗಿ ವಿಷಯಗಳ
ವಿಚಾರದಲ್ಲಿಯೂ ಪರಿವರ್ತನೆಯುಂಟಾಯಿತು. ಇದರಿಂದ ನಿಬಂಧ ಶಿಕ್ಷಣ
ವನ್ನಾರಂಭಿಸುವ ಕಾಲವಿಚಾರದಲ್ಲಿಯೂ ಪರಿವರ್ತನೆಯುಂಟಾಗಿ ಬಾಲಕರ
ವರ್ಗದಿಂದಲೇ ಈ ವಿಷಯವನ್ನಾರಂಭಿಸಬೇಕೆಂದು ಗೊತ್ತುಮಾಡಲ್ಪಟ್ಟಿರುವುದು.

ಈ ವಿಚಾರ ಪರಿವರ್ತನೆಯನ್ನನುಸರಿಸಿ ಕೆಲವು ಸಂಸ್ಥೆಗಳ ಸಾಲೆಗಳಲ್ಲಿ ಹಲವು
ವರ್ಷಗಳ ಮುಂಚೆಯೇ ಬಾಲಕವರ್ಗದಿಂದ ಈ ವಿಷಯದ ಶಿಕ್ಷಣವನ್ನಾರಂಭಿಸುವ
ಕ್ರಮವು ನಡೆದುಬಂದಿದೆ. ಧಾರವಾಡದ ಹೆಣ್ಣುಮಕ್ಕಳ ಟ್ರೇ. ಕಾಲೇಜಿನ ಪ್ರಾಥ್ಯ.
ಸ್ಕೂಲಿನಲ್ಲಿ ಈ ಪ್ರಯೋಗವು ೪೫ ವರ್ಷಗಳ ಪೂರ್ವದಲ್ಲಿಯೇ ನಡೆದಿದ್ದು ಅದು
ಸಫಲವಾಗಿದೆಯೆಂದು ತಿಳಿಯುವುದು.

ಸರ್ಕಾರದವರು ಪ್ರಾಥಮಿಕ ಶಾಲೆಗಳ ಅಭ್ಯಾಸಪತ್ರಿಕೆಯಲ್ಲಿ ಕೆಲವು ಹೆಚ್ಚು
ಕಡಿಮೆಗಳನ್ನು ಬೇಗನೆ ಮಾಡುವರೆಂದು ಕೇಳುತ್ತೇನೆ. ಹಾಗೆ ಅಭ್ಯಾಸಪತ್ರಿಕೆ
ಯಲ್ಲಿ ಹೆಚ್ಚುಕಡಿಮೆಗಳಾದಲ್ಲಿ ನಿಬಂಧಶಿಕ್ಷಣವು ಬಾಲಕರ ವರ್ಗದಿಂದಲೇ ಆರಂಭ
ವಾಗುವುದನ್ನು ನಿರೀಕ್ಷಿಸಬಹುದೆಂದು ತೋರುತ್ತದೆ.

ಅಭ್ಯಾಸಪತ್ರಿಕೆಯ ಒತ್ತಾಯವು ಬಾರದಿದ್ದರೂ ಬಾಲಕರ ಹಿತವನ್ನಪೇಕ್ಷಿಸುವ
ಶಿಕ್ಷಕರಿಗೆ ಈ ವಿಷಯದ ಶಿಕ್ಷಣವನ್ನು ಬಾಲಕರ ವರ್ಗದಿಂದಲೇ ಆರಂಭಿಸುವುದಕ್ಕೆ
ಪ್ರೇರಣೆ ದೊರೆಯಬೇಕೆಂಬ ಉದ್ದೇಶದಿಂದ ನಿಬಂಧ ಶಿಕ್ಷಣ ವಿಷಯವಾಗಿ ಕೆಲವು
ವಿಚಾರಗಳನ್ನು ಇಲ್ಲಿ ಬರೆಯಬೇಕೆಂದಿದ್ದೇನೆ.

ನಿಬಂಧವೆಂದರೇನು ?—'ನಿ' ಉಪಸರ್ಗಪೂರ್ವಕವಾದ ' ಬಂಧ್ ' ಧಾತುವಿನ ಮುಂದೆ 'ಅ' ಪ್ರತ್ಯಯವು ಸೇರಿ ಹುಟ್ಟಿದ (ನಿ+ಬಂಧ್+ಅ) ನಿಬಂಧ ಶಬ್ದವು ಚೆನ್ನಾಗಿ ಕಟ್ಟುವುದು, ರಚಿಸುವುದು, ವಾಕ್ಯರೂಪವಾಗಿ ರಚನೆಮಾಡುವುದು, ತಮ್ಮ ವಿಚಾರಗಳನ್ನು ವಾಕ್ಯರೂಪವಾಗಿ ಚೆನ್ನಾಗಿ ಜೋಡಿಸುವುದು, ಇಲ್ಲವೆ ಪ್ರಕಟಿಸುವುದು ಎಂಬ ಅರ್ಥವನ್ನು ಹೇಳುವುದು. ಎಂದರೆ ಮನುಷ್ಯನು ತನ್ನ ವಿಚಾರಗಳನ್ನು ವಾಕ್ಯರೂಪವಾಗಿ ಹೊಂದಿಸಿ ಭಾಷಣರೂಪದಿಂದಾಗಲಿ, ಲೇಖನ ರೂಪದಿಂದಾಗಲಿ ಪ್ರಕಟಿಸುವುದು ನಿಬಂಧವೆನಿಸುವುದು.

ನಿಬಂಧ ಪ್ರಕಾರಗಳು— ಮೇಲೆ ಹೇಳಿದ ಮೇರೆಗೆ ನಿಬಂಧವು ಭಾಷಣ ರೂಪವಾದ ನಿಬಂಧವೆಂದೂ ಲೇಖನರೂಪವಾದ ನಿಬಂಧವೆಂದೂ ಎರಡು ವಿಧವಾಗಿರುವುದು ಇವನ್ನೇ ಶ್ರಾವ್ಯ, ಲೇಖ್ಯ ಎಂದು ಹೇಳಬಹುದು. ವಾಡಿಕೆಯಲ್ಲಿ ಲೇಖನರೂಪವಾದ ನಿಬಂಧವನ್ನೇ ನಿಬಂಧವೆಂದೂ, ಲೇಖವೆಂದೂ, ಪ್ರಬಂಧವೆಂದೂ ಹೇಳುವರು. ಭಾಷಣರೂಪವಾದ ನಿಬಂಧವನ್ನು ಉಪನ್ಯಾಸವೆಂದೂ ವ್ಯಾಖ್ಯಾನವೆಂದೂ ಪ್ರವಚನವೆಂದೂ ಹೇಳುವುದುಂಟು. ಲೇಖನರೂಪವಾದ ನಿಬಂಧವನ್ನು **ಲೇಖನ ನಿಬಂಧ**ವೆಂದೂ, ಭಾಷಣರೂಪವಾದ ನಿಬಂಧವನ್ನು **ವಾಚನಿಕ ನಿಬಂಧ**ವೆಂದೂ ಹೇಳುವುದುಂಟು.

ವಾಚನಿಕ ನಿಬಂಧವು ಧ್ವನಿ ಕೇಳಿಸುವಷ್ಟು ಪ್ರದೇಶದೊಳಗಿನ ಜನರನ್ನು ಮಾತ್ರ ಸಂಬಂಧಿಸುವುದು ; ಲೇಖನ ನಿಬಂಧವು ಭಾಷೆಯನ್ನು ಓದಬಲ್ಲ ಎಲ್ಲ ಜನರನ್ನೂ ಸಂಬಂಧಿಸುವುದು. **ವಾಚನಿಕ** ನಿಬಂಧವು ಹೆಚ್ಚು ವಿವರವಾಗಿರುವುದುಂಟು ; ಲೇಖನ ನಿಬಂಧವು ಸಂಕ್ಷೇಪದ ಒಲವುಳ್ಳದ್ದಿರುವುದು. ವಾಚನಿಕ ನಿಬಂಧವು ಭಾವೋದ್ರೇಕವನ್ನುಂಟುಮಾಡುವಲ್ಲಿ ಹೆಚ್ಚಿಗೆ ಸಮರ್ಥವಾದುದು. ಲೇಖನ ನಿಬಂಧವು ಯಥಾರ್ಥ ಜ್ಞಾನವನ್ನು ಒಳಗೊಳ್ಳುವಲ್ಲಿ ಹೆಚ್ಚು ಎಚ್ಚರಗೊಳ್ಳುವುದು. ವಾಚನಿಕ ನಿಬಂಧವು ತಾತ್ಕಾಲಿಕ ವಿಷಯಗಳನ್ನು ಪ್ರತಿಪಾದಿಸಲು ಹೊರಡುವುದು.

ನಿಬಂಧವು ಏತಕ್ಕೆ ?—ನಿಬಂಧರಚನೆಗೆ ಲೋಕೋಪಕಾರವೇ ಪ್ರಯೋಜನವು. ನಿಬಂಧವು ಒಬ್ಬನ ವಿಚಾರಗಳನ್ನು ಪರರಲ್ಲಿ ಉಂಟುಮಾಡಿ ಅವರನ್ನು ಮುಂದುವರಿಯಿಸುವುದು. ಪರರಲ್ಲಿ ಜ್ಞಾನವನ್ನುಂಟುಮಾಡುವುದು, ಅವರನ್ನು ಜಾಗೃತಿಗೊಳಿಸುವುದು ; ಅವರಲ್ಲಿ ಆವೇಶವನ್ನುಂಟುಮಾಡುವುದು. ನಿಬಂಧದಿಂದ ಮನುಷ್ಯನು ಕಾರ್ಯೋನ್ಮುಖನಾಗುವನು. ಲೋಕದ ಪರಿಚಯಕ್ಕೂ ನಿಬಂಧವು ಸಹಾಯಕವಾಗಿರುವುದು. ನಿಬಂಧವು ಆನಂದಸಾಮಗ್ರಿಯೂ ಆಹುದು.

ಈ ಸಂದರ್ಭದಲ್ಲಿ ನಾವು ನಿಬಂಧವೆಂದರೆ ಶಾಲೆಗಳಲ್ಲಿ ಬಾಲಕರು ಬರೆಯುವ ಇಲ್ಲವೆ ಅವರು ಭಾಷಿಸುವ ನಿಬಂಧಗಳನ್ನೇ ಕಣ್ಣಿರಿಗೆ ತಂದುಕೊಳ್ಳಬಾರದು ; ಅವು ಮೇಲೆ ಹೇಳಿದ ಪ್ರಯೋಜನಗಳನ್ನು ಪೂರೈಸಬಾರವು, ಅವು ನಿಜವಾದ ನಿಬಂಧಗಳನ್ನು ರಚಿಸುವ ಶಕ್ತಿಯನ್ನು ಸಂಪಾದಿಸುವ ಸಾಧನವು, ಅಭ್ಯಾಸವು.

ನಿಬಂಧ-ಗ್ರಂಥ ಇವುಗಳ ಭೇದ–ಲೇಖನ ನಿಬಂಧಕ್ಕೂ ಗ್ರಂಥಕ್ಕೂ ವಿಶೇಷ ಭೇದವಿಲ್ಲದಿದ್ದರೂ ಗ್ರಂಥವು ಒಂದು ವಿಷಯದ ಸಮಗ್ರತೆಯನ್ನನುಲಕ್ಷಿಸಿರುವಂತೆ ನಿಬಂಧವು ಅನುಲಕ್ಷಿಸುವುದಿಲ್ಲ ; ನಿಬಂಧವು ಒಂದು ವಿಷಯವನ್ನು ಅಸಮಗ್ರವಾಗಿ, ಇಲ್ಲವೆ ಒಂದು ವಿಷಯದ ಒಂದು ಭಾಗವನ್ನು ಸಮಗ್ರವಾಗಿ ಚರ್ಚಿಸುವುದೆಂದು ತಿಳಿಯಬಹುದು. ನಿಬಂಧವು ಹಲವೆಡೆಯಲ್ಲಿ ತಾತ್ಕಾಲಿಕ ವಿಷಯಗಳನ್ನು, ಇಲ್ಲನೆ ಹೊಸದಾಗಿ ಕಂಡುಹಿಡಿದ ವಿಷಯಗಳನ್ನು, ಇಲ್ಲವೆ ಕಾಲೋಚಿತ ವಿಷಯಗಳನ್ನು ಹಿಡಿದು ಹೊರಟಿರುವುದೆಂಬದನ್ನು ನಾವು ಕಾಣಬಹುದು. ಗ್ರಂಥವು ನಿರ್ಣೀತ ವಿಷಯಗಳನ್ನು ಪ್ರತಿಪಾದಿಸುವುದು ; ಆದರೆ ನಿಬಂಧದ ವಿಷಯವು ಒಮ್ಮೊಮ್ಮೆ ಹಸಿಬಿಸಿಯಾಗಿಯೂ ಇರುವುದುಂಟು. ಈ ಕಾರಣಗಳಿಂದಲೇ ನಿಬಂಧದ, ಮತ್ತು ಗ್ರಂಥದ ಆಯುಷ್ಯಪರಿಮಿತಿಯಲ್ಲಿ ಹೆಚ್ಚುಕಡಿಮೆಯಾಗುವದು. ಗ್ರಂಥೋಪಮ ನಿಬಂಧವು ಬಹುಕಾಲ ಬಾಳುವುದು. ದೇಶಕಾಲಪರಿಸ್ಥಿತಿಗಳನ್ನನುಲಕ್ಷಿಸಿಯೇ ಹೊರಟ ನಿಬಂಧವು ಅವುಗಳಲ್ಲಿ ಪರಿವರ್ತನೆಯುಂಟಾದಲ್ಲಿ ಮೂಲೆಗೆ ಬೀಳುವುದು. ಗಾತ್ರವನ್ನು ಮಿತಿಮೀರಿ ಬೆಳೆಯಿಸಿಕೊಂಡ ನಿಬಂಧವು ಗ್ರಂಥವಾಗುವುದು. ಅಪೂರ್ಣತೆಯಲ್ಲಿಯೇ ನಿಬಂಧಕ್ಕೆ ಸ್ವತ್ವ (ನಿಬಂಧತನ)ವುಂಟು ; ಪರಿಪೂರ್ಣತೆಯುಂಟಾದಾಗ ಅದು ಗ್ರಂಥರೂಪದಲ್ಲಿ ಪರಿಣಮಿಸುವುದು.

ನಿಬಂಧಕಾರರು—ಯಾವದೊಂದು ವಿಷಯವನ್ನು ಹೆಚ್ಚಿಗೆ ಬಲ್ಲವರು ಪರರಲ್ಲಿ ಆ ವಿಚಾರಗಳನ್ನು ಉಂಟುಮಾಡಬೇಕು ; ಯಾವ ಸಮಯದಲ್ಲಿ ಯಾವ ವಿಚಾರಗಳನ್ನು ಜನತೆಯಲ್ಲಿ ಉಂಟುಮಾಡಬೇಕಾಗಿದೆಯೋ ಆ ಸಮಯದಲ್ಲಿ ಆ ವಿಚಾರಗಳನ್ನು ಪ್ರಕಟಿಸಬೇಕು ; ಯಾವಾಗ ಒಬ್ಬನು ಒಂದು ವಿಷಯದಲ್ಲಿ ಹೊಸ ವಿಚಾರಗಳನ್ನು ಕಂಡುಹಿಡಿದನೋ ಆಗ ಆತನು ತನ್ನ ಆ ಹೊಸ ವಿಚಾರಗಳನ್ನು ಜನರ ಮುಂದೆ ಇಡಲು ತವಕಬಡುವನು.

ಪರರಲ್ಲಿ ತನ್ನ ವಿಚಾರಗಳನ್ನು ಮೂಡಿಸಬೇಕಾದರೆ ನಿಬಂಧಕಾರನು ವಿಚಾರ ಸಂಗ್ರಹವುಳ್ಳವನಿರಬೇಕಾದಂತೆ ಭಾಷಾಸಾಮರ್ಥ್ಯವುಳ್ಳವನೂ ಇರಬೇಕೆಂಬುದು ಸಹಜವು. ಈ ಗುಣವಿಲ್ಲದಲ್ಲಿ ಶಾಸ್ತ್ರೀಯ ನಿಬಂಧವು ಇಲ್ಲವೆ ಉಪನ್ಯಾಸವು ನೀರಸ

ವಾಗಿ, ಲೇಖ್ಯ ನಿಬಂಧವು ವಿಸ್ಪಲಿತವಾಗಿ, ಅನಾವಶ್ಯಕವಾಗಿ ಬೆಳೆದು, ಹೆಚ್ಚು ಪರಿಣಾಮಕರವಾಗದೆ ಹೋಗಬಹುದು.

ನಿಬಂಧಕಾರನ ಸ್ಥಾನ—ಪರರನ್ನು ಮೇಲಕ್ಕೆ ತರುವುದೇ ನಿಬಂಧಕಾರನ ಕೆಲಸವಾಗಿರುವುದರಿಂದ ಆತನ ಸ್ಥಾನವು ಮೇಲುಗಡೆಯಲ್ಲಿ. ಆತನು ಪೀಠದ ಮೇಲೆ ; ಕೇಳುವವರು, ಓದುವವರು ಕೆಳಗೆ. ವಿಷಯ ಸಂಗ್ರಹವಿದ್ದು, ವಿಚಾರಗಳನ್ನು ವ್ಯವಸ್ಥೆಗೊಳಿಸಿಕೊಂಡು, ಅವುಗಳನ್ನು ಚೆನ್ನಾಗಿ ಒಡಮೂಡಿಸಬಲ್ಲ ನಿಬಂಧಕಾರನು ಓದುಗರಿಗೂ ಕೇಳುಗರಿಗೂ ಮಾನ್ಯನು. ವಕ್ತಾರನನ್ನು ಹೂವಾಲೆಯಿಂದ, ಲೇಖಕನನ್ನು ಪ್ರವ್ಯದಿಂದ ಸಂಭಾವಿಸುವುದುಂಟು. ನಿಬಂಧಕಾರನು ಯಥಾರ್ಥವಾದಿಯು, ನಿಬಂಧಕಾರನು ಮಧ್ಯಸ್ಥನು, ನಿಬಂಧಕಾರನು ವಕೀಲನು, ನಿಬಂಧಕಾರನು ನ್ಯಾಯಾಧೀಶನು, ನಿಬಂಧಕಾರನು ಋಷಿಯು, ನಿಬಂಧಕಾರನು ಲೋಕನಾಯಕನು ಎಂದು ಹೇಳಿ ನಾವು ನಿಬಂಧಕಾರನ ಸ್ಥಾನವನ್ನು ನಿರ್ದೇಶಿಸಬಹುದು. ಶ್ರಾವ್ಯ ನಿಬಂಧಕಾರನಿಗೆ ಅಧ್ಯಕ್ಷನಿರಬಹುದು, ಲೇಖ್ಯ ನಿಬಂಧಕಾರನು ನಿರಧ್ಯಕ್ಷನು ; ಸ್ವಯಮಧ್ಯಕ್ಷನೇ ಆಗಿರುವನು.

ಜ್ಞಾನಿಯಾದಷ್ಟಕ್ಕೇ ನಿಬಂಧಕಾರನಾಗಲಾರನು—ಮೇಲಿನ ವಿವೇಚನೆಯಿಂದ ವಿಷಯಜ್ಞಾನವುಳ್ಳವನು ನಿಬಂಧಕಾರನಾಗಬಹುದೆಂದು ತೋರುವುದು ; ಆದರೆ ನಿಬಂಧಕ್ಕೆ ವಿಚಾರ ಪ್ರಕಟನ ಸಾಮರ್ಥ್ಯವು ಇಲ್ಲವೆ ಭಾಷಾಸಾಮರ್ಥ್ಯವು ಅತ್ಯಾವಶ್ಯಕವಾದುದೆಂದು ಹೇಳಬಹುದು. ಬೇಕಾದಷ್ಟು ವಿಷಯಜ್ಞಾನವುಳ್ಳವನಿದ್ದರೂ ಒಬ್ಬನು ಹೇಳಿ ಇಲ್ಲವೆ ಬರೆದು ತಿಳಿಸಲಸಮರ್ಥನಿರಬಹುದು. ಜ್ಞಾನದ ಸಂಗಡ ನಿರ್ಣಯಶಕ್ತಿ, ಉಪಪಾದನಸಾಮರ್ಥ್ಯ, ಬುದ್ಧಿಯ ಸಮತೋಲತೆ ಮುಂತಾದ ಗುಣಗಳೂ ವಾಚನಿಕ ನಿಬಂಧಕಾರನಿಗೆ ಬೇಕು ; ಇನ್ನೂ ಅಲ್ಲದೆ ಅಭಿನಯ ಕೌಶಲ್ಯ ಮುಂತಾದುವೂ ಆತನಿಗೆ ಬೇಕು. ಮನುಷ್ಯನು ಜ್ಞಾನಿಯಾಗುವುದು ಆವಶ್ಯಕವಿದ್ದಂತೆ ಆತನು ಲೋಕಕ್ಕೆ ಉಪಯುಕ್ತ ಮನುಷ್ಯನೆನಿಸುವುದಕ್ಕೆ ನಿಬಂಧಕಾರನಾಗುವುದೂ ಆವಶ್ಯಕವು. ತನ್ನ ಜ್ಞಾನವನ್ನು ತನಗೆ ಮಾತ್ರ ಉಪಯೋಗಿಸಿಕೊಂಡವನನ್ನು ಲೋಕವು ಹೆಚ್ಚಿಗೆ ಪೂಜಿಸುವುದಿಲ್ಲ. ತನ್ನ ಜ್ಞಾನವು ಪರರಿಗೆ ಉಪಯುಕ್ತವೆನಿಸಬೇಕಾಗಿದ್ದರೆ ಆತನು ಅದನ್ನು ಅವರಿದಿರಿಗೆ ಇಡಬೇಕು ; ಎಂದರೆ ನಿಬಂಧಕಾರನಾಗಬೇಕು. ಲೋಕಸೇವಕರಾದ ಜನರೇ ದೇಶಕ್ಕೆ ಇಲ್ಲವೆ ಸಮಾಜಕ್ಕೆ ಹೆಚ್ಚಾಗಿ ಬೇಕು.

ನಿಬಂಧವು ಒಂದು ಕಲೆ ಎಂದು ಹೇಳಬಹುದು; ಆದಪರಿಂದ ಇದು ಒಲವುಳ್ಳವರಿಗೆ ಸಾಧಾರಣ ಪರಿಶ್ರಮದಿಂದ ಸಾಧ್ಯವಾದುದು ; ಒಲವಿಲ್ಲದವರಿಗೆ

ಶಿಕ್ಷಣವು ಆವಶ್ಯಕವಾದುದು. ವಿಚಾರಶಕ್ತಿ ಇದ್ದರೆ ನಿಬಂಧವನ್ನು ಬರೆಯಬಹುದು; ನಿಬಂಧವನ್ನು ರಚಿಸಿ ವಿಚಾರಶಕ್ತಿಯನ್ನು ಬೆಳೆಯಿಸಿಕೊಳ್ಳಬಹುದು ; ನಿರ್ಣಯ ಕಲ್ಪನಾದಿ ಶಕ್ತಿವಂತರು ನಿಬಂಧವನ್ನು ರಚಿಸಬಹುದು; ನಿಬಂಧವನ್ನು ರಚಿಸಿ ನಿರ್ಣಯ ಕಲ್ಪನಾದಿ ಶಕ್ತಿಗಳನ್ನು ಬೆಳೆಯಿಸಿಕೊಳ್ಳಬಹುದು; ವಾಕ್ಯರಚನಾಶಕ್ತಿ, ಭಾಷಾಸೌಷ್ಠವಗಳಿದ್ದವರು ನಿಬಂಧಕಾರರಾಗಬಹುದು; ನಿಬಂಧಕಾರರಾಗಿ ವಾಕ್ಯ ರಚನಾಶಕ್ತಿ ಭಾಷಾಸೌಷ್ಠವಗಳನ್ನು ಬೆಳೆಯಿಸಿಕೊಳ್ಳಬಹುದು. ಕಲಿತು ಮಾಡು, ಮಾಡಿ ಕಲಿ ಎಂಬ ಮಾತು ಎಲ್ಲ ವಿಷಯಗಳಿಗೂ ಕಲೆಗಳಿಗೂ ಸಂಬಂಧಿಸುವುದು. ನಿಬಂಧವು ಒಂದು ಕಲೆ ಎಂದು ಹೇಳಿದರೆ ಒಲವುಳ್ಳವರಿಗೆ ಶಿಕ್ಷಣವು ಬೇಡವೆಂದು ಹೇಳಲಾಗದು. ಒಲವುಳ್ಳವನು ಸ್ವಲ್ಪ ಶಿಕ್ಷಣದಿಂದ, ಒಲವಿಲ್ಲದವನು ಹೆಚ್ಚು ಶಿಕ್ಷಣದಿಂದ ಕಲೆಯನ್ನು ಸಂಪಾದಿಸುವನು. ಒಲವುಳ್ಳವನು ಹೆಚ್ಚಿಗೆ ಕುಶಲನಾಗ ಬಹುದು. ಆದರೆ ಶಿಕ್ಷಣಕ್ಕೂ ಪರಿಶ್ರಮಕ್ಕೂ ಏನೂ ಸಾಧ್ಯವಾಗದ ವಿಷಯ ವಾಗಲಿ ಕಲೆಯಾಗಲಿ ಇರಲಾರದು. ಸಮಾಜಕ್ಕೆ ಉಪಯುಕ್ತನೆನಿಸುವ ಮನುಷ್ಯ ನಾಗಬೇಕಾದರೆ ನಿಬಂಧ ಶಿಕ್ಷಣವು ಅವಶ್ಯವಾದುದು. ಈ ಕಾರಣದಿಂದ ಸಾಲೆ ಗಳಲ್ಲಿ ನಿಬಂಧವು ಶಿಕ್ಷಣದ ಒಂದು ಅಂಗವಾಗಿರುವುದು ಈ ಶಿಕ್ಷಣದಿಂದ ಎಲ್ಲರೂ ವಕ್ತಾರರಾಗಿ, ಇಲ್ಲವೆ ಲೇಖಕರಾಗಿ ಸಮಾಜಸೇವೆಯನ್ನು ಮಾಡಲಾರರಾದರೂ ಅವರು ತಮ್ಮ ವಿಚಾರಗಳನ್ನು--ತಾವು ಹೇಳಬೇಕೆಂದಿರುವುದನ್ನು-- ಸರಿಯಾಗಿ ಪ್ರಕಟಿಸಿ ವ್ಯವಹಾರಕ್ಕೆ ತಕ್ಕವರಾದರೂ ಆಗುವರು; ಹಾಗೆ ಆಗುವುದು ಆವಶ್ಯಕವೂ ಆಹುದು.

ಸಾಲೆಗಳಲ್ಲಿ ನಿಬಂಧ ಶಿಕ್ಷಣದ ಉದ್ದೇಶ— ಬಾಲಕರು ತಮ್ಮ ವಿಚಾರ ಗಳನ್ನು ಸ್ಪಷ್ಟವಾಗಿ ಪ್ರಕಟಿಸಬೇಕು, ಪರರ ಮನಸ್ಸಿನ ಮೇಲೆ ಪರಿಣಾಮವಾಗು ವಂತೆ ತಾವು ಹೇಳುವುದನ್ನು ಹೇಳಬೇಕು; ಎಂದರೆ ಅವರು ಚೆನ್ನಾಗಿ ಮಾತಾಡಬೇಕು, ಚೆನ್ನಾಗಿ ಬರೆಯಬೇಕು ಎಂಬುದೇ ನಿಬಂಧ ಶಿಕ್ಷಣದ ಉದ್ದೇಶ್ಯವಾಗಿರುವುದು. ಮನುಷ್ಯನು ವ್ಯವಹಾರಕ್ಕೆ ತಕ್ಕವನಾಗದಿರುವಲ್ಲಿ ಮುಖ್ಯವಾಗಿ ತನ್ನ ಮನಸ್ಸಿನಲ್ಲಿರು ವುದನ್ನು ಸರಿಯಾಗಿ ಪ್ರಕಟಿಸಲು ಬಾರದಿರುವುದೇ ಮುಖ್ಯ ಕಾರಣವಾಗಿರುವುದೆಂಬ ವನ್ನು ಹಲವೆಡೆಯಲ್ಲಿ ಕಾಣಬಹುದು. ಈ ಕೊರತೆಯನ್ನು ಹೋಗಲಾಡಿಸುವುದ ಕ್ಕಾದರೂ ನಿಬಂಧ ಶಿಕ್ಷಣವು ತನ್ನ ಆವಶ್ಯಕತೆಯನ್ನು ಸಮರ್ಥಿಸುವುದು.

ಸಾಲೆಗಳಲ್ಲಿ ನಿಬಂಧ ಶಿಕ್ಷಣದ ಆರಂಭ— ಪ್ರಾಥಮಿಕ ಶಾಲೆಗಳಲ್ಲಿ ಐದನೆಯ ಇಯತ್ತೆಯಲ್ಲಿ ಪತ್ರಲೇಖನದಿಂದ ಈ ವಿಷಯವನ್ನಾರಂಭಿಸುವುದುಂಟು. ಮತ್ತು ಮುಂದೆ ಕೂಡ ಪ್ರವಾಸ, ಪುಸ್ತಕಾಲಯ ಮುಂತಾದ ಕೆಲವು ಗೊತ್ತಾದ

ವಿಷಯಗಳನ್ನು ಕೊಟ್ಟು, ಶಿಕ್ಷಕರೇ ಕೆಲವು ಮುಖ್ಯಮಾತುಗಳನ್ನು ಹೇಳಿ ವಾರಕ್ಕೊಮ್ಮೆ ಬರೆಯಿಸುವ ವಾಡಿಕೆಯೂ ಹಲವೆಡೆ ಕಾಣಬರುವುದು. ಯಾವ ವಿಷಯವನ್ನು ಕೊಟ್ಟರೂ ವ್ಯಾಖ್ಯೆ, ಲಾಭ, ಹಾನಿ, ಸಾರಾಂಶ ಎಂಬ ಮುಖ್ಯ ಮಾತುಗಳನ್ನಿಟ್ಟುಕೊಂಡೇ ಬರೆಯಬೇಕೆಂದು ಹಲವು ಜನ ವಿದ್ಯಾರ್ಥಿಗಳ ಭಾವನೆಯಾಗಿರುವದೆಂಬದು ವ್ಹಿ. ಫಾ. ಪರೀಕ್ಷೆಯ ನಿಬಂಧದ ಉತ್ತರ ಕಾಗದಗಳನ್ನು ನೋಡಿದವರ ಅನುಭವಕ್ಕೆ ಬಂದ ಮಾತು. ಈ ಅವಸ್ಥೆಯು ಹೋಗಬೇಕು. ಇದಕ್ಕಾಗಿ ಈ ವಿಷಯವನ್ನು ಬೇರೆ ವಿಷಯಗಳಂತೆ ಬಾಲಕರ ವರ್ಗದಿಂದ ಆರಂಭಿಸುವುದೂ, ನಿಬಂಧ ಶಿಕ್ಷಣದ ಪದ್ಧತಿಯಲ್ಲಿ ಪರಿವರ್ತನ ಮಾಡುವುದೂ ಅವಶ್ಯವು.

ನಿಬಂಧದ ಅಂಗಗಳು— ನಿಬಂಧ ಶಿಕ್ಷಣದಲ್ಲಿ ನಿಬಂಧ ಇಲ್ಲವೆ ವಿಚಾರಗಳನ್ನು ವ್ಯವಸ್ಥೆಯಿಂದ ಸಾಲುಗೊಳಿಸುವುದು, ಮತ್ತು ಅವುಗಳನ್ನು ಭಾಷೆಯಿಂದ ಇಲ್ಲವೆ ಲೇಖನದಿಂದ ಸರಿಯಾಗಿ ಪ್ರಕಟಗೊಳಿಸುವುದು ಎಂಬ ಎರಡು ಅಂಗಗಳಿರುವುವು. ಬಾಲಕರ ವರ್ಗದಲ್ಲಿ ಲೇಖನವಿಲ್ಲ; ಬಾಲಕರು ಭಾಷೆಯಿಂದ ತಮ್ಮ ವಿಚಾರಗಳನ್ನು ಪ್ರಕಟಿಸಲು ಸಮರ್ಥರಾಗುವಂತೆ ಮಾಡುವುದೇ ಈ ವರ್ಗದಲ್ಲಿ ನಿಬಂಧ ಶಿಕ್ಷಣವು.

ನಿಬಂಧ ಪ್ರಕಾರಗಳು— ಕೆಲವು ನಿಬಂಧಗಳು **ಕಥನಾತ್ಮಕಗಳು,** ಇಲ್ಲವೆ ಕಥಾರೂಪಗಳು, ಕೆಲವು **ವರ್ಣನಾತ್ಮಕಗಳು,** ಇನ್ನು ಕೆಲವು **ವಿಚಾರಾತ್ಮಕಗಳು.** **ಕಥನಾತ್ಮಕಗಳು** ಕಥೆಗಳಂತೆ ನಡೆದ ಸಮಾಚಾರಗಳನ್ನು ಹೇಳುವಂಥವು; ವರ್ಣನಾತ್ಮಕಗಳು ಒಂದು ವಸ್ತುವನ್ನು ಇಲ್ಲವೆ ಸಂಗತಿಯನ್ನು ವರ್ಣಿಸಿ ಹೇಳುವಂಥವು, ವಿಚಾರಾತ್ಮಕಗಳು ಯಾವದೊಂದು ವಿಷಯದಲ್ಲಿ ಹಲವು ವಿಚಾರಗಳನ್ನು ಚರ್ಚೆ, ತುಲನೆ, ವಿಮರ್ಶೆ, ಪ್ರತಿಪಾದನೆ ಮುಂತಾದ ರೂಪದಿಂದ ಹೇಳುವಂಥವು. ವಿದ್ಯಾರ್ಥಿಗಳು ತಾವು ಮಾಡಿದ ಪ್ರವಾಸದ ಇಲ್ಲವೆ ಆಡಿದ ಆಟದ ಸಮಾಚಾರವನ್ನು ಹೇಳುವದು ಕಥಾನಾತ್ಮಕವು; ಬಾಲಕರು ತಾವು ನೋಡಿದ ಮರ ಕಟ್ಟಡ, ಚಿತ್ರ, ಪ್ರಾಣಿ ಮೊದಲಾದವನ್ನು ವರ್ಣಿಸುವುದು ವರ್ಣನಾತ್ಮಕವು; ಪ್ರವಾಸ, ಪುಸ್ತಕಾಲಯ, ಮೊದಲಾದ ವಿಷಯಗಳನ್ನು ಕುರಿತು ತಮ್ಮ ವಿಚಾರಗಳನ್ನು ಪ್ರಕಟಿಸುವುದು ವಿಚಾರಾತ್ಮಕವು. ಇವು ಮಿಶ್ರವಾಗಿರುವುವೇ ಹೊರತು ಕೇವಲ ಕಥನಾತ್ಮಕವು, ಎಂದರೆ ಅದು ವರ್ಣನೆ, ವಿಚಾರ ಇಲ್ಲವೆ ವಿಮರ್ಶೆ ಇವುಗಳ ಸಂಪರ್ಕವಿಲ್ಲದ್ದೇ ಇರುವುದು ಎಂದು ತಿಳಿಯಬಾರದು. ಕಥನವು ಮುಖ್ಯವಾಗಿದ್ದದ್ದೇ ಕಥನಾತ್ಮಕವು. ಉಳಿದುವೂ ಹೀಗೆಯೇ. ಕಥನಾತ್ಮಕ ವರ್ಣನಾತ್ಮಕ ವಿಚಾರಾತ್ಮಕಗಳು ತರಗತಿಯಲ್ಲಿ ಕ್ರಮವಾಗಿ ಹೆಚ್ಚಿಗೆ ಕಠಿಣವಾಗಿರುವುವು.

ಬಾಲಕರ ವರ್ಗದಲ್ಲಿ ನಿಬಂಧ ಶಿಕ್ಷಣ— ಈ ವರ್ಗದ ಹುಡುಗರು ಸಾಲೆಗೆ ಹೊಸಬರು. ಭಯ, ಸಂಕೋಚಗಳಿಂದಲೂ ಅವರು ಮಾತಾಡುವುದು ಕಡಿಮೆ. ಆದದರಿಂದ ಶಿಕ್ಷಕನು, ಬಾಲಕರು ಮನಸ್ಸು ತೆರೆದು ಮಾತಾಡುವಂತೆ ಮಾಡುವುದೇ ಈ ವರ್ಗದ ನಿಬಂಧ ಶಿಕ್ಷಣದ ಮುಖ್ಯಾಂಗವೆಂದು ಹೇಳಬಹುದು. ಶಿಕ್ಷಕನು ಬಾಲಕರ ಸ್ನೇಹಿತನಾಗಿ ಹಿತ ಸಂಭಾಷಣೆ, ಅವರ ಮನೆಯೊಳಗಿನ ಜನರು, ಅವರು ಸಾಕಿದ ಪ್ರಾಣಿಗಳು, ಅವರಾಡಿದ ಆಟಗಳು, ಅವರು ನೋಡಿದ ಉತ್ಸವಗಳು ಮೊದಲಾದ ಸಂದರ್ಭಗಳನ್ನು ಕುರಿತು ಅವರಿಗೆ ಮಾತಾಡುವ ಅಸ್ಪದವನ್ನುಂಟು ಮಾಡಬೇಕು. ಅವರು ಶುದ್ಧವಾಗಿ ಮಾತನಾಡುವಂತೆ ನೋಡಿಕೊಳ್ಳಬೇಕು; ಸಂದರ್ಭಕ್ಕೆ ತಕ್ಕ ಶಬ್ದಗಳನ್ನು ಅವರ ನೆನಪಿಗೆ ತಂದುಕೊಡಬೇಕು. ಅಚ್ಚುಕಟ್ಟಾಗಿ, ಒಂದೊಂದು ಸಂಗತಿಯನ್ನು ಹಿಡಿದು ಮಾತಾಡುವ ದಾರಿಗೆ ಅವರನ್ನು ತರಬೇಕು. ಒಟ್ಟಿನಲ್ಲಿ ಅವರ ವಾಕ್ಯರಚನೆಯು ಒಳ್ಳೆಯದಾಗುವಂತೆ ನೋಡಿಕೊಳ್ಳಬೇಕು. **ಬಾಲಕರ ವರ್ಗಕ್ಕೆ ವಾಚನಿಕ ನಿಬಂಧಗಳೇ ಹೊರತು ಲೇಖನ ನಿಬಂಧಗಳಿಲ್ಲ.** ಈ ವರ್ಗಕ್ಕೆ ಕೆಳಗೆ ತೋರಿಸಿದ ಸಂದರ್ಭಗಳನ್ನು ಶಿಕ್ಷಕನು ಉಪಯೋಗಿಸಿಕೊಳ್ಳಬಹುದು.

೧. ಆಟಗಳು, ಸಾಕಿದ ಪ್ರಾಣಿಗಳು, ಆಟಿಗೆಗಳು ಮುಂತಾದವುಗಳ ವಿಷಯವಾಗಿ.

೨. ಶಿಕ್ಷಕನು ಮತ್ತು ಮನೆಯವರು ಹೇಳಿದ ಸಣ್ಣ ಸಣ್ಣ ಆಕರ್ಷಕ ಕಥೆಗಳು.

೩. ಬಾಲಕರ ಮನವನ್ನಾಕರ್ಷಿಸಿದ ಮೋಟಾರು ಮೊದಲಾದ ವಸ್ತುಗಳೂ ಯಂತ್ರಗಳೂ.

೪. ಚಿತ್ರಗಳು. (ತೊಡಕಿಲ್ಲದಿರುವಂಥವು) ('ಚಿತ್ರವಾಚನೆ').

೫. ಹಬ್ಬ, ಮದುವೆ, ಜಾತ್ರೆ, ಗುಡಿಯೊಳಗಿನ ಉತ್ಸವ ಮುಂತಾದ ಸಮಾರಂಭಗಳು.

೬. ಶಿಕ್ಷಕ ಬಾಲಕರ ಇಲ್ಲವೆ ಬಾಲಕ–ಬಾಲಕರ ಸಂಭಾಷಣೆ.

ಈ ವರ್ಗದಲ್ಲಿ ಶಿಕ್ಷಕನು ಬಾಲಕರ ಭಾಷೆಯನ್ನು ವ್ಯಾಕರಣ ಶುದ್ಧವಾಗುವಂತೆ ಮಾಡುವೆನೆಂಬ ಹಟವನ್ನು ಹಿಡಿಯದೆ ಅವರು ಒಂದು ಸಂದರ್ಭವನ್ನು ಕುರಿತು ನಾಲ್ಕು ಮಾತುಗಳನ್ನು ಹೊಂದಿಸಿ ಹೇಳುವಂತೆ ನೋಡಿಕೊಳ್ಳುವುದು ಮಹತ್ವವಾದದ್ದೆಂದು ತಿಳಿಯಬೇಕು. ಜೊಳ್ಳು ಮಾತುಗಳನ್ನಾಡದೆ ಹುರುಳಿನ ಮಾತುಗಳನ್ನಾಡು

ವನೇ ಮಾತುಗಾರನು. ಮಕ್ಕಳು ಮುಂದೆ ಮಾತುಗಾರರಾಗಬೇಕು; ಬಗುಳುವನ ರಾಗಬಾರದು; ಮುಖಹೀನನೂ ಆಗಬಾರದು.

೧ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ—ಬಾಲಕವರ್ಗದವರು ಒಂದು ವಿಷಯವನ್ನು ಕುರಿತು ೩-೪ ಮಾತುಗಳನ್ನಾಡುವರಾದರೆ ಈ ವರ್ಗದವರು ಏಳೆಂಟುಮಾತುಗಳನ್ನಾಡಬೇಕು. ಇವರ ಮಾತುಗಳು ಇನ್ನಿಷ್ಟು ಶುದ್ಧವಾಗಿಯೂ, ವಿಷಯವನ್ನು ಸರಿಯಾಗಿ ಸಂಬಂಧಿಸುವಂಥವಾಗಿಯೂ ಇರಬೇಕು. ಕಲ್ಪನಾಶಕ್ತಿ, ವರ್ಣನಾಶಕ್ತಿ, ವಿವೇಚನಶಕ್ತಿಗಳಿಗೆ ಚಾಲನೆ ಸಿಕ್ಕುವ ವಿಷಯಗಳನ್ನೊದಗಿಸ ಬೇಕು.

ಕೆಳಗಿನ ವಿಷಯಗಳನ್ನು ಉಪಯೋಗಿಸಿಕೊಳ್ಳಬಹುದು.

೧. ಕಥೆಗಳು (ಬಾಲಕರವರ್ಗಕ್ಕಿಂತ ಸ್ವಲ್ಪ ದೊಡ್ಡವು.)

೨. ವಸ್ತುಗಳು, ಪ್ರಾಣಿಗಳು, ಗಿಡಬಳ್ಳಿಗಳು ಮುಂತಾದುವನ್ನು ಪ್ರತ್ಯಕ್ಷವಾಗಿ ನೋಡಿ ಅವುಗಳ ವಿಷಯವಾಗಿ ತಮಗೆ ಕಾಣುವ ಮಾತುಗಳನ್ನು ಹೇಳುವುದು.

೩. ಆತ್ಮಕಥನ—ಯಾವದೊಂದು ವಸ್ತು ಇಲ್ಲವೆ ಪ್ರಾಣಿಯು ತಾನೇ ಮಾತಾಡಿದಂತೆ ಹೇಳುವುದು.

೪. ಸಮಾರಂಭಗಳ ವಿವರಣೆ.

೫. ಬೇರೆ ಬೇರೆ ಕೆಲಸಗಳುಳ್ಳ ಸ್ವಲ್ಪ ತೊಡಕುಳ್ಳ ಚಿತ್ರಗಳನ್ನು ಕುರಿತು ಹೇಳುವುದು. ಚಿತ್ರವಾಚನ.

೬. ಒಂದು ಕಥೆಗೆ ಇಲ್ಲವೆ ಒಂದು ಸಂಗತಿಗೆ ಸಂಬಂಧಿಸಿದ ಕೆಲವು ಕ್ರಮಿಕ ಚಿತ್ರಗಳಿಂದ ಆ ಕಥೆಯನ್ನು ಇಲ್ಲವೆ ಸಂಗತಿಯನ್ನು ಜೋಡಿಸಿ ಹೇಳುವುದು.

೭. ಭಾವವನ್ನು ತಿಳಿಮಾಡಿಕೊಂಡ ಸುಲಭಕಥೆಗಳನ್ನು (ವಿಶೇಷವಾಗಿ ಕಥಾತ್ಮಕಗಳನ್ನು) ವಿವರವಾಗಿ ಅನುವಾದಿಸುವುದು.

೮. ಬಾಲಕರ ಗ್ರಹಣಕ್ಕೆ ತಕ್ಕ ಸಣ್ಣ ನಾಟಕಗಳನ್ನು ಅಭಿನಯಿಸುವದು. (ಪಾತ್ರಗಳ ಭಾಷಣಗಳನ್ನು ಬಾಲಕರು ಪಾಠಮಾಡುವುದು.)

ವಿದ್ಯಾರ್ಥಿಗಳು ಒಂದು ವಿಷಯವನ್ನು ಕುರಿತು ಹೇಳಿದ ಒಳ್ಳೆಯ ವಾಕ್ಯಗಳನ್ನು ಶಿಕ್ಷಕನು ಕರಿಯ ಹಲಗೆಯಮೇಲೆ ಬರೆಯಬೇಕು. ಕೊನೆಯಲ್ಲಿ ವಿದ್ಯಾರ್ಥಿಗಳಿಂದ ಅವನ್ನು ಓದಿಸಬೇಕು.

ಶಿಕ್ಷಕನು ನಿಬಂಧಕ್ಕಾಗಿ ಹೇಳುವ ಕಥೆಗಳನ್ನು ಒಮ್ಮೊಮ್ಮೆ ಬರೆದು ಓದಬೇಕು. ಓದಿದ ಕಥೆಗಳಿಗಿಂತ ಹೇಳಿದ ಕಥೆಗಳನ್ನು ತಿರುಗಿ ಸರಿಯಾಗಿ ಹೇಳಿಸಿಕೊಳ್ಳುವಲ್ಲಿ ನಿಬಂಧ ದೃಷ್ಟಿಯಿಂದ ವಿಶೇಷ ಪ್ರಯೋಜನವುಂಟೆಂಬದು ನಿಜ; ಆದರೆ ಬರೆದ ಕಥೆಯನ್ನು ಓದಿ ತಿರುಗಿ ಹೇಳಿಸಿಕೊಳ್ಳುವಲ್ಲಿ ವಾಕ್ಯರಚನೆಯ ದೃಷ್ಟಿಯಿಂದ ಪ್ರಯೋಜನವುಂಟು. ಭಾಷೆ ಒಳ್ಳೆಯದಾಗುವುದಕ್ಕೆ ಅನುಕರಣವು ಪ್ರಯೋಜನಕಾರಿಯಾಗುವುದು; ಮೂದರಿಯು ಭಾಷೆಯುಳ್ಳ ಗ್ರಂಥಗಳನ್ನು ಓದಿ ಹಲವರು ತಮ್ಮ ಭಾಷೆಯನ್ನು ತಿದ್ದಿಕೊಳ್ಳುವುದುಂಟು. ಅಚ್ಚುಕಟ್ಟುತನ, ಶುದ್ಧಿ, ಅರ್ಥ ಪುಷ್ಟಿ, ಸಂದರ್ಭೋಚಿತಶಬ್ದಗಳ ಯೋಜನೆ ಮುಂತಾದ ಗುಣಗಳಿಂದ ಮೂದರಿಯಾಗಿರುವ ಭಾಷೆಯನ್ನೇ ನಿಬಂಧಕ್ಕಾಗಿ ಓದುವ ಕಥೆಗೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಎಚ್ಚರಗೊಂಡಿದ್ದರೆ ಮಾತ್ರ ಈ ಕಥಾವಾಚನದಿಂದ ಪ್ರಯೋಜನವಾಗುವುದು.

ಈ ಇಯತ್ತೈಯಲ್ಲಿಯೂ ನಿಬಂಧವಿಷಯವು ವಾಚನಿಕವೇ ಸರಿ.

೨ನೆಯ ಇಯತ್ತೈಯಲ್ಲಿ ನಿಬಂಧ ಶಿಕ್ಷಣ— ತರಗತಿಯು ಹೆಚ್ಚಿದಂತೆ ಶಿಕ್ಷಕನು ವಿದ್ಯಾರ್ಥಿಗಳಿಂದ ಹೆಚ್ಚಿನದನ್ನು ಅಪೇಕ್ಷಿಸಬೇಕು. ಈ ಇಯತ್ತೈಯಲ್ಲಿ ಉಪಯೋಗಿಸುವ ಕಥೆಗಳು ಕೆಳಗಿನ ವರ್ಗಗಳಂತೆ ಕಾಗೆ ಗುಬ್ಬಿಗಳ ಕಥೆಗಳೇ ಆಗಿರದೆ ಪಂಚತಂತ್ರ ಹಿತೋಪದೇಶಗಳೊಳಗಿನ ಕಥೆಯಂತಹ ಕಥೆಗಳು, ರಾಮ, ಕೃಷ್ಣ, ಅರ್ಜುನ ಮೊದಲಾದ ಪೌರಾಣಿಕ ವ್ಯಕ್ತಿಗಳ ಕಥೆಗಳು ಇರಬಹುದು. ಈ ಇಯತ್ತೈಯಿಂದ ಮುಂದಿನ ಇಯತ್ತೆಗಳಲ್ಲಿ ಕಥೆಗಳನ್ನು ಕೆಳಗೆ ಹೇಳುವಂತೆ ಉಪಯೋಗಿಸಿಕೊಳ್ಳಬಹುದು:—

೧. ಅ. ಸಂಕ್ಷೇಪವಾಗಿ ಹೇಳಿದ ಕಥೆಯನ್ನು ವಿಸ್ತರಿಸಿ ಹೇಳುವುದು; ವಿಸ್ತರಿಸಿ ಹೇಳಿದ ಕಥೆಯನ್ನು ಸಂಕ್ಷೇಪವಾಗಿ ಹೇಳುವುದು.

ಆ. ನಡುನಡುವಿನ ಶಬ್ದ, ವಾಕ್ಯಗಳನ್ನು ಕೊಟ್ಟು ಕಥೆಯನ್ನು ಪೂರ್ಣವಾಗಿ ಹೇಳುವಂತೆ ಮಾಡುವುದು.

ಇ. ಶಿಕ್ಷಕನು ಅರ್ಧ ಹೇಳಿದ ಕಥೆಯನ್ನು ವಿದ್ಯಾರ್ಥಿಯು ಮುಗಿಸುವುದು.

ಈ. ಮುಖ್ಯಾಂಶಗಳನ್ನು ಕೊಟ್ಟರೆ ಕಥೆಯನ್ನು ಪೂರ್ತಿಗೊಳಿಸುವುದು.

ಉ. ವಿದ್ಯಾರ್ಥಿಗಳು ತಾವೇ ಒಂದು ಕಥೆಯನ್ನು ಕಲ್ಪಿಸುವದು.

ಊ. ಕಥೆಯಲ್ಲಿ ಬಿಟ್ಟುಹೋದ ಮಹತ್ವದ ಮಾತುಗಳನ್ನೂ ಶಬ್ದಗಳನ್ನೂ ತುಂಬುವುದು.

ಈ ಇಯತ್ತೆಯಲ್ಲಿ ಕಥೆಗಳನ್ನಲ್ಲದೆ ಕೆಳಿಗಿನ ವಿಷಯಗಳನ್ನೂ ಉಪಯೋಗಿಸಿಕೊಳ್ಳಬೇಕು.

೨. ಕೆಳಗಿನ ಇಯತ್ತೆಗಳಿಗೆ ಹೇಳಿದ ವಿಷಯಗಳು. (ಇನ್ನಿಷ್ಟು ಹೆಚ್ಚಾಗಿ, ಚೆನ್ನಾಗಿ.)

೩. ಬಾಲಕರು ಮಾಡಿದ ಪ್ರವಾಸಗಳು, (ಭೂಗೋಲ ಪರಿಚಯಕ್ಕಾಗಿ ಇಲ್ಲವೆ ಸೃಷ್ಟಿಸೌಂದರ್ಯ ನಿರೀಕ್ಷಣಕ್ಕಾಗಿ).

೪. ಸಣ್ಣಸಣ್ಣ ಪತ್ರಗಳನ್ನು ಬರೆಯುವುದು.

[ಉದಾ :—

ಶ್ರೀ.

ಲೈನ್‌ಬಜಾರ್, ಧಾರವಾಡ.

ರವಿವಾರ, ತಾ॥ ೨೧–೮–೧೯೩೭.

ಪ್ರೀತಿಯ ಗೆಳೆಯನಾದ ಜಮ್ಮಿಹಾಳದ **ಶಿವರಾಯ**ನಿಗೆ—

ಬಿನ್ನಹ. ಇಂದು ಮಧ್ಯಾಹ್ನದ ಬಿಡುವಿನಲ್ಲಿ ನಮ್ಮ ಓಣಿಯ ಗೆಳೆಯರೆಲ್ಲ ಕೂಡಿ ತಿಳ್ಳಿಯ ಆಟವನ್ನು ಆಡಬೇಕೆಂದು ಮಾಡಿದ್ದೇವೆ. ಆಟವು ೩ ಘಂಟೆಗೆ ಆರಂಭವಾಗುವದು. ನೀನು ಒಂದು ಕಡೆಗೆ ಹಿರಿಯಹುದ್ದರಿ ಆಗಬೇಕೆಂದು ಎಲ್ಲರೂ ಬಯಸುತ್ತಾರೆ. ಆದದರಿಂದ ನೀನು ವೇಳೆಗೆ ಸರಿಯಾಗಿ ಬರಬೇಕು.

ನಿನ್ನ ಗೆಳೆಯನಾದ

—ಹನುಮುಂತ]

೫. ಓದಿದ **ವಾಚನ** ಪಾಠಗಳ ಸಾರಾಂಶವನ್ನು ಹೇಳುವದು; ಮತ್ತು ಬರೆಯುವುದು. ಈ ಸಾರಾಂಶಕಥನಕ್ಕೆ ಇಲ್ಲವೆ ಲೇಖನಕ್ಕೆ ಪುಸ್ತಕದ ಭಾಷೆಯನ್ನೇ ಬಾಲಕರು ಉಪಯೋಗಿಸದೆ ತಮ್ಮ ಭಾಷೆಯನ್ನು ಉಪಯೋಗಿಸಬೇಕು.

೬. ಉತ್ತಮವಾದ ಕೆಲವು **ವಾಕ್ಯ**ಗಳನ್ನು ನಿಬಂಧಗಳಲ್ಲಿ ಉಪಯೋಗಿಸುವ ರೂಢಿ.

ಈ ಇಯತ್ತೆಯಲ್ಲಿಯೂ ಮುಂದಿನ ಇಯತ್ತೆಗಳಲ್ಲಿಯೂ ನಿಬಂಧವು ವಾಚನಿಕ, ಲೇಖನ ಎಂಬೀ ಎರಡು ರೂಪಗಳಲ್ಲಿಯೂ ಇರತಕ್ಕದ್ದು.

ಲೇಖನ ನಿಬಂಧಗಳನ್ನು ಶಿಕ್ಷಕನು ಚೆನ್ನಾಗಿ ನೋಡುವುದೂ, ಅದರಲ್ಲಿರುವ ಕೊರತೆಗಳನ್ನು ವಿದ್ಯಾರ್ಥಿಗಳ ಲಕ್ಷಕ್ಕೆ ತಂದುಕೊಡುವುದೂ ಅವಶ್ಯವು.

೩ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ :— ೨ನೆಯ ಇಯತ್ತೆಯ ವಿಷಯಗಳನ್ನೇ ಮುಂದೆ ಸಾಗಿಸುವುದು. ಬಾಲಕರ ವಾಕ್ಯರಚನೆ ಒಳ್ಳೆಯದಾಗುವಂತೆಯೂ, ಅವರ ಶಬ್ದಭಾಂಡಾರವು ಬೆಳೆಯುವಂತೆಯೂ ನೋಡಿಕೊಳ್ಳಬೇಕು.

೪ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ :—

ಈ ಇಯತ್ತೆಗೆ ಉಪಯೋಗಿಸಿಕೊಳ್ಳಬೇಕಾದ ಸಂದರ್ಭಗಳು :—

೧. ಕಲ್ಪಿತ ಕಥೆಗಳಿಗೆ ಪ್ರತಿಯಾಗಿ ಐತಿಹಾಸಿಕ, ಪೌರಾಣಿಕ ಕಥೆಗಳು.

೨. ವಾಚನಪಾಠ, ಇತಿಹಾಸ ಪಾಠಗಳ ಸಾರಾಂಶ. (ಈ ಪಾಠಗಳನ್ನು ಬಾಲಕರು ಮೊದಲು ಓದಿಕೊಳ್ಳಬೇಕು; ಅವುಗಳೊಳಗಿನ ಯಾವ ಮಾತುಗಳು ಮುಖ್ಯವಾದಂಥವು, ಯಾವ ಮಾತುಗಳನ್ನು ಬಿಟ್ಟರೆ ನಡೆಯಬಹುದು ಎಂಬದನ್ನು ಹುಡುಗರು ಆಲೋಚಿಸುವುದು, ಅವಶ್ಯವಿದ್ದಲ್ಲಿ ಶಿಕ್ಷಕನು ನೆರವಾಗುವುದು.

೩. ಸಂಭಾಷಣ ರೂಪವನ್ನು ಕೊಡಲು ಬರುವಂಥ ಪಾಠಗಳನ್ನು ಸಂಭಾಷಣರೂಪದಲ್ಲಿ ರಚಿಸುವುದು.

೪. ಸಂಭಾಷಣ ರೂಪದ ಪಾಠಗಳನ್ನು ಕಥನರೂಪವಾಗಿ ಮಾಡುವುದು.

೫. ಕೆಳಗಿನ ಇಯತ್ತೆಯ ಪತ್ರಗಳಿಗಿಂತ ದೊಡ್ಡ ಪತ್ರಗಳು.

೬. ಭಾಷಾಪದ್ಧತಿಗಳು (ಇಡಿಯಮ್ಸ್), ಗಾದೆಗಳು ಇವುಗಳ ಉಪಯೋಗ.

೭. ಪುರಾಣ, ಕೀರ್ತನ, ಪ್ರವಚನ, ವ್ಯಾಖ್ಯಾನಗಳನ್ನು ಕೇಳುವುದು;

೮. ಯಾವದೊಂದು ಸುಲಭ ವಿಷಯವನ್ನು ಕುರಿತು ವಿದ್ಯಾರ್ಥಿಗಳು ಮಾತಾಡುವದು. (ವ್ಯಾಖ್ಯಾನ)

೯. ಬಾಲಕರು ಸಣ್ಣ ದೃಶ್ಯಗಳಲ್ಲಿ (ನಾಟಕ) ಪಾತ್ರಗಳನ್ನು ಸ್ವೀಕರಿಸುವುದು.

ಮೇಲಿನ ಇಯತ್ತೆಗಳಲ್ಲಿ ನಿಬಂಧ ಶಿಕ್ಷಣ :— ೫ನೆಯ ಇಯತ್ತೆಗೆ ಬಂದ ವಿದ್ಯಾರ್ಥಿಗಳು ಬಳಕೆಯಲ್ಲಿರುವ ಶುದ್ಧ ಭಾಷೆಯನ್ನು ಬರೆಯಬಲ್ಲವರಾಗಿರಬೇಕು. ಒಂದು ವಿಷಯವನ್ನು ಕುರಿತು ನಾಲ್ಕು ಮಾತುಗಳನ್ನು ಹೊಂದಿಸಿ ಪರರಿಗೆ ತಿಳಿಯುವಂತೆ ಮಾತಾಡಬಲ್ಲವರಾಗಿರಬೇಕು. ಅವರು ಕಥನಾತ್ಮಕ ನಿಬಂಧಗಳನ್ನು

ಚೆನ್ನಾಗಿ ಬರೆಯಲು, ಕಥೆಗಳನ್ನು ಚೆನ್ನಾಗಿ ಹೇಳಲು ಬಲ್ಲವರಾಗಿರಬೇಕು; ಪ್ರಾಣಿ, ವಸ್ತು, ಕಟ್ಟಡ, ಚಿತ್ರ ಮುಂತಾದ ವಿಷಯಗಳನ್ನು ತಕ್ಕಂತೆ ವರ್ಣಿಸಬಲ್ಲವರಾಗಿರಬೇಕು.

ಮೇಲಿನ ಎಂದರೆ ಐದನೆಯದರಿಂದ ಮುಂದಿನ ಇಯತ್ತೆಗಳಲ್ಲಿ ವಿಚಾರಾತ್ಮಕ ನಿಬಂಧಗಳನ್ನು ರಚಿಸುವ ರೂಢಿಯನ್ನು ಮಾಡಿಸಬೇಕು. ಆರಂಭದಲ್ಲಿ ನಿಬಂಧ ರಚನೆಗೆ ಕೆಲಮಟ್ಟಿಗೆ ಶಿಕ್ಷಕರು ನೆರವಾಗಬೇಕು; ಎಂದರೆ ಯಾವದೊಂದು ವಿಷಯವನ್ನು ಕುರಿತು ವಿದ್ಯಾರ್ಥಿಗಳೊಡನೆ ಮಾತನಾಡಿ ಆ ವಿಷಯದ ಎಲ್ಲ ವಿಚಾರಗಳ ಸಂಕಲನ ಮಾಡಿಸಬೇಕು. ಆವಾಗಲೇ ಮುಖ್ಯ ಮಾತುಗಳನ್ನು ಗೊತ್ತುಪಡಿಸಬೇಕು. ವಿದ್ಯಾರ್ಥಿಗಳ ತಪ್ಪು ವಿಚಾರಗಳನ್ನು, ಕಾರಣಗಳನ್ನು ತೋರಿಸಿ ತಿದ್ದಬೇಕು. ಮುಖ್ಯ-ಮಾತುಗಳನ್ನು ಅನುಕ್ರಮಗೊಳಿಸುವಂತೆ ಹೇಳಬೇಕು. ಬಳಿಕ ವಿದ್ಯಾರ್ಥಿಗಳು ಒಂದೊಂದು ಮುಖ್ಯ-ಮಾತಿನ ವಿಷಯವಾಗಿ ತಾವು ಸಂಗ್ರಹಿಸಿದ ಮಾತುಗಳನ್ನು ಜೋಡಿಸಿ ಹೇಳಬೇಕು; ತರುವಾಯ ಅವನ್ನೇ ಬರೆಯಬೇಕು. ಕೆಲವು ನಿಬಂಧಗಳು ಹೀಗೆ ಸಾಗಿದ ಬಳಿಕ, ಒಂದೆರಡು ನಿಬಂಧಗಳ ಮುಖ್ಯ ಮಾತುಗಳನ್ನು ಸೂಚಿಸಿ ಅವುಗಳನ್ನು ರಚಿಸಲು ಹೇಳಬೇಕು. ತರುವಾಯ ವಿದ್ಯಾರ್ಥಿಗಳು ತಾವೇ ಮುಖ್ಯ ಮಾತುಗಳನ್ನು ಗೊತ್ತುಮಾಡಲು, ಮತ್ತು ಅವುಗಳನ್ನು ಅನುಕ್ರಮಗೊಳಿಸಲು ಸಮರ್ಥರಾಗಬೇಕು. ಹಾಗೆ ಯಾವ ಸಹಾಯವೂ ಇಲ್ಲದೆ ತಾವೇ ನಿಬಂಧಗಳನ್ನು ರಚಿಸಲು ಅರ್ಹರಾದರೆ ಶಿಕ್ಷಕನ ಕೆಲಸವು ತೀರಿತು. ಈ ಮೇರೆಗೆ ರಚನಾಸಾಮರ್ಥ್ಯವು ಅವರಲ್ಲಿ ಉಂಟಾಗಬೇಕಾದರೆ ಹಿಂದೆ ಹೇಳಿದ ಉಪಾಯಗಳನ್ನಲ್ಲದೆ ಕೆಳಗೆ ಹೇಳುವ ಉಪಾಯಗಳನ್ನು ಯೋಜಿಸಬಹುದು.

೧. ಒಂದೊಂದು ವಿಷಯವನ್ನು ಕುರಿತು ಬೇರೆಬೇರೆ ಜನರ ನಿಬಂಧಗಳನ್ನೂ, ಉಪನ್ಯಾಸಗಳನ್ನೂ ವಿದ್ಯಾರ್ಥಿಗಳು ಪರಿಶೀಲಿಸುವುದು.

೨. ವಿದ್ಯಾರ್ಥಿಗಳಲ್ಲಿ ಉಪನ್ಯಾಸ-ಸಂಘಗಳನ್ನು ಮಾಡಿಸಿ ಅಲ್ಲಿ ಭಾಷಣಗಳನ್ನು-ವಿಶೇಷವಾಗಿ ಖಂಡನ ಮಂಡನಾತ್ಮಕ, ಚರ್ಚಾತ್ಮಕ ಭಾಷಣಗಳನ್ನು-ಮಾಡಿಸುವ ಏರ್ಪಾಡು ಮಾಡುವುದು; ಮತ್ತು ಹಾಗೆ ಬರೆಯುವ ಯೋಜನೆ ಮಾಡುವುದು.

೩. ವಿಚಾರಪೂರ್ಣವಾದ ವಿದ್ವಾಂಸರ ಗ್ರಂಥಗಳನ್ನು, ಮಾಸಪತ್ರ ವರ್ತಮಾನಪತ್ರಗಳನ್ನು ಓದುವ ಸಾರಾಂಶ, ಹೇಳುವ ರೂಢಿಯನ್ನಿಡುವುದು.

೪. ಮಾಸಪತ್ರ ವರ್ತಮಾನಪತ್ರಗಳಿಗೆ ಲೇಖಗಳನ್ನು ಬರೆಯಿಸುವ ಯೋಜನೆ ಮಾಡುವುದು.

ಲೇಖನ ನಿಬಂಧಗಳನ್ನು ಶಿಕ್ಷಕನು ಚೆನ್ನಾಗಿ ನೋಡುವುದೂ, ಅದರಲ್ಲಿರುವ ಕೊರತೆಗಳನ್ನು ವಿದ್ಯಾರ್ಥಿಗಳ ಲಕ್ಷಕ್ಕೆ ತಂದುಕೊಡುವುದೂ ಅವಶ್ಯವು.

೩ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ :— ೨ನೆಯ ಇಯತ್ತೆಯ ವಿಷಯಗಳನ್ನೇ ಮುಂದೆ ಸಾಗಿಸುವುದು. ಬಾಲಕರ ವಾಕ್ಯರಚನೆ ಒಳ್ಳೆಯದಾಗುವಂತೆಯೂ, ಅವರ ಶಬ್ದಭಾಂಡಾರವು ಬೆಳೆಯುವಂತೆಯೂ ನೋಡಿಕೊಳ್ಳಬೇಕು.

೪ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ :—

ಈ ಇಯತ್ತೆಗೆ ಉಪಯೋಗಿಸಿಕೊಳ್ಳಬೇಕಾದ ಸಂದರ್ಭಗಳು :—

೧. ಕಲ್ಪಿತ ಕಥೆಗಳಿಗೆ ಪ್ರತಿಯಾಗಿ ಐತಿಹಾಸಿಕ, ಪೌರಾಣಿಕ ಕಥೆಗಳು.

೨. ವಾಚನಪಾಠ, ಇತಿಹಾಸ ಪಾಠಗಳ ಸಾರಾಂಶ. (ಈ ಪಾಠಗಳನ್ನು ಬಾಲಕರು ಮೊದಲು ಓದಿಕೊಳ್ಳಬೇಕು; ಅವುಗಳೊಳಗಿನ ಯಾವ ಮಾತುಗಳು ಮುಖ್ಯವಾದಂಥವು, ಯಾವ ಮಾತುಗಳನ್ನು ಬಿಟ್ಟರೆ ನಡೆಯಬಹುದು ಎಂಬದನ್ನು ಹುಡುಗರು ಆಲೋಚಿಸುವುದು, ಅವಶ್ಯವಿದ್ದಲ್ಲಿ ಶಿಕ್ಷಕನು ನೆರವಾಗುವುದು.

೩. ಸಂಭಾಷಣ ರೂಪವನ್ನು ಕೊಡಲು ಬರುವಂಥ ಪಾಠಗಳನ್ನು ಸಂಭಾಷಣರೂಪದಲ್ಲಿ ರಚಿಸುವುದು.

೪. ಸಂಭಾಷಣ ರೂಪದ ಪಾಠಗಳನ್ನು ಕಥನರೂಪವಾಗಿ ಮಾಡುವುದು.

೫. ಕೆಳಗಿನ ಇಯತ್ತೆಯ ಪತ್ರಗಳಿಗಿಂತ ದೊಡ್ಡ ಪತ್ರಗಳು.

೬. ಭಾಷಾಪದ್ಧತಿಗಳು (ಇಡಿಯಮ್ಸ್), ಗಾದೆಗಳು ಇವುಗಳ ಉಪಯೋಗ.

೭. ಪುರಾಣ, ಕೀರ್ತನ, ಪ್ರವಚನ, ವ್ಯಾಖ್ಯಾನಗಳನ್ನು ಕೇಳುವುದು;

೮. ಯಾವದೊಂದು ಸುಲಭ ವಿಷಯವನ್ನು ಕುರಿತು ವಿದ್ಯಾರ್ಥಿಗಳು ಮಾತಾಡುವದು. (ವ್ಯಾಖ್ಯಾನ)

೯. ಬಾಲಕರು ಸಣ್ಣ ದೃಶ್ಯಗಳಲ್ಲಿ (ನಾಟಕ) ಪಾತ್ರಗಳನ್ನು ಸ್ವೀಕರಿಸುವುದು.

ಮೇಲಿನ ಇಯತ್ತೆಗಳಲ್ಲಿ ನಿಬಂಧ ಶಿಕ್ಷಣ :— ೫ನೆಯ ಇಯತ್ತೆಗೆ ಬಂದ ವಿದ್ಯಾರ್ಥಿಗಳು ಬಳಕೆಯಲ್ಲಿರುವ ಶುದ್ಧ ಭಾಷೆಯನ್ನು ಬರೆಯಬಲ್ಲವರಾಗಿರಬೇಕು. ಒಂದು ವಿಷಯವನ್ನು ಕುರಿತು ನಾಲ್ಕು ಮಾತುಗಳನ್ನು ಹೊಂದಿಸಿ ಪರರಿಗೆ ತಿಳಿಯುವಂತೆ ಮಾತಾಡಬಲ್ಲವರಾಗಿರಬೇಕು. ಅವರು ಕಥನಾತ್ಮಕ ನಿಬಂಧಗಳನ್ನು

ಚೆನ್ನಾಗಿ ಬರೆಯಲು, ಕಥೆಗಳನ್ನು ಚೆನ್ನಾಗಿ ಹೇಳಲು ಬಲ್ಲವರಾಗಿರಬೇಕು; ಪ್ರಾಣಿ, ವಸ್ತು, ಕಟ್ಟಡ, ಚಿತ್ರ ಮುಂತಾದ ವಿಷಯಗಳನ್ನು ತಕ್ಕಂತೆ ವರ್ಣಿಸಬಲ್ಲವರಾಗಿರಬೇಕು.

ಮೇಲಿನ ಎಂದರೆ ಐದನೆಯದರಿಂದ ಮುಂದಿನ ಇಯತ್ತೆಗಳಲ್ಲಿ ವಿಚಾರಾತ್ಮಕ ನಿಬಂಧಗಳನ್ನು ರಚಿಸುವ ರೂಢಿಯನ್ನು ಮಾಡಿಸಬೇಕು. ಆರಂಭದಲ್ಲಿ ನಿಬಂಧ ರಚನೆಗೆ ಕೆಲಮಟ್ಟಿಗೆ ಶಿಕ್ಷಕರು ನೆರವಾಗಬೇಕು ; ಎಂದರೆ ಯಾವದೊಂದು ವಿಷಯವನ್ನು ಕುರಿತು ವಿದ್ಯಾರ್ಥಿಗಳೊಡನೆ ಮಾತನಾಡಿ ಆ ವಿಷಯದ ಎಲ್ಲ ವಿಚಾರಗಳ ಸಂಕಲನ ಮಾಡಿಸಬೇಕು. ಆವಾಗಲೇ ಮುಖ್ಯ ಮಾತುಗಳನ್ನು ಗೊತ್ತುಪಡಿಸ ಬೇಕು. ವಿದ್ಯಾರ್ಥಿಗಳ ತಪ್ಪು ವಿಚಾರಗಳನ್ನು, ಕಾರಣಗಳನ್ನು ತೋರಿಸಿ ತಿದ್ದ ಬೇಕು. ಮುಖ್ಯ-ಮಾತುಗಳನ್ನು ಅನುಕ್ರಮಗೊಳಿಸುವಂತೆ ಹೇಳಬೇಕು. ಬಳಿಕ ವಿದ್ಯಾರ್ಥಿಗಳು ಒಂದೊಂದು ಮುಖ್ಯ-ಮಾತಿನ ವಿಷಯವಾಗಿ ತಾವು ಸಂಗ್ರಹಿಸಿದ ಮಾತುಗಳನ್ನು ಜೋಡಿಸಿ ಹೇಳಬೇಕು; ತರುವಾಯ ಅವನ್ನೇ ಬರೆಯಬೇಕು. ಕೆಲವು ನಿಬಂಧಗಳು ಹೀಗೆ ಸಾಗಿದ ಬಳಿಕ, ಒಂದೆರಡು ನಿಬಂಧಗಳ ಮುಖ್ಯ ಮಾತು ಗಳನ್ನು ಸೂಚಿಸಿ ಅವುಗಳನ್ನು ರಚಿಸಲು ಹೇಳಬೇಕು. ತರುವಾಯ ವಿದ್ಯಾರ್ಥಿ ಗಳು ತಾವೇ ಮುಖ್ಯ ಮಾತುಗಳನ್ನು ಗೊತ್ತುಮಾಡಲು, ಮತ್ತು ಅವುಗಳನ್ನು ಅನುಕ್ರಮಗೊಳಿಸಲು ಸಮರ್ಥರಾಗಬೇಕು. ಹಾಗೆ ಯಾವ ಸಹಾಯವೂ ಇಲ್ಲದೆ ತಾವೇ ನಿಬಂಧಗಳನ್ನು ರಚಿಸಲು ಅರ್ಹರಾದರೆ ಶಿಕ್ಷಕನ ಕೆಲಸವು ತೀರಿತು. ಈ ಮೇರೆಗೆ ರಚನಾಸಾಮರ್ಥ್ಯವು ಅವರಲ್ಲಿ ಉಂಟಾಗಬೇಕಾದರೆ ಹಿಂದೆ ಹೇಳಿದ ಉಪಾಯಗಳನ್ನಲ್ಲದೆ ಕೆಳಗೆ ಹೇಳುವ ಉಪಾಯಗಳನ್ನು ಯೋಜಿಸಬಹುದು.

೧. ಒಂದೊಂದು ವಿಷಯವನ್ನು ಕುರಿತು ಬೇರೆಬೇರೆ ಜನರ ನಿಬಂಧಗಳನ್ನೂ ಉಪನ್ಯಾಸಗಳನ್ನೂ ವಿದ್ಯಾರ್ಥಿಗಳು ಪರಿಶೀಲಿಸುವುದು.

೨. ವಿದ್ಯಾರ್ಥಿಗಳಲ್ಲಿ ಉಪನ್ಯಾಸ-ಸಂಘಗಳನ್ನು ಮಾಡಿಸಿ ಅಲ್ಲಿ ಭಾಷಣ ಗಳನ್ನು-ವಿಶೇಷವಾಗಿ ಖಂಡನ ಮಂಡನಾತ್ಮಕ, ಚರ್ಚಾತ್ಮಕ ಭಾಷಣಗಳನ್ನು-ಮಾಡಿಸುವ ಏರ್ಪಾಡು ಮಾಡುವುದು; ಮತ್ತು ಹಾಗೆ ಬರೆಯುವ ಯೋಜನೆ ಮಾಡುವುದು.

೩. ವಿಚಾರಪೂರ್ಣವಾದ ವಿದ್ವಾಂಸರ ಗ್ರಂಥಗಳನ್ನು, ಮಾಸಪತ್ರ ವರ್ತಮಾನಪತ್ರಗಳನ್ನು ಓದುವ ಸಾರಾಂಶ, ಹೇಳುವ ರೂಢಿಯನ್ನಿಡುವುದು.

೪. ಮಾಸಪತ್ರ ವರ್ತಮಾನಪತ್ರಗಳಿಗೆ ಲೇಖಗಳನ್ನು ಬರೆಯಿಸುವ ಯೋಜನೆ ಮಾಡುವುದು.

೫. ಶಬ್ದಭಾಂಡಾರವು ಹೆಚ್ಚುವಂತೆ ಮಾಡುವುದು.

೬. ಭಾಷಾಶುದ್ಧಿಗೆ ಸಹಾಯಕವಾದ ವ್ಯಾಕರಣವಿಚಾರಗಳನ್ನು ಪರಿಶೀಲಿಸುವುದು.

೭. ಭಾಷೆಯ ಗುಣಗಳು, ದೋಷಗಳು, ರಸಗಳು, ಅಲಂಕಾರಗಳು ಇವುಗಳ ಪರಿಚಯಮಾಡಿಕೊಳ್ಳುವುದು.

೮. ದೊಡ್ಡವಿದ್ವಾಂಸರ ಗ್ರಂಥಗಳೊಳಗಿನ ಅವತರಣಗಳಲ್ಲಿ ಕೆಲವನ್ನು ಪಾಠಮಾಡಬಹುದು. ಗಾದೆಗಳನ್ನು, ಭಾಷಾಪದ್ಧತಿಗಳನ್ನು, ಆಧಾರವಾಕ್ಯಗಳನ್ನು ಸಂಗ್ರಹಿಸಿಕೊಳ್ಳುವುದು.

ಮೇಲಿನ ತರಗತಿಗಳ ವಿದ್ಯಾರ್ಥಿಗಳ ನಿಬಂಧಗಳಲ್ಲಂತೂ ಮುಂದೆ ಹೇಳುವ ದೋಷಗಳು ಆಗಲೇಬಾರದು.

೧. ನಿಬಂಧವು ಹೆಚ್ಚಿನ ವಿಚಾರಗಳನ್ನು ಒಳಗೊಂಡಿರುವುದಿಲ್ಲ. ೨. ವಿಷಯವು ತಕ್ಕಮಟ್ಟಿಗಾದರೂ ಪೂರ್ಣವಾಗುವುದಕ್ಕೆ ಎಷ್ಟು ಮುಖ್ಯ-ಮಾತುಗಳ ವಿವೇಚನೆಯಿರಬೇಕೋ ಅಷ್ಟು ಮುಖ್ಯ-ಮಾತುಗಳ ವಿವೇಚನೆಯಿರುವುದಿಲ್ಲ. ೩. ವಾಕ್ಯವೃಂದ (ಪ್ಯಾರಾ) ಗಳು ಒಂದೊಂದು ಮುಖ್ಯಮಾತನ್ನು ಚೆನ್ನಾಗಿ ಪ್ರತಿಪಾದಿಸುವಂತೆ ರಚಿತವಾಗಿರುವುದಿಲ್ಲ. ೪. ನಿಬಂಧಗಳು ದೊಡ್ಡವಾಗುವುದಕ್ಕಾಗಿ ಜೊಳ್ಳುಮಾತುಗಳಿಂದ ತುಂಬಿರುವುವು. ೫. ವಾಕ್ಯರಚನೆಯ ಮತ್ತು ವ್ಯಾಕರಣದ ದೋಷಗಳು ಕಾಣಬರುವವು. ೬. ಅನುಸರಣಪ್ರಿಯತೆಯು ಬಹಳಮಟ್ಟಿಗೆ ಕಾಣಬರುವುದು. ೭. ಸ್ವಂತವಿಚಾರಗಳು, ಸ್ವಂತ ನಿರ್ಣಯ ಇವು ಕಾಣಬರುವುದಿಲ್ಲ.

ನಿಬಂಧ ಪುಸ್ತಕಗಳು—ಮೂದರಿಗಾಗಿ ನಿಬಂಧಗಳನ್ನು ಬರೆದ ನಿಬಂಧ ಪುಸ್ತಕಗಳನ್ನು ಓದಿ, ಬಳಿಕ ವಿದ್ಯಾರ್ಥಿಗಳು ನಿಬಂಧಗಳನ್ನು ಬರೆಯಬಾರದು; ತಾವು ನಿಬಂಧವನ್ನು ಬರೆದ ಬಳಿಕ ಅಲ್ಲಿ ಹೇಗೆ ಬರೆದಿದೆಯೆಂಬುದನ್ನು ನೋಡಿಕೊಳ್ಳುವುದಕ್ಕಷ್ಟೇ ಆ ಪುಸ್ತಕಗಳನ್ನು ಓದಬಹುದು. ಪುಸ್ತಕದೊಳಗಿನ ನಿಬಂಧಗಳ ವಿಚಾರ, ರಚನೆ, ಭಾಷೆ ಮೊದಲಾದವುಗಳ ಮೂದರಿಯು ದೊರೆಯುವುದಾದರೂ ಅನುಕರಣದಿಂದ ಪರವಿಚಾರದಾಸ್ಯವುಂಟಾಗುವ ಸಂಭವವುಂಟು.

ನಿಬಂಧವನ್ನು ಕಲಿಸುವ ಪಾಠದ ಒಂದು ಟಿಪ್ಪಣಿ ಕೆಳಗೆ ಕೊಟ್ಟಿದೆ.

(ಪ್ರಕೃತ ಲೇಖಕನು ತಾ॥ ೭-೮-೧೯೩೭ನೆಯ ದಿವಸ ಧಾರವಾಡ ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿಶಿಕ್ಷಕರಿಗಾಗಿ ಪ್ರಾಥ. ಸ್ಕೂ. ನ ವಿದ್ಯಾರ್ಥಿಗಳಿಗೆ ಕಲಿಸಿ ತೋರಿಸಿದ ಪಾಠ.)

ನಿಬಂಧ ಪಾಠದ ಟಿಪ್ಪಣಿ

* ೫ನೆಯ ಇಯತ್ತೆ— ತಾ॥ ೭-೮-೧೯೩೭

ವಿಷಯ— ನಿಬಂಧ— ಸಾಕಿದ ಪಶುಗಳ ಮೇಲೆ ಪ್ರೀತಿ ಎಂಬ ಕಥೆ.

ವೇಳೆ— ೪೫ ನಿ.

ಉದ್ದೇಶ— ರಚನಾಶಕ್ತಿ, ಭಾಷಾಜ್ಞಾನ ಇವು ಬೆಳೆಯಬೇಕು.

ಉಪೋ— ಬಾಲಕರೇ, ನಾನು ಈಗ ನಿಮಗೆ ಕಥೆಯೊಂದನ್ನು ಓದಿ ಹೇಳುವೆನು; ನೀವು ಅದನ್ನು ತಿರುಗಿ ಹೇಳಬೇಕು, ಮತ್ತು ಬರೆಯಬೇಕು.

೧. ಕೆಳಗಿನ ಕಥೆಯನ್ನು **ಓದುವುದು**;

೧. ಒಬ್ಬ ಅರಬನು ಬಹಳ ಬಡವನಾಗಿದ್ದನು. ಅವನ ಬಳಿಯಲ್ಲಿ ಒಂದು ಕುದುರೆ ಮಾತ್ರ ಇತ್ತು. ಅದನ್ನು ಅವನು **ಪ್ರೀತಿ**ಯಿಂದ **ಜೋಪಾನ**ಮಾಡಿದ್ದನು.

೨. ಆ ಕುದುರೆಯನ್ನು ಕೊಂಡುಕೊಳ್ಳಬೇಕೆಂದು ಒಬ್ಬ ಸಾವುಕಾರನು ಬಂದನು. ಅರಬನು ಮನಸ್ಸಿಲ್ಲದಿದ್ದರೂ **ಬಡತನದ ಸಲುವಾಗಿ** ಅದನ್ನು ಮಾರಲು ಒಪ್ಪಿದನು. ಸಾವುಕಾರನು, ಗೊತ್ತುಮಾಡಿದ ಅದರ ಬೆಲೆಯ ರೂಪಾಯಿಗಳನ್ನು ಅರಬನ ಮುಂದೆ ಎಣಿಸಿದನು; ಮತ್ತು ಕುದುರೆಯನ್ನು **ಒಯ್ಯಲು ಅನುವಾ**ದನು.

೩. ಆಗ ಅರಬನು ಕುದುರೆಯ ಕಡೆಗೆ ನೋಡಿ— ಈ **ವರೆಗೆ** ಪ್ರೀತಿಯಿಂದ **ಸಲ**ಹಿದ ನನ್ನ ಕುದುರೆಯನ್ನು **ಹೆರವರ ಕೈಗೆ** ಹೇಗೆ ಕೊಡಲಿ, ಇದು ಇಲ್ಲದಿದ್ದರೆ ನನ್ನ ಮನಸ್ಸಿಗೆ ಹೇಗೆ **ಸೊಗಸಾದೀತು** ಎಂದು **ಮರುಗಿದನು**.

೪. ಆಗ, ಅರಬನು ಆ ರೂಪಾಯಿಗಳನ್ನು ತಿರುಗಿ ಕೊಟ್ಟು ಸಾವುಕಾರನನ್ನು **ಹಾಗೆಯೇ** ಹಿಂದಕ್ಕೆ ಕಳುಹಿದನು.

೨. **೫ನೆಯ ಬಾರಿ ಕಥೆಯನ್ನೋದುವುದು**— (ಈ ಕಥೆಯನ್ನು ನೀವು ಈ ಮೊದಲು ೫ನೆಯ ಇಯತ್ತೆಯಲ್ಲಿ ಓದಿರುವಿರೆಂದು ನೆನಪಿಗೆ ತಂದು **ಕೊಡಬಹುದು**.)

ಈ ಸಾರಿ ದೊಡ್ಡ ಅಕ್ಷರಗಳನ್ನು ಪಾಕಿದಲ್ಲಿ ಪ್ರಶ್ನಗಳನ್ನು ಮಾಡುತ್ತ ಓದಬಹುದು. ಇದರಿಂದ ಕಥೆ ತಿಳಿಯುವುದನ್ನೂ ವಿದ್ಯಾರ್ಥಿಗಳ ಅವಧಾನವಿರುವುದನ್ನೂ ನೋಡಲವಕಾಶವಾಗುವುದು.

---

* ನಿಬಂಧಶಿಕ್ಷಣವನ್ನು ಬಾಲಕರ ವರ್ಗದಿಂದ ಪಡೆದ ವಿದ್ಯಾರ್ಥಿಗಳಿದ್ದಲ್ಲಿ ಈ ಪಾಠವನ್ನು ಇದಕ್ಕೂ ಕೆಳಗಿನ ಇಯತ್ತೆಗೆ ತೆಗೆದುಕೊಳ್ಳಬೇಕು.

೩. **ಸಾರಾಂಶವನ್ನು ಕೇಳಿಕೊಳ್ಳುವುದು—** (ಈ ಕಥೆ ನಿಮಗೆ ತಿಳಿದಿದೆ, ಹಾಗಾದರೆ ಹೇಳಿರಿ.)

ಪ್ರಶ್ನೆಗಳು **ಕ. ಹ. ಬರಹ**

೧. ಈ ಕಥೆಯಲ್ಲಿ ಆರಂಭದಲ್ಲಿ
ಯಾರ ವಿಷಯವಾಗಿ ಹೇಳಿದೆ ? ೧ ಅರಬ.

೨. ತರುವಾಯ ಏನು ಹೇಳಿದೆ ? ೨ ಕುದುರೆಯ ವ್ಯಾಪಾರ

೩. ಬಳಿಕ ಏನು ಹೇಳಿದೆ ? ೩ ಅರಬನ ಕಳವಳ (ಚಿಂತೆ).

೪. ಕೊನೆಯಲ್ಲಿ ಏನು ಹೇಳಿದೆ ? ೪ ವ್ಯಾಪಾರವನ್ನು ನಿಲ್ಲಿಸಿದ್ದು.

೪. **ವಾಕ್ಯರಚನೆ—** (ಯಾವದೊಂದು ಮಾತನ್ನು) **ವಿಸ್ತರಿಸುವುದು—**

ಅ. ಅರಬನು ಬಹಳ ಬಡವನಾಗಿದ್ದನು. (ಮನೆಯಲ್ಲಿ ತಿನ್ನಲಿಕ್ಕೆ ಕಾಳು ಕಡಿ ಇದ್ದಿಲ್ಲ. ಹೊದ್ದುಕೊಳ್ಳಲಿಕ್ಕೆ ಅರಿವೆಅಂಚಡಿ ಇದ್ದಿಲ್ಲ, ಕೊಳ್ಳಲಿಕ್ಕೆ ಹಣವಿದ್ದಿಲ್ಲ. ಮುಂತಾದ ರೂಪದಿಂದ ಈ ವಾಕ್ಯವನ್ನು ವಿದ್ಯಾರ್ಥಿಗಳು ವಿಸ್ತರಿಸಬೇಕು.)

ಬ. ಈ ಮೇರೆಗೆ ಅವನು ಕುದುರೆಯನ್ನು ಪ್ರೀತಿಯಿಂದ ಜೋಪಾನ ಮಾಡಿದ್ದನು.

[ಎಳಕರಿಕೆ, ಕಡಲೆಯ ದಾಣೆ, ತಿಳಿನೀರು, ಕರಾರಿ, ಮುಳ್ಳಿಲ್ಲದ ಕಡಿವಾಣ, ಮೃದುವಾದ ಜೀನು ಮುಂತಾದ ಶಬ್ದಗಳನ್ನು ಕೊಟ್ಟು ವಾಕ್ಯಗಳನ್ನು ರಚಿಸ ಹೇಳುವುದು. ಈ ಮೇರೆಗೆ ವಾಕ್ಯವನ್ನು ವಿವರಿಸಲಿ.]

(ಯಾವದೊಂದು ಮಾತನ್ನು) **ಸಂಕ್ಷೇಪಿಸುವದು—**

" ಅವನ ಬಳಿಯಲ್ಲಿ ಚೆಲೋ ನಡಿಗೆಯ ಎತ್ತರವಾದ ಮತ್ತು ಚೆಂದವಾದ " ಈ ವಾಕ್ಯ ಭಾಗಕ್ಕೆ ಪ್ರತಿಯಾಗಿ ಒಂದು ಶಬ್ದವನ್ನು ಉಪಯೋಗಿಸಿರಿ. ' ಉತ್ತಮವಾದ ' ಇಲ್ಲವೆ ಉತ್ಕೃಷ್ಟವಾದ; ಎಂದು ಉತ್ತರವನ್ನು ಹೊರಡಿಸಿಕೊಳ್ಳುವುದು.

ಯುಕ್ತತೆಯನ್ನು ಗ್ರಹಿಸುವುದು— ಕೆಳಗಿನ ವಾಕ್ಯಗಳನ್ನು ನೀವು ಹೇಗೆ ಹೇಳುವಿರಿ ?

೧ ಜಪಾನದೇಶದಲ್ಲಿ ಕಲ್ಲಪ್ಪನೆಂಬ ಒಬ್ಬ ಅರಬನಿದ್ದನು.

೨ ಆ ಕುದುರೆಯು ಬಡಿಗೆಯ ಹೊಡೆತವನ್ನರಿಯದು; ಬಾರುಕೋಲಿನ ಏಟನ್ನು ಕಾಣದು. ಚಬಕದ ಪೆಳೆತವೆಂಬುದು ಅದಕ್ಕೆ ಗೊತ್ತಿರಲಿಲ್ಲ. (ಇವುಗಳಲ್ಲಿ ಯಾವುದು ಸರಿ ?)

೩. **ವ್ಯಾಕರಣ ವಿಚಾರ**— ಸಾವುಕಾರನು ರೂಪಾಯಿಗಳನ್ನು ಎಣಿಸಿದನು ; ಆದರೆ ಕುದುರೆಯನ್ನು ಒಯ್ಯಲನುವಾದನು. (ತಿದ್ದಿ ಹೇಳು !)

೫. **ವಾಚನಿಕ ನಿಬಂಧ**— ೧ನೆಯ ಭಾಗದ ವಿಷಯವಾಗಿ ಹೇಳು. (ಕರಿಯ ಹಲಗೆಯ ಮೇಲೆ ೩ನೆಯ ಮೆಟ್ಟಿನಲ್ಲಿ ತೋರಿಸಿದ ಒಂದೊಂದು ಭಾಗದ ವಿಷಯವಾಗಿ ೪।೬ ವಾಕ್ಯಗಳನ್ನು ರಚಿಸಿ ವಿದ್ಯಾರ್ಥಿಯು ಹೇಳಬೇಕು; ಆ ಮೇರೆಗೆ ಒಂದೊಂದು ಭಾಗದ ವಿಷಯವಾಗಿ ಹಲವರು ಹೇಳಬೇಕು.)

ಇದೇ ಮೇರೆಗೆ ೨ನೆಯ ೩ನೆಯ ೪ನೆಯ ಭಾಗಗಳ ವಿಷಯವಾಗಿಯೂ ಹಲವರು ಹೇಳಬೇಕು.

೬. **ಕಥೆಗೆ ಯಾವ ಹೆಸರನ್ನಿಡುವಿರಿ ?** "ಅರಬನೂ ಆತನ ಕುದುರೆಯೂ" "ಕುದುರೆಯನ್ನು ಸಾಕಿದ ಅರಬ" "ಸಾಕಿದ ಪಶುಗಳ ಮೇಲೆ ಪ್ರೀತಿ" ಇಂತಹ ಹೆಸರುಗಳನ್ನು ವಿದ್ಯಾರ್ಥಿಗಳು ಸೂಚಿಸಬಹುದು. ಅವುಗಳಲ್ಲಿ ಯೋಗ್ಯವಾದುದನ್ನು ಆರಿಸಹೇಳುವುದು.

೭. **ವಿದ್ಯಾರ್ಥಿಗಳ ಬರಹ**— ಮುಖ್ಯ ಮಾತುಗಳನ್ನು ಗಮನಿಸಿದುದನ್ನು ನೋಡಿ ಬಳಿಕ ಬರೆಯಹೇಳುವುದು.

[ಅನುವಾದನು, ಹೆರವರ, ಸೊಗಸು, ಮರುಗು ಈ ಶಬ್ದಗಳನ್ನು ತಕ್ಕ ಸಂದರ್ಭದಲ್ಲಿ ಉಪಯೋಗಿಸಿರಿ.]

೮. **ನೋಡುವುದು**— ನೋಡಿ ತಿದ್ದುವುದು, ತಪ್ಪುಗಳ ಕಾರಣಗಳನ್ನು ಹೇಳುವುದು, ವಿದ್ಯಾರ್ಥಿಗಳು ಬರೆದ ನಿಬಂಧಗಳ ತರಗತಿಯನ್ನು ಗೊತ್ತುಮಾಡುವುದು.

ನಿಬಂಧ ಶಿಕ್ಷಣವಿಷಯವಾಗಿ ಹೇಳಬೇಕಾದುದನ್ನೆಲ್ಲ ಇಲ್ಲಿ ಹೇಳಿದೆನೆಂದು ತಿಳಿಯಲಾಗದು. ದಿಗ್ದರ್ಶನಕ್ಕಾಗಿ ಕೆಲವು ವಿಚಾರಗಳು ಇಲ್ಲಿ ಹೇಳಿವೆ. ಬಲ್ಲವರಾದ ಶಿಕ್ಷಕರು ತಾವು ಹೆಚ್ಚಾಗಿ ವಿಚಾರಮಾಡಿ ಈ ವಿಷಯವನ್ನು ಕಲಿಸಲು ತೊಡಗುವರೆಂದು ಹಾರೈಸಿದ್ದೇನೆ.

ಧಾರವಾಡ ಟ್ರೇನಿಂಗ್ ಸ್ಕೂಲ್
ತಾ|| ೨೨–೯–೧೯೩೭ } —ಎಂ. ಪಿ. ಪೂಜಾರ.

ಪ್ರ ಕ ಟ ನೆ

ಕನ್ನಡ ಬುಕ್ ಕಮಿಟಿ (ಧಾರವಾಡ) ಯವರು ಅಗಷ್ಟ ತಿಂಗಳಿನಲ್ಲಿ (೧೯೩೭) ಮಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ವ್ಹ. ಟ್ರೇ. ಸಂ. = ವ್ಹರ್ನಾಕ್ಯುಲರ ಟ್ರೇನಿಂಗ ಸಂಸ್ಥೆ ; ಶಿ. = ಶಿಕ್ಷಕರು ; ವಿ. = ವಿದ್ಯಾರ್ಥಿಗಳು ; ಪ್ರಾ. ಶಾ. = ಪ್ರಾಥಮಿಕ ಶಾಲೆಗಳು

ಅ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂ. ಮಾಡಿದೆ.	ಮೆ. ಇ. ಸಾ. ಮುಂ. ನಂಬರು.
೧	ಹಿಂದೀ ಹುಡುಗರ ಬುದ್ಧಿ ವಿಕಾಸನವು ೧೯೩೬	ಮ್ಯಾನೇಜರ ದಿ. ಆಕ್ಸ್ ಫರ್ಡ ಯುನಿವ್ಹರ್ಸಿಟಿ ಪ್ರೆಸ್ ಬಾಂಬೆ	ಗ್ರಂ. ಕರ್ತರು	೧–೦–೦	ವ್ಹ. ಟ್ರೇ. ಸಂ.ಗಳ ವಿ.ಗಳ ಮತ್ತು ಪ್ರಾ. ಶಾ. ಗಳ ಶಿ. ರ L ಬುಕ್ಕಾಗಿ	47/P 3785 / 7–8–37
೨	ನವಲಗುಂದ ತಾಲೂಕಿನ ಭೂಗೋಲು ೧೯೩೪	ಮು. ವಿ. ಆರ್. ಶಿವನಾಗಪ್ಪ ಬುಕ್‌ಸೇಲರ ಹುಬ್ಬಳ್ಳಿ	ಗ್ರಂ. ಕರ್ತರು	೦–೨–೦	ಪ್ರಾ. ಶಾ.ಗಳ ಶಿ. ರ L ಬುಕ್ಕು	ಸದರ 3787 / ಸದರ
೩	ಹೆಂಡಕುಡಿದ ಗುಂಡು ೧೯೩೪ ಆ. ೧೯೩೬	ಮೆ. ಎಸ್. ಎನ್. ಭಟ ದೇವನಿಮಠ, ಹಾಗು ಜಿ. ಎಸ್. ಭಟ ಕೆರೆ, ಗುಡೆ ಅಂಗಡಿ	ಎಸ್. ಎಮ್. ಭಟ ಗುಡೆ ಅಂಗಡಿ. ಕುಮಠಾ	೦–೦–೬	ಪ್ರಾ. ಶಾ. ಗಳ ವಿ.ಗಳ L ಬುಕ್ಕು	ಸದರ 3895 / 9–8–37
೪	ಹಾನಗಲ್ಲ ತಾಲೂಕಿನ ಹೊಸ ಪದ್ಧತಿಯ ಭೂವರ್ಣನೆಯು ೧೯೩೭	ಮ. ಎಮ್. ಸಿ. ಹಿರೇ ಮಠ ಹೆ. ವಾ. ಬಾ. ಸ್ಕೂಲ ಹಾನಗಲ್ಲು	ಸಿದ್ದಿಂಗಯ್ಯಾ ಜವಳಿ ಮಠ ಆಲೂರ ಹಾನಗಲ್ಲು	೦–೨–೦	ಪ್ರಾ. ಶಾ.ಗಳ ಶಿ.ರ L ಬುಕ್ಕು	ಸದರ 3897 / ಸದರ

೫	ಬಂಕಾಪುರ ತಾಲೂಕಿನ (ಶಿಗ್ಗಾಂವ) ಭೂಗೋಲ ೧೯೩೪	ಮು. ಏ. ಆರ್. ಶಿವನಾಗಪ್ಪ ಹುಬ್ಬಳ್ಳಿ	ಗ್ರಂ. ಕರ್ತರು	೦–೨–೦	ಸದರ	ಸದರ 3899 / ಸದರ
೬	ಧ್ರುವ ೧೯೩೭	ಮೆ. ಎಸ್. ಎಮ್. ಭಟ ದೇವನಿಮತ ಹಾಗು ಜಿ. ಎಸ್. ಭಟ ಕೆರೆ ಗುಡೆ ಅಂಗಡಿ	ಎಸ್. ಎನ್. ಭಟ ಗುಡೆ ಅಂಗಡಿ	೦–೦–೬	ಪ್ರಾ. ಶಾ.ಗಳ ವಿ.ಗಳ L ಬುಕ್ಕು	ಸದರ 3901 / ಸದರ
೭	ಧಾರವಾಡ ಜಿಲ್ಲಾ ಭೂಗೋಲು	ಮು. ಏ. ಆರ್. ಶಿವನಾಗಪ್ಪ ಬುಕ್‌ಸೆಲರ ಹುಬ್ಬಳ್ಳಿ	ಏ. ಆರ್. ಶಿವ ನಾಗಪ್ಪ ಹುಬ್ಬಳ್ಳಿ	೦–೪–೬	ಪ್ರಾ. ಶಾ.ಗಳ ಶಿ. ರ L ಬುಕ್ಕಾಗಿ	47/P 3903 / 9–8–37
	ಸೂ. ಮುಂದಿನ ಆವೃತ್ತಿ	ಯಲ್ಲಿ ತಪ್ಪುಗಳ ವ	ಅಚ್ಚುಪಡಿ ಯ	ತಪ್ಪುಗಳ ಸುಧಾರಣೆ	ಮಾಡಬೇಕು.	
೮	ಹುಬ್ಬಳ್ಳಿ ತಾಲೂಕಿನ ಭೂಗೋಲ ಸು. ಆ. ೧೯೩೭	ಸದರ	ಸದರ	೦–೨–೦	ಪ್ರಾ. ಶಾ. ಗಳ ಶಿ. ರ L ಬುಕ್ಕಾಗಿ	ಸದರ 3905 / ಸದರ
೯	ಕುಂಶಾನ ಇಲಿಬುಡಕ	ಮೆ. ಎಸ್. ಎಮ್. ಭಟ ದೇವನಿಮತ ಹಾಗು ಜಿ. ಎಸ್. ಭಟ ಕೆರೆ ಗುಡೆ ಅಂಗಡಿ	ಎಸ್. ಎಮ್. ದೇವನಿಮತ ಗುಡೆ ಅಂಗಡಿ	೦–೦–೯	ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ	ಸದರ 3907 / ಸದರ
೧೦	ಗರ್ಭ ರತ್ನಾಕರ ೧೯೩೭	ಗಿರಿಜಾದೇವಿ ಇಚ್ಛಂಗಿ ಮತ ಗರ್ಲ್ಸ್, ಫ್ರೀ ಬೋರ್ಡಿಂಗ ಚರಂತೀ ಮತ ಹಿಣಿ ಧಾರವಾಡ	ಗ್ರಂಥಕರ್ತರು	೦–೬–೦	ಹೈ. ಸ್ಕೂ. ಸಂ.ಗಳ ವಿ.ಗಳ L ಬುಕ್ಕು ಹಾಗು ಪ್ರಾ. ಶಾ.ಗಳ ಶಿ.ರ L ಬು.	ಸದರ 3709

೧೯

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಉರ್ದು ಸ್ಕೂಲ ಬುಕ್ ಕಮೀಟಿಯವರು ೧೨–೬–೧೯೩೭ನೆಯ ದಿವಸ ಮಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ. T=ಟೆಕ್ಸ್ಟ ಬುಕ್ಕು; L ಲಾಯಬ್ರರಿ ಬುಕ್ಕು ; ವಿ=ವಿದ್ಯಾರ್ಥಿಗಳು ; ಶಿ=ಶಿಕ್ಷಕರು;

ಅ.ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂಜೂರ ಮಾಡಿದೆ;
೧	ಉರ್ದುಕಿ ಪಹಿಲಿ ಕಿತಾಬ ೨ನೆ. ಆ. ೧೯೩೫	ಶಮಸುಲ್ ಉಲೆಮಾ ಸೈಯದ ಮುಮತಾಝುಅಲಿ ಹಾಗು ಸನ್ಸ ಲಾಹೋರ	ದರುಲ್ ಇಶಾತ್ ಪಂಜಾಬ ಲಾಹೋರ	೦– ೭–೦	ಪ್ರೈ. ಶಾ. ಗಳ T ಬುಕ್ಕಾಗಿ
೨	ಉರ್ದುಕಿ ದುಸರಿ ಕಿತಾಬ ೨ನೆ ಆ. ೧೯೩೫	ಸದರ	ಸದರ	೦– ೮–೦	ಸದರ
೩	ಉರ್ದುಕಿ ತಿಸರಿ ಕಿತಾಬ ೨ನೆ ಆ. ೧೯೩೫	ಸದರ	ಸದರ	೦– ೯–೦	ಸದರ
೪	ಖಯಾಖಾನೆ ಉರ್ದು ಭಾ. ೧ ೧ನೆ ಆ. ೧೯೩೫	ಸದರ	ಸದರ	೦–೯–೧೦	ಸದರ
೫	ಖಯಾಖಾನೆ ಉರ್ದು ಭಾ. ೨ ೧ನೆ ಆ. ೧೯೩೫	ಸದರ	ಸದರ	೦–೧೦-೩	ಸದರ
೬	ಖಯಾಖಾನೆ ಉರ್ದು ಭಾ. ೩ ೧ನೆ ಆ. ೧೯೩೫	ಸದರ	ಸದರ	೦–೧೦–೯	ಸದರ

೭	ಖಯಾಖಾನೆ ಉರ್ದು ಭಾ. ೪ ೧೯೩೫	ಸದರ	ಸದರ	೦–೧೧–೩	ಸದರ
೮	ಉರ್ದು ವ್ಯಾನ್ಯಾರ್ಕ್ಯೂಲರ ಭೂಮಿತಿ ಭಾ. ೧ ೧೯ೆ ಆ.	ಮಿಂಶಾ ಸಜ್ಜದ ಅಲಿ 'ಶಾಕಿರ್' ಮತ್ತು ಮಹಮ್ಮದ ಹುಶೇನ ತಾರಕ್	ದಿ. ಬ್ರಿಟಾನಿಯನ್ ಪ್ರೆಸ್ ಬಾಂಬೆ	೦– ೮–೦	ಪ್ರಾ. ಶಾ. ಗಳ T ಬುಕ್ಕು
೯	ಅನೀಸುಲ್ ಕವಾಯಿದ್ ಭಾಗ ೨ ಳನೆಯ ಇ. ಗಾಗಿ ೧೯ೆ ಆ. ೧೯೩೬	ಅಸಾದ ಅನ್ಸಾರಿ ನಾಸಿರ ಬಾದಿ	ಅಲಂಗೀರ ಪ್ರೆಸ್ ಲಾಹೋರ	೦– ೩–೦	ಸದರ
೧೦	ದೀನಿಯಾತಕಿ ಕಿತಾಬ ಭಾ. ೧ (ಆ. ೧೯೩೭)	ಮೌ. ಫಾಜಲುಲ್ಲಾಖಾನ ಶಹಾಜಹಾನ ಪುರಿ	ಇಲ್ಮಿಯಾ ಬುಕ್‌ಡಿಪೋ ಬಾಂಬೆ ೨	೦– ೧–೬	ಇಸ್ಲಾಮಿಕ ಶಾ. ಗಳ T ಬುಕ್ಕು
೧೧	ದೀನಿಯಾತಕಿ ದುಸರಿ ಕಿತಾಬ ಆ. ೧೯೩೭	ಸದರ	ಸದರ	೦– ೩–೦	ಸದರ
೧೨	ಜದೀದ ಉರ್ದು ಖತ್ ಪ ಕಿತಾಬತ್ ಆ. ೧೯೩೭	ಸದರ	ಸದರ	೦– ೩–೬	ಪ್ರಾ. ಶಾ. ಗಳ ಶಿ. ರ L ಬುಕ್ಕು
೧೩	ರಫೀಕಿ ಸಯಾಹ ಆ. ೧	ಮಹಮ್ಮದಖಾನ ಜಾಂದಖಾನ	ಅಜ್ಮಲ್ ಪ್ರೆಸ್ ಬಾಂಬೆ	೧– ೪–೬	ಪ್ರಾ. ಶಾ. ಗಳ ವಿ. ಗಳ L ಬುಕ್ಕು

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧೪	ಹಾಯಸ್ಕೂಲ್ ಜಾಗ್ರಫಿಯಾ (ಉರ್ದು) ಆ. ೧೯೩೭	ಎಲ್. ಡಬ್ಲ್ಯೂ ಸ್ಟ್ಯಾಂಪ	ಲಾಂಗಮೆನ್ಸ ಗ್ರೀನ್ ಆ್ಯಂಡಕಂಪನಿ ಲಿ.ಬಾಂಬೆ	೧–೧೭–೦	ಪ್ರಾ. ಶಾ. ಗಳ ಶಿ. ರ L ಬುಕ್ಕು
೧೫	ಹಿಸ್ಟ್ರೀ ಆಫ್ ಮಹಾರಾಷ್ಟ್ರ ೧೯೩೪	ಮುನ್ಸಿ ಮಹ್ಮದ ಅಬ್ದುರ್ರಹಿಮಾನ ಅಹಮ್ಮದ ಸಾಹೇಬ ಉರ್ದು ಸ್ಕೂಲ ನಂ. ೧೦ ಪೂನಾ	ಮುಫೀದ–ಎ–ಆಮ್ ಪ್ರೆಸ್ ಲಾಹೋರ	೦– ೪– ೦	ಪ್ರಾ.ಶಾ. ಗಳ T ಬುಕ್ಕು

ಮುಂಬಯಿ,
೨೬–೮ –೧೯೩೭

ವ್ಹಿ. ಟಿ. ಘಾಟೆ.
ಎ. ಇ. ಬಿ. ಡಿ. ಆ್ಯಂಡ ಪ್ರೆಸಿಡೆಂಟ,
ಉರ್ದು ಸ್ಕೂಲ ಬುಕ್ ಕಮಿಟಿ ಬಾಂಬೆ.

ಜಾಹೀರಾತು

ಕನ್ನಡ ಬಾಲಬೋಧನೆ

ಬಾಲಕರ ವರ್ಗದ ಶಿಕ್ಷಣವು ಸುಲಭವಾಯಿತು

ಅಕ್ಷರಗಳನ್ನು ತೀಡಿಸುತ್ತ ಬಾಲಕರ ವರ್ಗದ ಚಿಕ್ಕಮುಕ್ಕಳಿಗೆ ಏತಕ್ಕೆ ಬೇಸರವನ್ನುಂಟುಮಾಡುತ್ತೀರಿ ! ಮೊಪಲೇ ಓಸುವಪಕ್ಕೆ ಕಲಿಸಿರಿ. ಈ ಪದ್ಧತಿಯಿಂದ ಬಾಲಕರಿಗೆ ಬೇಸರವಿಲ್ಲ. ಶಿಕ್ಷಕರಿಗೆ ಶ್ರಮವಿಲ್ಲ. ಹೀಗೆ ಕಲಿಸುವದಕ್ಕೆ ಅನುಕೂಲವಾದ ಪುಸ್ತಕವೆಂದರೆ ಈ ಬಾಲಬೋಧನೆಯೊಂದೇ. ಬೆಲೆ ೧ ಆ. ೬ ಪೈ. ಮಾತ್ರ. ಬಾಲಕರ ವರ್ಗಕ್ಕೆ ಪತ್ಯವುಸ್ತಕವೆಂದು ಮಂಜೂರ ಆಗಿರುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾಗಿ ಕಮೀಶನ್ನು. ಒಂದು ಊರಲ್ಲಿ ಒಬ್ಬರಿಗೇ ವ್ಯಾಪಾರದ ಹಕ್ಕು ದೊರಕುವದು. ಇಪ್ಪತ್ತು ಪುಸ್ತಕಗಳನ್ನು ಒಮ್ಮೆಲೆ ತರಿಸಿಕೊಂಡರೆ ಅಂಚೇವೆಚ್ಚವಿಲ್ಲ. ಈ ಸವಲತ್ತು ಶಿಕ್ಷಕರಿಗೆ ಮಾತ್ರ. ಅದೂ ಇಪ್ಪೊಂದು ತಿಂಗಳು. ಧಾರವಾಡದ ಕರ್ನಾಟಕ ಸಾಹಿತ್ಯಮಂದಿರದಲ್ಲೀಗ ಈ ಪುಸ್ತಕಗಳು ದೊರಕುತ್ತವೆ ಕಮೀಶನ್ನು ಮು. ರ ಸಂಬಂಧವಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ವ್ಹಿ. ಕಟ್ಟಿ ಹೆಡ್‌ಮಾಸ್ತರ ನರಸಾಪುರ,
(ತಾ. ಬದಾಮಿ.)

ಜಾಹೀರಾತು

(ಶೀ. ಉಮಡಿಕರ ಎಮ್. ಎ. ಕೃತ)

ಹಿಂದೂಪದ್ಧತಿಯ ಜಮಾಖರ್ಚು ಭಾಗ ೧ (ಹೊಸ ಆವೃತ್ತಿ)

ಪುಟ ೧೨೮ ಬೆಲೆ ೦–೧೦–೦

ಇದರ ಮೊದಲಿನ ಆವೃತ್ತಿ ತೀರಿದುದರಿಂದ ಈಗ ಎರಡನೆಯ ಆವೃತ್ತಿಯು ಸುಧಾರಿಸಿ ವಿಸ್ತರಿಸಿ ಪ್ರಕಟಿಸಲ್ಪಟ್ಟಿದೆ. ಈ ಆವೃತ್ತಿಯಲ್ಲಿ ಮನೆಯ ಜಮಾ ಖರ್ಚನ್ನು ಹೇಗೆ ಬರೆಯಬೇಕೆಂಬದನ್ನು ವಿಸ್ತಾರವಾಗಿ ಬರೆದು ತೋರಿಸಿದೆ. ಎಲ್ಲ ಪ್ರಕರಣಗಳಲ್ಲಿ ಮೊದಲಿಗಿಂತ ಹೊಸ ಉದಾಹರಣಗಳನ್ನು ಸೇರಿಸಿದೆ.

ಪ್ರತಿಯೊಂದು ಪ್ರಕರಣದ ಕೊನೆಗೆ ಪ್ರಶ್ನಗಳಿವೆ. ಕಟ್ಟಕಡೆಗೆ ರೂಢಿಗಾಗಿ ಟ್ರೇ. ಕಾಲೇಜ, ಸ್ಕೂಲಫಾಯನಲ್ ಪರೀಕ್ಷೆಗಳಿಗೆ ಬಿದ್ದ ಪ್ರಶ್ನಗಳು ಕೊಡಲ್ಪಟ್ಟಿವೆ. ಜಮಾಖರ್ಚುಬರೆಯುವ ಇಂಗ್ಲಿಶ್ ಪದ್ಧತಿಯನ್ನು ದೇಶೀಯ ಪದ್ಧತಿಯೊಡನೆ ಸೇರಿಸಿ ದೇಶೀಯ ಪದ್ಧತಿಯು ಈಗಿನ ಕಾಲಕ್ಕೆ ಹೇಗೆ ಉಪಯುಕ್ತವಾಗಬಹುದೆಂಬದನ್ನು ತೋರಿಸುವದು ಈ ಪುಸ್ತಕದ ಗುರಿಯಾಗಿದೆ. ಈಗಿನ ಕಾಲದ ಬಾಲಕರು ಕೇವಲ ಹಳೆಯ ಪದ್ಧತಿಯ ಪುಸ್ತಕಗಳಿಗಿಂತ ಈ ಪುಸ್ತಕದಿಂದ ಹೆಚ್ಚಿನ ಮತ್ತು ಸದ್ಯಕ್ಕೆ ಬೇಕಾಗಿರುವ ಜ್ಞಾನವನ್ನು ಪಡೆಯಬಹುದು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು

ಕೃಷ್ಣಾಜಿ ರಾಮರಾವ ಕುಲಕರ್ಣಿ,
ಕಿಲ್ಲೆ ಧಾರವಾಡ

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ಪ್ಹಿ. ಕಾಮತ, ಬಿ. ಎ. (ಆನರ್ಸ್), ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾಪ ಕಾಮತ
ಶಿರ್ಸಿ, ಉ. ಕಾನಡಾ

ತ್ವರೆಮಾಡಿರಿ! ಬೆಲೆ ತೀರ ಕಡಿಮೆ!! ಹತ್ತೇ ಆಣೆಗಳು!!!

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

(ಶ್ರೀ. ಚಿ. ಶ್ರೀ. ಕುಲಕರ್ಣಿ ಕೃತ)

ಗಣಿತ ಸಂಗ್ರಹ

—ಂಂ※ಂಂ—

(ಸುಧಾರಿಸಿದ ೨ನೇ ಆವೃತ್ತಿ)

ಇದು ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಕಾಮಧೇನು. ಇದರಲ್ಲಿ ಮುಲ್ಕೀಪರೀಕ್ಷೆಯ ಎಲ್ಲ ಮಾದರಿಯ ಲೆಕ್ಕಗಳನ್ನು ಸುಲಭರೀತಿಗಳಿಂದ ಬಿಡಿಸಿ ತೋರಿಸಿದೆ. ಹಾಗೂ ಅಭ್ಯಾಸಕ್ಕೆಂದು ಹೇರಳವಾಗಿ ಉದಾಹರಣೆಗಳನ್ನು ಕೊಟ್ಟಿದೆ. ಲ. ಸಾ. ಭಾ. ದೃ. ಭಾ ದಿಂದ ಆರಂಭಮಾಡಿಕೊಂಡು ಎಲ್ಲ ವಿಷಯುಗಳ ಸಮಾವೇಶವಾಗಿದೆ. ಕಡೆಗೆ ಮಾದರಿಯ ಪ್ರಶ್ನಗಳನ್ನೂ, ಶಿ ವ. ದ ಮುಲ್ಕೀಪರೀಕ್ಷೆಯ ಪ್ರಶ್ನಗಳನ್ನೂ ಸೇರಿಸಲಾಗಿದೆ. ಈ ಗ್ರಂಥದ ಉಪಯೋಗವನ್ನು ಜನ್ನಾಗಿ ಮಾಡುವದರಿಂದ ಗಣಿತಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂಖ್ಯೆಯು ಕಡಿಮೆಯಾಗುವದೆಂದು ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಒನೇ ಇಎತ್ತಿಗೆ ಸ್ವತಂತ್ರವಾದ ಇಂಥ ಗ್ರಂಥ ಬೇರೊಂದಿಲ್ಲ. ಕಾರಣ ಇದರ ಉಪಯುಕ್ತತೆಯ ಬಗ್ಗೆ ಬರೆಯುವ ಕಾರಣವಿಲ್ಲ. ತರಿಸಿಕೊಂಡು ಅನುಭವ ಪಡೆಯಿರಿ.

ಪ್ರಕಾಶಕರು— ಆಯ್. ಆರ್. ಅಕಳವಾಡಿ ಎಂಡ ಸನ್ಸ,
ರಾಮಾಶ್ರಯ ಬುಕ್‌ಡಿಪೋ, ಧಾರವಾಡ

ಕ್ಟೋಬರ ೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ನಮ್ಮ ಶಿಕ್ಷಣದ ವಿಚಾರಗಳು	೧
೨.	ಸ್ತ್ರೀಶಿಕ್ಷಣ	೪
೩.	ಪಾಠಗಳಲ್ಲಿ ಉಪಕರಣಗಳ ಉಪಯೋಗ	೧೧
೪.	ವ್ಹರ್ನಾಕ್ಯುಲರ ಫಾಯನಲ್ ಪರೀಕ್ಷೆ ೧೯೩೭	೧೬
೫.	ಬ್ರಹ್ಮದೇಯ	೨೨
೬.	ಪ್ರಕಟನೆ	೩೦

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ರೂ. ಅ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಸೇಟಿಕೃತ)	೦– ೮–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪–೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೨–೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೫–೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೨–೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೫ನೇ ಇ ಗೆ	೦– ೨–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪–೦
,, ೫ನೇ ,,	೦– ೫–೦
,, ,, ೪ನೇ ,,	೦– ೪–೦
ಅಂಕಗಣಿತ (ಗಾಂವಕರಕೃತ) ೫ನೇ ,,	೦– ೫–೮
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦– ೬–೦
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	೦– ೭–೦
ಧಾರವಾಡ ಜಿಲ್ಲಾ ,, (ಕುರಡೀಕೃತ)	೦– ೫–೦
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	೦– ೪–೦
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧– ೦–೦
ಭೂಗೋಲವಿದ್ಯೆ ೫ನೇ ಭಾಗ (ವೈ. ಕಟ್ಟೀಕೃತ)	೦– ೫–೦
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೪–೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–೦
ಭೂಮಿತಿ (ಚಂದಾವರಕರ ಕೃತ)	೦– ೭–೦
ಸರಸ್ವತೀ ವಿಜಯ (ಬೂದೀಹಾಳಕೃತ)	೦– ೪–೦

ಪತ್ತೆ:— **ವಿ. ಆರ್. ಶಿವನಾಗಪ್ಪ,**
ಬುಕ್‌ಸೇಲರ, ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ಪತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬ | ಅಕ್ಟೋಬರ ೧೯೩೭ | ವರ್ಷ ೯ ಸಂ. ೭.

ನಮ್ಮ ಶಿಕ್ಷಣದ ವಿಚಾರಗಳು

ನಮ್ಮ ದೇಶದ ಪ್ರಗತಿಗಾಗಿ ಪ್ರಯತ್ನಿಸುತ್ತಿರುವ ಪ್ರಜಾಪ್ರಮುಖರಲ್ಲಿಯೂ ಪ್ರಜೆಗಳ ಹಿತಚಿಂತನೆಯನ್ನು ಬಯಸುವ ಅಧಿಕಾರಿಗಳಲ್ಲಿಯೂ ಈಚೀಚೆಗೆ ಹೊಸದೊಂದು ಭಾವನೆಯು ತಲೆದೋರಿದೆ. "ನಮ್ಮ ದೇಶದ ಶಿಕ್ಷಣದ ಯೋಜನೆಯಲ್ಲಿ ಕಾಲಾನುಗುಣವಾದ ಬದಲಾವಣೆಯಾಗಿಲ್ಲ; ಹಿಂದಿನ ಶತಮಾನದಲ್ಲಿ ಶಿಕ್ಷಣಕಾರ್ಯವನ್ನು ಮೊತ್ತಮೊದಲು ಪ್ರಾರಂಭಿಸಿದಾಗ ಜನತೆಯ ಹಾಗೂ ಸರಕಾರದ ಮುಂದಿರುವ ಗುರಿಯು ಈಗ ತೀರ ಬದಲಾಗಿಹೋಗಿರುವದರಿಂದ ಆ ಕಾಲದ ಯೋಜನೆಯು ಈ ಕಾಲಕ್ಕೆ ಎಷ್ಟುಮಾತ್ರಕ್ಕೂ ಪ್ರಯೋಜನಕಾರಿಯಾಗಿ ಪರಿಣಮಿಸಲಾರದು" ಎಂಬ ಬಹುಮುಖದ ಕೋಲಾಹಲವು ಅಲ್ಲಲ್ಲಿ ಕೇಳಿಬರತೊಡಗಿದೆ. ೧೯೩೬ನೆಯ ಇಸ್ವಿಯ ಆಗಷ್ಟ ತಿಂಗಳಲ್ಲಿ ಹಿಂದುಸ್ತಾನ ಸರಕಾರದವರು ಇಂಗ್ಲಂಡದೊಳಗಿನ ಇಂಡಿಯಾ ಆಫೀಸಿನಲ್ಲಿದ್ದ ಸ್ಟೇಟ ಸೆಕ್ರೆಟರಿಯವರಿಗೆ ಒಂದು ಬಿನ್ನಹಪತ್ರವನ್ನು ಕಳುಹಿಸಿದರು. ಅದರಲ್ಲಿ ಇಂಗ್ಲಂಡದೊಳಗಿನ ಬೋರ್ಡ ಆಫ್ ಎಜ್ಯುಕೇಶನ್ನಿನಲ್ಲಿ ಕೆಲಸಮಾಡುತ್ತಿರುವ ಕೆಲವರು ತಜ್ಞರು ಈ ದೇಶಕ್ಕೆ ಬಂದು ಇಲ್ಲಿಯ ಶಿಕ್ಷಣ ಕ್ರಮದ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿ, ಬೇರೆ ಬೇರೆ ಸ್ಥಳಗಳಲ್ಲಿ ಪ್ರವಾಸಮಾಡಿ, ಪ್ರತ್ಯಕ್ಷವನ್ನೋಡಿ, ತಮಗೆ ತಿಳಿದುಬರುವ ಸದ್ಯದ ಸ್ಥಿತಿಯಲ್ಲಿಯ ಕುಂದುಕೊರತೆಗಳನ್ನು ಅವಲೋಕಿಸಿ, ಯೋಗ್ಯ ಸೂಚನೆಗಳನ್ನು

CONTD IN
NEXT ROLL

CONTD IN
NEXT ROLL

END

THE END

END

END

THE END

END

END

END